ಸಭಾಪತ್ರ

ತಿಂಗಳಿಗೆ ಒಂದು ಸಾರಿ ಪ್ರಕಟಿಸಲ್ಪಡುವದು.

ಪುಸ್ತಕ ೩. JANUARY 1871. ಅಂಕೆ ೭.

ರೋಮ. ೧೨, ೧–೬.

"ಆದದರಿಂದ, ಸಹೋದರರೇ, ನಿಮ್ಮ ಶರೀರಗಳನ್ನು ಬದುಕುವಂಥ, ಪರಿಶುದ್ಧವಾದಂಥ, ದೇವರಿಗೆ ಸಮರ್ಪಕವಾದಂಥ ಬಲಿಯಾಗಿ ಅರ್ಪಿಸ ಬೇಕೆಂದು, ದೇವರ ಕನಿಕರಗಳ ನಿಮಿತ್ತ ನಿಮ್ಮನ್ನು ಬೇಡಿ ಕೊಳ್ಳುತ್ತೇನೆ. ಇದು ನಿಮ್ಮ ಬುದ್ಧಿಯುಳ್ಳ ಆರಾಧನೆ. ಮತ್ತು ಒಳ್ಳೇದೂ, ಸಮರ್ಪಕವೂ, ಪೂರ್ಣವೂ ಆಗಿರುವ ದೇವರ ಚಿತ್ತವು ಏನೆಂದು ನೀವು ಪರೀಕ್ಷಿಸುವದಕ್ಕೋಸ್ಕರ ಈ ಯುಗಕ್ಕೆ ಅನುಕೂಲವಾಗದೆ, ನಿಮ್ಮ ಮನಸ್ಸಿನ ನವೀಕರಣದಿಂದ ರೂಪಾಂತರವಾಗಿರಿ. ಯಾಕಂದರೆ ನನಗೆ ಕೊಡಲ್ಪಟ್ಟ ಕೃಪೆಯಿಂದ ನಿಮ್ಮಲ್ಲಿರುವ ಒಬ್ಬೊಬ್ಬನಿಗೆ, ಎಣಿಸ ತಕ್ಕದ್ದಕ್ಕಿಂತ ಹೆಚ್ಚಾಗಿ ಎಣಿಸದೆ, ದೇವರು ಒಬ್ಬೊಬ್ಬನಿಗೆ ವಿಶ್ವಾಸದ ಅಳತೆಯನ್ನು ಹಂಚಿ ಕೊಟ್ಟ ಪ್ರಕಾರ, ಸ್ವಸ್ಥ ಬುದ್ಧಿಯಾಗಿ ಎಣಿಸ ಹೇಳುತ್ತೇನೆ. ಯಾಕಂದರೆ ಯಾವ ಪ್ರಕಾರ ಒಂದೇ ಶರೀರದಲ್ಲಿ ಅನೇಕ ಅಂಗಗಳು ನಮಗೆ ಇರಲಾಗಿ, ಎಲ್ಲಾ ಅಂಗಗಳಿಗೆ ಒಂದೇ ಕೆಲಸವಿರುವದಿಲ್ಲವೋ, ಅದೇ ಪ್ರಕಾರ ಅನೇಕರಾದ ನಾವು ಕ್ರಿಸ್ತನಲ್ಲಿ ಒಂದೇ ಶರೀರವಾಗಿದ್ದು, ಒಬ್ಬರಿಗೊಬ್ಬರು ಅಂಗಗಳಾಗಿದ್ಧೇವೆ. ನಮಗೆ ಕೊಡಲ್ಪಟ್ಟ ಕೃಪೆಯ ಪ್ರಕಾರ ಬೇರೆ ಬೇರೆ ವರಗಳುಳ್ಳವರಾಗಿದ್ಧೇವೆ."

ಅಪೊಸ್ತಲನಾದ ಪೌಲನು ಇಂದಿನ ಪತ್ರಿಕೆ ಬರದಿರುವ ರೋಮಾಯರ ಪತ್ರಿಕೆಯ ಹಿಂದಿನ ಸಂಧಿಗಳಲ್ಲಿ ಯೇಸು ಕ್ರಿಸ್ತನ ವಿಶ್ವಾಸದಿಂದಲೇ ನಾವು ದೇವರ ಮುಂದೆ ನೀತಿಯನ್ನೂ ರಕ್ಷಣೆಯನ್ನೂ ಹೊಂದುತ್ತೇವೆಂಬದನ್ನು ಸಾಕಾದಷ್ಟು ಪ್ರಮಾಣದಿಂದ ವಿವರಿಸಿ, ಪಾಪ ಪರಿಹಾರ, ನೀತಿ, ನಿತ್ಯಜೀವ ಮುಂತಾದ ಮಹಾ ಮಹಿಮೆಯುಳ್ಳ ದಿವ್ಯ ಉಪಕಾರಗಳು ವಿಶ್ವಾಸಿಗಳಿಗೆ ಶಿಕ್ಕುವದೆಂಬುವದನ್ನು ಸ್ಥಾಪಿಸಿದ ಮೇಲೆ, ಈ ಸಂಧಿಯ ಆರಂಭದಲ್ಲಿ ಕರ್ತನಾದ ದೇವರಿಗೆ ಕೃತಜ್ಞರಾಗಿ ಏನು ಮಾಡುವ ಹಂಗಿನಲ್ಲಿದ್ಧೇವೆಂದು, ತೋರಿಸ ತೊ

ಡಗುತ್ತಾನೆ; ಇದು ನ್ಯಾಯವೇ ಸರಿ, ಯಾಕಂದರೆ ಬಹಳ ಉಪಕಾರಗಳನ್ನು ಪಡಕೊಂಡವನು ಬಹಳವಾಗಿ ಕೃತಜ್ಞನಾಗಿರ ತಕ್ಕದ್ದು. ಕೃತಘ್ನತೆಗಿಂತ ಅಸಹ್ಯವಾದ ದುರ್ಗುಣವಿಲ್ಲ. ಈ ದುರ್ಗುಣವು ಅಗದಿ ಕೆಟ್ಟದ್ದಾಗಿರುವದರಿಂದ, ಕರ್ತನಾದ ದೇವರು ತಾನು ಅವಿಶ್ವಾಸಿಗಳ ಕೂಡ ಕೃತಘ್ನರನ್ನು ಶಿಕ್ಷಿಸ ತಕ್ಕ ಬಗ್ಯೆ ರಾಜನೀತಿಯಲ್ಲಿ ಸರಿಯಾದ ಶಿಕ್ಷೆ ಇಲ್ಲದೆ ಇರುವದರಿಂದ ಯಾವ ಶಿಕ್ಷೆಯಾದರೂ ಅದಕ್ಕೆ ನೇಮಕವಾಗಿರುವದಿಲ್ಲ. ಅಪೊಸ್ತಲನಾದ ಪೌಲನು, ನಾವು ಈಗ ಓದಿದ ಪತ್ರಿಕೆಯಲ್ಲಿ, ವಿಶ್ವಾಸದಿಂದ ಹೊಂದಿದ ಉಪಕಾರಗಳನ್ನು ಕೃತಘ್ನತೆಯಿಂದ ಕಳಕೊಳ್ಳದ ಹಾಗೆ ಕೃತಜ್ಞರಾಗಿರ ಬೇಕೆಂದು ನಮ್ಮನ್ನು ಎಚ್ಚರಿಸಿದ್ಧಾನೆ. ಹೀಗೆ ಇರುವದರಿಂದ ಕರ್ತನಾದ ದೇವರಿಗೆ ಕೃತಜ್ಞರಾಗಿದ್ಧೇವೆಂಬದನ್ನು ತೋರಿಸುವದಕ್ಕೆ ಏನು ಮಾಡ ಬೇಕೆಂಬ ಪ್ರಶ್ನೆ ಹುಟ್ಟುತ್ತದೆ. ಹಳೆ ಒಡಂಬಡಿಕೇ ಕಾಲದಲ್ಲಿ ದೇವರ ಸ್ವಕೀಯ ಜನರು ಒಂದು ಅನುಗ್ರಹವನ್ನು ಹೊಂದಿದ ಬಳಿಕ, ಹೋತು ಕುರಿ ಆಡು ಮುಂತಾದವುಗಳನ್ನು ಕೃತಜ್ಞತೇ ಬಲಿಗಾಗಿ ಅರ್ಪಿಸಿದರು. ಸೊಲೊಮೋನನೆಂಬ ಅರಸನು ಕರ್ತನಿಂದ ಪಟ್ಟದ ಅಧಿಕಾರವನ್ನು ಹೊಂದಿ, ಯೆರೂಸಲೇಮಿನಲ್ಲಿ ದೇವಾಲಯವನ್ನು ಕಟ್ಟಿಸಿದ ಮೇಲೆ, ಕೃತಜ್ಞವಾದ ಹೃದಯದ ಕಪ್ಪವಾಗಿ ೨೨೦೦೦ಎತ್ತು ೧೨೦೦೦೦ ಕುರಿ ಬಲಿಯಾಗಿ ಕೊಟ್ಟನು. ಈ ಕೃತಜ್ಞತೇ ಬಲಿ ಮಹಾ ದೊಡ್ಡದೇ ಸರಿ. ಇಂಥಾ ಬಲಿಗಳು ಹೊಸ ಒಡಂಬಡಿಕೆಯಲ್ಲಿ ನಿಂತು ಹೋಗಿವೆ. ಇಲ್ಲದಿದ್ದರೆ ಬಡವರಾದ ಅನೇಕರಿಗೆ ಇಂಥಾ ಬಲಿಗಳನ್ನು ಕೊಡುವದು ಅಸಾಧ್ಯವಾದೀತು. ಆದ್ದರಿಂದ ಅಪೊಸ್ತಲನಾದ ಪೌಲನು ಇಂದಿನ ಪತ್ರಿಕೆಯಲ್ಲಿ ಮನಸ್ಸುಳ್ಳವರೆಲ್ಲರು ಕರ್ತನಾದ ದೇವರಿಗೆ ಒಪ್ಪಿಸ ತಕ್ಕ ಕೃತಜ್ಞತೇ ಬಲಿಗಳು ಯಾವದೆಂದು ತಿಳಿಸಿ ಹೇಳುವದೇನೆಂದರೆ: ಪ್ರಿಯ ಸಹೋದರರೇ, "ನಿಮ್ಮ ಶರೀರಗಳನ್ನು ಬದುಕುವಂಥಾ ಪವಿತ್ರವಾದಂಥಾ ದೇವರಿಗೆ ಸಮರ್ಪಕವಾದಂಥಾ ಬಲಿಗಳಾಗಿ ಒಪ್ಪಿಸ ಬೇಕೆಂದು ದೇವರ ಕರುಣೇ ನಿಮಿತ್ತವಾಗಿ ನಿಮ್ಮನ್ನು ಎಚ್ಚರಿಸುತ್ತೇನೆ". ಅದೇನಂದರೆ, ಯೆಹೂದ್ಯರೂ ಪರಜನರೂ ಹೋತು ಕುರಿ ಮೊದಲಾದ ಪ್ರಾಣಿಗಳನ್ನು ಅರ್ಪಿಸುತ್ತಾ ಬಂದಿದ್ಧಾರೆ. ಇಂಥಾ ಬಲೀ ಅರ್ಪಣೆ ಈಗ ನಿಂತು ಹೋಗಿ ಇದೆ. ಇಂಥ ಕಟ್ಟಳೆ ನಿಮಗಿಲ್ಲ. ಆದರೆ ನಿಮ್ಮ ಪಾಪಗಳನ್ನು ದಯದಿಂದ ಮನ್ನಿಸಿ, ನಿತ್ಯಜೀವವನ್ನು ನಿಮಗೆ ಕೊಡುವ ದೇವರಿಂದ ಮಹಾ ಮಹಿಮೆಯುಳ್ಳ ಉಪಕಾರಗಳನ್ನು ಹೊಂದಿದವರಾದ ನೀವು ಹ್ಯಾಗಾದರೂ ಬಲಿಯನ್ನು ಕೊಡುವ ಹಂಗಿನಲ್ಲಿದ್ಧೀರಿ. ಏನಂದರೆ ಬದುಕುವಂಥಾ ಪರಿಶುದ್ಧವಾದಂಥಾ ದೇವರಿಗೆ ಸಮರ್ಪಕವಾದಂಥಾ ಬಲಿಯಾಗಿ ನಿಮ್ಮ ಶರೀರವನ್ನೇ ಒಪ್ಪಿಸ ಬೇಕು. ಪೌಲನು ಬರದ ಈ ಮಾತುಗಳ ಅಭಿಪ್ರಾಯವೇನು? ಯೆಹೂದ್ಯರು ಬಲಿ ಪಶುಗಳನ್ನು ಕತ್ತಿಯಿಂದ ಕಡದ ಪ್ರಕಾರ ಬದುಕುವಂಥಾ ನಮ್ಮ ಶರೀರಗಳನ್ನು ಹತ ಮಾಡಲೋ? ಅಲ್ಲ. ಇದು ಅಪೊಸ್ತಲನಾದ ಪೌಲನ ಅಭಿಪ್ರಾಯವಲ್ಲ. ಅವನ ತಾತ್ಪರ್ಯವೇನಂದರೆ: ನಮ್ಮ ರಕ್ತ ಮಾಂಸಗಳಲ್ಲಿ ವಾಸ ಮಾಡುವ ಕಾಮ ಮುಂತಾದ ದುರಾಶೆಗಳನ್ನು ಕೊಲ್ಲ ಬೇಕು. ಇದನ್ನು ಮಾಡುವ ಮಾರ್ಗವನ್ನು ನಮಗೆ ತಿಳಿಸುವದಕ್ಕೆ ಅಪೊಸ್ತಲನಾದ ಪೌಲನು ಈ

ಯುಗಕ್ಕೆ ಅನುಕೂಲವಾಗಿರ ಬಾರದು ಎಂದು ಬರಿಯುತ್ತಾನೆ; ಏನೆಂದರೆ, ಲೌಕಿಕ ಜನರ ಗುಂಪಿನ ಪದ್ಧತಿಯ ಪ್ರಕಾರ ನಡ ಕೊಳ್ಳುವ ಮನಸ್ಸು ಮನುಷ್ಯರಿಗೆ ಸ್ವಾಭಾವಿಕವಾಗಿದೆ. ಆದರೆ ಇಹ ಲೋಕವು ಯೋಹಾನನು ಹೇಳುವ ಪ್ರಕಾರ ದುಷ್ಟನ ವಶವಾಗಿರುವದರಿಂದ ನೀವು ದಿವ್ಯ ವಾಕ್ಯದಿಂದ ಪ್ರಕಟವಾದ ದೇವರ ಅಪ್ಪಣೆಯ ಪ್ರಕಾರವಾಗಿಯೇ ಕಾಲಕ್ಷೇಪ ಮಾಡ ಬೇಕು. ಹಾಗಾದರೆ ನಾವು ದೇವರಿಗೆ ಕೃತಜ್ಞರಾಗಿ ನಡ ಕೊಳ್ಳ ಬೇಕೆಂದಿದ್ದರೆ, ಅನುಕೂಲರಾಗಿರದೆ ಬಿಟ್ಟು ಬಿಡ ತಕ್ಕ ಲೋಕದ ನಡತೆ ಎಂಥಾದ್ದೆಂದು ನೋಡುವ.

೧. ಬಡಾಯಿಗಳಾಗಿಯೂ ಗರ್ವಿಗಳಾಗಿಯೂ ಹುಟ್ಟುವ ಮನುಷ್ಯರು ತಮ್ಮಲ್ಲಿ ತಾವೇ ಮೆಚ್ಚಿ ಕೊಂಡು, ತಮಗಿಂತ ರೂಪವೂ ಬುದ್ಧಿಯೂ ಭಕ್ತಿಯೂ ಉಳ್ಳವರು ಎಲ್ಲಿಯೂ ಇಲ್ಲವೆಂದು ಎಣಿಸಿ ಕೊಳ್ಳುವದು ಲೋಕದ ಪದ್ಧತಿ. ಹೀಗಿರಲಾಗಿ ನಾವು ಕರ್ತನಾದ ದೇವರಿಗೆ ಯಥಾರ್ಥವಾದ ಕೃತಜ್ಞತೆಯ ಬಲಿಯನ್ನು ಕೊಡುವದಕ್ಕೆ ಮನಸ್ಸಾಗಿದ್ದರೆ, ಮರುಳಾದ ಈ ಬಡಾಯಿತನವನ್ನು ನಮ್ಮಲ್ಲಿ ಕೊಂದು, ನಾವು ಉತ್ತಮರೆಂದು ಭಾವಿಸಿ ಕೊಳ್ಳದೆ, ಪೌಲನು ಹೇಳುವ ಪ್ರಕಾರ ನಮ್ಮ ಮತಿ ಅರಿತು ದೀನರಾಗಿ ನಮ್ಮನ್ನು ನಾವೇ ತಗ್ಗಿಸಿ ಕೊಳ್ಳ ಬೇಕು.

೨. ಒಬ್ಬರನ್ನೊಬ್ಬರು ಯಥಾರ್ಥವಾಗಿ ಪ್ರೀತಿ ಮಾಡದೆ, ನಯ ಮಾತುಗಳನ್ನಾಡಿ ಹೃದಯದಲ್ಲಿ ಬೇರೆ ಬಗೆಯುವದು ಲೋಕದ ಪದ್ಧತಿ. ನಾವೆಲ್ಲರು ಯಾಜಕರಾಗಿದ್ದೇವೆಂದು ಸೂಚಿಸುವ ಪೌಲನ ಮಾತಿನ ಪ್ರಕಾರ ಆತ್ಮಿಕ ಜನರಾದ ಯಾಜಕರಾಗಿದ್ದು ದೇವರಿಗೆ ಕೃತಜ್ಞತೇ ಬಲಿಗಳನ್ನರ್ಪಿಸ ಬೇಕೆಂದಿದ್ದರೆ, ಕಪಟ ಪ್ರೀತಿಯನ್ನು ಬಿಟ್ಟು ನೆರೆ ಹೊರೆಯವರನ್ನು ಮನಃಪೂರ್ವಕವಾಗಿ ಪ್ರೀತಿ ಮಾಡ ಬೇಕು. ಹೀಗೆ ಮಾಡಿದೆವಾದರೆ, ಕರ್ತನಾದ ದೇವರಿಗೆ ಪರಿಶುದ್ಧ ಬಲಿ ಆರಾಧನೆಗಳನ್ನು ನಡಿಸುತ್ತೇವೆ.

೩. ಹಗೆಗಾರರು ಮೊದಲಾದ ಜನರು ಒಬ್ಬರ ಮೇಲೊಬ್ಬರು ಚಾಡಿ ಹೇಳುವದು ಲೋಕದ ಪದ್ಧತಿ. ಆದರೆ ನಾವು ದೇವರಿಗೆ ಕೃತಜ್ಞರಾಗಿರ ಮನಸ್ಸುಳ್ಳವರಾಗಿದ್ದರೆ, ಒಬ್ಬರ ಮೇಲೆ ಒಬ್ಬರು, ದೂರು ಹೇಳಿದವರ ಮೇಲೆ ಸಹಾ, ಕೆಟ್ಟ ಮಾತು ಆಡದೆ, ಒಳ್ಳೇ ಮಾತು ಆಡ ಬೇಕು. ಒಬ್ಬನು ಹೀಗೆ ನಡಕೊಂಡು ಯಾರಿಗೂ ಕೇಡು ನುಡಿಯದ ಹಾಗೆ ತನ್ನ ನಾಲಿಗೆಯನ್ನು ಬಿಗಿದು ಕೊಂಡರೆ, ಅವನು ದೇವರಿಗೆ ಕೃತಜ್ಞನಾಗಿ ಕಾಣಿಸಿ ಕೊಂಡು, ಅವನಿಗೆ ವಿಹಿತವಾದ ಪರಿಶುದ್ಧವಾದ ಬುದ್ಧಿಮಯವಾದ ಮಹಾ ಬಲಿಯನ್ನು ಅರ್ಪಿಸುತ್ತಾನೆ.

೪. ಸೌಖ್ಯವಾಗಿರುವವರ ಮೇಲೆ ಹೊಟ್ಟೆಕಿಚ್ಚು ಪಟ್ಟು ಅಸೌಖ್ಯವಾಗಿರುವವರ ಮೇಲೆ, ನೆರೆಯವನಿಗೆ ಹ್ಯಾಗೂ ಒಂದು ಸಾರಿ ನಷ್ಟವಾಯಿತೆಂಬ ಸಂತೋಷದಿಂದ, ಹಾಸ್ಯದ ನಗೆ ಮಾಡುವದು ಪದ್ಧತಿ. ಈ ಕೃತ್ರಿಮವಾದ ಆಟಕ್ಕೆ ಲೋಕದ ಜನರು ವಿಶೇಷವಾಗಿ ಮೆಚ್ಚುತ್ತಾರೆ. ನಾವಾದರೆ ಈ ವಿಷಯದಲ್ಲಿಯೂ ಲೋಕಕ್ಕೆ ಅನುಕೂಲವಾಗಿರದೆ ಸಂತುಷ್ಟರ ಸಂಗಡ ಸಂತುಷ್ಟರಾಗಿ, ಅಳುವವರ ಸಂಗಡ ಅತ್ತು, ನೆರೆ ಹೊರೆಯವರ ಸುಖಕ್ಕೆ ಹೊಟ್ಟೆಕಿಚ್ಚು ಪಡದೆ, ಅವರ ನಷ್ಟಕ್ಕೆ ಮೆಚ್ಚದೆ, ಅವರ ಸುಖ ದುಃಖಗಳು ನಮ್ಮ ಸುಖ ದುಃ

ಖಗಳೆಂದು ಭಾವಿಸಿ ಕೊಂಡು, ನಮ್ಮ ಕರ್ತನಾದ ದೇವರಿಗೆ ಪರಿಶುದ್ಧವಾದ ಬಲಿಯನ್ನು ಕೊಟ್ಟು ವಿಹಿತವಾದ ಆರಾಧನೆಯನ್ನು ಮಾಡ ಬೇಕು.

೫. ಅಪಕಾರಕ್ಕೆ ಅಪಕಾರ ಮಾಡುವದು ಲೋಕದ ಪದ್ಧತಿ. ಇದಕ್ಕೆ ಮಾಂಸಭಾವದ ಮನಸ್ಸು ವಿಶೇಷವಾಗಿ ಮೆಚ್ಚಿ, ನೆರೆಯವನು ಮಾಡಿದ ಅನ್ಯಾಯಕ್ಕೆ ಪ್ರತಿದಂಡನೆ ಮಾಡುವ ಉಪಾಯಗಳನ್ನೆಲ್ಲಾ ಹುಡುಕುತ್ತದೆ. ನಾವಾದರೆ, ದೇವರಿಗೆ ಕೃತಜ್ಞತೆಯಾದ ಮನಸ್ಸು ನಮಗೆ ಇದ್ದ ಪಕ್ಷದಲ್ಲಿ ಆ ಮಾರ್ಗದಲ್ಲಿ ಶೇರದೆ, ನಮ್ಮ ಶರೀರವನ್ನು ಅಂದರೆ ನಮ್ಮ ಮಾಂಸ ರಕ್ತಗಳಲ್ಲಿರುವ, ಮುಯ್ಯಿಗೆ ಮುಯ್ಯಿ ಕೊಡುವ ಆಶೆಯನ್ನು ಬಲಿಯಾಗಿ ಕೊಟ್ಟು, ಅಪಕಾರಕ್ಕೆ ಉಪಕಾರ ಮಾಡ ಬೇಕು. ಯಾಕಂದರೆ ಇದು ಕರ್ತನಿಗೆ ವಿಹಿತವಾದ ಆರಾಧನೆಯೂ ಸಮರ್ಪಕವಾದ ಬಲಿಯೂ ಆಗಿ ಇದೆ.

ಅಪೊಸ್ತಲನಾದ ಪೌಲನು ವಿಧೇಯರಾದ ಕೃತಜ್ಞತೆಯುಳ್ಳ ಕ್ರೈಸ್ತರು ಬಿಟ್ಟು ಬಿಡ ತಕ್ಕ ಬೇರೆ ಕೆಲವು ಲೋಕದ ದುರ್ನಡತೆಗಳನ್ನು ವಿವರಿಸಿ ಶಿಕ್ಷಿಸುತ್ತಾನೆ. ಆದರೆ ಉಳಿದ ಮಾತುಗಳನ್ನು ಸದ್ಯಕ್ಕೆ ಬಿಟ್ಟು, ಈಗ ಕೇಳಿದ್ದೇ ಸಾಕೆಂದು, ಪೌಲನು ನಮಗೆ ಹೇಳಿದ ಬುದ್ಧಿ ಮಾತುಗಳನ್ನು ಕೈಕೊಂಡು, ದೇವರು ನಮಗೆ ಮಾಡಿದ ಅನುಗ್ರಹಗಳನ್ನು ಕಳಕೊಳ್ಳದೆ, ಅವುಗಳಲ್ಲಿ ವರ್ಧಮಾನವಾಗಿ, ಕಡೆಯಲ್ಲಿ ಯೇಸು ಕ್ರಿಸ್ತನ ಮುಖಾಂತರ ನಿತ್ಯವಾದ ರಕ್ಷಣೆಯನ್ನು ಹೊಂದುವ ಹಾಗೆ, ತನ್ನ ಪರಿಶುದ್ಧ ಆತ್ಮವನ್ನು ನಮಗೆ ಕೊಡ ಬೇಕೆಂದು ಬೇಡಿ ಕೊಳ್ಳೋಣ.

ಅವನು ಸುಳ್ಳು ಹೇಳಲಿಲ್ಲ.

ಹೆಸರ್ಗೊಂಡ ಪ್ರಯಾಣಿಕನಾದ ಮುಂಗೊಪರ್ಕೆಂಬವನು ಅಫ್ರಿಕ ಖಂಡದಲ್ಲಿ ನೋಡಿದ್ದೇನಂದರೆ: ಮೌರೀಯ ಯುದ್ಧಸ್ಥರು ಅರಬಿಯರ ಒಂದು ಊರಿನ ನಿವಾಸಿಗಳ ಮೇಲೆ ಬಿದ್ದರು. ಮೌರೀಯ ಯೌವನಸ್ಥನೊಬ್ಬನು ರಣದಲ್ಲಿ ಮರಣ ಘಾಯ ಹೊಂದಿದನು. ಸ್ವಜನರು ಅವನನ್ನು ಒಂದು ಕುದುರೆಯ ಮೇಲೆ ಕೂಡ್ರಿಸಿ, ಕಟ್ಟಿ, ಹಾಗೆ ತಮ್ಮ ಊರಿಗೆ ತಂದರು. ಕೆಲವರು ಅವನ ತಾಯಿಗೆ ಆದ ಸಂಗತಿಯನ್ನು ತಿಳಿಸಲಿಕ್ಕೆ ಮುಂದೆ ಓಡಿದರು. ತಾಯಿಯು ಬರುವವರಿಗೆ ಎದುರು ಹೋಗಿ, ದುಃಖಾಕ್ರಾಂತಳಾಗಿ ಸಾಯುವ ಮಗನ ಹತ್ತರ ಬಿದ್ದಳು. ಮತ್ತು ಅವಳು ಗುಂಪಿನ ಮುಂದ ಕಡೆಯಲ್ಲಿ ಹೋಗಿ, ತನ್ನ ಮಗನ ಕೀರ್ತಿಯನ್ನು ಹೊಗಳಿದಳು; ಏನಂದರೆ ಅವನು ಯಾವಾಗಲಾದರೂ ಒಂದು ಸರ್ತಿಯಾದರೂ ಸುಳ್ಳು ಹೇಳಿದ್ದು ಇಲ್ಲಾ ಎಂದು ಹತ್ತಿಪ್ಪತ್ತು ಸಾರಿ ಕೂಗಿ ಹೇಳಿದಳು. ಈ ಅಜ್ಞಾನಿಯಾದ ಯೌವನಸ್ಥನಿಗೆ ಆದ ಬಹುಮಾನವು ಕ್ರೈಸ್ತರೆಲ್ಲರಿಗೆ ಕೊಡ ಬಹುದಾದರೆ, ಮಹಾ ಸಂತೋಷಕ್ಕೆ ಕಾರಣವಾದೀತು.

Printed by Stolz & Reuther, Basel Mission Press, Mangalore.

ಸಭಾಪತ್ರ

ತಿಂಗಳಿಗೆ ಒಂದು ಸಾರಿ ಪ್ರಕಟಿಸಲ್ಪಡುವದು.

ಪುಸ್ತಕ ೨. **FEBRUARY 1871.** ಅಂಕೆ ೮.

ಯೆರೂಸಲೇಮಿನಿಂದ ಆರಂಭವಾಗಿ ಎಲ್ಲಾ ಜನಾಂಗಗಳಿಗೆ ಮಾನಸಾಂತರವೂ ಪಾಪಪರಿಹಾರವೂ ಅವನ ಹೆಸರಿನಲ್ಲಿ ಸಾರಲ್ಪಡ ಬೇಕಾಗಿತ್ತು.

ಲೂಕ. ೨೪, ೪೭.

ಕ್ರಿಸ್ತನು ಸತ್ತವರೊಳಗಿಂದ ಎದ್ದ ಮೇಲೆ, ಈ ಮಾತನ್ನು ಉಚ್ಚರಿಸಿದನು. ಸಾಮಾನ್ಯವಾದ ಆಜ್ಞೆಯೂ ವಿಶೇಷವಾದ ಒಂದು ಅಪ್ಪಣೆಯೂ ಈ ವಚನದಲ್ಲಿ ಅವೆ. ಮತ್ತಾಯ ಮಾರ್ಕರ ಸುವಾರ್ತೆಗಳಲ್ಲಿ ಯೇಸು ಅಪೊಸ್ತಲರಿಗೆ ಕೊಟ್ಟ ಸಾಮಾನ್ಯವಾದ ಆಜ್ಞೆ ಬರದದೆ. ಹೊರಟು ಹೋಗಿ, ಜನಾಂಗಗಳನ್ನೆಲ್ಲಾ ಶಿಷ್ಯರಾಗಿ ಮಾಡಿರಿ. ಮತ್ತಾ. ೨೮, ೧೯. ಸಮಸ್ತ ಲೋಕಕ್ಕೆ ಹೋಗಿ, ಸಮಸ್ತ ಸೃಷ್ಟಿಗೆ ಸುವಾರ್ತೆಯ ಪ್ರಸಂಗಿಸಿರಿ. ಮಾರ್ಕ. ೧೬, ೧೫. ಲೂಕನೊಬ್ಬನೇ ಕರ್ತನು ಕೊಟ್ಟ ವಿಶೇಷವಾದ ಅಪ್ಪಣೆ ಚರಿತ್ರದಲ್ಲಿ ಶೇರಿಸಿದ್ಧಾನೆ. ಮೇಲೆ ಬರದ ವಚನದ ಅರ್ಥವೇನೆಂದರೆ, ಮಾನಸಾಂತರವನ್ನೂ ಪಾಪಪರಿಹಾರವನ್ನೂ ಎಲ್ಲಾ ಜನಾಂಗಗಳಿಗೆ ಸಾರಿಸಲಾಜ್ಞಾಪಿಸಿ, ಸುವಾರ್ತೆಯ ಮೊದಲನೇ ಪ್ರಸಂಗವನ್ನು ಯೆರೂಸಲೇಮಿನವರಿಗೆ ದಯ ಮಾಡ ಬೇಕೆಂದು, ಕ್ರಿಸ್ತನು ಅಪೇಕ್ಷಿಸಿದನು. ಕರ್ತನು ಶಿಷ್ಯರಿಗೆ ಎಲ್ಲಾ ಜನಾಂಗಗಳಿಗೆ ಪ್ರಸಂಗ ಮಾಡಿರಿ, ಆದರೆ ಯೆರೂಸಲೇಮಿನಲ್ಲಿ ತೊಡಗಿರಿ ಎಂದು ಅಪ್ಪಣೆ ಕೊಟ್ಟನು.

ಹಾಗಾದರೆ ಅಪೊಸ್ತಲರು ಹೊರಟು ಹೋಗಿ, ಸುವಾರ್ತೆಯನ್ನು ಸರ್ವ ಲೋಕದಲ್ಲಿಯೂ ಸಾರ ಬೇಕೆಂಬ ವಿಶಾಲವಾದ ಉದ್ಯೋಗವನ್ನು ಹೊಂದಿದರೂ, ಈ ವರಿಸೆಯ ಪ್ರಕಾರ ಉದ್ಯೋಗದ ವೃತ್ತಿಯನ್ನು ಯೆರೂಸಲೇಮಿನಲ್ಲಿ ತೊಡಗುವ ಹಂಗಿನಲ್ಲಿ ಇದ್ದರು.

"ಯೆರೂಸಲೇಮಿನಿಂದ ಆರಂಭವಾಗಿ" ಎಂಬ ಅಭಿಪ್ರಾಯವನ್ನು ವಿವರಿಸ ಬೇಕೆಂದು ಎರಡು ತಾತ್ಪರ್ಯಗಳನ್ನು ವಿವರಿಸುತ್ತೇನೆ.

I. ಯೆರೂಸಲೇಮು ಆಗ ಏನಾಗಿತ್ತೆಂದು ತೋರಿಸುತ್ತೇನೆ.

II. ಅಂಥವರಿಗೆ ಸುವಾರ್ತೆಯನ್ನು ಸಾರುವ ಪ್ರಯೋಜನ ಏನಾಗಿತ್ತೆಂದು ಸೂಚಿಸುತ್ತೇನೆ.

I. ೧. ಯೆರೂಸಲೇಮಿನ ಜನರ ಮೂಲವಂದರೆ, ದೇವರು ಎಲ್ಲಾ ಜನಾಂಗಗಳಲ್ಲಿ ಆದು ಕೊಂಡು ಪ್ರೀತಿ ಮಾಡಿದ ಜನಾಂಗವಾದ ಅಬ್ರಹಾಮನ ವಂಶದ ಇಸ್ರಯೇಲನ ಮಕ್ಕಳ ಪ್ರಾಮುಖ್ಯವಾದ ಪಟ್ಟಣವಾಗಿತ್ತು.

೨. ಯೆರೂಸಲೇಮಿನ ಬಹುಮಾನವೂ ಮಹಿಮೆಯೂ ಏನು ಅಂದರೆ, ಅದು ನಿಜ ದೇವರ ಆರಾಧನೆಯ ಸ್ಥಳವೂ ಸರ್ವಲೋಕದ ಎಲ್ಲಾ ಜನಾಂಗಗಳಿಗಿಂತ ಹೆಚ್ಚಾಗಿ ಮೆಚ್ಚಿದ ದೇವರ ಪ್ರತ್ಯಕ್ಷತ್ವದ ಲಾಂಛನದ ಕ್ಷೇತ್ರವೂ ಆಗಿತ್ತು. ಅದರಿಂದ ೧೨ ಕುಲಗಳು ಆರಾಧನೆಗಾಗಿ ಯೆರೂಸಲೇಮಿಗೆ ಹೋಗುತ್ತಾ ಬರುತ್ತಾ ಇದ್ದರು. ಅಲ್ಲಿ ದೇವರ ಆಲಯವು ಇತ್ತು. ಅಲ್ಲಿ ದೇವರ ಪ್ರಧಾನಯಾಜಕನು ವಾಸವಾಗಿದ್ದನು. ಅಲ್ಲಿ ದೇವರಿಗೆ ಹಿತವಾದ ಬಲಿಗಳ ಸಮರ್ಪಣೆಯು ನಡೆಯುತ್ತಿತ್ತು.

ಅದರ ಮೇಲೆ ದೇವರ ನೇತ್ರವೂ ದೇವರ ಹೃದಯವೂ ಬಿಡದೆ ತೆರದಿದ್ದವು. ಕೀರ್ತ. ೭೬, ೧. ೨; ೧೨೨; ೧ ಅರಸು. ೯, ೩. ಆದರೆ

೩. ಯೆರೂಸಲೇಮಿನ ಕ್ಷಯ ಸ್ಥಿತಿಯನ್ನೂ ಹೇಳ ಬೇಕು. ಯಾಕಂದರೆ, ಈ ಸ್ಥಿತಿಯು ಮೇಲೆ ಬರದ ಯಥೋಕ್ತದ ತಾತ್ಪರ್ಯದ ಗುರಿಯಾಗಿದೆ.

ಯೆರೂಸಲೇಮು ದೇವರ ಆರಾಧನೆಯ ಮೂಲಸ್ಥಾನವಾಗಿತ್ತೆಂದು ನಾನು ಹೇಳಿದ್ದೇ ಸರಿ. ಆದರೆ ಯೇಸು ಬಂದ ಕಾಲದಲ್ಲಿ ಅದು ಕುಂದಿ, ಕೆಟ್ಟು, ದೇವದ್ರೋಹಕ್ಕೆ ಒಳಗಾಗಿತ್ತು. ದೇವಾರಾಧನೆಯ ನೇಮವಾದ ವಾಕ್ಯವನ್ನು ಅವರು ತಿರಸ್ಕರಿಸಿ, ತಮ್ಮ ಪಿತೃಸಂಪ್ರದಾಯಗಳಿಗೆ ದಿವ್ಯಾಧಿಕಾರ ಉಂಟೆಂದು ನಿಶ್ಚೈಸಿ, ಬಹು ಘನವಾದ ದೇವರ ಕಟ್ಟಳೆಗಳನ್ನು ಅಸಡ್ಡೆ ಮಾಡಿ, ಅಲ್ಪವಾದ ತಮ್ಮ ಸ್ವಂತ ಪದ್ಧತಿಗಳನ್ನು ದೇವರ ನೇಮವೆಂದು ಸ್ಥಾಪಿಸಿದ್ದರು. (ಮತ್ತಾ. ೧೫. ಮಾರ್ಕ. ೭. ಸಂಧಿ.) ಹೀಗಿರಲಾಗಿ ಯೆರೂಸಲೇಮು ಪಟ್ಟಣವು ದುರಾಚಾರದಲ್ಲಿ ಮುಣುಗಿ, ಸತ್ಯ ಜ್ಞಾನವೂ ಸತ್ಯ ಭಕ್ತಿಯೂ ಇಲ್ಲದ ಬಹಳ ಮಲಿನವಾದ ಸ್ಥಳವಾಗಿತ್ತು.

ಯೆರೂಸಲೇಮು ಈಗ ಪಾಪದ ಗೊಜ್ಜಲಿಕಾಲಿವೆಯೂ ಕಪಟ ಭಕ್ತಿಯ ಮೂಲಸ್ಥಾನವೂ ಸತ್ಯ ಧರ್ಮವು ಮುಣುಗಿ ಹೋದ ಗುಂಡಿಯೂ ಆಗಿತ್ತು. ದುರಾಭಿಮಾನವೂ ಆತ್ಮ ವಿಷಯವಾದ ದೇವರ ಮಿಥ್ಯಾ ಭರವಸವೂ ಅದರಲ್ಲಿ ಪ್ರಬಲವಾಗಿದ್ದವು. ಅದರ ಅಧಿಕಾರಿಗಳೂ ಶಾಸ್ತ್ರಿಗಳೂ ಮುಖ್ಯಸ್ಥರೂ ಭಕ್ತಿಯ ಸತ್ವವನ್ನು ಕಂಡ ಕಡೆಯಲ್ಲೆಲ್ಲಾ ಹೊಟ್ಟೆಕಿಚ್ಚಿನಿಂದಲೂ ನಾನಾ ದೂಷಣೆಗಳಿಂದಲೂ ಎದುರಿಸಿ, ನಿಜ ಭಕ್ತರನ್ನು ದ್ವೇಷ ಮಾಡುತ್ತಾ ಇದ್ದರು. ಅವರ ಕರ್ತನಾದ ರಕ್ಷಕನು ಸಹ ಅವರ ಹಗೆಗೆ ತಪ್ಪಿಸಿಕೊಳ್ಳಲಿಲ್ಲ.

ಒಂದು ಮಾತಿನಲ್ಲಿ, ಯೆರೂಸಲೇಮು ಈಗ ದೇವರ ಭಕ್ತರು ಹತವಾಗುವ ಕಟಕರ ಅಂಗಡಿಯಾಗಿ ಹೋಗಿತ್ತು. ಈ ಸ್ಥಳದಲ್ಲಿ ಪ್ರವಾದಿಗಳೂ ಕ್ರಿಸ್ತನೂ ಕ್ರಿಸ್ತನವರೂ ಅ

ತಿ ಕ್ರೂರವಾಗಿ ಹಿಂಸೆ ಪಟ್ಟು, ಕೊಳ್ಳೆಯಾದರು. ಇದಲ್ಲದೆ ಈ ಯೆರೂಸಲೇಮು ಪಟ್ಟಣದವರು ತಮ್ಮ ಪಾಪಗಳಲ್ಲಿ ಪೂರ್ಣ ಮೂರ್ಖರಾಗಿ, ಅತ್ಯಂತ ಪಾತಕವನ್ನು ಮಾಡಿ, ಅದರ ಅಪರಾಧವನ್ನೂ ಆಜ್ಞಾನಿರ್ಣಯವನ್ನೂ ಬೇಕೆಂದು ತಮ್ಮ ಮೇಲೆ ಹೊತ್ತು ಕೊಂಡು, ದೇವರ ಮಗನನ್ನು ಕೊಲ್ಲುವ ವೇಳೆಯಲ್ಲಿ, “ಅವನ ರಕ್ತವು ನಮ್ಮ ಮೇಲೆಯೂ ನಮ್ಮ ಮಕ್ಕಳ ಮೇಲೆಯೂ ಬರಲಿ!” ಎಂದು ಕೂಗಿದರು.

ಮತ್ತು ಯೇಸು ಕ್ರಿಸ್ತನು ದಿವ್ಯ ಬೋಧನೆಯಿಂದಲೂ ನಾನಾ ಅದ್ಭುತ ಕ್ರಿಯೆಗಳಿಂದಲೂ ಪರಿಶುದ್ಧಾಚಾರದಿಂದಲೂ ಅವರ ತುಂಟತನವನ್ನು ನಿಲ್ಲಿಸ ಬೇಕೆಂದು ಯತ್ನ ಮಾಡಿದರೂ, ಅವರು ತಮ್ಮ ಕಣ್ಣುಗಳನ್ನು ಕಟ್ಟಿ ತಮ್ಮ ಕಿವಿಗಳನ್ನು ಮುಚ್ಚಿ ಅವನ ಪ್ರಾಣವನ್ನು ಸಂಹಾರ ಮಾಡುವ ಪರ್ಯಂತರ ಸಂತುಷ್ಟರಾಗಿರದೆ ಹೋದರು. ಇದು ಸಾಲದೆಂದು, ಕೈಲಾದರೆ ಅವನ ಹೆಸರನ್ನು ಅಳಿಸಿ ಅವನ ಬೋಧನೆಯನ್ನು ಮುಣುಗಿಸುವದಕ್ಕಾಗಿ, ಸ್ವಸ್ಥ ಬುದ್ಧಿಗೂ ದೇವರ ಬಲವಾದ ಕೈಗೂ ಅವನ ಪುನರುತ್ಥಾನದ ನಿಶ್ಚಯವಾದ ದೃಷ್ಟಾಂತಕ್ಕೂ ವಿರೋಧವಾಗಿ, ಮನುಷ್ಯರು ಅವನು ಲೋಕರಕ್ಷಕನೆಂದೂ ಪಾಪಪರಿಹಾರಕನೆಂದೂ ನಂಬದ ಹಾಗೆ, ರಾಣುವೆಯವರಿಗೆ ಲಂಚ ಕೊಟ್ಟು, ಅವನ ಶಿಷ್ಯರು ಅವನ ಶರೀರವನ್ನು ಸಮಾಧಿಯಿಂದ ಕದ್ದು ಕೊಂಡು ಹೋದರೆಂಬ ಸುಳ್ಳು ಸುದ್ದಿ ಎಬ್ಬಿಸಿದರು.

ಪೌಲನು ಅವರ ವಿಷಯವಾಗಿ ಹೇಳಿದ್ದೇನಂದರೆ: ಅವರು ಎಲ್ಲಾ ಮನುಷ್ಯರಿಗೆ ಎದುರಾಳಿಗಳು, ಅವರು ಜೀವದ್ವಾರದಲ್ಲಿ ತಾವು ಶೇರಲೊಲ್ಲದೆ, ಅದನ್ನು ಮುಚ್ಚಿ ಬಿಟ್ಟು, ಬೇರೆ ಯಾರಾದರೂ ಅದರಲ್ಲಿ ಶೇರದ ಹಾಗೆ, ಅದನ್ನು ತೆರೆಯ ಬಾರದೆಂದು ಆಜ್ಞಾಪಿಸಿ, ಅನ್ಯ ಜನರು ನಂಬಿ ರಕ್ಷಣೆಯನ್ನು ಹೊಂದದ ಹಾಗೆ, ನಮ್ಮನ್ನು ಸುವಾರ್ತೆ ಸಾರಲೀಸದೆ, ತಮ್ಮ ಪಾಪಗಳನ್ನು ಅಳದು ತುಂಬಿದರು. ಮತ್ತಾ. ೨೩, ೩೫; ೧೫, ೭. ೮. ೯. ಮಾರ್ಕ. ೭, ೬, ೭. ೮. ಮತ್ತಾ. ೩, ೭. ೮. ೯. ಯೋಹಾ. ೮, ೩೩. ೪೧. ಮತ್ತಾ. ೨೭, ೧೮. ಮಾರ್ಕ. ೩, ೩೦. ಲೂಕ. ೭, ೩೧ – ೩೪. ಮತ್ತಾ. ೨೩, ೩೭. ಲೂಕ. ೧೩, ೩೩. ೩೪. ಕೀರ್ತ. ೧೦೭. ೨೩. ೨೪. ಮತ್ತಾ. ೨೭. ೨೫; ೨೧, ೩೩ — ೩೯. ೧ ಥೆಸ್ಸ. ೨, ೧೪ – ೧೬. ಅಪೊ. ಕ್ರಿ. ೭, ೨೧. ೬೦.

ಪಟ್ಟಣವು ಇಂಥಾದ್ದಾಗಿತ್ತು, ಜನರು ಇಂಥವರಾಗಿದ್ದರು. ಅವರ ಗುಣವೂ ಅವರ ಪಾಪಗಳೂ ಇಂಥವುಗಳೇ ಈ ಭೂಲೋಕದಲ್ಲಿಲ್ಲಾ. ಅವರ ದುಷ್ಟತ್ವಕ್ಕೆ ಸಮಾನವಾದದ್ದು ಕಾಣಲಿಲ್ಲ. ವಿಶೇಷವಾಗಿ ಅವರು ದ್ವೇಷ ಮಾಡಿದ ಬೆಳಕು ಎಂಥಾದ್ದು? ಅವರು ಅಸಡ್ಡೆ ಮಾಡಿದ ತಾಳ್ಮೆ ಎಂಥಾದ್ದು? ಎಂದು ಎಣಿಕೆ ಮಾಡಿದರೆ, ಯಾವ ಲೋಕ? ಯಾವ ಜನಾಂಗ? ಯಾವ ಜಾತಿ? ಪಾಪಗಳಲ್ಲಿಯೂ ಅತಿಕ್ರಮಗಳಲ್ಲಿಯೂ ಯೆರೂಸಲೇಮಿಗೆ ಸಮಾನವಾಗಿತ್ತೆಂದು ಹೇಳಲಿ! ಈ ಲೆಖ್ಖದ ಪ್ರಕಾರ ಅವರು ನಡಿಸಿದ ದುಷ್ಟತ್ವವು ಅಮಿತವಾದದ್ದೇ ಸರಿ.

ಅವರು ಜ್ಞಾನಿಗಳನ್ನೂ ಪ್ರವಾದಿಗಳನ್ನೂ ಮನಸ್ಸು ಬಂದಷ್ಟು ನಿಂದಿಸಿ ತಳ್ಳಿದ ಮೇ

ಲೆ, ದೇವರು ಅವರನ್ನು ವಶ ಮಾಡಿ ಕೊಳ್ಳುವದಕ್ಕೆ ಸ್ನಾನಿಕನಾದ ಯೋಹಾನನನ್ನೂ ಅವರನ್ನು ರಕ್ಷಿಸುವದಕ್ಕೆ ತನ್ನ ಮಗನನ್ನೂ ಕಳುಹಿಸಿದನು. ಆದರೆ ಅವರು ವಶವಾಗಲೂ ರಕ್ಷಣೆ ಹೊಂದಲೂ ಒಲ್ಲದೆ, ಇಬ್ಬರನ್ನು ಮರಣದ ವರಿಗೂ ಹಿಂಸಿಸಿದರು. ಇದು ಸಹ ಅವರಿಗೆ ಸಾಲದೆ ಹೋಯಿತು. ತದನಂತರ ಪರಿಶುದ್ಧ ಅಪೊಸ್ತಲರಲ್ಲಿ ಕೈಗೆ ಶಿಕ್ಕಿದಷ್ಟು ಮಂದಿಯನ್ನು ಮರಣದ ವರಿಗೂ ಹಿಂಸಿಸಿದರು. ಉಳಿದವರನ್ನು ದಿಕ್ಕು ದಿಕ್ಕಿಗೆ ಓಡಿಸಿದರು.

II. ಇವರಿಗೆ ಮೊದಲೇ ಸುವಾರ್ತೆಯನ್ನು ಪ್ರಸಂಗಿಸ ಬೇಕೆಂದು ಯೇಸು ಕ್ರಿಸ್ತನು ಅಪೊಸ್ತಲರಿಗೆ ಅಪ್ಪಣೆ ಕೊಟ್ಟನು.

ಯೆರೂಸಲೇಮಿನಿಂದ ಆರಂಭವಾಗಿ, ಎಂದು ಕರ್ತನು ಹೇಳಿ, ಯೆರೂಸಲೇಮಿನವರನ್ನು ಮುಂದಿನವರಾಗಿ, ದೇವರ ರಾಜ್ಯಕ್ಕೆ ಕರೆಯ ಬೇಕೆಂದು ಆಜ್ಞಾಪಿಸಿದನು.

ಈ ಆಜ್ಞೆ ಕೊಟ್ಟ ಕಾರಣವೇನು? ಅವರು ಲೋಕದ ಬೇರೆ ಜನಾಂಗಗಳಿಗಿಂತ ದೇವರ ರಾಜ್ಯಕ್ಕೆ ಅಧಿಕ ಯೋಗ್ಯರಾಗಿದ್ದರೊ? ಇಲ್ಲವೇ ಇಲ್ಲ. ಅವರ ಪಾಪಗಳೆಂಬ ಮಸಿ ಅವರ ಪುಣ್ಯಗಳೆಂಬ ವರ್ಣವನ್ನೆಲ್ಲಾ ನುಂಗಿ ಇತ್ತು. ಅಥವಾ ಪರಜನರೆಲ್ಲರಲ್ಲಿ ಇದ್ದ ಅತಿ ದುಷ್ಟರಿಗಿಂತ ಉತ್ತಮರಾಗಿದ್ದರೋ? ಇಲ್ಲವೇ ಇಲ್ಲ. ಅವರು ತಮ್ಮ ಪಾಪಗಳಿಗೆಲ್ಲಾ ಕಡೆಯಲ್ಲಿ ನಡಿಸಿದ ಮಹಾ ಪಾತಕವನ್ನು ಶೇರಿಸುವದಕ್ಕಿಂತ ಮುಂಚೆ ದೇವರು ಇಸ್ರಯೇಲರ ಮುಂದೆ ಕಾನಾನ್ ದೇಶದಿಂದ ಹೊರಡಿಸಿದ ಜನಾಂಗಗಳಿಗಿಂತ ದುಷ್ಟರಾಗಿದ್ದರು. ೨ ದಿನಚ. ೩೩. ಹಾಗಾದರೆ ಯೇಸು ಯೆರೂಸಲೇಮಿನಿಂದ ಆರಂಭವಾಗಿ, ಎಂಬುವ ಮಾತನ್ನು ಅಪೊಸ್ತಲರಿಗೆ ಕೊಟ್ಟ ಆಜ್ಞೆಯಲ್ಲಿ ಬರದ ದಯೆಯಿಂದಲೂ ಕರುಣೆಯಿಂದಲೂ ಅಂತಃಕರಣಾತಿಶಯದಿಂದಲೂ ಶೇರಿಸಿದನೆಂದು, ತೋಚುತ್ತದೆ. ಯಾಕಂದರೆ ಆಕಾಶದ ಕೆಳಗಣ ಎಲ್ಲಾ ಜನಾಂಗಗಳಲ್ಲಿ ಅವರು ದುಷ್ಟರೂ ಅರಿಷ್ಟರೂ ಆಗಿದ್ದರು.

ಯೇಸು ಕ್ರಿಸ್ತನು ದೊಡ್ಡ ಪಾಪಿಗಳಿಗೆ ಆರಂಭದಲ್ಲಿ ಕರುಣೆಯ ಸುವಾರ್ತೆಯನ್ನು ಸಾರಿಸ ಮನಸ್ಸಾಗಿದ್ದಾನೆ. ಯೆರೂಸಲೇಮಿನ ಪಾಪಿಗಳು ಸರ್ವಲೋಕದಲ್ಲಿಯೂ ದೊಡ್ಡ ಪಾಪಿಗಳಾಗಿದ್ದರೆಂದು, ಕ್ರಿಸ್ತನು ಸರ್ವಲೋಕದಲ್ಲಿಯೂ ಉತ್ತಮ ಪುರುಷನೂ ಅವರ ಕರ್ತನಾದ ದೇವರೂ ಆಗಿದ್ದಾನೆಂದು, ನಂಬುವ ಯಾವನಾದರೂ ಅಲ್ಲಗಳಿಯನೆಂದು ನೆನಸುತ್ತೇನೆ. ಇವರನ್ನು ಕೃಪೆಯ ವಾಕ್ಯವನ್ನು ಕೇಳುವದಕ್ಕೆ ಯೇಸು ಕ್ರಿಸ್ತನು ಆದು ಕೊಂಡನೆಂದು ಯೆರೂಸಲೇಮಿನಿಂದ ಆರಂಭವಾಗಿ, ಎಂಬ ನಮ್ಮ ಯಥೋಕ್ತದಿಂದ ಸೂರ್ಯಕಾಂತಿಯಷ್ಟು ನಿರ್ಮಲವಾಗಿ ಕಾಣುತ್ತದೆ. ಕರ್ತನ ಅಭಿಪ್ರಾಯವೇನಂದರೆ, ಹೋಗಿ ಮಾನಸಾಂತರವನ್ನೂ ವಿಶ್ವಾಸವನ್ನೂ ಯೆರೂಸಲೇಮಿನ ಪಾಪಿಗಳಿಗೆ ಸಾರಿರಿ. ಯೆರೂಸಲೇಮಿನ ಪಾಪಿಗಳಿಗೆ ಅದನ್ನು ಮುಂಚೆಯೇ ಸಾರಿರಿ.

ಯೆರೂಸಲೇಮಿನ ಪಾಪಿಗಳು ಎಲ್ಲರಲ್ಲಿ ಕಡು ಕೆಟ್ಟ ದೊಡ್ಡ ಪಾಪಿಗಳು, ಎಲ್ಲರಿಗಿಂತ ಕ್ರಿಸ್ತನ ಕ್ರೂರ ದ್ವೇಷಿಗಳು, ಆತನನ್ನೂ ಆತನ ಬೋಧನೆಯನ್ನೂ ಆತನ ಅದ್ಭುತ

ಕ್ರಿಯೆಗಳನ್ನೂ ಉದಾಸೀನ ಮಾಡಿ, ಸ್ವಲ್ಪ ಕಾಲಕ್ಕೆ ಮುಂಚೆ ಆತನ ರಕ್ತದಲ್ಲಿ ತಮ್ಮ ಬಾಹುಗಳನ್ನು ಮೊಣಕೈ ಪರ್ಯಂತರ ಮುಣುಗಿಸಿದ ಕೊಲೆಗಾರರು ಆಗಿದ್ದದರಿಂದ, ಯೇಸು ಶಿಷ್ಯರಿಗೆ ಸರ್ವಲೋಕಕ್ಕೆ ಹೋಗಿ, ಎಲ್ಲಾ ಜನಾಂಗಗಳಲ್ಲಿ ಮಾನಸಾಂತರವನ್ನೂ ಪಾಪಪರಿಹಾರವನ್ನೂ ಸಾರಿರಿ, ಸಾರಿದ ಮೇಲೆ, ಅದೇ ಪ್ರಸಂಗವನ್ನು ಯೆರೂಸಲೇಮಿನಲ್ಲಿಯೂ ಮಾಡಿರಿ! ಎಂಬದಾಗಿ ಹೇಳ ತಕ್ಕದ್ದಾಗಿತ್ತೆಂದು ನೆನಸುವದು ಯುಕ್ತವಾಗಿದೆ; ಹಾಗೆ ಹೇಳಿದ್ದಾದರೆ, ಯೇಸುವಿನ ಕೃಪೆ ಅಮಿತವಾದದ್ದೆಂದು ಹೇಳ ಬೇಕಾಗಿತ್ತು. ಆದರೆ ಎಲ್ಲಾ ಜನಾಂಗಗಳಲ್ಲಿ ಸಾರಿಸ ನೇಮಕ ಮಾಡಿದ ಮಾನಸಾಂತರ ಪಾಪಪರಿಹಾರಗಳ ಸುವಾರ್ತೆಯನ್ನು ಯೆರೂಸಲೇಮಿನಲ್ಲಿ ಮುಂಚೆಯೇ, ಪಾಪಿಗಳಲ್ಲೆಲ್ಲಾ ಕೆಟ್ಟವರಿಗೆ ಮುಂಚೆಯೇ, ಸಾರ ಬೇಕೆಂದು ಆಜ್ಞಾಪಿಸಿದ ಕೃಪೆ ಎಂಥಾದ್ದೆಂದು ಹೇಳಲಿ! ಯೆರೂಸಲೇಮಿನ ಪಾಪಿಗಳಿಗೆ ಸುವಾರ್ತೆಯ ಕೆನೆಹಾಲು ಕುಡಿಸ ಬೇಕೆಂದು, ಕರ್ತನಿಗೆ ಮನಸ್ಸಿತ್ತು. ತಾನು ಭೂಲೋಕದಲ್ಲಿ ಇದ್ದಾಗ, ಅಲ್ಲಿಯವರಿಗೆ ದೇವರ ರಾಜ್ಯದ ವಾಕ್ಯವನ್ನು ಬಾಯಿಂದ ಹೇಳಿದನು. ಭೂಲೋಕವನ್ನು ಬಿಟ್ಟ ಮೇಲೆ, ಪ್ರಸಂಗಿಗಳಾಗಿ ನೇಮಿಸಿದ ಅಪೊಸ್ತಲರಿಗೆ ಯೆರೂಸಲೇಮಿನಲ್ಲಿಯೇ ಮುಂಚೆ ಪ್ರಸಂಗ ಮಾಡ ಬೇಕೆಂದು ಅಪ್ಪಣೆ ಕೊಟ್ಟನು.

ಕರ್ತನು ಪರಲೋಕಕ್ಕೆ ಏರಿ ಹೋದ ಮೇಲೆ, ಅಪೊಸ್ತಲರು ಆ ವಿಶೇಷವಾದ ಅಪ್ಪಣೆಯನ್ನು ಅಲಕ್ಷಿಸದೆ, ಯೆರೂಸಲೇಮಿನಲ್ಲಿ ಆರಂಭ ಮಾಡಿ, ಯೆರೂಸಲೇಮಿನಲ್ಲಿ ಇದ್ದವರಿಗೆ ಕ್ರಿಸ್ತನ ಸುವಾರ್ತೆಯನ್ನು ಮೊದಲು ಸಾರಿದರು. ಇದಲ್ಲದೆ ಕರ್ತನ ಅಪ್ಪಣೆಯನ್ನು ಕೈಕೊಳ್ಳ ಬೇಕೆಂಬ ಜಾಗ್ರತೆಯುಳ್ಳವರಾಗಿದ್ದು, ಪರಸ್ಥಳದವರಿಗೆ ಪ್ರಸಂಗ ಮಾಡದೆ, ಯೆರೂಸಲೇಮಿನಲ್ಲಿಯೇ ತಕ್ಕ ಕಾಲ ವಾಸಿಸುತ್ತಾ ಇದ್ದರು.

ಇದಲ್ಲದೆ ಕ್ರಿಸ್ತನು ಪರಲೋಕಕ್ಕೆ ಏರಿದ ಬಳಿಕ ಅವರು ಮಾಡಿದ ಮೊದಲನೇ ಪ್ರಸಂಗವನ್ನೂ, ಎರಡನೇ ಮೂರನೇ ನಾಲ್ಕನೇ ಪ್ರಸಂಗವನ್ನು ಸಹ, ಅದೇ ಕೊಲೆಗಾರರಿಗೆ, ಅವರು ರಕ್ಷಣೆಯನ್ನು ಹೊಂದುವದಕ್ಕಾಗಿ, ಮಾಡಿದರೆಂಬುವದನ್ನು ಸಹಾ ಪರಾಂಬರಿಸ ತಕ್ಕದ್ದು. ಅಪೊ. ಕ್ರಿ. ೨, ೨೩; ೩, ೧೩ – ೧೬; ೪, ೧೦. ೧೧; ೫, ೩೦; ೭, ೫೨.

ಆದರೆ ಈಗ ಯೆರೂಸಲೇಮಿನ ಪಾಪಿಗಳಿಗೆ ಆದ ಮೊದಲನೇ ಪ್ರಸಂಗಕ್ಕೆ ತಿರುಗಿ, ಅದನ್ನು ಚನ್ನಾಗಿ ಧ್ಯಾನಿಸಿ, ಮಹಾ ಕೃಪೆಗಿಂತ ಹೆಚ್ಚಾದ ಕೃಪೆ ಅವರಿಗೆ ಪ್ರಾಪ್ತವಾಯಿತೆಂದು ನೋಡುವ; ಏನಂದರೆ:

ಪೇತ್ರನೂ ಬೇರೆ ಅಪೊಸ್ತಲರೂ ಸಾರಿದ ಬೋಧನೆಯನ್ನು ಆ ತುಂಟರು ಕೇಳಿ, ತಾವು ಜೀವದ ಅಧಿಪತಿಯನ್ನು ಕೊಂದೆವೆಂದು ನಂಬಿ, ನರಹತ್ಯದ ಅಪರಾಧಕ್ಕೆ ಒಳಗಾದೆವೆಂದು ತಿಳಿದು—ಭ್ರಾತೃಗಳಾದ ಜನರೇ, ನಾವೇನು ಮಾಡುವ? ಎಂದು ಕೇಳಿದ್ದಕ್ಕೆ, ಪೇತ್ರನು ಅವರೆಲ್ಲರನ್ನೂ, ಕ್ರಿಸ್ತನ ಕೊಲೆಗಾರರೆಂದು, ಸಾಮಾನ್ಯವಾಗಿ ಸಮುದಾಯಿಸಿ, ಮಾಡಿದ ಗರ್ವಕ್ಕೆ ಪಶ್ಚಾತ್ತಾಪ ಪಟ್ಟು ಅವನ ಹೆಸರಿನಲ್ಲಿ ಪಾಪಗಳ ಪರಿಹಾರಕ್ಕಾಗಿ ಸ್ನಾನ ಹೊಂದಿದರೆ, ಪರಿಶುದ್ಧಾತ್ಮದ ವರವನ್ನು ಪಡಕೊಳ್ಳುವಿರಿ ಎಂದು ಸಾರಿದನು. ಅಪೊ. ಕ್ರಿ. ೨, ೩೭. ೩೮.

ಅವರು ಇಂಥಾ ಪಾಪಿಗಳೆಂದು ತಿಳದಿದ್ದರೂ, ಅವರೆಲ್ಲರಿಗೆ ಈ ಮಾತು ಹೇಳಿದನು. ಹೀಗೆ ಹೇಳುವದು ಸಮವೋ ಏನೋ? ಎಂದು ಒಂದು ಕ್ಷಣ ಮಾತ್ರವೂ ನಿಲ್ಲದೆ, ಬಿಡದೆ ಮನಃಸಂಶಯ ಪಡದೆ, ಅದನ್ನು ಹೇಳಿದನಷ್ಟೆ. ಇದು ಹೊರ್ತು, ಪೇತ್ರನು ಅವರಲ್ಲಿ ಒಬ್ಬನನ್ನಾದರೂ ತಿರಸ್ಕರಿಸ ಮನಸ್ಸಿಲ್ಲದೆ, ಅವರಲ್ಲಿ ಒಬ್ಬನನ್ನಾದರೂ ತಾನು ಸಾರುವ ರಕ್ಷಣೆಗೆ ತಪ್ಪಿಸಿ ಕೊಳ್ಳ ಬಾರದೆಂದು, ವಿಶೇಷವಾದ ಪ್ರಸ್ತಾಪವನ್ನು ಮಾಡಿ—ಪಶ್ಚಾತ್ತಾಪ ಪಟ್ಟು, ನಿಮ್ಮಲ್ಲಿ ಒಬ್ಬೊಬ್ಬನು ಸ್ನಾನವನ್ನು ಹೊಂದಲಿ! ಎಂದು ಹೇಳಿದನು. ನಿಮ್ಮಲ್ಲಿ ಒಬ್ಬನನ್ನಾದರೂ ನಾನು ತಳ್ಳುವದಿಲ್ಲ; ಯಾಕಂದರೆ ನನ್ನ ಕರ್ತನು ಸಂರಕ್ಷಣೆಯ ವಾಕ್ಯವನ್ನು ನಿಮ್ಮಲ್ಲಿ ಒಬ್ಬೊಬ್ಬನಿಗೆ ಹೇಳ ಬೇಕೆಂದು ನನಗೆ ಅಪ್ಪಣೆ ಕೊಟ್ಟು ಇದ್ಧಾನೆ ಎಂತ, ಅವನು ಇಷ್ಟು ಪ್ರತ್ಯೇಕವಾಗಿ ಒಬ್ಬೊಬ್ಬನಿಗೆ ಎಂದು ಹೇಳುವದು ಯಾಕೆ? ಹೀಗೆ ಹೇಳುವದಕ್ಕೂ ಕಾರಣಗಳು ಇದ್ದವಲ್ಲ. ಏನಂದರೆ, ಅಪೊಸ್ತಲರು, ಈಗ ಪ್ರಸಂಗ ಮಾಡುವ ಜನರು ನಮ್ಮ ಕರ್ತನ ಕೊಲೆಗಾರರಾಗಿ, ಅವನ ರಕ್ತ ದ್ರೋಹಕ್ಕೆ ಒಳಗಾದದ್ದು ಅಲ್ಲದೆ, ಪ್ರತ್ಯೇಕವಾದ ಬೇರೆ ಬೇರೆ ದುಷ್ಕರ್ಮಗಳಿಂದ ಆ ಅಪರಾಧಕ್ಕೆ ಗುರಿಯಾದೆವೆಂದು, ಅವರವರ ಮನಸ್ಸಾಕ್ಷಿಯಾಗಿತ್ತು. ಅವರವರು ಮಾಡಿದ ಪ್ರತ್ಯಪ್ರತ್ಯೇಕವಾದ ದುಷ್ಕರ್ಮದ ಪರಿಹಾರದ ದೃಢವು ಒಬ್ಬೊಬ್ಬನಿಗೆ ಬೇರೆ ಬೇರೆಯಾಗಿ, ನಿನಗೆ ಪರಿಹಾರ ಉಂಟೆಂದು ಹೇಳದೆ ಹೋದರೆ, ಒಂದು ವೇಳೆ ಹುಟ್ಟ ಕೂಡದಿತ್ತು. ಆದರಿಂದ ಪೇತ್ರನು: ನಿಮ್ಮಲ್ಲಿ ಒಬ್ಬೊಬ್ಬನು ಮಾನಸಾಂತರ ಪಟ್ಟು, ಒಬ್ಬೊಬ್ಬನು ಅವನ ಹೆಸರಿನಲ್ಲಿ ಪಾಪಪರಿಹಾರಕ್ಕಾಗಿ ಸ್ನಾನ ಹೊಂದಿದರೆ, ನಿಮ್ಮಲ್ಲಿ ಒಬ್ಬೊಬ್ಬನು ಪಾಪಪರಿಹಾರದ ವರವನ್ನು ಹೊಂದುವನೆಂದು ಹೇಳಿದನು.

ಎದುರ್ವಾದಿಸುವವನು: ಆದರೆ ನಾನು ಅವನಿಗೆ ಅಪಸಾಕ್ಷಿಯನ್ನು ನುಡಿದೆನು. ಆತನು ನನ್ನನ್ನು ರಕ್ಷಿಸ್ಯಾನೋ?

ಪೇತ್ರನು: ನಿಮ್ಮಲ್ಲಿ ಒಬ್ಬೊಬ್ಬನಿಗೆ ರಕ್ಷಕನಾಗಿದ್ಧಾನೆ.

ಎದುರ್ವಾದಿ: ಆದರೆ ನಾನು ಅವನಿಗೆ ಕೊಲೆ ಬಿಗಿದವರಲ್ಲಿ ಒಬ್ಬನು; ನನಗೂ ಕೃಪೆ ದೊರಕೀತೋ?

ಪೇತ್ರ: ನಿಮ್ಮಲ್ಲಿ ಒಬ್ಬೊಬ್ಬನಿಗೆ.

ಎದುರ್ವಾದಿ: ಆದರೆ ನಾನು, ಅವನನ್ನು ಕ್ರೂಜಿಸು! ಕ್ರೂಜಿಸು! ಎಂದು ಕೂಗಿ, ಅವನಲ್ಲಿ ಕೊಲೆಗಾರನಾದ ಬರಬ್ಬನು ಬಿಡುಗಡೆಯಾಗ ಬೇಕೆಂದು ಹೇಳಿದವರಲ್ಲಿ ಒಬ್ಬನು; ನನಗೇನು ಪ್ರಾಪ್ತಿ ಆದೀತೆಂದು ನೆನಸುತ್ತೀ?

ಪೇತ್ರನು: ನಿಮ್ಮಲ್ಲಿ ಒಬ್ಬೊಬ್ಬನಿಗೆ ಮಾನಸಾಂತರವನ್ನೂ ಪಾಪಪರಿಹಾರವನ್ನೂ ಸಾರುವ ಹಂಗಿನಲ್ಲಿಯೇ ಇದ್ಧೇನೆ.

ಎದುರ್ವಾದಿ: ಆದರೆ ನಾನು ವಾದಿಗಳ ಮುಂದೆ ನಿಂತು ಕೊಳ್ಳುವವನ ಮುಖಕ್ಕೆ ಉಗುಳಿದವರಲ್ಲಿ ಒಬ್ಬನು; ಮತ್ತು ಅವನು ಕ್ರೂಜೆಯಲ್ಲಿ ಶಿಕ್ಕಿ, ರಕ್ತಮಯವಾಗಿ, ಪ್ರಾಣಸಂಕಟ ಪಡುತ್ತಾ ಇರುವ ವೇಳೆಯಲ್ಲಿ ಅವನಿಗೆ ಕುಚೋದ್ಯ ಮಾಡಿದವರಲ್ಲಿ ಶೇರಿದೆನಲ್ಲ; ನನಗೂ ಗತಿ ಉಂಟೊ?

ಪೇತ್ರನು: ನಿಮ್ಮಲ್ಲಿ ಒಬ್ಬೊಬ್ಬನಿಗೆ.

ಎದುರ್ವಾದಿ: ಆದರೆ ನಾನು ಮರಣಾವಸ್ಥೆ ಪಡುವವನಿಗೆ, ಪಿತ್ತ ಬೆರಸಿದ ಹುಳಿ ರಸ ಕುಡಿಸಿದವರಲ್ಲಿ ಒಬ್ಬನು. ಮರಣಾವಸ್ಥೆಯೂ ನರಕಭಯವೂ ನನ್ನ ಮೇಲೆ ಬೀಳುವ ವೇಳೆಯಲ್ಲಿ, ನನ್ನ ಪ್ರತಿಫಲ ಬರ ಬೇಡವೋ?

ಪೇತ್ರನು: ಈ ನಿಮ್ಮ ದುಷ್ಕರ್ಮಗಳಿಗೆ ಪಶ್ಚಾತ್ತಾಪ ಪಡಿರಿ, ಪಟ್ಟರೆ ನಿಮ್ಮಲ್ಲಿ ಒಬ್ಬೊಬ್ಬನಿಗೆ ಪಾಪಪರಿಹಾರ ಉಂಟು.

ಎದುರ್ವಾದಿ: ಆದರೆ ನಾನು ಅವನನ್ನು ನಿಂದಿಸಿದೆನು, ಅವನಿಗೆ ಬೈದೆನು, ಹಗೆ ಮಾಡಿದೆನು, ಮತ್ತೊಬ್ಬರು ಅವನಿಗೆ ಮಾಡಿದ ಕುಚೋದ್ಯಕ್ಕೆ ಮೆಚ್ಚಿದೆನು. ನನಗೆ ಗತಿ ಇದ್ದೀತೋ?

ಪೇತ್ರನು: ನಿಮ್ಮಲ್ಲಿ ಒಬ್ಬೊಬ್ಬನಿಗೆ ಉಂಟು. ಮಾನಸಾಂತರ ಪಟ್ಟು, ಒಬ್ಬೊಬ್ಬನು ಯೇಸು ಕ್ರಿಸ್ತನ ಹೆಸರಿನಲ್ಲಿ ಪಾಪಪರಿಹಾರಕ್ಕಾಗಿ ಸ್ನಾನ ಹೊಂದಿದರೆ, ಪರಿಶುದ್ಧಾತ್ಮದ ವರವನ್ನು ಪಡಕೊಳ್ಳುವಿರಿ.

ಆಹಾ, "ನಿಮ್ಮಲ್ಲಿ ಒಬ್ಬೊಬ್ಬನು" ಎಂಬ ಮಾತು ಎಷ್ಟೋ ಮಂಗಳವಾದದ್ದು! ಈ ಕೊಲೆಗಾರರನ್ನು ಸುವಾರ್ತೆ ಎಂಬ ಬಲೆಯಲ್ಲಿ ಶಿಕ್ಕಿಸಿ, ದಿವ್ಯ ಕೃಪಾನಿಧಿಗಳಾಗಿ ಮಾಡಬೇಕೆಂದು, ಪೇತ್ರನಿಗೂ ಪೇತ್ರನ ಸೇವೆಯನ್ನು ತೆಕ್ಕೊಂಡ ಕರ್ತನಾದ ಯೇಸುವಿಗೂ ಎಷ್ಟೋ ಆಸಕ್ತಿ ಇತ್ತು! ಅಂಥವರಲ್ಲಿ ಒಬ್ಬನಾದರೂ ಕರುಣೆಯ ಕೈಗೆ ತಪ್ಪಿಸಿ ಕೊಳ್ಳಲಿಕ್ಕೆ ಪೇತ್ರನು ಎಷ್ಟೋ ಅಸಮ್ಮತನಾಗಿದ್ದನು! ಇದು ಹೊರ್ತು ಯೆರೂಸಲೇಮಿನಲ್ಲಿ ಎಂಬುವ ಮಾತಿನ ಪ್ರಕಾರ ಈ ಜನರೇ ಸರ್ವಲೋಕದಲ್ಲಿಯೂ ಸರ್ವ ಜನಾಂಗಗಳಲ್ಲಿಯೂ ಮೊದಲಿನವರಾಗಿ, ಕರುಣೆಯ ವಾಕ್ಯವನ್ನು ಪಡದರು ಎಂಬುವದು ಎಷ್ಟೋ ಆಶ್ಚರ್ಯವಾದ ಅದ್ಭುತ ಕಾರ್ಯವಾಗಿದೆ.

ಆದಾಗ್ಯೂ ಇಷ್ಟು ಚೋದ್ಯವಾದ ಕೃಪೆಯು ಯೇಸು ಕ್ರಿಸ್ತನಿಗೆ ಸಾಲದೆಂದು ತೋರಿತು. ಈ ಯೆರೂಸಲೇಮಿನ ಪಾಪಿಷ್ಟರಿಗೆ ಕರುಣೆಯ ವಾಕ್ಯವನ್ನು ಒಮ್ಮೆ ಸಾರಿದರೆ ಸಾಲದೆಂದು, ಅದನ್ನು ತಿರುಗಿ ತಿರುಗಿ ಎಲ್ಲರಿಗೆ ಸಾರುವ ಹಾಗೆ ಅಪೊಸ್ತಲರನ್ನು ಪಂಚಾಶತ್‌ದಿವಸ ಮಾತ್ರವೇ ಅಲ್ಲ, ಬಹು ಹೆಚ್ಚು ಕಾಲ ಅಲ್ಲಿ ವಾಸ ಮಾಡಲೀಸಿದನು. ಅವರು ಸುವಾರ್ತೆಯ ಮೊದಲನೇ ಪ್ರಸಂಗವನ್ನು ತಿರಸ್ಕರಿಸಿದರು.

ಕ್ರಿಸ್ತನು ಅದು ನಿರ್ಣಯವೆಂದು ತಿಳುಕೊಳ್ಳದೆ, ಅವರು ಎರಡನೇ ಪ್ರಸಂಗ ತಿರಸ್ಕರಿಸಿದರೂ, ಅದು ನಿಷ್ಕರ್ಷೆ ಎಂದು ತಿಳದು ಕೊಳ್ಳದೆ, ಯೆರೂಸಲೇಮಿನವರಾದ ಪಾಪಿಗಳಿಗೆ ಕೃಪೆಯ ಸುವಾರ್ತೆಯನ್ನು ಒಮ್ಮೆ, ಇಮ್ಮೆ, ಮುಮ್ಮೆ, ತಂದು ತೋರಿಸ ಮನಸ್ಸಾಗಿದ್ದನು. ಇದು ಅತ್ಯಂತ ಆಶ್ಚರ್ಯವಾದ ಕೃಪೆಯಲ್ಲವೋ? ಕ್ರಿಸ್ತನು ತಡಿಸಿ ಕೊಳ್ಳಲೊಲ್ಲನು. ಇವರೇ ನಿಜ ಪಾಪಿಗಳಾದ ಪಾಪಿಗಳಾಗಿದ್ದರಲ್ಲ; ಇವರೇ ಘೋರ ತರದ ಪಾಪಿಗಳಾಗಿದ್ದಾರಲ್ಲ. ಹೀಗಿರಲಾಗಿ ಇಂಥವರು ಮಾನಸಾಂತರ ಪಟ್ಟು ರಕ್ಷಣೆ ಹೊಂದಿದರೆ, ಕ್ರಿಸ್ತನ ಇಷ್ಟಾರ್ಥ ತುಂಬುವದಕ್ಕೆ ಹೆಚ್ಚು ಪ್ರಯೋಜನಕರವಾಗಿದೆ.

ಇಂಥಾ ಕೃಪೆಯ ಶಿಖರವು, ತಾವು ಮನುಷ್ಯರ ಮಕ್ಕಳಂತೆ ನಡಕೊಳ್ಳುವದು ಇಲ್ಲವೆಂದು ತೋರಿಸಿ, ಲೋಕವನ್ನು ಭ್ರಮೆ ಪಡಿಸ ಬೇಕೆಂದು ಕ್ರಿಸ್ತನು ಮನಸ್ಸು ಮಾಡಿಕೊಂಡಿದ್ದಾನೆ. ಆದದರಿಂದ ದೊಡ್ಡ ದೊಡ್ಡ ಪಾಪಿಗಳಿಗೆ ಕರುಣೆಯ ವಾಕ್ಯವು ಮುಂಚೆ

ಶಿಕ್ಕ ಬೇಕಾಗಿತ್ತು. ಆದ್ದರಿಂದ ಅಪೊಸ್ತಲರು ಯೆರೂಲೇಮಿನವರಿಗೆ ಸುವಾರ್ತೆಯ ಕೆನೆಹಾಲ ಮುಂಚೆ ತಂದು ತೋರಿಸ ಬೇಕಾಗಿತ್ತು.

I. ಯೇಸು ಕ್ರಿಸ್ತನು ಕೈಕೊಳ್ಳುವ ಕಟ್ಟಳೆಯ ಕಾರಣಗಳು ಯಾವವು? ನಮ್ಮ ಪ್ರಸ್ತಾಪವು ಏನಂದರೆ: ಯೇಸು ಕ್ರಿಸ್ತನು—ಮಾನಸಾಂತರವನ್ನೂ ಪಾಪಪರಿಹಾರವನ್ನೂ ನನ್ನ ಹೆಸರಿನಲ್ಲಿ ಎಲ್ಲಾ ಜನಾಂಗಗಳಿಗೆ ಯೆರೂಸಲೇಮಿನಲ್ಲಿ ಆರಂಭ ಮಾಡಿ ಪ್ರಸಂಗಿಸಿರಿ! ಎಂದು, ದೊಡ್ಡ ದೊಡ್ಡ ಪಾಪಿಗಳಾದ ಯೆರೂಸಲೇಮಿನ ಪಾಪಿಗಳಿಗೆ ಮುಂಚಿತವಾಗಿಯೇ ಕರುಣೆಯ ವಾಕ್ಯವನ್ನು ತಿಳಿಸ ಬೇಕೆಂದು ಅಪೊಸ್ತಲರಿಗೆ ಅಪ್ಪಣೆ ಕೊಟ್ಟ ಕಾರಣಗಳು ಯಾವವೆಂದರೆ:

೧. ದೊಡ್ಡ ದೊಡ್ಡ ಪಾಪಿಗಳಿಗೆ ಕರುಣೆಯು ಹೆಚ್ಚು ಅವಶ್ಯವಾಗಿದೆ. ಹೆಚ್ಚು ಅಗತ್ಯವಿದ್ದವನಿಗೆ ಮುಂಚೆ ಸಹಾಯ ಮಾಡ ಬೇಕೆಂಬುವದು ಸಹಜ. ಸಹಾಯ ಮಾಡುವವನಿದ್ದರೆ, ಹೀಗೆ ಮಾಡ ಬೇಕು. ಸಹಾಯ ಮಾಡುವವನೂ ಉಂಟು. ದೇವರು ತನ್ನ ಕೃಪೆಯ ಸುವಾರ್ತೆಯನ್ನು ಲೋಕದ ಸಹಾಯಕ್ಕೆ ಕಳುಹಿಸಿ ಇದ್ದಾನೆ. (ಅಪೊ. ಕ್ರಿ. ೧೬, ೯.) ಪಾಪಿಗಳಲ್ಲಿ ಕಡು ಪಾಪಿಗೆ ಅತಿ ಅಗತ್ಯವಾಗಿದೆ; ಆದದರಿಂದ ಕರುಣೆಯು ಪರಲೋಕದಿಂದ ಮನುಷ್ಯರ ಸಹಾಯಕ್ಕೆ ಇಳಿದು ಬಂದರೆ, ಅದು ಮುಂಚೆ ಕಡು ಕೆಟ್ಟವರ ಕೈ ಹಿಡಿಯುವದು ಸಹಜ. ಯೆರೂಸಲೇಮಿನಲ್ಲಿ ಆರಂಭವಾಗಿ, ಎಂಬುವದು ಇದಕ್ಕೆ ಒಪ್ಪುತ್ತದೆ. ಈ ಕಾರಣದಿಂದಲೇ ತಾನು ಲೋಕದಲ್ಲಿ ಇದ್ದ ವೇಳೆಯಲ್ಲಿ ಉತ್ತಮರನ್ನು ಬಿಟ್ಟು, ಕಡು ಕೆಟ್ಟವರನ್ನು ಹುಡುಕಿ, ನೀತಿವಂತರ ಕಡೆಯಿಂದ ಸಡಲಿ ಕೊಂಡು, ದುಷ್ಟರನ್ನೆ ಅಂಟಿ ಕೊಂಡನೆಂದು ವಿವರಿಸಿದನು. ಸ್ವಸ್ಥವಾದವರಿಗೆ ಅಲ್ಲ, ರೋಗಿಗಳಿಗೆ ವೈದನು ಬೇಕು; ನೀತಿವಂತರನ್ನಲ್ಲ, ಪಾಪಿಗಳನ್ನು ಮಾನಸಾಂತರಕ್ಕೆ ಕರಿಯ ಬಂದೆನೆಂತ.

ಒಂದು ಕೆರೆಯ ತೀರದಲ್ಲಿ ನಡೆದಾಡುತ್ತಾ ನಾಲ್ಕೈದು ಮಕ್ಕಳು ಕೆರೆಯಲ್ಲಿ ಬಿದ್ದು ಮುಣುಗುವದನ್ನು, ಒಂದು ಮಗು ಹೆಚ್ಚಾದ ಪ್ರಾಣಸಂಕಟದಲ್ಲಿ ಇರುವದನ್ನು ನೀನು ನೋಡಿದರೆ, ಯಾರಿಗೆ ಮೊದಲು ಸಹಾಯ ಮಾಡ ಬೇಕೆಂದು ನೆನಸುವಿ? ಹೇಳು. ಬೇಗ ಸಾಯುವ ಹಾಗೆ ಕಾಣುವಂಥಾದ್ದಕ್ಕೆ ಎಂದು ಹೇಳುತ್ತಿಯಲ್ಲ. ಹಾಗೆಯೇ ಸರಿ, ಪಾಪದಲ್ಲಿ ಹೆಚ್ಚಿದವನಿಗೆ ಮುಣುಗಿ ಸಾಯುವ ಭಯ ಹೆಚ್ಚಾಗಿ ಇದೆ. ಹೆಚ್ಚಾದ ಪಾಪಿಗೆ ಹೆಚ್ಚು ಕರುಣೆ ಅವಶ್ಯವಾಗಿದೆ; ಅವನಿಗೆ ಮೊದಲಾಗಿ ಕರುಣೆಯ ಸಹಾಯ ಬೇಕಾಗಿದೆ. ಯೆರೂಸಲೇಮಿನಲ್ಲಿ ಆರಂಭವಾಗಿ, ಎಂಬ ನಮ್ಮ ಯಥೋಕ್ತವು ಇದಕ್ಕೆ ಸರಿ ಬೀಳುತ್ತದೆ. ಯೆರೂಸಲೇಮಿನವನಾದ ಪಾಪಿ ಕಡು ಕೆಟ್ಟವನಾಗಿದ್ದು, ಎಲ್ಲರಿಗಿಂತ ಹೆಚ್ಚಾಗಿ ಕೊರತೆ ಪಡುವದರಿಂದ ನನ್ನ ಕೃಪೆಯನ್ನೂ ಕರುಣೆಯನ್ನೂ ಅವನಿಗೆ ಮುಂಚೆ ಪ್ರಸಂಗ ಮಾಡಿ, ಅವನನ್ನು ಮುಂಚೆ ಕರೆದು, ಅವನಿಗೆ ಮುಂಚೆ ನನ್ನ ಕೃಪೆಯನ್ನ ತೋರಿಸ ಬೇಕೆಂಬುವದು ಕ್ರಿಸ್ತನ ಅಭಿಪ್ರಾಯ.

೨. ಕ್ರಿಸ್ತನು ದೊಡ್ಡ ದೊಡ್ಡ ಪಾಪಿಗಳಿಗೆ ಮುಂದಾಗಿಯೆ ಕರುಣೆಯನ್ನು ತಂದು ತೋರಿಸ ಬೇಕೆಂದು ಅಪ್ಪಣೆ ಕೊಡುವದು ಯಾಕಂದರೆ: ಅವರಲ್ಲಿ ಯಾರಾದರೂ ಅದನ್ನು ಅಂಗೀಕಾರ ಮಾಡಿದರೆ, ಆತನ ನಾಮದ ಕೀರ್ತಿ ಹೆಚ್ಚಾಗುವದು. ಕ್ರಿಸ್ತ ಯೇಸು ವೈದ್ಯನ ಹೆಸರು ಪಡಕೊಂಡವನಾಗಿ, ರೋಗಗಳನ್ನು ಸ್ವಸ್ಥ ಮಾಡುವ ಪಂಡಿತನು ಅನಿಸಿ

ಕೊಳ್ಳುತ್ತಾನೆಂದು ನೀನು ತಿಳಕೊಳ್ಳುತೀ. ಶ್ಲಾಘನೆ ಕೀರ್ತನೆಗಳ ಮೇಲೆ ವೈದ್ಯರಿಗೆ ಬಹಳ ಆಶೆ ಉಂಟಲ್ಲ. ಹೆಚ್ಚು ಹೆಚ್ಚು ಜನರು ಅವರ ಹತ್ತರ ಔಷಧ ಕೇಳುವ ಹಾಗೆ ಯೂ, ರೋಗಿಗಳು ಹೆಚ್ಚು ಹೆಚ್ಚು ಭರವಸದಿಂದಲೂ ಮನೋದೃಢದಿಂದಲೂ ಅವರು ಕೊಡುವ ಔಷಧಗಳನ್ನು ಶೇವಿಸುವ ಹಾಗೆಯೂ, ಅವರಿಗೆ ಯಶಸ್ಸು ಬೇಕಾಗಿ ಇದೆ. ಪಂ ಡಿತನು ಇಲ್ಲವೆ ವೈದ್ಯನು ಹೆಸರ್ವಾಸಿ ಆಗ ಬೇಕಾದರೆ, ಉತ್ತಮ ಮಾರ್ಗವೇನಂದರೆ, ಆರಂ ಭದಲ್ಲಿಯೇ ಬೇರೆ ವೈದ್ಯರು ಬದುಕಲಾರದೆ ಸಾಯುತ್ತಾರೆಂತ ಕೈಬಿಟ್ಟ ಕೆಲವು ಜನಗಳ ಕೈ ಹಿ ಡಿದು ಸ್ವಸ್ಥ ಮಾಡ ಬೇಕು. ಬೊಕ್ಕೆಗಳನ್ನು ಚಿಮುಟುವದರಿಂದಲಾಗಲಿ, ಮುಳ್ಳುಗಳನ್ನು ತೆಗಿಯುವದರಿಂದಲಾಗಲಿ, ಸೂಜಿ ಚುಚ್ಚಿದ ಘಾಯಗಳಿಗೆ ಲೇಪ ಹಾಕುವದರಿಂದ ಆಗಲಿ ವೈದ್ಯರು ಪ್ರಖ್ಯಾತರಾಗುವದು ಇಲ್ಲ; ಅಜ್ಜಿಗಳು ಇಂಥಾ ಕೆಲಸ ಮಾಡ್ಯಾರು. ಪ್ರಖ್ಯಾತರಾ ಗ ಬೇಕಾದರೆ, ನಿರಾಶೆಯಾಗಿ ಕ್ಷಯಿಸಿದ ಕೆಲವು ರೋಗಿಗಳನ್ನು ಲಘು ಮಾಡ ಬೇಕು.

ಕ್ರಿಸ್ತನು ವೈದ್ಯನೆನಿಸಿ ಕೊಳ್ಳುವದರಿಂದ, ಪಾಪಿಗಳನ್ನು ರಕ್ಷಿಸುವ ತನ್ನ ಕೀರ್ತಿ ಹಬ್ಬಿ ಪ್ರಬಲವಾಗ ಬೇಕೆಂದೂ, ತನ್ನ ಸಾಮರ್ಥ್ಯವು ಲೋಕದಲ್ಲಿ ಪ್ರಸಿದ್ಧವಾಗ ಬೇಕೆಂದೂ ಇ ಚ್ಛೈಸುತ್ತಾನೆ. ಈ ಕೆಲಸಕ್ಕೆ ದೊಡ್ಡ ದೊಡ್ಡ ಪಾಪಿಗಳಿಗೆ ಮೊದಲು ತನ್ನ ಕರುಣೆಯ ವಾ ಕ್ಯವನ್ನು ಹೇಳ ಬೆಕೆಂದು ತನ್ನ ಸೇವಕರಿಗೆ ಅಪ್ಪಣೆ ಕೊಟ್ಟದ್ದು ಅಲ್ಲದೆ, ವೈದ್ಯರ ಮ ರ್ಯಾದೆಯ ಪ್ರಕಾರ ತಾನು ಮಾಡಿದ ಕಾರ್ಯಗಳನ್ನು ಕಂಡವರೆಲ್ಲರು ಓದಿ ಸಂಭಾಷಿ ಸುವ ಹಾಗೆ ಪ್ರಸಿದ್ಧಪತ್ರಗಳಲ್ಲಿ ಮುದ್ರಿಸಿ, ಪ್ರಕಟ ಮಾಡಿದ್ದಾನೆ. ಇದಲ್ಲದೆ ಪರಿಶುದ್ಧ ಬರಹಗಳೆಂಬ ಈ ಮಂಗಳಪತ್ರಗಳಲ್ಲಿ ಈ ಪ್ರಯೋಜನಕ್ಕಾಗಿಯೇ ತಾನು ಸ್ವಸ್ಥ ಮಾಡಿ ದ ಜನರ ಹೆಸರುಗಳನ್ನೂ ಅವರ ಸ್ಥಳಗಳನ್ನೂ ತನ್ನ ರಕ್ಷಣೆ ಎಂಬ ಔಷಧದಿಂದ ಪರಿ ಹಾರವಾದ ದೊಡ್ಡ ರೋಗಗಳನ್ನೂ ಬರೆಸಿ ಶೇರಿಸಿ ಇದ್ದಾನೆ. ಹ್ಯಾಗೆಂದರೆ, ಇಂಥವನು ನನ್ನ ಕೃಪೆಯಿಂದಲೂ ರಕ್ಷಣ್ಯಾಕರವಾದ ನನ್ನ ರಕ್ತದಿಂದಲೂ ನಿತ್ಯ ಕರುಣೆಯ ಸಾಕ್ಷಿ ಕಲ್ಲಾದನು; ಇಂಥವನು ಸಂಪೂರ್ಣವಾದ ನನ್ನ ಪುಣ್ಯದಿಂದ ಮಹಿಮೆಯ ಬಾಧ್ಯಸ್ಥನಾ ದನು. ಒಬ್ಬೊಬ್ಬನ ಹೆಸರನ್ನೂ ಬರೆಸಿ ಇದ್ದಾನೆಂದರೆ: ನಾನು ಲೋಟನನ್ನು ರಕ್ಷಿಸಿದೆ, ನಾನು ದಾವೀದನನ್ನು ರಕ್ಷಿಸಿದೆ, ನಾನು ಸೊಲೊಮೋನನನ್ನೂ ರಕ್ಷಿಸಿದೆ, ಮನಸೇಯ ನನ್ನೂ ಪೇತ್ರನನ್ನೂ ಮಗ್ದಲ ಊರಿನವಳನ್ನೂ ರಕ್ಷಿಸಿದೆನು, ಮತ್ತು ಎಲ್ಲರೂ ಓದಿ ಆ ತನು ಎಂಥಾ ರಕ್ಷಕನೆಂದು ತಿಳದು, ಆತನನ್ನು ಲೋಕದಲ್ಲಿ ಸನ್ಮಾನಿಸುವ ಹಾಗೆ, ಆ ಜನರ ಹೆ ಸರನ್ನೂ ಪಾಪರಕ್ಷಣೆಗಳನ್ನೂ ಒಟ್ಟು ಬರೆಸಿದ್ದಾನೆ. ಈ ಸಂಗತಿಗಳನ್ನು ಹೀಗೆ ಪತ್ರದಲ್ಲಿ ಬರಸಿ ದ್ದು ಯಾಕಂದರೆ, ಪಾಪಿಗಳು ತನ್ನ ಸಾಮರ್ಥ್ಯವನ್ನು ತಿಳುಕೊಳ್ಳುವ ಹಾಗೆಯೂ ತನ್ನ ಕೃಪೆಗೆ ಸ್ತೋತ್ರವೂ ಕೀರ್ತಿಯೂ ಹುಟ್ಟುವ ಹಾಗೆಯೂ, ಎಲ್ಲಾ ಹೀಗೆ ಬರೆಸಿ ಇದ್ದಾನೆ.

ಕ್ರಿಸ್ತನು ಕ್ರೂಜೆಮರಕ್ಕೆ ಕಟ್ಟಿದವನಾಗಿ ಅಂತರಾಟದಲ್ಲಿ ತೂಗುವಾಗ, ಕಳ್ಳರಿಬ್ಬರು ಆತನ ಎಡಬಲಗಳಲ್ಲಿ ಕ್ರೂಜಿತರಾಗಿದ್ದರು. ಇವರಲ್ಲಿ ಒಬ್ಬನನ್ನು ಹಿಡಿದು, ಮಹಿಮೆಗೆ ಕೊಂ ಡು ಹೋದನಲ್ಲ? ಇದು ಚೋದ್ಯವಾದ ಕೆಲಸವಲ್ಲ? ಅಪಾರವಾದ ಕೃಪೆಯ ಪ್ರಕಟಣೆಯ ಲ್ಲ? ಕಳ್ಳರ ಹೊರ್ತು ಅಲ್ಲಿ ಯಾರೂ ಇರಲಿಲ್ಲವೋ? ಅಲ್ಲಿ ನಿಂತವರಲ್ಲಿ ಬೇರೆ ಯಾರ ಮೇ ಲೂ ಕೈ ಹಾಕಲಾರದಿದ್ದನೋ? ಆ ಕಳ್ಳನಿಗಿಂತ ಕೊಂಡು ಹೋಗ ತಕ್ಕಂಥಾ ಉತ್ತಮನೊ ಬ್ಬನೂ ದೊರಕಲಿಲ್ಲವೋ? ಇದಕ್ಕೇನು ಸಂಶಯವಿಲ್ಲ. ಆದರೆ ಉತ್ತಮನನ್ನು ರಕ್ಷಿಸಿದರೆ,

ತನ್ನ ಕೃಪೆಯು ಅತಿಶಯವಾಗಿ ಪ್ರಕಟವಾಗದೆ, ಹೆಸರನ್ನೂ ಕೀರ್ತಿಯನ್ನೂ ಪಡಕೊಳ್ಳಬೇಕೆಂಬ ತನ್ನ ಆಲೋಚನೆ ಕೈಕೂಡಿ ಬರುವದು ಇಲ್ಲವೆಂದು ತಿಳಕೊಂಡು, ಹಾಗೆ ಮಾಡಿದನು. ಈ ಕಥೆಯನ್ನು ಓದುವವರೆಲ್ಲರು ದೇವರ ಮಗನು ಕೃಪಾಪೂರ್ಣನೆಂದು ಅರಿಕೆ ಮಾಡ ಬೇಕಲ್ಲ? ಅದು ಆತನು ಕಳ್ಳನನ್ನು ಕ್ರೂಜೆಯಿಂದ ಮಹಿಮೆಗೆ ಕೊಂಡು ಹೋಗಿ, ಲೋಕಕ್ಕೆ ಬಿಟ್ಟ ಕೃಪೆಯ ಐಶ್ವರ್ಯಕ್ಕೆ ಒಳ್ಳೇ ಪ್ರಮಾಣವಲ್ಲವೋ? ಆತನು ಮಾಡಿದ ಕ್ರಿಯೆ ಹೂಣಿ ಹೋಗಲಾರದೆ, ಲೋಕದ ಅಂತ್ಯದ ವರಿಗೂ ಆತನ ಸ್ತೋತ್ರಕ್ಕಾಗಿ ಹೇಳಲಾದೀತು.

೩. ಕ್ರಿಸ್ತ ಯೇಸು ದೊಡ್ಡ ದೊಡ್ಡ ಪಾಪಿಗಳಿಗೆ ಮುಂದಾಗಿಯೇ ಕರುಣೆಯನ್ನು ತಂದು ತೋರಿಸ ಬೇಕೆಂದು ಅಪ್ಪಣೆ ಕೊಡುವದು ಯಾಕಂದರೆ, ಇಂಥವರಿಗೆ ಕ್ಷಮೆಯೂ ರಕ್ಷಣೆಯೂ ಸಿಕ್ಕಿತೆಂಬ ಸುದ್ದಿಯಿಂದ ಆತನನ್ನು ಆಶ್ರಯಿಸಿ ಕೊಂಡು ಜೀವವನ್ನು ಪಡಕೊಳ್ಳುವ ಧೈರ್ಯವು ಮತ್ತೊಬ್ಬರಲ್ಲಿ ಹುಟ್ಟ ಬೇಕೆಂದು ಅಪೇಕ್ಷಿಸುತ್ತಾನೆ. ಪೌಲನು ಎಫೆಸದವರಿಗೆ ಬರದದ್ದೇನಂದರೆ: "ಕರುಣೆಯಲ್ಲಿ ಐಶ್ವರ್ಯವುಳ್ಳ ದೇವರು ತಾನು ನಮಗೆ ಮಾಡಿದ ಬಹಳವಾದ ಪ್ರೀತಿಗೋಸ್ಕರ ಅಕ್ರಮಗಳಲ್ಲಿ ಸತ್ತವರಾಗಿದ್ದ ನಮ್ಮನ್ನು ಕ್ರಿಸ್ತನ ಸಂಗಡ ಬದುಕಿಸಿ ಇದ್ದಾನೆ.—ಕೃಪೆಯಿಂದಲೇ ರಕ್ಷಿಸಲ್ಪಟ್ಟಿರಿ.—ಮತ್ತು ಕ್ರಿಸ್ತ ಯೇಸುವಿನಲ್ಲಿ ನಮ್ಮ ಮೇಲೆ ಮಾಡುವ ದಯದಿಂದ, ತನ್ನ ಕೃಪೆಯ ಅಧಿಕವಾದ ಐಶ್ವರ್ಯವನ್ನು ಮುಂದೆ ಬರುವ ಯುಗಗಳಲ್ಲಿ ತೋರಿಸುವ ಹಾಗೆ, ಕ್ರಿಸ್ತ ಯೇಸುವಿನಲ್ಲಿ ನಮ್ಮನ್ನು ಕೂಡಾ ಎಬ್ಬಿಸಿ, ಪರಲೋಕದವುಗಳಲ್ಲಿ ಕೂಡಾ ಕುಂಡ್ರಿಸಿದ್ದಾನೆ." ಇದರಲ್ಲಿ ಕಾಣುವದೇನಂದರೆ, ಯೇಸು ಕ್ರಿಸ್ತನಲ್ಲಿ ಇರುವ ಕೃಪೆಯ ಅತಿಶಯವಾದ ಐಶ್ವರ್ಯವು ಯುಗಯುಗಾಂತರಗಳಲ್ಲಿ ಪ್ರಸಿದ್ಧಿಯಾಗುವ ಹಾಗೆ, ದೇವರು ಬೇಕೆಂದು ಎಫೆಸದ ಮೇಲೆ ತನ್ನ ಕರುಣೆಯನ್ನು ಗರೆಯುತ್ತಾನೆ. ದೇವರು ದೊಡ್ಡ ಪಾಪಿಯಾದ ಒಬ್ಬನನ್ನು ತನ್ನ ಹತ್ತರ ಬಂದು ಕರುಣೆಯನ್ನು ಹೊಂದುವ ಹಾಗೆ ಧೈರ್ಯ ಪಡಿಸುವದಕ್ಕೆ ಹಾಗೆ ಮಾಡುತ್ತಾನೆ. ಕಳ್ಳರು ತನ್ನ ಹತ್ತರ ಕರುಣೆಯನ್ನು ಹುಡುಕುವ ಹಾಗೆ ಕಳ್ಳನನ್ನು ರಕ್ಷಿಸಿದನು; ಗತಿ ಇಲ್ಲದ ಹೆಂಗಸು ತನ್ನ ಹತ್ತರ ಕರುಣೆಯನ್ನು ಹುಡುಕುವ ಹಾಗೆ, ಮಗ್ದಲದವಳನ್ನು ರಕ್ಷಿಸಿದನು; ಪೌಲನಂಥವರು ತನ್ನ ಹತ್ತರ ಕರುಣೆಯನ್ನು ಹುಡುಕುವ ಹಾಗೆ, ಪೌಲನನ್ನು ರಕ್ಷಿಸಿದನು. ಸೌಲನೆಂಬ ಪೌಲನು ತಾನು ಇದನ್ನು ಸ್ಪಷ್ಟವಾಗಿ ಬರದಿದ್ದಾನೆ; ಏನಂದರೆ, ಯೇಸು ಕ್ರಿಸ್ತನು ಮೊದಲಿನವನಾದ ನನ್ನಲ್ಲಿ ಸಮಸ್ತ ದೀರ್ಘಶಾಂತಿಯನ್ನೂ, ಅವನ ಮೇಲೆ ನಿತ್ಯಜೀವಕ್ಕಾಗಿ ವಿಶ್ವಾಸವಿಡಲಿರುವವರಿಗೆ ಮಾದರಿಯಾಗಿ ತೋರಿಸುವ ಹಾಗೆಯೇ ನಾನು ಕರುಣೆಯನ್ನು ಹೊಂದಿದೆನು. ಈ ಮಾತುಗಳ ಅರ್ಥವೇನಂದರೆ, ಕ್ರಿಸ್ತನು ನನ್ನನ್ನು ರಕ್ಷಿಸುವದರಿಂದ, ಎಲ್ಲರು ನೋಡಿ ನಂಬಿ ಬಂದು ರಕ್ಷಣೆಯನ್ನು ಹೊಂದುವ ಹಾಗೆಯೂ, ಮುಂದಿನ ಕಾಲದಲ್ಲಿ ಹುಟ್ಟುವವರು ಯೇಸು ಕ್ರಿಸ್ತನಲ್ಲಿ ವಿಶ್ವಾಸವಿಟ್ಟು ನಿತ್ಯ ಜೀವವನ್ನು ಪಡಕೊಳ್ಳುವ ಹಾಗೆಯೂ, ಲೋಕಕ್ಕೆ ತನ್ನ ಕೃಪೆಯ ಒಂದು ಮಾದರಿ ತೋರಿಸಿ ಇದ್ದಾನೆ. ಆದರೆ ಪೌಲನು ಯಾರು? ತಾನು ಹೇಳುತ್ತಾನಲ್ಲಾ: ನಾನು ಪಾಪಿಗಳಲ್ಲಿ ಮೊದಲನೆಯವನೇ, ನಾನು ಮೊದಲು ದೂಷಕನೂ ಹಿಂಸಕನೂ ಬಲಾತ್ಕಾರಿಯೂ ಆಗಿದ್ದೆನು; ಆದರೆ ಕರುಣೆಯನ್ನು ಹೊಂದಿದೆನು ಎಂದು ಹೇಳುತ್ತಾನೆ. ಆಹಾ, ಇದು ನಿನಗೆ ಒಳ್ಳೇದು ಪೌಲನೇ, ಆದರೆ ನಮಗೆ ಏನು ಪ್ರಯೋಜನ? ಬಹಳ ಬಹಳವೇ ಸರಿ, ಯಾಕಂದರೆ ಯೇ

ಸು ಕ್ರಿಸ್ತನು ಮೊದಲಿನವನಾದ ನನ್ನಲ್ಲಿ ಸಮಸ್ತ ದೀರ್ಘಶಾಂತಿಯನ್ನು, ಅವನ ಮೇಲೆ ವಿಶ್ವಾಸವಿಡಲಿರುವವರಿಗೆ ಮಾದರಿಯಾಗಿ ತೋರಿಸುವ ಹಾಗೆಯೇ, ನಾನು ಕರುಣೆಯನ್ನು ಹೊಂದಿದೆನೆಂದು ಹೇಳುತ್ತಾನೆ.

ಒಂದು ದಂಡು ಬಂದು ಕೋಟೆಗೆ ಮುತ್ತಿಗೆ ಹಾಕಿದ ವೇಳೆಯಲ್ಲಿ ಕೋಟೆಯಲ್ಲಿ ಇರುವವರು ಶತ್ರುಗಳು ತಮ್ಮನ್ನು ನಿಷ್ಕರುಣದಿಂದ ಕಡಿದು ಹಾಕುವರೆಂದು ಭಯ ಪಡುವನಕ ರಾಕ್ಷಸರ ಹಾಗೆ ಕಾದಿದರು. ಆದರೆ ಕೈಶೆರೆ ಬಿದ್ದ ಒಬ್ಬನಿಗೆ ಶತ್ರುಗಳು ದಯ ತೋರಿಸುವದನ್ನು ಕಂಡಂದಿನಿಂದ ಅವರೆಲ್ಲರು ಕೊತ್ತಳದಿಂದ ಇಳಿ ಬಿದ್ದು, ತಮ್ಮ ಜೀವವನ್ನು ಶತ್ರುಗಳ ವಶಕ್ಕೆ ಕೊಟ್ಟರು. ಆದದರಿಂದ ಯೇಸು ಕ್ರಿಸ್ತನು ತನ್ನ ಕೃಪೆಯ ಅತಿಶಯವಾದ ಐಶ್ವರ್ಯವು ಎಲ್ಲರಿಗೆ ಪ್ರಸಿದ್ಧಿಯಾಗುವ ಹಾಗೆ ದೊಡ್ಡ ದೊಡ್ಡ ಪಾಪಿಗಳಾದ ಯೆರೂಸಲೇಮಿನವರಿಗೆ ಮೊದಲು ಸುವಾರ್ತೆಯನ್ನು ಸಾರ ಬೇಕೆಂದು ಅಪ್ಪಣೆ ಕೊಟ್ಟನು.

೪. ಯೇಸು ಕ್ರಿಸ್ತನು ದೊಡ್ಡ ದೊಡ್ಡ ಪಾಪಿಗಳಿಗೆ ಮುಂದಾಗಿಯೇ ಕರುಣೆಯನ್ನು ತಂದು ತೋರಿಸಲಾಜ್ಞಾಪಿಸುವದ್ಯಾತಕ್ಕಂದರೆ, ಅಂಥವರು ಸುವಾರ್ತೆಯನ್ನು ನಂಬಿದರೆ ಸೈತಾನನ ರಾಜ್ಯವು ಕುಂದಿ ಹೋಗಿ, ಅವನ ಬಲವು ಲೋಕದಲ್ಲಿ ಕಡಿಮೆ ಕಡಿಮೆಯಾಗುವದು. ದೊಡ್ಡ ದೊಡ್ಡ ಪಾಪಿಗಳು ಸೈತಾನನ ಸೈನ್ಯಕ್ಕೆ ಅಧಿಪತಿಗಳೂ ಸರದಾರರೂ ಅವನ ಜನರಿಗೆ ನಾಯಕರೂ ಆಗಿದ್ದು, ದೇವರ ಮಗನಿಗೆ ವಿರೋಧವಾಗಿ ಹೆಚ್ಚು ದೃಢವಾಗಿ ನಿಂತು ಕಾದುತ್ತಾರಾದದರಿಂದ ಇಂಥವರು ಸುವಾರ್ತೆಗೆ ವಶವಾದರೆ, ಸೈತಾನನ ರಾಜ್ಯದ ಬಲವು ಕುಂದುವದು. ಅಬ್ನೇರನು ಇಷ್ ಬೋಶೇತನನ್ನು ಬಿಟ್ಟು ಬಿಟ್ಟ ಮೇಲೆ, ಅವನ ರಾಜ್ಯವು ಕುಂದಿ ಹೋಗಿ, ಅವನು ಸಿಂಹಾಸನದ ಮೇಲೆ ಅಳುಕುತ್ತಾ ಕೂತನು. ಅದೇ ಪ್ರಕಾರ ಅಕ್ರಮಗಳನ್ನು ನಡಿಸುವ ಬಲವುಳ್ಳವರಾಗಿದ್ದು ಮತ್ತೊಬ್ಬರನ್ನು ದುರ್ಮಾರ್ಗದಲ್ಲಿ ನಡಿಸುವದಕ್ಕೆ ಚಾತುರ್ಯವುಳ್ಳ ಶೂರರು ಸೈತಾನನನ್ನು ಬಿಟ್ಟು ಬಿಟ್ಟರೆ, ಅವನ ರಾಜ್ಯವು ಕುಂದುವದು.

ಅರಸನಾದ ಮನಸ್ಸೇ ಮಹಾ ವಿಗ್ರಹಾರಾಧಕನಾಗಿಯೂ ಸೈತಾನಾಚಾರನಾಯಕನಾಗಿಯೂ ಪಾಪಿಗಳಿಗೆ ಅಗ್ರಗಣ್ಯನಾಗಿಯೂ ಇದ್ದಾಗ, ಅವನ ರಾಜ್ಯವೆಲ್ಲಾ ಅಕ್ರಮಗಳಲ್ಲಿ ಮುಣುಗಿ ಹೋಯಿತು. ಯಾಕಂದರೆ ಅವನು ತನ್ನ ಪ್ರಜೆಗೆ ಸುತ್ತಲು ವಾಸ ಮಾಡಿದ ಪರ ಜನರಿಗಿಂತಲೂ, ಅವರು ದೇಶದಿಂದ ಹೊರಡಿಸಿದವರಿಗಿಂತಲೂ ಕೆಟ್ಟು ಹೋಗಿ, ಪಾಪಧರ್ಮದಲ್ಲಿ ನಡದು ಕೊಳ್ಳುವದಕ್ಕೆ ಕಾರಣವಾದನು. ದೇವರು ಅವನನ್ನು ಮಾನಸಾಂತರ ಪಡಿಸಿದ ಮೇಲೆ ದೇಶಕ್ಕೆಲ್ಲಾ ಗುಣವಾಯಿತು. ಬಾಳನ ತೋಪುಗಳೂ ವಿಗ್ರಹಗಳೂ ಬಲಿಪೀಠಗಳೂ ಸೋತು, ಸದ್ಭಕ್ತಿಯ ಬಲವೂ ಶುದ್ಧತ್ವವೂ ಗೆದ್ದವು. ಅರಸನು ಅಧಿಕಾರಬಲದಿಂದ ಪ್ರಜೆಗಳ ನಡತೆಯನ್ನು ತಿದ್ದಿದನಷ್ಟೆ ಎಂದು ಹೇಳಿದರೆ, ನಾನು ಒಪ್ಪಿಕೊಳ್ಳುತ್ತೇನೆ. ಆದರೆ ತಾನು ಸನ್ಮಾರ್ಗದಲ್ಲಿ ಶೇರಿ, ಪ್ರಜೆಗಳಿಗೆ ಬೋಧಕನಾದನಲ್ಲ. ಯಾಕಂದರೆ ಜನರು ಯಜಮಾನನ ಬೆನ್ನಟ್ಟುತ್ತಾರೆ. ಅವರ ತಂದೆಗಳು ಮಾಡಿದ ಪ್ರಕಾರವೇ ಅವರು ಸಹ ಮಾಡಿದರು. (ದಿನಚರ್ಯ. ೩೩, ೨.)

ಯೇಸು ಕ್ರಿಸ್ತನು ದೊಡ್ಡ ದೊಡ್ಡ ಪಾಪಿಗಳಿಗೆ ಮುಂದಾಗಿಯೇ ಕರುಣೆಯನ್ನು ತಂದು ತೋರಿಸಲೆಂದು ಆಜ್ಞಾಪಿಸುವದ್ಯಾತಕಂದರೆ, ಇಂಥವರು ಮಾನಸಾಂತರ ಪಟ್ಟರೆ,

ಶೋಧನೆ ಪಡುವ ಸಭೆಯವರಿಗೆ ಉತ್ತಮ ಸಹಾಯಕರಾಗಿದ್ದು, ಎದೆಗುಂದಿದವರನ್ನು ಆದರಿಸುವದಕ್ಕೆ ಅತಿ ಯೋಗ್ಯರಾಗಿದ್ದಾರೆ. ಆದ್ದರಿಂದ ಸಭೆಗಳು ಸ್ಥಾಪಿತವಾಗುವ ಆರಂಭದಲ್ಲಿಯೂ ಆರಂಭದ ಮೇಲೆಯೂ ಇಂಥವರಾದ ಕೆಲವರು ಶೇರುವದು ವಾಡಿಕೆಯಾಗಿದೆ. ಕರುಣೆಯ ಸಾಕ್ಷಿಸ್ತಂಭಗಳಾಗಿಯೂ ಕನ್ನಡಿಗಳೂ ಆದ ಇಂಥಾ ಜನರನ್ನು ಯೇಸು ಕ್ರಿಸ್ತನು ಸಭೆಗಳಲ್ಲಿ ಶೇರಿಸದಿದ್ದರೆ, ಅವು ವೃದ್ಧಿಯಾಗುತ್ತಿದ್ದಿಲ್ಲ. ಇಂಥಾ ಪಾಪಿಗಳಲ್ಲಿ ಒಬ್ಬನು ಸಭೆಯಲ್ಲಿ ಕಾಣಿಸಿದರೆ, ಕಾಣಿಸಿದ ಕ್ಷಣದಲ್ಲಿ ಅವನ ಸುದ್ದಿ ಬಂದರೆ, ಬಲಹೀನರ ವಿಶ್ವಾಸಕ್ಕೆ ಬಹಳ ಸಹಾಯ ಆಗುತ್ತದೆ. ಇದಕ್ಕೆ ಪೌಲನು ಬರೆಯುವದೇನಂದರೆ, ಕ್ರಿಸ್ತನಲ್ಲಿ ಇರುವ ಯೆಹೂದ ಸಭೆಯವರಿಗೆ ನನ್ನ ಮುಖದ ಗುರ್ತು ತಿಳಿಯದೆ ಇದ್ದರೂ, ಮುಂಚೆ ನನ್ನನ್ನು ಹಿಂಸಿಸಿದವನು ತಾನು ಮುಂಚೆ ಹಾಳು ಮಾಡಿದ ವಿಶ್ವಾಸವನ್ನು ಈಗ ಪ್ರಸಂಗಿಸುತ್ತಾನೆಂಬುವದನ್ನು ಮಾತ್ರ ಕೇಳಿ ದೇವರನ್ನು ನನಗಾಗಿ ಮಹಿಮೆ ಪಡಿಸಿದರು.

ದೇವರನ್ನು ಮಹಿಮೆ ಪಡಿಸಿದರೆಂಬುವದೇನು? ಅವರು ದೇವರನ್ನು ಸ್ತುತಿಸಿ, ಆತನು ಅಂಥಾ ಮಹಾ ಪಾಪಿಯನ್ನು ಕರುಣಿಸಿದನೆಂದು ತಿಳಿದು, ಆತನ ಕರುಣೆಯನ್ನು ಹೆಚ್ಚಾಗಿ ನಂಬುವದಕ್ಕೆ ಹೆಚ್ಚಾಗಿ ಧೈರ್ಯಗೊಂಡರೂ, ನನ್ನಂಥಾ ಭ್ರಷ್ಟನಾದ ಮನುಷ್ಯನನ್ನು ರಕ್ಷಿಸುವಷ್ಟು ಕೃಪೆಯ ಐಶ್ವರ್ಯವು ದೇವರಲ್ಲಿ ಉಂಟೆಂದು ತಿಳಿದು, ಆಶ್ಚರ್ಯ ಪಟ್ಟು, ನನ್ನ ನಿಮಿತ್ತವಾಗಿ ಕ್ರಿಸ್ತನಲ್ಲಿ ಹೆಚ್ಚಾಗಿ ವಿಶ್ವಾಸವಿಟ್ಟರು.

ಮಹಾ ಪಾಪಿಗಳು ತಮಗೆ ಗೊತ್ತಾದ ಎರಡು ಸಂಗತಿಗಳನ್ನು ಭಕ್ತರಿಗೆ ತಿಳಿಸುವದರಿಂದ ಅವರ ವಿಶ್ವಾಸಕ್ಕೆ ಬಹಳ ಆಧಾರವಾಗುತ್ತದೆ. ಅವು ಯಾವವಂದರೆ, ೧.) ಅವರು ಸೈತಾನನ ಅಪ್ಪಣೆಯನ್ನು ತೆಕ್ಕೊಳ್ಳುವ ವೇಳೆಯಲ್ಲಿ ವಾಡಿಕೆಯಾಗಿ ಹುಟ್ಟುವ ಹೋರಾಟ.

೨.) ಸೈತಾನನ ಉಪಾಯ ತಂತ್ರಗಳ ಮರ್ಮವು ಅವರಿಗೆ ಚನ್ನಾಗಿ ಗೊತ್ತಾಗಿವೆ.

೫. ದೊಡ್ಡ ಪಾಪಿಗಳು ಸೈತಾನನ ಸೇವೆ ಬಿಡುವ ಸಮಯದಲ್ಲಿ ದೊಡ್ಡ ಹೋರಾಟ ಹುಟ್ಟುವದು ವಾಡಿಕೆ. ಇದರಿಂದ ಭಕ್ತರಿಗೆ ಸಹಾಯವಾಗುತ್ತದೆ; ಯಾಕಂದರೆ ಹೆಚ್ಚಾಗಿ ಕೆಟ್ಟು ಹೋದವರಾದ ಭಕ್ತರು ಆರಂಭದಲ್ಲಿ ಕಂಡುಕೊಳ್ಳುವಂಥಾದ್ದನ್ನು ಸಾಧಾರಣವಾದ ಭಕ್ತರು ಮತ್ತೆ ಕಂಡುಕೊಳ್ಳುತ್ತಾರೆ. ಆದರೆ ಭಕ್ತರು ಹೃದ್ಭಾವನೆಗಳನ್ನು ಒಬ್ಬರಿಗೆ ಒಬ್ಬರು ಹೇಳುವ ವೇಳೆಯಲ್ಲಿ ಒಬ್ಬನು ಒಬ್ಬನಿಗೆ ಸಮನಾಗಿದ್ದೇನೆಂದು ತಿಳು ಕೊಳ್ಳೋಣದರಿಂದ ಒಬ್ಬರು ಮತ್ತೊಬ್ಬರನ್ನು ಧೈರ್ಯ ಪಡಿಸುತ್ತಾರೆ. ಮಧ್ಯಮ ಪಾಪಿಗಳು ಇದನ್ನು ಆರಂಭದಲ್ಲಿ ಚನ್ನಾಗಿ ತಿಳಿಯದೆ ಸನ್ಮಾರ್ಗದಲ್ಲಿ ಕೆಲವು ಕಾಲ ನಡ ಕೊಂಡ ಮೇಲೆ ಕಲಿತು ಕೊಳ್ಳುತ್ತಾರೆ. ಕನಿಷ್ಟ ಪಾಪಿಯು ಇದನ್ನು ಆರಂಭದಲ್ಲಿಯೇ ಪಾಠ ಮಾಡುತ್ತಾನೆ. ಆದದರಿಂದ ಮಧ್ಯಮ ಪಾಪಿಗಳು ತಾವು ಪೂರ್ಣ ಪಾಪಿಗಳೆಂದು ತಿಳು ಕೊಂಡು ಮನಸ್ಸು ಕುಂದುವ ವೇಳೆಯಲ್ಲಿ ಮಹಾ ಪಾಪಿಗಳು ತಾವು ಇದನ್ನು ಆದಿಯಲ್ಲಿಯೇ ತಿಳು ಕೊಂಡೆವೆಂದು ಹೇಳಿ, ಅವರನ್ನು ಸಮದಾಯಿಸುವರು.

ದೊಡ್ಡ ಪಾಪಿಯಾದ ಒಬ್ಬನಿಗೆ ಅಪ್ಪಣೆ ಕೊಡುವದಕ್ಕೆ ಸೈತಾನನಿಗೆ ಎಷ್ಟು ಮಾತ್ರವೂ ಮನಸ್ಸಿಲ್ಲ.—ಏನು! ನಂಬಿಗಸ್ತನಾದ ನನ್ನ ಆಳೂ ಹಳಬನಾದ ನನ್ನ ಆಳೂ ಆದ ನೀನು ನನ್ನನ್ನು ಈಗ ಬಿಟ್ಟು ಬಿಡುವದೋ? ಅಕ್ರಮಗಳನ್ನು ನಡಿಸುವದಕ್ಕೆ ಬಹುಶಾ ನಿನ್ನನ್ನು ನನಗೆ ಮಾರಿ ಕೊಂಡವನಾದ ನೀನು ಈಗ ನನ್ನನ್ನು ಬಿಡ ಬೇಕೋ? ಅಸಹ್ಯನಾದ

ಘಟಿಂಗನೇ, ಪಾಪವನ್ನು ಮಾಡಿದ ಕೃಪೆಯ ಮೇರೆ ದಾಟಿದ ಮೇಲೆ, ಈಗ ಕರುಣೆಯನ್ನು ಹೊಂದ ಬಹುದೆಂದು ನೆನಸುತ್ತೀಯಾ? ನೀನು ಕೊಲೆಗಾರನಲ್ಲವೋ? ನೀನು ಕಳ್ಳನಲ್ಲವೋ? ನೀನು ಜಾರೆಯಲ್ಲವೋ? ನೀನು ಮಾಟಗಾರ್ತಿಯಲ್ಲವೋ? ನೀನು ಪಾಪದ ಭೂತನಲ್ಲವೋ? ಇಂಥವನಾಗಿದ್ದು, ಈಗ ಕರುಣೆಯನ್ನು ಹುಡುಕುತ್ತೀಯಾ? ಕ್ರಿಸ್ತನು ನಿನ್ನನ್ನು ಕೈಹಿಡಿದು ಬೆರಳನ್ನು ಮಾಸುವನೆಂದು ನೆನಸುತ್ತೀಯಾ? ಎಂದು ಸೈತಾನನು ಹೇಳುವನು.

ನಿನ್ನಂಥಾ ಹೊಲೆಯನು ಕರುಣೆಯನ್ನು ಬೇಡುತ್ತಾ, ಪರಲೋಕದ ದ್ವಾರಕ್ಕೆ ತಟ್ಟುವದನ್ನು ನೋಡಿದರೆ, ದೇವದೂತರ ಮುಖ ಖಿನ್ನವಾಗುವದಲ್ಲ? ನೀನು ನಾಚಿಕೆಗೆಡದೆ ತಟ್ಟಲಿಕ್ಕೆ ಧೈರ್ಯವಾಗಿದ್ಧೀಯಾ? ಎಂದು ಸೈತಾನನು ಪಶ್ಚಾತ್ತಾಪ ಪಡುವ ಭಕ್ತನಿಗೆ ಹೇಳುತ್ತಾನೆಂದು ಶೋಧನೆ ಪಡುವ ಭಕ್ತನು ಸುಯ್ಯುತ್ತಾ ಹೇಳುವನು.

ಇದಕ್ಕೆ ಮಹಾ ಪಾಪಿ: ನಾನು ಮೊದಲು ಯೇಸು ಕ್ರಿಸ್ತನ ಕಡೆಗೆ ತಿರುಗಿದಾಗ ಸೈತಾನನು ಹಾಗೆಯೇ ನನಗೆ ಮೋಸ ಮಾಡಿದನೆಂದು ಹೇಳುವನು.

ಶೋಧನೆ ಪಡುವ ಭಕ್ತನು: ಆಗ ನೀನೇನು ಹೇಳಿದಿ? ಎಂದು ಕೇಳಲು,

ಮತ್ತೊಬ್ಬನು: ಏನು! ಸೈತಾನನು ನನ್ನ ಮೇಲೆ ಹೇಳಿದ ದೂರು ಎಲ್ಲಾ ಬದ್ಧವೆಂದು ಅರಿಕೆ ಮಾಡಿದೆನು, ಅನ್ನುವನು.

ಇಲ್ಲ, ಇಲ್ಲ. ನಾನು ಹೇಳಿದೆನು: ಮಗ್ದಲದವಳು, ಜಕ್ಕಾಯನು, ಆ ಕಳ್ಳನು, ಆ ಜಾರೆಯು, ಆ ಸುಂಕದವನು, ಆ ಕಿರೆ ಮಗನು, ಕ್ರಿಸ್ತನ ಕೊಲೆಗಾರರು ಮೊದಲಾದವರಿಗೆ ಸಮಾನನಾಗಿದ್ದೆನಲ್ಲದೆ, ಅವರೆಲ್ಲರಿಗಿಂತ ದುಷ್ಟನಾಗಿದ್ಧೇನೆಂದು, ಅರಿಕೆ ಮಾಡಿದೆನು; ಆದಾಗ್ಯೂ ದೇವರು ನನ್ನನ್ನು ಎಷ್ಟು ಮಾತ್ರವೂ ತಳ್ಳಲಿಲ್ಲ. ನಾನು ಮಾನಸಾಂತರ ಪಟ್ಟು, ಆತನ ಬಳಿಗೆ ತಿರುಗಿ ಕೊಂಡಾಗ, ಆತನ ದೂತರು ನನಗಾಗಿ ಮಹಾ ಸಂತೋಷ ಪಟ್ಟರೆಂದು, ಮತ್ತೆ ತಿಳು ಕೊಂಡೆನೆಂದು ಕರುಣೆಯನ್ನು ಹೊಂದಿದ ಮಹಾ ಪಾಪಿ ಹೇಳುವನು.

ಇದನ್ನು ಕೇಳಿ ಶೋಧನೆ ಪಡುವ ಭಕ್ತನು ಧೈರ್ಯಗೊಂಡು, ದೇವರ ಕೃಪೆಗೆ ಸ್ತೋತ್ರವಾಗಲಿ! ಹಾಗಾದರೆ ನನಗೂ ಕರುಣೆಯನ್ನು ಹೊಂದುವ ಆಶೆ ಉಂಟು ಎಂದು ಹೇಳುವನು. ಕರುಣೆಯನ್ನು ಹೊಂದಿದ ಮಹಾ ಪಾಪಿಯಾದ ಒಬ್ಬನು ಸಭೆಯಲ್ಲಿ ಇದ್ದರೆ, ಎಲ್ಲರು ಅವನಲ್ಲಿ ದೇವರ ಕೃಪೆಯ ಐಶ್ವರ್ಯವನ್ನು ಕಂಡು, ಬಿಡದೆ ಆಶ್ಚರ್ಯ ಪಡುತ್ತಾ ಇರ ತಕ್ಕದ್ದು.

ದೇವರು ಇಲ್ಲ, ದೇವರ ವಾಕ್ಯವು ಸುಳ್ಳು ಎಂಬ ಭಾವನೆಗಳನ್ನೂ ದೇವರ ಮಹಿಮೆಯನ್ನು ಹೀನೈಸುವ ದೂಷಣೆಗಳನ್ನೂ ಮನುಷ್ಯರ ಮನಸ್ಸಿನಲ್ಲಿ ತಂತ್ರದಿಂದ ಹುಟ್ಟಿಸುವ ಸೈತಾನನ ಕುಯುಕ್ತಿಗಳನ್ನೂ ದೊಡ್ಡ ದೊಡ್ಡ ಪಾಪಿಗಳು ಮಾನಸಾಂತರದ ಸಮಯದಲ್ಲಿ ಎಲ್ಲರಿಗಿಂತ ಚನ್ನಾಗಿ ತಿಳು ಕೊಳ್ಳುವದರಿಂದ, ಸಭೆಯಲ್ಲಿ ಶೇರಿದ ಮೇಲೆ ಬೇರೆ ಭಕ್ತರನ್ನು ಸಮದಾಯಿಸಿ, ಆದರಿಸ ಬಲ್ಲರು. ದೇವದೂತರು ಚೋದ್ಯವಾದ ನೋಟಕ್ಕೆ ಇಳಿದು ಬಂದು, ಮಣ್ಣಿನಿಂದ ಹುಟ್ಟಿದ ತೃಣ ಮಾತ್ರದವನು ಧೊರೆತನಗಳನ್ನೂ ಒಡೆತನಗಳನ್ನೂ ಶಕ್ತಿಗಳನ್ನೂ ಅಧಿಕಾರಗಳನ್ನೂ ಜಯಿಸುವದನ್ನು ಕಂಡು, ಸಂತೋಷ ಪಡುತ್ತಾರೆ. ಆದರೆ ಇವರು ಗೆದ್ದು ವಿಶ್ವಾಸದಲ್ಲಿ ದೃಢ ಪಟ್ಟ ಮೇಲೆ, ಮತ್ತೊಬ್ಬರಿಗೆ ಸಹಾಯ ಮಾಡಲಿಕ್ಕೆ ಸಿದ್ಧರಾಗಿ, ಅನೇಕರನ್ನು ಸಮದಾಯಿಸುತ್ತಾರೆ. ಅವರು ದೊಡ್ಡ ಪಾಪಗಳನ್ನು ಮಾಡಿದದರಿಂದ ಸೈತಾನನು ಅವರ ಮೇಲೆ ಬೀಳುವದಕ್ಕೆ ಹೆಚ್ಚು ಧೈರ್ಯವಾಗಿದ್ಧಾ

ನೆ. ಈ ಶೋಧನೆಗಳನ್ನು ಕ್ರಿಸ್ತನು ಪ್ರಯೋಜನಕ್ಕೆ ತಂದು, ಅವರನ್ನು ಭಕ್ತರ ಸಹಾಯಕ್ಕೆ ಅಧಿಕ ಯೋಗ್ಯರಾಗಿ ಮಾಡುತ್ತಾನೆ.

ದೊಡ್ಡ ದೊಡ್ಡ ಪಾಪಿ ಮಾನಸಾಂತರ ಪಟ್ಟರೆ, ಸಭೆಯಲ್ಲಿ ಶೇರುವದರಿಂದಲೇ ಎಲ್ಲರಿಗೆ ತಿಳಿಸುವದೇನಂದರೆ: ತಗ್ಗಿದ ಮನಸ್ಸುಳ್ಳ ಹೇಡಿಗಳೇ, ನಿಮ್ಮ ಪಾಪಗಳು ಅಲ್ಪವಾಗಿರಲಾಗಿ, ದೇವರ ಕೃಪೆಯ ವಿಸ್ತಾರವನ್ನು ನೋಡುವ ಸಮಯ ದೊರಕಿಸಿ ಕೊಳ್ಳದದರಿಂದ, ಸಂಕೋಚ ಹೃದಯದವರೇ, ಇಗೋ, ನನ್ನನ್ನು ನೋಡಿ, ದೇವರ ಕೃಪೆಯ ಅಪಾರವಾದ ಐಶ್ವರ್ಯವನ್ನು ತಿಳುಕೊಳ್ಳಿರಿ; ನೀವು ನೋಡಿ ಧೈರ್ಯಗೊಳ್ಳುವ ಹಾಗೆ, ನನ್ನನ್ನು ದೇವರು ತನ್ನ ಕೃಪೆಯ ದೃಷ್ಟಾಂತವಾಗಿ ನಿಮ್ಮ ಮುಂದೆ ಇಟ್ಟು ಇದ್ಧಾನೆ. ಇದರಿಂದ ಸಭೆಯವರೆಲ್ಲರಿಗೆ ಅಧಿಕಾಧಿಕವಾದ ಸಮಾಧಾನವು ಹುಟ್ಟ ತಕ್ಕದ್ದು.

೬. ಯೇಸು ಕ್ರಿಸ್ತನು ದೊಡ್ಡ ದೊಡ್ಡ ಪಾಪಿಗಳಿಗೆ ಮುಂದಾಗಿಯೇ ಕರುಣೆಯನ್ನು ತಂದು ತೋರಿಸಲಾಜ್ಞಾಪಿಸುವದ್ಯಾತಕ್ಕೆಂದರೆ: ಇಂಥವರು ಮಾನಸಾಂತರ ಪಟ್ಟರೆ, ಆತನನ್ನು ಹೆಚ್ಚಾಗಿ ಪ್ರೀತಿ ಮಾಡುತ್ತಾರೆ. ಈ ತಾತ್ಪರ್ಯ ಬರಹಕ್ಕೂ ಬುದ್ಧಿಗೂ ಅನುಕೂಲವಾದದ್ದು. ಬರಹವು ಹೇಳುವದು ಏನಂದರೆ: ಯಾವನಿಗೆ ಬಹಳ ಮನ್ನಿಸಿ ಹೋಯಿತೋ ಅವನು ಹೆಚ್ಚು ಪ್ರೀತಿ ಮಾಡುತ್ತಾನೆ. ಯಾವನಿಗೆ ಸ್ವಲ್ಪ ಮನ್ನಿಸಿ ಹೋಯಿತೋ, ಅವನು ಸ್ವಲ್ಪ ಪ್ರೀತಿ ಮಾಡುತ್ತಾನೆ. ಬುದ್ಧಿ ಹೇಳುವದೇನಂದರೆ: ಪ್ರೀತಿ ಮಾಡುವವನನ್ನು ಹಗೆ ಮಾಡಿ, ಮನ್ನಿಸುವವನನ್ನು ಹಗೆ ಮಾಡಿ, ಮನ್ನಿಸುವವನನ್ನು ಉದಾಸೀನ ಮಾಡುವದು ಆಗದು. ಆದರೆ ಸ್ವಲ್ಪ ಉಪಕಾರವನ್ನು ಹೊಂದಿದವನು ಬಹಳ ಉಪಕಾರ ಹೊಂದಿದವನ ಹಾಗೆಯೇ ಉಪಕಾರಿಯನ್ನು ಪೂರ್ಣ ಹೃದಯದಿಂದ ಪ್ರೀತಿ ಮಾಡುವ ಹಂಗಿನಲ್ಲಿದ್ಧಾನೆಂಬುವದು ಸ್ವಾರಸ್ಯವಿಲ್ಲದ ಮಾತು. ಕ್ರಿಸ್ತನ ಪ್ರೀತಿ ಅತುಲವಾಗಿಯೂ ಅಪಾರವಾಗಿಯೂ ಅದೆ. ಆದರೆ ಅದರಲ್ಲಿ ಒಬ್ಬನು ಹೆಚ್ಚು ಒಬ್ಬನು ಕಡಿಮೆ ಅನುಭವಿಸಿ ಕೊಳ್ಳುತ್ತಾನೆ. ಎಲ್ಲರಲ್ಲಿ ಹೆಚ್ಚು ಪಾಪ ಮಾಡಿದಂಥವನು ಪರಿಹಾರವನ್ನು ಹೊಂದಿದರೆ, ಎಲ್ಲರಲ್ಲಿ ಹೆಚ್ಚಾದ ಪ್ರೀತಿಯನ್ನೂ ಕ್ಷಮೆಯನ್ನೂ ಹೊಂದುತ್ತಾನೆ. ಆದದರಿಂದ ಪೌಲನು ಎಲ್ಲರಿಗಿಂತ ಹೆಚ್ಚು ಕಷ್ಟ ಮಾಡಿದನೆಂದು ಬರದದೆ; ಇದರ ಕಾರಣವೇನಂದರೆ: ಅವನು ಎಲ್ಲರಿಗಿಂತ ಕನಿಷ್ಟ ಪಾಪಿಯಾದ ಕ್ರಿಸ್ತವೈರಿಯಾಗಿದ್ದನು. (೧ ಕೊರಿ. ೧೫.) ಅವನು ದೇವರ ಸಭೆಯನ್ನು ಹಿಂಸಿಸಿ, ಹಾಳು ಮಾಡಿದನು. (ಗಲಾ. ೧, ೧೩.) ಅವರೆಲ್ಲರಲ್ಲಿ ಇವನೊಬ್ಬನೇ ಭಕ್ತರ ದ್ವೇಶದಿಂಡ ಮರುಳಾದನು. ಅವರ ಮೇಲೆ ಅಧಿಕಾರವಾಗಿ ವೈರ ಭ್ರಮೆಗೊಂಡು, ಪರ ಪಟ್ಟಣಗಳ ಪರ್ಯಂತರ ಭಕ್ತರನ್ನು ಹಿಂಸಿಸಿದನೆಂದು ತಾನು ಹೇಳುತ್ತಾನೆ. (ಅಪೊ. ಕ್ರಿ. ೨೬, ೧೧.) ಈ ಹುಚ್ಚನು ವಿಶ್ವಾಸಿಸಿ ಸ್ವಸ್ಥವಾದ ಮೇಲೆ ಕ್ರಿಸ್ತನಿಗಾಗಿ ಎಲ್ಲರಿಗಿಂತ ಹೆಚ್ಚು ಕಷ್ಟ ಮಾಡಿದನು. ಪೌಲನಿಗೆ: ಯಾಕೆ ಹೀಗೆ ಮಾಡಿದಿ? ಎಂದು ಕೇಳಿದರೆ, ಅವನು: ಕ್ರಿಸ್ತನ ಪ್ರೀತಿಯಿಂದ ಹೀಗೆ ಮಾಡಿದೆನು; ಆದರೆ ನನ್ನಿಂದಲ್ಲ ದೇವರ ಕೃಪೆಯಿಂದಲೇ ಎಲ್ಲಾ ಆಯಿತು. ಕ್ರಿಸ್ತನ ಪ್ರೀತಿಯು ನನ್ನಲ್ಲಿ ಬಲಗೊಂಡದೆ; ನಮಗಾಗಿ ಸತ್ತವನನ್ನು, ದೂಷಕನಾದ ನನ್ನನ್ನು ಮನ್ನಿಸಿದವನನ್ನು, ಪೂರ್ಣ ಹೃದಯದಿಂದ ಮರಣದ ವರಿಗೂ ಪ್ರೀತಿ ಮಾಡದೆ ಇರಲೋ? ಎಂದು ಹೇಳುವನು. ಈ ಪೌಲನ ಪ್ರಸ್ತಾಪವು ಯುಕ್ತವಾದದ್ದು; ಆದರೆ ಮಾನಸಾಂತರ ಪಟ್ಟ ಇಪ್ಪತ್ತು ಮಂದಿ ಚಿಕ್ಕ ಪಾಪಿಗಳ ಹೃದಯಗಳಲ್ಲಿ ಪೌಲನೆಂಬ ಒಬ್ಬನಲ್ಲಿ ಇದ್ದಷ್ಟು ಪ್ರೀತಿ ದೊರಕುವದು ಇಲ್ಲ. ಆದದರಿಂದ ಯೇಸು ಕ್ರಿಸ್ತನು ದೊಡ್ಡ ದೊಡ್ಡ ಪಾ

ಪಿಗಳ ಹೃದಯಗಳನ್ನು ಎಳಕೊಳ್ಳುವದರಲ್ಲಿ ಬುದ್ಧಿವಂತನಾಗಿ ಕಾಣಿಸುತ್ತಾನೆ. ಚಿಕ್ಕ ಪಾಪಿಗಳನ್ನು ರಕ್ಷಿಸುವದರಿಂದ ಯೇಸು ಕ್ರಿಸ್ತನಿಗೆ ಬಹಳ ಸ್ತೋತ್ರ ಹುಟ್ಟುವದು ಇಲ್ಲವಕಟ! ಯಾರಿಗೆ ಸ್ವಲ್ಪ ಮನ್ನಿಸಿ ಹೋಯಿತೋ, ಅವನು ಸ್ವಲ್ಪ ಪ್ರೀತಿ ಮಾಡುತ್ತಾನೆ. ಅಂಥಾ ಪಾಪಿಗಳನ್ನು ರಕ್ಷಿಸುವದರಿಂದ ಕಾಲು ತೊಳಿಯುವದಕ್ಕೆ ಬೇಕಾದ ನೀರು ಅವನಿಗೆ ದೊರಕುವದು ಇಲ್ಲ. ಕಣ್ಣೀರಿಲ್ಲದ ಕ್ರೈಸ್ತರ ಸಮೂಹವು ಲೋಕದಲ್ಲಿ ದೊಡ್ಡದು. ಸಹಸ್ರ ಸಹಸ್ರ ಮಂದಿ ಪಶ್ಚಾತ್ತಾಪ ಮಾನಸಾಂತರಗಳ ಕಣ್ಣೀರಿಲ್ಲದವರಾಗಿ, ಕ್ರೈಸ್ತ ಮಾರ್ಗದಲ್ಲಿ ನಡೆದು, ಆ ದೊಡ್ಡ ಪಾಪಿಯಂತೆ ಪರಿಮಳ ತೈಲದ ಕುಪ್ಪಿ ಒಡೆದು ಬಿಡುವದು ಯುಕ್ತವೆಂದು ನೆನಸಲಿಕ್ಕಿಲ್ಲ.

೭. ಯೇಸು ಕ್ರಿಸ್ತನು, ನ್ಯಾಯತೀರ್ವಿಕೆಯ ದಿವಸದಲ್ಲಿ ಮಾನಸಾಂತರ ಪಡದೆ ಹಿಂದೆ ಬಿದ್ದವರೆಲ್ಲರಿಗೆ ನೆವನವು ಶಿಕ್ಕಿದ ಹಾಗೆ, ದೊಡ್ಡ ದೊಡ್ಡ ಪಾಪಿಗಳಿಗೆ ಮುಂದಾಗಿಯೆ ಕರುಣೆಯ ಮಾತು ಹೇಳ ಬೇಕೆಂದು, ಆಜ್ಞಾಪಿಸಿದನು.

ದೇವರ ವಾಕ್ಯವು ಇಬ್ಬಾಯಿ ಕತ್ತಿಯಾಗಿದೆ. ಉಭಯ ಪಾರ್ಶ್ವದಲ್ಲಿಯೂ ಛೇಧಿಸುತ್ತದೆ. ನಿನಗೆ ಗುಣ ಮಾಡದಿದ್ದರೆ, ನಷ್ಟ ಮಾಡುತ್ತದೆ. ತಕ್ಕೊಳ್ಳುವವರಿಗೆ ಜೀವಕರವಾದ ಜೀವವಾಸನೆಯೂ ತಳ್ಳುವವರಿಗೆ ಮರಣಕರವಾದ ಮರಣದ ವಾಸನೆಯೂ ಆಗಿದೆ. (೨ ಕೊರಿ. ೨, ೧೫. ೧೬.) ಇದಲ್ಲದೆ ದೊಡ್ಡ ದೊಡ್ಡ ಪಾಪಿಗಳಿಗೆ ಮುಂದಾಗಿಯೇ ಕೃಪೆಯ ವಾಕ್ಯವನ್ನು ಸಾರ ಬೇಕೆಂದು ಕರ್ತನು ಅಪ್ಪಣೆ ಕೊಟ್ಟದರಿಂದ, ಅದನ್ನು ತಳ್ಳುವವರೆಲ್ಲರು ಗತಿ ಇಲ್ಲದವರಾಗುವದಲ್ಲದೆ, ಆ ದಿವಸದಲ್ಲಿ ಪ್ರತಿವಾದದ ನೆವನವಿಲ್ಲದವರಾಗಿ, ಬಾಯಿ ಮುಚ್ಚಿ ಕೊಳ್ಳ ಬೇಕಾಗಿದೆ. ಅಯ್ಯಯ್ಯೋ! ಅವಿಶ್ವಾಸದಿಂದ ದೇವರ ಕರುಣೆಯ ಮಹಿಮೆಯುಳ್ಳ ವಿಸ್ತಾರವನ್ನು ಅಲ್ಲಗಳದು, ತಾವು ರಕ್ಷಣೆಯನ್ನು ಹೊಂದಲಾರದ ಮಾಹಾ ಪಾಪಿಗಳೆಂತ ನಿರಾಶೆಯಾದವರು ಏನು ಮಾಡುವರು? ನ್ಯಾಯತೀರ್ವಿಕೆಯ ದಿವಸದಲ್ಲಿ ಆಜ್ಞೆಗೆ ಒಳಗಾಗುವನು. ಅರಿಕೆ ಮಾಡ ಬೇಕಾದದ್ದೇನಂದರೆ: ಕ್ರಿಸ್ತನ ಪ್ರೀತಿಯೂ ಸಾಮರ್ಥ್ಯವೂ ನನ್ನನ್ನು ರಕ್ಷಿಸುವದಕ್ಕೆ ಸಾಲವೆಂದು ನೆನಸಿ, ಬುದ್ಧಿ ಇಲ್ಲದೆ ಹೆಡ್ಡನಾಗಿ, ಆತನ ಕೃಪೆಯ ಬಲವನ್ನು ತಿಳಿಯದೆ, ಗಣನೆ ಮಾಡದೆ ಹೋದದರಿಂದಲೇ ನಿತ್ಯನಾಶನದಲ್ಲಿ ಬೀಳುತ್ತೇನೆ. ನಾನು ಘೋರ ಪಾಪಿಯಾಗಿದ್ದೇನೆಂಬುವದೇ ಸರಿ. ಸಾವಿರಾರು ಜನರಲ್ಲಿ ಒಬ್ಬನಾದರೂ ನನ್ನಷ್ಟು ದುಷ್ಟನಾಗಿ ನಡಕೊಂಡನೆಂದು ತೋರುವದಿಲ್ಲವೆಂಬುವದೇ ಸರಿ. ಆದರೆ ಯೇಸು ಕ್ರಿಸ್ತನ ಕೃಪೆಯ ಮಾತು ನಂಬದೆ ಹೋಗುವದಕ್ಕೆ ನನಗೆ ಕಾರಣವಿರಲಿಲ್ಲ. ಇನ್ನು ನನ್ನಷ್ಟು ಕೆಟ್ಟವರಾಗಿದ್ದ ಎಷ್ಟೋ ಮಂದಿ ಈಗ ಮಹಿಮೆಯನ್ನು ಪಡಕೊಂಡರೆಂದು, ಈಗ ನೋಡುತ್ತೇನೆ. ಅವರೆಲ್ಲರು ವಿಶ್ವಾಸದಿಂದ ರಕ್ಷಣೆಯನ್ನು ಹೊಂದಿದ್ದಾರೆ. ನಾನು ಅವಿಶ್ವಾಸದಿಂದಲೇ ಕೆಟ್ಟೆನು. ಅರಿಷ್ಟನಾದ ನನಗೆ ಅಯ್ಯೋ! ರಕ್ಷಣ್ಯಕರವಾದ ಯೇಸುವಿನ ರಕ್ತವನ್ನು ನಾನ್ಯಾಕೆ ಅಲ್ಲಗಳದೆನು? ಕರುಣೆಯನ್ನು ನಂಬಿ, ಅವನ ಮಂಗಳ ಪಾದಕ್ಕೆ ನಾನ್ಯಾಕೆ ದೀನ ಭಾವದಿಂದ ಅಡ್ಡ ಬೀಳಲಿಲ್ಲ? ನನ್ನ ಮಂದ ಬುದ್ಧಿಗೂ ಹೊಲೆಗಳಿಸಿದ ಮನಸ್ಸಾಕ್ಷಿಗೂ ಕಿವಿಗೊಟ್ಟು, ಅವನು ನನ್ನನ್ನು ರಕ್ಷಿಸ ಸಮರ್ಥನೆಂದು ನಾನ್ಯಾಕೆ ನಂಬಲಿಲ್ಲ? ದೇವರ ಪರಿಶುದ್ಧ ವಾಕ್ಯದಲ್ಲಿ ನಾನ್ಯಾಕೆ ಭರವಸವಿಡಲಿಲ್ಲ? ತಿಳುಕೊಳ್ಳುವ ಹಾಗೆ ನಾನ್ಯಾಕೆ ಓದಿ ಪ್ರಾರ್ಥನೆ ಮಾಡಲಿಲ್ಲ? ಬೇಡುವವರಿಗೆ ಗದರಿಸದೆ ತ್ಯಾಗಿಯಾಗಿ ಕೊಡುತ್ತೇನೆಂತ ದೇವರು ಆಗ ಹೇಳಿದನೆಂದು ನನಗೀಗ ಕಾಣು

ತ್ತದಲ್ಲ? ಇತ್ಯಾದಿ ಮಾತುಗಳಿಗಿಂತ ತೀಕ್ಷ್ಣವಾದ ಕೊಂಡಿ ಎಲ್ಲಿ? ಪಾಪಿಗಳೆಲ್ಲರೇ, ಕೇಳಿರಿ! ಯೇಸು ಕ್ರಿಸ್ತನು ಸರ್ವ ಲೋಕದ ಪಾಪಕ್ಕಾಗಿ ತನ್ನ ರಕ್ತವನ್ನು ಬಲಿಯಾಗಿ ಅರ್ಪಿಸಿ, ಯೆರೂಸಲೇಮಿನ ಕೊಲೆಗಾರರಿಗೆ ಮುಂದಾಗಿಯೇ ಮಾನಸಾಂತರವನ್ನೂ ಪಾಪ ಪರಿಹಾರವನ್ನೂ ಸಾರ ಬೇಕೆಂದು ಶಿಷ್ಯರಿಗೆ ಅಪ್ಪಣೆ ಕೊಟ್ಟದರಿಂದ, ಯಾರೂ ಪಾಪ ಮಾಡಿದದರಿಂದಲೇ ನಾಶನವಾಗ ತಕ್ಕವರಲ್ಲವೆಂದೂ ಮಾನಸಾಂತರವಿಲ್ಲದ ಅವಿಶ್ವಾಸಿಗಳೆ ಹೊರ್ತು ಯಾರೂ ನಾಶವಾಗ ಕೆಲಸವಿಲ್ಲವೆಂದೂ ಪ್ರಕಟವಾಗಿದೆ.

ನೀನು ದೊಡ್ಡ ದೊಡ್ಡ ಪಾಪಿಯೂ ಮಹಾ ಪಾತಕಿಯೂ ಆಗಿದ್ದರೇನು? ಎಲ್ಲರಿಗಿಂತ ಕೆಟ್ಟವರಿಗೆ ಮೊದಲು ಕೃಪೆಯ ವಾಕ್ಯವನ್ನು ಸಾರ ಬೇಕೆಂದು ಯೇಸು ಅಪ್ಪಣೆ ಕೊಡಲಿಲ್ಲವೋ? ಎಲ್ಲರಿಗಿಂತ ಭ್ರಷ್ಟವಾದ ಪಾಪಿಗಳಿಗೆ ಅತಿಶಯವಾದ ಕರುಣೆಯ ಐಶ್ವರ್ಯವು ಸಿದ್ಧವಾಗಿರುವದಿಲ್ಲವೋ? ಆದದರಿಂದ ಯೆರೂಸಲೇಮಿನ ಪಾಪಿಗಳಿಗೆ ಸಮಾನವಾದ ಮಹಾ ಪಾತಕಿಯೇ, ಧೈರ್ಯವಾಗಿರು! ಕರ್ತನು ನಿನ್ನನ್ನು ಕರೆಯುತ್ತಾನಲ್ಲ? ನ್ಯಾಯಾಧಿಪತಿಯು ಒಬ್ಬನ ಹೆಸರು ಕರೆಯುತ್ತಲೆ, ಇವನು—ಬಂದೆನಯ್ಯಾ! ಎಂದು ಕೂಗಿ, ಹೆಗಲು ಮುಂದಿಟ್ಟು, ಪ್ರಾಕಾರದಲ್ಲಿ ನಿಂತ ಜನರ ಸಮೂಹವನ್ನು ನೂಕಿ, ಇಂಬು ತೋಡಿ—ಮಾರ್ಗ ಬಿಡಿ! ನ್ಯಾಯಪೀಠದ ಮುಂದೆ ಬರಲಿಕ್ಕೆ ನನಗೆ ಅಪ್ಪಣೆ ಆಯಿತು ಎಂದು, ಮುಂದರಿಯುತ್ತಾನೆ. ಯೆರೂಸಲೇಮಿನ ಪಾಪಿಯೆಂಬ ಮಹಾ ಪಾಪಿಯೇ, ಇದು ನಿನ್ನ ಗತಿ, ಧೈರ್ಯವಾಗಿರು! ನಿನ್ನನ್ನು ಕರೆಯುತ್ತಾನೆ. (ಮಾರ್ಕ. ೧೦, ೪೬—೪೯.) ಯಾಕೆ ಸುಮ್ಮನಿರುತ್ತೀ? ಏಳು! ಯಾಕೆ ನಿಲ್ಲುತ್ತೀ? ಏರಪ್ಪಾ! ಬಾ ಎಂಬ ಶಬ್ದ ಕೇಳಿದ್ದೀ. ಬರಲಿಕ್ಕೆ ನಿನಗೆ ಅಧಿಕಾರ ಉಂಟು. ಯೆರೂಸಲೇಮಿನಿಂದ ಆರಂಭವಾಗಿ ಎಂಬ ಮಾತು, ಬರುವದಕ್ಕೆ ನಿನಗೆ ಅಧಿಕಾರ ಕೊಡುತ್ತದೆ. ಆದದರಿಂದ ಎದ್ದು ನೂಕಿ—ಸೈತಾನನೇ, ಮಾರ್ಗ ಬಿಡು! ಕ್ರಿಸ್ತನು ನನ್ನನ್ನು ಕರೆಯುತ್ತಾನೆ; ಅವಿಶ್ವಾಸವೇ, ಮಾರ್ಗ ಬಿಡು, ಕ್ರಿಸ್ತನು ನನ್ನನ್ನು ಕರೆಯುತ್ತಾನೆ; ಭಯ ಹುಟ್ಟಿಸುವ ಸಂಶಯಭಾವನೆಗಳೇ, ಮಾರ್ಗ ಬಿಡಿ, ನನ್ನ ರಕ್ಷಕನು ತನ್ನ ಕರುಣೆಯನ್ನು ಹೊಂದುವದಕ್ಕೆ ನನ್ನನ್ನು ಕರೆಯುತ್ತಾನೆಂದು ಕೂಗು! ಭೂಲೋಕದ ನ್ಯಾಯಸ್ಥಾನಗಳಲ್ಲಿ ಮನುಷ್ಯರು ಹೀಗೆ ಮಾಡುತ್ತಾರಲ್ಲ? ಪರಲೋಕ ನ್ಯಾಯಸ್ಥಾನದಲ್ಲಿ ಹೀಗೆ ಮಾಡದೆ ಇರಲೋ? ಯೆರೂಸಲೇಮಿನ ಪಾಪಿಯನ್ನು ಕರ್ತನು ಮೊದಲು ನೆನಸಿ ಕೊಂಡು, ಅವನ ವಿಷಯವಾಗಿ ಮೊದಲು ಅಪ್ಪಣೆ ಕೊಟ್ಟು, ಅವನ ಹೆಸರು ಮೊದಲು ಹೇಳಿದದರಿಂದ, ಅವನು ಮೊದಲು ಬಂದು, ತನಗೆ ಮೊದಲು ದೇವರ ಕರುಣೆ ಸಿಕ್ಕಿತೆಂದು ಆಶಿಸ ತಕ್ಕದ್ದು. ಕ್ರಿಸ್ತನು ಸಿಂಹಾಸನಾರೂಢನಾಗಿದ್ದು, ಸಾವಿರ ತಲೆಯ ಮೇಲೆ ಇಂಥವನ ಕಡೆಗೆ—ಆ ಯೆರೂಸಲೇಮಿನ ಪಾಪಿ ನನ್ನ ಹತ್ತರ ಬರಲಿ! ಎಂದು ಅಪ್ಪಣೆ ಕೊಡುತ್ತಾನೆ. ಹೀಗಿರಲಾಗಿ, ಬಾ! ಎಂದು ಕ್ರಿಸ್ತನು ಅಪ್ಪಣೆ ಕೊಟ್ಟ ಕೂಡಲೆ, ದೇವದೂತರು ಸಾಲು ಸಾಲಾಗಿ ನಿಂತು, ಮನುಷ್ಯರೆಲ್ಲರ ಎಡೆಯಾಗಿ ಯೆರೂಸಲೇಮಿನ ಪಾಪಿ ಕರುಣೆ ಹೊಂದಲಿಕ್ಕೆ ಯೇಸು ಕ್ರಿಸ್ತನ ಬಳಿಗೆ ಬರಲಿ! ಆಮೆನ್.

☞ "ಬಾಲಪತ್ರವು" ಮಾರ್ಚಿ ತಿಂಗಳಲ್ಲಿ ಕಾಣಿಸುವದು.

ಸ. ಕ.

Printed by Stolz & Reuther, Basel Mission Press, Mangalore.

ಸಭಾಪತ್ರ

ತಿಂಗಳಿಗೆ ಒಂದು ಸಾರಿ ಪ್ರಕಟಿಸಲ್ಪಡುವದು.

ಪುಸ್ತಕ ೨. **MARCH 1871.** ಅಂಕೆ ೯.

ಹಿಂಸೆಗಳು.

ಕ್ರೈಸ್ತ ಸದ್ಭಕ್ತರಿಗೆ ಶ್ರಮೆ ಹಿಂಸೆಗಳು ಬೀಳದೆ ಹೋಗಲಿಕ್ಕಿಲ್ಲವೆಂಬ ಮಾತು ದೇವವಾಕ್ಯದ ಅನೇಕ ವಚನಗಳಿಂದ ತಿಳಿದು ಬರುತ್ತದೆ. ಇದಕ್ಕೆ ನಾವು ಮನಸ್ತಾಪಗೊಂಡು, ಆಶ್ಚರ್ಯ ಪಟ್ಟು, ಹಿಂಜರಿಯದೆ, ವಿಶ್ವಾಸದ ತಾಳ್ಮೆಯಿಂದ ಎಲ್ಲವನ್ನು ಸಹಿಸುವಂತೆ ಬುದ್ಧಿ ಹೇಳಿ, ಆದರಿಸಿ, ಧೈರ್ಯ ಕೊಡುವಂಥ ವಾಕ್ಯಗಳು ಸಹ ಇದ್ದಾವೆ. ಇವುಗಳಲ್ಲಿ ಕೆಲವುಗಳು ಅಂತ್ಯದ ವರೆಗೆ ನಂಬಿಕೆಯಿಂದಿದ್ದು, ಎಲ್ಲಾನ್ನು ಶೂರರಾಗಿ ತಾಳಿ ಕೊಂಡ ಮರಣ ಸಾಕ್ಷಿಯವರನ್ನು ನಮಗೆ ತೋರಿಸಿ, ಅವರನ್ನು ನಾವು ನಮಗೆ ಮಾದರಿಗಳಾಗಿ ತಕ್ಕೊಳ್ಳ ಬೇಕೆಂದು ಹೇಳುತ್ತವೆ. ಅಪೊಸ್ತಲರು ಸಹ ತಮ್ಮ ಕಾಲದ ಕ್ರೈಸ್ತರಿಗೆ ಆಗಿಂದಾಗ್ಯೆ ಅದೇ ತರವಾದ ವಾಕ್ಯಗಳಿಂದಲೂ ಚರಿತ್ರೆಗಳಿಂದಲೂ ಎಚ್ಚರಿಸಿ, ಬುದ್ಧಿ ಹೇಳಿ, ಧೈರ್ಯ ಪಡಿಸುತ್ತಿದ್ದರು. ಹೀಗಾಗಿರುವದರಿಂದ ಅಪೊಸ್ತಲರ ಕಾಲದಂದಿನಿಂದಲೂ ಸಂಭವಿಸಿ ನಡೆದ ಅದೇ ತರದ ಸಂಗತಿಗಳನ್ನು ನಾವು ಯೋಚಿಸಿ ಶಿರಸಾವಹಿಸ ತಕ್ಕದ್ದೆಂಬುವದಕ್ಕೆ ಸಂಶಯವಿರಲಿಕ್ಕಿಲ್ಲ. ಹೀಗಿರಲಾಗಿ ನಮ್ಮ ಸಭಾಪತ್ರವು ಅಂಥ ಸಂಗತಿಗಳಿಗೆ ಸ್ಥಳವನ್ನೊದಗಿಸ ತಕ್ಕದ್ದೆಂದು ತೋರುತ್ತದೆ. ಸಭಾಪತ್ರವನ್ನು ಓದುವ ಸಭೆಯವರು ಅಂಥಾದ್ದನ್ನು ಓದುವದರಿಂದ ಹ್ಯಾಗಾದರೂ ಹಿತವಾದದ್ದನ್ನು ಕಲಿತುಕೊಳ್ಳ ಬಹುದು. ರಕ್ತಸಾಕ್ಷಿಯವರ ಚರಿತ್ರೆಗಳ ಓದೋಣವು ಸಭೆಯವರಿಗೆ ಹಿತೋಪದೇಶಕ್ಕೂ, ವಿಶ್ವಾಸ ತಾಳ್ಮೆ ಪ್ರೀತಿ ನಿರೀಕ್ಷೆ ಮುಂತಾದ್ದರ ವೃದ್ಧಿಗೂ, ಯೋಗ್ಯವಾದ ಸಭಾಭಿಮಾನಕ್ಕೂ, ಈ ಪ್ರಕಾರ ನಾನಾ ಪ್ರಯೋಜನಗಳಿಗೆ ಕೈಗೂಡಿ ಬರ ಬಹುದೆಂದು ನೆನಸಿ, ಬರ ಬೇಕೆಂದು ಅಭಿಲಾಷಿಸಿ, ನಾವು ಕ್ರಿಸ್ತ ಶಕದ ಮೊದಲಿನ ಶತಮಾನಗಳಲ್ಲಿ ಉಂಟಾದ ಹಿಂಸಾಕಾಲಗಳಲ್ಲಿ ಹಿಂಸೆಗಳನ್ನು ಪಟ್ಟು, ಮರಣವ ತಾಳಿ, ರಕ್ತಸಾಕ್ಷಿಗಳೆಂಬ ಬಹುಮಾನದ ಹೆಸರನ್ನು ಪಡಕೊಂಡ ಕ್ರೈಸ್ತ ಭಕ್ತ ಜನರಲ್ಲಿ ಹಲವರ ಚರಿತ್ರೆಗಳನ್ನು ಸಂಗ್ರಹಿಸಿ, ಬರದು, ಸಭಾಪತ್ರದಲ್ಲಿ ಅನುಕೂಲವಾಗುವ ಮಟ್ಟಿಗೆ ಛಾಪಿಸಿ ಕೊಡಲಿಕ್ಕೆ ಸಿದ್ಧವಾಗಿದ್ದೇವೆ. ನಾವು ಬರದು ಕೊಡ

ಹೋಗುವ ಚರಿತ್ರೆಗಳನ್ನು ಓದುವವರು ವಿಹಿತವಾಗಿ ಓದಿ, ತಮ್ಮ ಮನೋರಥಗಳ ಮೇಲೇರಿಸಿ, ಅನುಸರಿಸುವವರಾಗುವ ಹಾಗೆ ನೋಡಿ ಪ್ರಯತ್ನಿಸ ಬೇಕೆಂದು ಕೋರಿ, ಬರೆಯುವದಕ್ಕೆ ಕೈ ಹಾಕುತ್ತೇವೆ.

ವಿಧವಾಸ್ತ್ರೀಯರಾದ ಸುಂಫೊರೋಸಳೂ ಫೆಲೀಸಿದಾಸಳೂ ತಮ್ಮ ಮಕ್ಕಳ ಸಂಗಡ ಸಾಕ್ಷಿಮರಣ ಹೊಂದಿದ್ದು.

ರೋಮಾಯ ಸಾಮ್ರಾಜ್ಯವನ್ನಾಳಿದ ಹದ್ರಿಯಾನನೆಂಬ ಮಹಾರಾಜನು ತನಗೆ ಕಟ್ಟಿಸಿ ಕೊಂಡ ಅತಿ ಸುಂದರವಾದ ಅರಮನೆಯನ್ನು ವೇದೋಕ್ತವಾಗಿ ಬಲಿಹೋಮಾದಿಗಳನ್ನರ್ಪಿಸಿ, ಪ್ರತಿಷ್ಠೆ ಮಾಡಿಸಿ, ಗೃಹಪ್ರವೇಶವ ಮಾಡಲಿಚ್ಛೈಸಿದ್ದಾಗ, ಅವನ ಪುರೋಹಿತರು ಅವನೆಡೆಗೆ ಬಂದು, ಬಿನ್ನೈಸಿ ಹೇಳಿದ್ದೇನಂದರೆ: ಸ್ವಾಮಿ! ಸುಂಫೊರೋಸಳೆಂಬ ಸ್ತ್ರೀಯೂ ಅವಳ ಏಳು ಜನ ಹುಡುಗರೂ ಅನುದಿನಕ್ಕೆ ತಮ್ಮ ದೇವರನ್ನು ಭಜಿಸಿ, ಪ್ರಾರ್ಥಿಸುತ್ತಾ ಕೊಂಡಾಡುತ್ತಾ ಬರುವದರಿಂದ, ತಮ್ಮ ಬಡ ಸೇವಕರಾದ ನಮಗೆ ವೆಗ್ಗಳ ತೊಂದರೆ ಬೀಳುವದಲ್ಲದೆ, ದೇವತೆಗಳಿಗೆ ಶಿಟ್ಟಾಗಲಿಕ್ಕೆ ಸಾಕು, ಬುದ್ಧಿ! ಶರಣಾಗತರಾದ ನಮ್ಮ ಬಿನ್ನಹ ಮನವರಿಕೆಯಾಗಿ, ಆ ಹೆಂಗಸೂ ಅವಳ ಪೋರಗಳೂ ನರಬಲಿಗಳಾಗಿ ಅರ್ಪಿತರಾಗುವ ಹಾಗೆ ತಮ್ಮ ಅಪ್ಪಣೆಯಾಗ ಬೇಕು. ಹೀಗಾದರೆ ನಮ್ಮ ದೇವರುಗಳು ರಾಜಾಧಿರಾಜರವರ ಸಂಕಲ್ಪಾರ್ಥಗಳನ್ನೆಲ್ಲ ನೆರವೇರಿಸಿ, ಇಷ್ಟಾಪೂರ್ತಿಯನ್ನು ಪ್ರಸಾದಿಸುವರು, ಅಂದರು. ಇದನ್ನು ಕೇಳಿ ಮಹಾರಾಜನು ಅವಳನ್ನೂ ಅವಳ ಏಳು ಮಂದಿ ಕುಮಾರರನ್ನೂ ಕರಿಸಿ, ಅವರು ತನ್ನ ದೇವತಾಮೂರ್ತಿಗಳಿಗೆ ಪೂಜೆ ಮಾಡಿ, ಕಾಣಿಕೆಗಳನ್ನು ಅರ್ಪಿಸುವ ಉದ್ದೇಶಕ್ಕಾಗಿ ದಯಾಭಾವದಿಂದ ಅವರ ಸಂಗಡ ಮಾತಾಡಿ ಶೋಧಿಸಿದನು. ಆದರೆ ಆಕೆಯು ಪ್ರತ್ಯುತ್ತರವಾಗಿ—ನನ್ನ ಗಂಡನೂ ನನ್ನ ಭಾವನೂ ಯೇಸು ಕ್ರಿಸ್ತನ ಹೆಸರಿನ ನಿಮಿತ್ತ ನಿನ್ನ ಕ್ರೂರ ಪೀಡಿಕೆಗಳನ್ನು ತಡದು, ಕ್ರಿಸ್ತನ ಒಳ್ಳೇ ಬಂಟರಾಗಿ ಮರಣವ ತಾಳಿ, ನಿನ್ನ ದೇವರುಗಳನ್ನು ಅಪಜಯ ಪಡಿಸಿದ್ದಾರೆ, ಅಂದದಕ್ಕೆ ಕೈಸರನು ಕಡು ಕೋಪಾಕ್ರಾಂತನಾಗಿ—ಹೆಂಗಸೇ, ನೀನೂ ನಿನ್ನ ಮಕ್ಕಳೂ ನನ್ನ ಪೂಜ್ಯ ದೇವತೆಗಳಿಗೆ ಅರ್ಪಿಸಿ, ಬದುಕಲಿಕ್ಕೋ? ಅರ್ಪಿಸದೆ ಹೋಗಿ ಅರ್ಪಿಸಲ್ಪಡುವದಕ್ಕೋ? ಯಾವದಕ್ಕೆ ಒಪ್ಪಿ ಕೊಳ್ಳುತ್ತೀರೋ? ಎಂದು ಒದರಿ ಕೇಳಿದನು. ನಿರ್ಭಯಸ್ಥಳಾಗಿ ಸುಂಫೊರೋಸಳು—ನಾವು ಅವುಗಳಿಗೆ ಅರ್ಪಿಸಲ್ಪಡುವದಕ್ಕೆ ನಿನ್ನ ದೇವರುಗಳು ಯೋಗ್ಯವಲ್ಲಾ! ನಾವು ನಮ್ಮ ಸ್ವಾಮಿಯಾದ ಯೇಸು ಕ್ರಿಸ್ತನಿಗಾಗಿ ಅರ್ಪಿಸಲ್ಪಡಲಿಕ್ಕೆ ಸಿದ್ಧರಾಗಿದ್ದೇವೆ, ಎನ್ನಲಾಗಿ ಕೈಸರನು ಇನ್ನೊಮ್ಮೆ—ಅರ್ಪಿಸುತ್ತೀಯೋ? ಅರ್ಪಿಸದೆ ಅಪಮರಣ ಹೊಂದಿಸಿ ಕೊಳ್ಳಲಿಕ್ಕಿದ್ಧಿಯೋ? ಇವೆರಡರಲ್ಲಿ ಒಂದನ್ನಾದುಕೋ! ಅಂದನು. ಸುಂಫೊರೋಸಳು—ನೀನು ಕೊಲ್ಲಿಸಿದ ನನ್ನ ವಲ್ಲಭನ ಸಂಗಡ ನಿತ್ಯ ವಿಶ್ರಾಂತಿಯಲ್ಲಿರ ಬೇಕೆಂಬ ನನ್ನ ವಾಂಛೆ ಎಂಬ ಬೆಂಕಿಯನ್ನು ಭಯವೆಂಬ ನೀರು ನೊಂದಿಸಿ ಬಿಟ್ಟೇತೆಂದು ಭಾವಿಸಿ ಕೊಳ್ಳ ಬೇಡಂದಳು. ಆಕೆಯು ನಿಶ್ಚಾಪಲ್ಯದವಳೆಂದು ಕಂಡು, ಮಹಾರಾಜನು—ಅವಳನ್ನು ದೇವಸ್ಥಾನ

ಕ್ಕೊಯಿದು, ಅಲ್ಲಿ ಚನ್ನಾಗಿ ದೆಬ್ಬೆ ತಿನ್ನಿಸಿ, ಕೂದಲಿನ ಜಡೆಗಳಿಂದ ದೇವರ ಎದುರಿನಲ್ಲಿ ತೂಗ ಹಾಕಿ ನೇತಾಡಿಸಿರೆಂದು ಅಪ್ಪಣೆ ಕೊಟ್ಟನು. ಕೈಸರನ ಬಿಲ್ಲೆಕಾರರು ಹಾಗೆಯೇ ಅವಳಿಗೆ ಮಾಡಿದ್ದಾಗ್ಯೂ, ಅವಳು ತನ್ನ ಮನಸ್ಸನ್ನು ಸ್ವಲ್ಪವಾದರೂ ಬೇರ್ಪಡಿಸಿ ಕೊಳ್ಳು ವದಿಲ್ಲವೆಂದು ತಿಳಿದು ಬಂದಾಗ, ಅವಳ ಕೊರಳಿಗೆ ದೊಡ್ಡ ಕಲ್ಲನ್ನು ಕಟ್ಟಿ, ಅವಳನ್ನು ತೀ ಬರ್ ಎಂಬ ನದಿಯಲ್ಲಿ ದೊಬ್ಬಿ ಮುಣುಗಿಸಿ ಬಿಡ ಬೇಕೆಂದು ಹುಕುಂ ಆಯಿತು. ಆಕೆಯ ಏಳು ಮಂದಿ ಕುಮಾರರನ್ನು ಕೈಸರನು ಶೆರೆಯಲ್ಲಿ ಹಾಕಿಸಿ, ಮಾರಣೇ ದಿನದಲ್ಲಿ ತನ್ನ ನ್ಯಾಯಸ್ಥಾನಕ್ಕೆ ಕರೇ ಕಳುಹಿಸಿದನು. ಆದರೆ ಅವರನ್ನು ಎಷ್ಟೋ ಬೆದರಿಸಿ, ಭಯ ಪಡಿಸಲಿಕ್ಕೆ ಹತ್ತಿ ಪ್ರಯತ್ನ ಮಾಡಿದರೂ, ಅವರು ಎಲ್ಲಾನ್ನು ಉಲ್ಲಂಘಿಸಿ, ತಮ್ಮ ಒಡೆಯನಾದ ಯೇಸು ಕ್ರಿಸ್ತನನ್ನು ಬೊಂಕದೆ ಹೋದರು. ಕಡೆಗೆ ಮಹಾರಾಜನು ದೇವಸ್ಥಾನದ ಅಂಗಳದಲ್ಲಿ ಏಳು ಸ್ತಂಭಗಳನ್ನು ನಾಟಿಸಿ, ಆ ಏಳು ಮಂದಿ ಅಣ್ಣತಮ್ಮಂದ್ಯರನ್ನು ಆಣಿಗಳಿಂದ ಅವುಗಳಿಗೆ ಜಡಿದು, ಕೊಂದು ಹಾಕ ಬೇಕೆಂದು ಅಪ್ಪಣೆ ಕೊಟ್ಟಾಗ, ಮಾರೆಕಾರರು ಆ ರೀತಿಯಾಗಿ ಮಾಡಿ, ಮೊದಲಿನವನ ಕುತ್ತಿಗೆ ಸಾಂಗುಗಳಿಂದ ತಿವಿದು, ಇಬ್ಬರ ಎದೆಗಳಲ್ಲಿ ಈಟಿಗಳನ್ನು ಎಸೆದು, ನಾಲ್ಕನೆಯವನಿಗೆ ಹೊಟ್ಟೆಯನ್ನು, ಐದನೆಯವನಿಗೆ ಬೆನ್ನನ್ನು, ಆರನೆಯವನಿಗೆ ಪಕ್ಕೆಯನ್ನು ಕೊಡ್ಲಿಯಿಂದ ಕಡಿದು, ಏಳನೆಯವನನ್ನು ಕತ್ತಿಯಿಂದ ಎರಡಾಗಿ ಶೀಳಿ ಬಿಟ್ಟರು. ಈ ಪ್ರಕಾರ ಆ ಕುಟುಂಬದವರೆಲ್ಲರು ಯೇಸು ಕ್ರಿಸ್ತನ ವೇದಸಾಕ್ಷಿಗಳಾಗಿ ಮರಣವ ತಾಳಿ, ಜೀವದ ಬಾಧ್ಯತೆಯಲ್ಲಿ ಶೇರಿದರು.

ಈ ಸಂಗತಿಯು ಸಂಭವಿಸಿದ್ದು ಮೂವತ್ತು ವರುಷಗಳಾದ ಮೇಲೆ, ರೋಮಪುರದಲ್ಲಿ ಅದಕ್ಕೆ ಶುದ್ಧ ಸಮಾನವಾದ ಬೇರೊಂದು ಸಂಗತಿಸಿತು. ಹದ್ರಿಯಾನನ ಮೇಲಾಧಿಕಾರಿಯಾದ ಅಂತೋನೀನ ಪೀಯುಸನೆಂಬ ಮಹಾರಾಜನ ಕಾಲದಲ್ಲಿ ಫೆಲೀಸಿದಾಸಳೆಂಬ ಬೇರೆ ವಿಧವಾಸ್ತ್ರೀಯೊಬ್ಬಳು ಇದ್ದಳು. ಅವಳಿಗೂ ಏಳು ಮಂದಿ ಮಗಂದ್ಯರಿದ್ದರು. ಕುಲೀನತ್ವದ ದೆಶೆಯಿಂದಲೂ ನಿಷ್ಕಪಟವಾದ ಭಕ್ತಿ, ಬಲವಾದ ವಿಶ್ವಾಸ ಮೊದಲಾದ ಸದ್ಗುಣಗಳಿಂದಲೂ ಪರಿಶೋಭಿಸಿ, ಆಕೆಯು ರೋಮಪುರದಲ್ಲಿದ್ದ ಕ್ರೈಸ್ತಕೂಟಕ್ಕೆ ಅಲಂಕಾರವಾಗಿಯೂ ಮಾತೃಸ್ಥಾನದೋಪಾದಿಯಾಗಿಯೂ ಹೋಗಿದ್ದಳು. ರೋಮಪುರದ ಮೂರ್ತಿಪೂಜಾಕಾರಿಗಳು ಇದನ್ನು ತಿಳಿದು, ಆಕೆಯ ಮೂಲವಾಗಿ ಕ್ರಿಸ್ತನ ಭಕ್ತರು ಇನ್ನು ಹೆಚ್ಚುವದನ್ನು ಸಹ ಕಂಡು, ಹೊಟ್ಟೇಕಿಚ್ಚು ಪಟ್ಟು, ಕೈಸರನಾದ ಅಂತೋನೀನನ ಬಳಿಗೆ ಹೋಗಿ ಅವನಿಗೆ—ವಿಧವಾಸ್ತ್ರೀಯಾದ ಫೆಲೀಸಿದಾಸಳೆಂಬವಳು ನಮ್ಮ ದೇವತೆಗಳನ್ನು ದೂಷಿಸಿ, ಕೋಪ ಪಡಿಸುತ್ತಿರುತ್ತಾಳೆ. ಇದರಿಂದ ರಾಜ್ಯಕ್ಕೆ ಕೇಡು ಹತ್ತಿ ಬರುವ ಭಯ ತೋರುತ್ತದೆ. ಅವಳು ನಮ್ಮ ದೇವರುಗಳನ್ನು ಉದಾಸೀನ ಮಾಡಿ ಎದುರಿಸುವದನ್ನು ಬಿಡದೆ ಹೋದರೆ, ನಮ್ಮ ದೇವರುಗಳಿಗೆ ಕೋಪಾವೇಶವಾಗಿ, ಶಾಂತ ಪಡಿಸಲಸಾಧ್ಯವಾಗಿ ಹೋದೀತೆಂದು ಧರ್ಮೋದ್ಧಾರಕರಾದ ಮಹಾರಾಜರವರಿಗೆ ವೇದ್ಯವಾಗಿರಲಿ ಎಂಬದಾಗಿ ಹೇಳಿ, ದೂರಿ, ಕೈಸರನನ್ನು ರೇಗಿಸಿದರು. ತತ್ಕ್ಷಣಕ್ಕೆ ಅವನು ತಳವಾರನಾದ ಪುಬ್ಲಿಯುಸನೆಂಬವನನ್ನು ಕರಿಸಿ ಅವನಿಗೆ—ದೇವತೆಗಳಿಗೆ ಕೋಪೋಪಶಮನವಾಗುವ ಬ

ಗ್ಯೆ, ಫೆಲೀಸಿದಾಸಳೂ ಆಕೆಯ ಕುಮಾರರೂ ಅವುಗಳಿಗೆ ಅರ್ಪಿಸುವ ಹಾಗೆ, ಸರ್ವ ಪ್ರಯತ್ನಗಳಿಂದ ಉದ್ಯೋಗಿಸು! ಎಂದು ಆಜ್ಞಾಪಿಸಿದನು. ಇದರ ಮೇರೆಗೆ ಪುಬ್ಲಿಯುಸನು ಅವಳನ್ನು ಅಂತರಂಗವಾಗಿ ತರಿಸಿ, ಮೊದಲು ಬಹು ನಯ ಭಾಷೆಯಿಂದ ಅವಳ ಮನಸ್ಸನ್ನು ತಿರುಗಿಸಲಿಕ್ಕೆ ಯತ್ನ ಮಾಡಿದನು. ಆದರೆ ಈ ವಿಧದ ಪ್ರಯತ್ನಗಳು ವ್ಯರ್ಥವೆಂದು ಬೇಗ ತಿಳಿದು, ಪೀಡೆ ಮರಣಗಳ ಭಯ ತೋರಿಸಿ, ಅವಳನ್ನು ಬೆದರಿಸಲಿಕ್ಕೆ ಹತ್ತಿದನು. ಆದರೆ ಫೆಲೀಸಿದಾಸಳು—ನಯ ಭಯ ತೋರಿಸ ಬೇಡಪ್ಪಾ! ನಿನ್ನ ಮುದ್ದುಗಳಿಗಾಗಲಿ ನಿನ್ನ ಗುದ್ದುಗಳಿಗಾಗಲಿ ನಾನು ಸೋತು ಹೋಗೆ. ನಿನ್ನ ಪುಸಲಾಯಿಕೆಗಳು ನನ್ನ ಮನಸ್ಸನ್ನು, ನಿನ್ನ ಪೀಡಿಕೆಗಳು ನನ್ನ ಧೈರ್ಯವನ್ನು ಹರಣ ಮಾಡವು. ನನ್ನನ್ನು ಬಿಟ್ಟರೆ ನೀನು ಸೋತು ಹೋಗುತ್ತೀ; ನನ್ನನ್ನು ಕೊಂದರೆ ನಾನು ಗೆದ್ದು ಹೋಗುವೆ ಎಂದು ಪ್ರತ್ಯುತ್ತರವಾಗಿ ಹೇಳಿದ್ದಕ್ಕೆ, ಅವನು—ರಂಡೇ, ನಿನಗೆ ಸಾಯ ಬೇಕೆಂಬ ಹುಚ್ಚು ಬುದ್ಧಿ ಹಿಡಿದಿದ್ದರೆ, ನಾ ಬೇಡವೆಂಧೇಳೆ. ಆದರೆ ನಿನ್ನ ಮಗಂದಿಯರು ಬದುಕುವ ಹಾಗೆ ನೋಡು! ಅನ್ನಲಾಗಿ, ಅವಳು—ಜೀವವಿಲ್ಲದ ಸುಳ್ಳು ದೇವರುಗಳಾದ ಮೂರ್ತಿಗಳಿಗರ್ಪಿಸದೆ ನನ್ನ ಮಕ್ಕಳು ಬದುಕುವರು; ಪರಂತು ಅವುಗಳಿಗರ್ಪಿಸಿ, ಜೀವದ ನಾಯಕನಿಗೆ ತಿರಿಗಿ ಬೀಳೋಣವಾದರೆ, ನಿತ್ಯ ಮರಣಸ್ಥರಾದಾರೆಂದು ಬದಲುತ್ತರ ಕೊಟ್ಟಳು.

ಮರು ದಿವಸದಲ್ಲಿ ಪುಬ್ಲಿಯುಸನು ಬಹಿರಂಗವಾಗಿ ಫೆಲೀಸಿದಾಸಳನ್ನೂ ಅವಳ ಮಗಂದ್ಯರನ್ನೂ ತನ್ನ ಕಚೇರಿಗೆ ತರಿಸಿ, ಮಾತಾಡಿಸಿ, ಕಡೆಗೆ ಫೆಲೀಸಿದಾಸಳಿಗೆ—ರೂಪವಂತರಾಗಿ ತಮ್ಮ ವಯಸ್ಸಿನ ವಸಂತ ಕಾಲದಲ್ಲಿ ಕುಸುಮಾಕರದೋಪಾದಿಯಾಗಿ ಶೋಭಿಸುವ ನಿನ್ನ ಗರ್ಭಫಲವಾದ ಕುಮಾರರನ್ನು ಕನಿಕರಿಸಿ, ಅವರು ಈ ಹುಚ್ಚು ಬುದ್ಧಿಯಿಂದ ಅಗಲಿಸಿ ಕೊಳ್ಳುವ ಹಾಗೆ ಬೋಧಿಸು! ಎಂದು ಹೇಳಲಿಕ್ಕೆ ಆಕೆಯು—ನಿನ್ನ ಉಪಕಾರ ನಮಗೆ ಅಪಕಾರವೇ; ನಿನ್ನ ಕನಿಕರವು ಶನಿಕಾಟವೇ ಅಂದು, ತನ್ನ ಮಕ್ಕಳ ಕಡೆಗೆ ದೃಷ್ಟಿ ಇಟ್ಟು ಮಮಕರಿಸಿ ಹೇಳಿದ್ದು: ಕಂದರೇ, ದಿವವನ್ನೋಡಿರಿ; ಪರಲೋಕವೇ ನಿಮ್ಮ ಕಣ್ಣಿನ ಮುಂದಿರಲಿ! ನೀವು ಅಲ್ಲಿಗೆ ಶೇರುವದನ್ನು ಕ್ರಿಸ್ತನು ಕಾದು ಕೊಂಡಿದ್ಧಾನೆ, ಅಂದಳು. ಪುಬ್ಲಿಯುಸನು ಇದನ್ನು ಕೇಳಿ, ಅವಳ ಬಾಯಿೞ ಮೇಲೆ ಪೆಟ್ಟು ಹೊಡಿಸಿ, ನನ್ನ ಸಮುಖದಲ್ಲಿಯೇ ಈ ಪ್ರಕಾರ ದುರ್ಬೋಧಿಸ ಧೈರ್ಯ ಪಡುತ್ತಿಯಾ? ನಿನ್ನ ಬಾಯಿ ಮುಚ್ಚಿಕೋ, ಮಾರಿ! ಎಂದು ಅಬ್ಬರಿಸಿ, ಆಕೆಯ ಮಗಂದಿಯರನ್ನು ಮಾತಾಡಿಸಿ, ವಿಚಾರಿಸಲಾರಂಭಿಸಿದನು. ಆದರೆ ಅವರೆಲ್ಲರು ದೃಢರಾಗಿದ್ದು ಒಳ್ಳೇ ಸಾಕ್ಷಿ ಕೊಡುವವರಾದರು. ದೃಷ್ಟಾಂತಕ್ಕಾಗಿ ಅಲೆಕ್ಸಂದ್ರನೆಂಬ ನಾಲ್ಕನೆಯವನು ಕೊಟ್ಟ ಕಟ್ಟುತ್ತರವ ಹೇಳುತ್ತೇವೆ; ಏನಂದರೆ: ನಾನು ಕ್ರೈಸ್ತನು; ಕ್ರಿಸ್ತನ ಕಿಂಕರನು; ಆತನನ್ನು ಅರಿಕೆ ಮಾಡುತ್ತೇನೆ; ನನ್ನ ಮನಸ್ಸಿನಲ್ಲಿ ಆತನಿಗೆ ಹೊಂದಿ ಕೊಂಡಿರುತ್ತೇನೆ; ಆತನಿಗೆ ಪ್ರಾರ್ಥಿಸಿ ಬೇಡಿ ಕೊಳ್ಳುತ್ತಿರುತ್ತೇನೆ. ನನ್ನ ಎಳೇ ಪ್ರಾಯಕ್ಕೆ ಪರಮ ಜ್ಞಾನ ತ್ರಾಣಗಳು ಕೂಡಿ ಕೊಂಡು ಬಲ ಪಡಿಸುತ್ತವೆ; ಯಾಕಂದರೆ ನಾನು ಜೀವವುಳ್ಳ ದೇವರನ್ನು ಸೇವಿಸಿ ಆರಾಧಿಸುವವನಾಗಿದ್ಧೇನೆ.

ಅವನ ಪ್ರಯತ್ನಗಳು ಎಲ್ಲವರಲ್ಲಿ ವ್ಯರ್ಥವಾಗಿ ಹೋದದರಿಂದ, ಪುಬ್ಲಿಯುಸನು ಅವರನ್ನು ಶೆರೆಯಲ್ಲಿರಿಸಿ, ಅವರ ಸಂಗತಿಯನ್ನು ಮಹಾರಾಜನ ಒಡ್ಡೋಲಗಕ್ಕೊಪ್ಪಿಸಿ ಕೊಟ್ಟನು. ಅಂತೋನೀನನು ಅವರೆಲ್ಲರನ್ನು ಅತಿ ಕ್ರೂರವಾಗಿ ಹತ್ಯ ಮಾಡಿಸಿದನು.

Printed by Stolz & Reuther, Basel Mission Press, Mangalore.

ಸಭಾಪತ್ರ

ತಿಂಗಳಿಗೆ ಒಂದು ಸಾರಿ ಪ್ರಕಟಿಸಲ್ಪಡುವದು.

ಪುಸ್ತಕ ೩.   APRIL & MAY 1871.   ಅಂಕೆ ೧೦. ೧೧.

ಮೂರು ದುರ್ವಿಷಯಗಳು.

ಲೋಕದಲ್ಲಿ ಅನೇಕ ದುರ್ವಿಷಯಗಳಿರುತ್ತವಲ್ಲ. ಓ ಅನೇಕವಿರುತ್ತವೆ; ಯಾಕಂದರೆ ಪಾಪವು ಪ್ರತಿ ಹೃದಯದಲ್ಲಿಯೂ ಉಂಟು: ಮನುಷ್ಯರಾಶಿಯಲ್ಲಿ ದುಃಖ ಚದರಿದ್ದು ಪಾಪದಿಂದಲೇ.

ಪರಂತು ಲೋಕದಲ್ಲಿ ಅನೇಕ ದುರ್ವಿಷಯಗಳಿರುತ್ತವಾದರೂ, ಅವುಗಳೊಳಗೆ ಮೂರನ್ನು ಕುರಿತು ಮಾತ್ರ ನಾನು ಮಾತಾಡುತ್ತೇನೆ. ಯಾಕಂದರೆ, ನಾನು ಹೇಳಲಿಕ್ಕಿರುವ ಮೂರು ವಿಷಯಗಳಲ್ಲಿ ಇತರ ಎಲ್ಲಾ ದುರ್ವಿಷಯಗಳು ಯಥಾರ್ಥಕ್ಕೆ ಶೇರುತ್ತವೆ.

ಹೌದು, ಮೂರು ದುರ್ವಿಷಯಗಳನ್ನು ಕುರಿತು ಮಾತಾಡಿದರೆ, ಎಲ್ಲಾ ದುರ್ವಿಷಯಗಳು ಬರುವದು ಹ್ಯಾಗೆ? ಎಂದು ನೀನು ಆಶ್ಚರ್ಯ ಪಡುವಿ ಎಂಬದಕ್ಕೆ ಸಂಶಯವಿಲ್ಲ. ಸ್ವಲ್ಪ ತಾಳು, ನಾನು ವಿವರಿಸಿದ ಮೇಲೆ, ಅದು ಸರಿ ಎಂತ ಮತ್ತೆ ನೀನು ಹೇಳುವಿ.

ದುಷ್ಟ ಜನರು ಕೇಡು ಮಾಡುವಂತೆ ಸಾಧಿಸುವದೂ ಸುಳ್ಳಾಡುವದೂ ಶಪಿಸುವದೂ ಆಣೆ ಹಾಕುವದೂ ಸಬ್ಬಾತ ದಿವಸದ ಆಚರಣೆಯನ್ನು ಉಲ್ಲಂಘಿಸುವದೂ ಕದಿಯುವದೂ ನರಹತ್ಯ ಮಾಡುವದೂ ನೀನು ಅನೇಕ ಸಾರಿ ಕೇಳಿದ್ಧಿಯಷ್ಟೆ; ಈ ಎಲ್ಲಾ ಕೇಡುಗಳು ನಾನು ಹೇಳಿಲಿಕ್ಕಿರುವಂಥಾ ಮೂರು ದುರ್ವಿಷಯಗಳಿಂದ ಪ್ರಾಪ್ತವಾಗುತ್ತವೆ.

ಕಾಯಿನನು ತನ್ನ ಸಹೋದರನಾದ ಆಬೇಲನನ್ನು ಕೊಲ್ಲುವದಕ್ಕೆ ಮನಸ್ಸು ಮಾಡಿದಾಗ, ಯೋಸೇಫನ ಸಹೋದರರು ಆತನನ್ನು ಹಿಂಸಿಸುವದಕ್ಕೆ ಸಾಧಿಸಿದಾಗ, ಯೂದ ಇಸ್ಕರಿಯೋತನು ತನ್ನ ಕರ್ತನಾದ ರಕ್ಷಕನನ್ನು ಒಪ್ಪಿಸಿ ಕೊಡುವದಕ್ಕೆ ಆಲೋಚಿಸಿದಾಗ,—ಆ ಮೂರು ದುರ್ವಿಷಯಗಳಲ್ಲಿ ಒಂದು ಇವುಗಳ ಬುಡವಾಗಿ ಇತ್ತು.

ಯಾಕೋಬನು ತನ್ನ ತಂದೆಯಾದ ಇಸಾಕನ ಹತ್ತರ ವಂಚಕ ಮಾತುಗಳು ಆಡಿದಾಗ, ಶಿಮ್ಮಯಿಯು ದಾವೀದನನ್ನು ಶಪಿಸಿದಾಗ, ಇಸ್ರಯೇಲರಿಗೆ ವಾಗ್ದತ್ತವಾದ ದೇ

ಶದಿಂದ ಹೊಂಚುಗಾರರು ಸುಳ್ಳು ವರ್ತಮಾನ ತಂದಾಗ, ಅನನೀಯನೂ ಸಫ್ಫೈರಳೂ ತಮಗೆ ಮರಣ ತಂದಂಥಾ ಸುಳ್ಳನ್ನು ಆಡಿದಾಗ,—ಎರಡನೇ ದುರ್ವಿಷಯವೇ ಕಾರಣವಾಗಿತ್ತು.

ದಾನಿಯೇಲನು ಸಿಂಹಗಳ ಗವಿಯಲ್ಲಿ ಹಾಕಲ್ಪಟ್ಟಾಗ, ಸ್ನಾನಿಕನಾದ ಯೋಹಾನನು ಶೆರೆಯಲ್ಲಿ ಶಿರಛೇದಿಸಲ್ಪಟ್ಟಾಗ, ಸ್ತೆಫಾನನು ಕಲ್ಲೆಸೆಯಲ್ಪಟ್ಟಾಗ, ಮತ್ತು ಆ ಕ್ರೂರವಾದ ಯೆಹೂದ್ಯರು ಯೇಸು ಕ್ರಿಸ್ತನನ್ನು ಕ್ರೂಜೆಗೆ ಹಾಕಿದಾಗ,—ಅವುಗಳಲ್ಲಿ ಕಡೇ ದುರ್ವಿಷಯವು ಈ ಪಾಪಗಳ ಮೂಲವಾಗಿತ್ತು.

ಆ ಮೂರು ದುರ್ವಿಷಯಗಳು ಯಾವವೆಂದು ಕೇಳುವದಕ್ಕೆ ನಿನಗೆ ಬಹಳ ಕುತೂಹಲ ಇರುವದಲ್ಲ? ಒಳ್ಳೆದು, ನಿನಗೆ ಈಗಲೇ ಹೇಳುತ್ತೇನೆ; ಆ ಮೂರು ದುರ್ವಿಷಯಗಳು ಇವೇ—ದು ರಾ ಲೋ ಚ ನೆ ಗ ಳು, ದು ರ್ವ ಚ ನ ಗ ಳು, ದು ಷ್ಕ್ರಿ ಯೆ ಗ ಳು.

ಒಂದು ಧಾನ್ಯದ ತೆನೆಯು ಒಂದೇ ಕಾಳಿನಿಂದಲೂ, ಒಂದು ಪುಷ್ಪವು ಬೀಜದಿಂದಲೂ, ಒಂದು ದೊಡ್ಡ ವೃಕ್ಷವು ಬಹು ಸಣ್ಣ ಸಾಸಿವೆಯಿಂದಲೂ ಹುಟ್ಟುತ್ತದೆಂದು ಬಲ್ಲಿಯಷ್ಟೆ; ಅದೇ ಪ್ರಕಾರ ದುರ್ವಚನಗಳೂ ದುಷ್ಕ್ರಿಯೆಗಳೂ ದುರಾಲೋಚನೆಗಳಿಂದ ಹುಟ್ಟುತ್ತವೆ.

ಈ ಪ್ರಕಾರ ದುರಾಲೋಚನೆಗಳು ಎಷ್ಟು ಅಸಹ್ಯವಾಗಿ ನೀಚವೆಂದು ತಿಳಿಯುವದು; ಯಾಕಂದರೆ ಲೋಕದಲ್ಲಿರುವ ದುರ್ಜನರು ಆಡಿದ ಎಲ್ಲಾ ಕೆಟ್ಟ ಮಾತುಗಳು, ಮಾಡಿದ ಎಲ್ಲಾ ಕೆಟ್ಟ ಕ್ರಿಯೆಗಳು ಇವುಗಳಿಂದಲೇ ಬರುತ್ತವೆ. ಆದ್ದರಿಂದ ದುರಾಲೋಚನೆಗಳನ್ನು ಮಾಡದ ಹಾಗೆ ಎಚ್ಚರಿಕೆಯಾಗಿರು!

ಆದರೆ ಒಂದು ವೇಳೆ ದುರಾಲೋಚನೆಗಳನ್ನು ನಿನ್ನ ಮನಸ್ಸಿನಿಂದ ತಳ್ಳುವದು ಹ್ಯಾಗೆಂದು ತಿಳಿಯುವದಕ್ಕೆ ಅಪೇಕ್ಷಿಸುವಿ; ಯಾಕಂದರೆ ಅವು ಹುಟ್ಟಿದವೆಂದು ಗೋಚರವಾಗುವದಕ್ಕೆ ಮುಂಚೆ ನಿನ್ನೊಳಗೆ ಪ್ರವೇಶವಾಗುತ್ತವೆ. ಈ ದುರಾಲೋಚನೆಗಳು ಹುಟ್ಟದ ಹಾಗೆ, ನನಗೆ ತಿಳಿದೊಂದು ಉಪಾಯ ಹೇಳುತ್ತೇನೆ.

ನೀನು ಒಂದು ಕಳಶಿಗೆಯನ್ನು ತುಂಬ ಗೋಧಿಯಿಂದ ತುಂಬಿಸಿದಿಯಾದರೆ, ಅದರಲ್ಲಿ ಹೊಟ್ಟು ಹಿಡಿಯುವರೆ ಇನ್ನು ಸ್ಥಳ ಉಳಿಯಲಿಕ್ಕಿಲ್ಲ; ನಿನ್ನ ಟಂಬ್ಲರ ತುಂಬ ಹಾಲು ಹಾಕಿದಿಯಾದರೆ, ಅದರಲ್ಲಿ ಇನ್ನು ನೀರು ಹಿಡಿಯುವರೆ ಸ್ಥಳ ಉಳಿಯಲಿಕ್ಕಿಲ್ಲ; ಹ್ಯಾಗೋ ಹಾಗೆಯೇ ಎಲ್ಲಾ ಸಮಯುಗಳಲ್ಲಿ ನಿನ್ನ ಮನಸ್ಸು ಸುವಿಷಯಾಲೋಚನೆಗಳಿಂದ ಭರಿತವಾಯಿತಾದರೆ, ದುರಾಲೋಚನೆಗಳು ಹುಟ್ಟುವರೆ ಎಷ್ಟು ಮಾತ್ರವೂ ಸ್ಥಳ ಉಳಿಯಲಿಕ್ಕಿಲ್ಲ.

ಆದರೆ ಇದಕ್ಕೆ ಬದಲಾಗಿ ನಿನ್ನ ಮನಸ್ಸಿನ ದ್ವಾರವನ್ನು ತೆರದು ಬಿಟ್ಟು, ಎಚ್ಚರಿಕೆ ತಪ್ಪಿ ನಡಕೊಂಡರೆ, ಮತ್ತು ಈ ಮೂಲಕ ದುರಾಲೋಚನೆಗಳು ಬಂದು ನಿನ್ನ ಹೃದಯದಲ್ಲಿ ಉಳ ಕೊಳ್ಳ ಬಿಟ್ಟರೆ, ದುರ್ವಚನಗಳೂ ದುಷ್ಕ್ರಿಯೆಗಳೂ ಕೂಡಲೇ ಹಿಂಬಾಲಿಸುತ್ತವೆ. ಇದು ಹ್ಯಾಗೆಂದು ನೀನು ವಿಚಾರಿಸಿ ನೋಡಿದರೆ, ನಿನಗೆ ವ್ಯಕ್ತವಾಗುವದು.

ಗರ್ವಿಷ್ಟನೂ ದುಷ್ಟನೂ ಆದ ಹಾಮಾನನು ಯೆಹೂದ್ಯನಾದ ಮೊರ್ದೆಕಾಯನ

ಮೇಲೆ ಕೋಪಾರೂಢನಾದಾಗ, ಅವನು ಅದಕ್ಕೆ ಮುಂಚೆ ದುರಾಲೋಚನೆಗಳು ತನ್ನ ಹೃದಯದೊಳಗೆ ಬರಗೊಟ್ಟಿದ್ದನು; ಆದದರಿಂದ ಮೊರ್ದೆಕಾಯನನ್ನು ಹ್ಯಾಗೆ ಶಿಕ್ಷಿಸುವದೆಂದು ಆಲೋಚಿಸ ತೊಡಗಿದನು. ಎಷ್ಟು ಹೆಚ್ಚಾಗಿ ಅವನು ಆಲೋಚಿಸುತ್ತಿದ್ದನೋ, ಅಷ್ಟು ಹೆಚ್ಚಾಗಿ ಅವನ ದುರಾಲೋಚನೆಗಳು ಅವನನ್ನು ಕೇಡಿಗೆ ನಡಿಸಿದವು; ಎಲ್ಲಿ ತನಕ ವಂದರೆ, ಕಡೆಗೆ ಅವನು ಮೊರ್ದೆಕಾಯನನ್ನೂ ಯೆಹೂದ್ಯರಾದ ಅವನ ಜನರನ್ನೂ ಕೊಲ್ಲಿಸುವದಕ್ಕೆ ಯತ್ನ ಮಾಡಿದನು. ಆದರೆ, ಅದು ಇಲ್ಲಿಗೆ ತೀರಿತೇ? ಇಲ್ಲ! ದುರಾಲೋಚನೆಗಳು ಹುಟ್ಟುವದೇ ತಡ, ಹುಟ್ಟಿದವಂದರೆ, ಕೂಡಲೇ ಅಣಗಿಸದಿದ್ದರೆ, ಕೇಡಿನ ಹಾದಿಯಲ್ಲಿ ಒಂದೊಂದು ಮೆಟ್ಲು ಮುಂದರಿಯುತ್ತಾ ಇವೆ. ಆದ್ದರಿಂದ ಹಾಮಾನನಲ್ಲಿ ಹುಟ್ಟಿದ ದುರಾಲೋಚನೆಗಳ ಮೂಲ ದುರ್ವಚನಗಳು ಅವನ ಬಾಯಿಂದ ಹೊರಡಲಿಕ್ಕಾದವು. ಮತ್ತು ಅವನು ಅರಸನ ಬಳಿಗೆ ಹೋಗಿ, ಯೆಹೂದ್ಯರಿಗೆ ವಿರೋಧವಾಗಿ ಮಾತಾಡಿ, ಆ ಜನರನ್ನು ಕೊಲ್ಲಿಸುವದಕ್ಕೆ ಅಪ್ಪಣೆ ಕೊಡುವಂತೆ ಅವನಿಗೆ ಬೋಧಿಸಿದನಲ್ಲ. ನೋಡು, ಈ ಪ್ರಕಾರ ದುರಾಲೋಚನೆಗಳ ಹಿಂದೆಯೆ ದುರ್ವಚನಗಳು ಬರುತ್ತವೆ.

ಹಾಮಾನನು ಇನ್ನೂ ತೃಪ್ತಿ ಪಡಲಿಲ್ಲ; ಏನು ಕಾರಣವಂದರೆ, ನಾನು ಮೇಲೆ ಹೇಳಿದಂತೆ, ದುರಾಲೋಚನೆಗಳೂ ದುರ್ವಚನಗಳೂ, ದೇವರ ಚಿತ್ತ ಅನ್ಯಥಾ ಆಗಿದ್ದ ಹೊರ್ತು, ದುಷ್ಕ್ರಿಯೆಗಳಿಗೆ ನಡಿಸುತ್ತವೆ. ಹಾಮಾನನು, ಅರಸನ ಆಜ್ಞೆ ದೇಶದೊಳಗೆ ಪ್ರಕಟಿಸಲ್ಪಡುವ ಹಾಗೆ, ಜಾಗ್ರತೆಯಾಗಿದ್ದನು. ಮತ್ತು ಅದರ ತರುವಾಯ ಮೊರ್ದೆಕಾಯನನ್ನು ಗಲ್ಲಿಗೆ ಹಾಕುವಂತೆ, ಫಾಶಿಕಂಭವನ್ನು ಸಹ ಹೂಡಿಸಿ ಇಟ್ಟನು.

ಆದರೆ, ಈ ದುರಾಲೋಚನೆಗಳೂ ದುರ್ವಚನಗಳೂ ದುಷ್ಕ್ರಿಯೆಗಳೂ ಹಾಮಾನನಿಗೆ ಏನು ಫಲ ಕೊಟ್ಟವೆಂದು ಕೇಳು! ಅವನು ದುಷ್ಟನೂ ಮೋಸಗಾರನೂ ಎಂದು ಅರಸನಿಗೆ ಕಂಡು ಬಂತು. ಆದ್ದರಿಂದ ಅರಸನು ಅವನನ್ನು ತಾನು ಮೊರ್ದೆಕಾಯನಿಗೆ ಮಾಡಿಸಿಟ್ಟ ಫಾಶಿಕಂಭದ ಮೇಲೆ ಗಲ್ಲಿಗೆ ಹಾಕಿಸಿದನು. ಆದದರಿಂದ ಇನ್ನೊಮ್ಮೆ ನಾನು ಹೇಳುತ್ತೇನೆ: ದುರಾಲೋಚನೆ, ದುರ್ವಚನ, ದುಷ್ಕ್ರಿಯೆಗಳು ಬಾರದಂತೆ ಜಾಗ್ರತೆಯಾಗಿರು!

ಈ ಮೂರು ದುರ್ವಿಷಯಗಳು ನಿನಗೆ ತಗಲದ ಹಾಗೆ ದೇವರೊಡನೆ ಬೇಡಿ ಕೊಳ್ಳುತ್ತಾ ಇರು! ಮತ್ತು "ದೇವರೇ, ನನ್ನನ್ನು ಶೋಧಿಸಿ, ನನ್ನ ಹೃದಯವನ್ನು ತಿಳುಕೋ; ನನ್ನನ್ನು ಪರೀಕ್ಷಿಸಿ, ನನ್ನ ಆಲೋಚನೆಗಳನ್ನು ತಿಳುಕೋ; ನನ್ನಲ್ಲಿ ದುಷ್ಟ ಮಾರ್ಗ ಉಂಟೇನೋ? ನೋಡಿ, ನಿತ್ಯ ಮಾರ್ಗದಲ್ಲಿ ನನ್ನನ್ನು ನಡಿಸು" (ಕೀರ್ತ. ೧೩೯, ೨೩. ೨೪.) ಎಂದೂ, "ನನ್ನ ಬಂಡೆಯೂ ನನ್ನ ವಿಮೋಚಕನೂ ಆಗಿರುವ ಯೆಹೋವನೇ, ನನ್ನ ಬಾಯಿಯ ಮಾತುಗಳೂ ನನ್ನ ಹೃದಯದ ಧ್ಯಾನವೂ ನಿನ್ನ ಮುಂದೆ ಮೆಚ್ಚಿಕೆಯಾಗಿರಲಿ! ಎಂದೂ, ನನ್ನ ಆಲೋಚನೆಗಳೂ ವಚನಗಳೂ ಕ್ರಿಯೆಗಳೂ, ಕ್ರಿಸ್ತ ಯೇಸುವಿಗೋಸ್ಕರ, ನಿನ್ನ ಪ್ರೇರೇಪಣೆಗೆ ಒಳಗಾಗಿರಲಿ! ಎಂದೂ ಬೇಡಿಕೋ.

ಚಮತ್ಕಾರವಾದ ಸ್ವಪ್ನ.

ಕ್ರೈಸ್ತ ಸಭೆಯೊಳಗೆ ಪ್ರೀತಿ ಇರ ಬೇಕೆಂಬುವದು ಅತ್ಯವಶ್ಯವಾಗಿರುತ್ತದೆ. ಸಭೆಯಲ್ಲಿ ಪ್ರೀತಿಯೇ ಮುಖ್ಯ ಬಂಧವಾಗಿರ ಬೇಕೆಂಬುವದು ದೇವರ ಚಿತ್ತ ಇರುವದರಿಂದ, ದೇವರ ವಾಕ್ಯದ ಅನೇಕ ಸ್ಥಳಗಳಲ್ಲಿ ಕ್ರೈಸ್ತರು ಏಕತ್ವದಿಂದಲೂ ಶಾಂತಿಯಿಂದಲೂ ಇರುವ ಹಾಗೆ ಬೋಧನೆ ಹೇಳಿಯದೆ. ನಮ್ಮ ಕರ್ತನಾದ ಯೇಸು ಕ್ರಿಸ್ತನು ಅನೇಕ ಸರ್ತಿ ವಿಶೇಷವಾಗಿ ತಾನು ಪರಲೋಕಕ್ಕೆ ಏರಿ ಹೋಗುವ ವೇಳೆಯಲ್ಲಿ ತನ್ನ ಶಿಷ್ಯರಿಗೆ ಒಬ್ಬರಿಗೊಬ್ಬರು ಪ್ರೀತಿ ಮಾಡುವದರ ವಿಷಯ ಬಹಳ ಆಸಕ್ತಿಯಿಂದ ಬೋಧನೆ ಹೇಳಿದನು. ಇದರ ಮೇಲಿಂದ ಕಾಣುವದೇನಂದರೆ, ಕ್ರೈಸ್ತರು ಪರಸ್ಪರ ಪ್ರೀತಿಯುಳ್ಳವರಾಗಿರದಿದ್ದರೆ, ಸಭೆಯು ಅವ್ಯವಸ್ಥವಾಗಿ ಅನರ್ಥಕ್ಕೆ ಕಾರಣವಾಗುವದೆಂದು ಪರಿಶುದ್ಧ ಮನುಷ್ಯರು ಅದರ ವಿಷಯ ಬಹಳ ಜಾಗ್ರತೆಯನ್ನು ತಕ್ಕೊಳ್ಳುತ್ತಾ ಇರುತ್ತಾರೆ. ಅದೇ ಪ್ರಕಾರ ಅಪೊಸ್ತಲನಾದ ಪೌಲನು ಇದರ ವಿಷಯ ಪುಷ್ಕಲ ಮಾತಾಡುತ್ತಾನೆ. ಇದನ್ನು ಕುರಿತು ದೇವರ ವಾಕ್ಯವನ್ನು ಓದುವವರಿಗೆ ಬಹಳ ಹೇಳುವದು ಅಗತ್ಯ ಕಾಣುವದಿಲ್ಲ. ಪೂರ್ವದ ಸಭೆಗಳಲ್ಲಿ ಅಪೊಸ್ತಲರ ಕಾಲದನಂತರ ಧರ್ಮಸಂಬಂಧವಾದ ಕಾರ್ಯದಲ್ಲಿ ಮುಖ್ಯಸ್ಥರಾಗಿದ್ದ ಮನುಷ್ಯರು ಸಭೆಯಲ್ಲಿ ಎಲ್ಲ ಸಹೋದರರ ಪ್ರೀತಿಯು ಐಶ್ವರ್ಯದಲ್ಲಿ ವೃದ್ಧಿಯಾಗ ಬೇಕೆಂದು ಬಹಳ ಪ್ರಯತ್ನ ಮಾಡಿದರು. ಆ ಸಭೆಗಳಲ್ಲಿ ಈ ಸದ್ಗುಣ ವಿಶೇಷವಾಗಿ ಬೆಳದು ಸ್ಥಿರವಾಗಿ ಆಶೀರ್ವಾದವನ್ನೀಯುವಂಥಾದ್ದಾಯಿತು. ಆದರೆ ಈಗಿನ ಕಾಲದ ಸಭೆಯಲ್ಲಿ ಈ ಸದ್ಗುಣ ಬಹಳ ಸ್ವಲ್ಪ ಮಾತ್ರ ಕಾಣುತ್ತದೆ. ಇದು ಬಹು ದುಃಖ ಕರಕರೆಯ ಸಂಗತಿಯೇ. ಸಾಮಾನ್ಯ ರೀತಿಯಿಂದ ನೋಡಿದರೆ, ಬಹಿರಂಗದ ಆಚಾರದಿಂದ ಸಭೆಯಲ್ಲಿ ಅಸೂಯೆ, ಶಿಟ್ಟು, ದ್ವೇಷ ಇತ್ಯಾದಿ ಉತ್ಪನ್ನವಾಗುತ್ತವೆ. ಸುಭಕ್ತಿಯ ವೇಷ ಮಾತ್ರ ಅದೆ; ಆದರೆ ಅದರ ಒಳಗಿನ ತತ್ವ ದೃಷ್ಟಿಗೆ ಬೀಳುವದಿಲ್ಲ. ಇಂಥಾ ರೀತಿಯಲ್ಲಿ ನಮ್ಮ ಸಹೋದರರಲ್ಲಿ ಒಬ್ಬನು ದುಃಖಿತನೂ ಚಿಂತಾಕ್ರಾಂತನೂ ಆಗಿ, ಗಾಢ ನಿದ್ರೆಯಲ್ಲಿ ಬಿದ್ದು, ಮುಂದೆ ಬರೆಯಲ್ಪಟ್ಟ ರೀತಿಯಲ್ಲಿ ಒಂದು ಸ್ವಪ್ನವನ್ನು ಕಂಡನು. ಅದೇನಂದರೆ—

ಸುಮಾರು ಮಧ್ಯರಾತ್ರಿಯಲ್ಲಿ ಒಮ್ಮಿಂದೊಮ್ಮೆ ಒಬ್ಬ ದೇವದೂತನು ಬಂದು, ಆ ನಮ್ಮ ಸಹೋದರನನ್ನು ಎಬ್ಬಿಸಿ, ದೂರವಾದ ಒಂದು ತಗ್ಗು ಸ್ಥಳಕ್ಕೆ ವೈದು ನಿಲ್ಲಿಸಿದನು. ಅಲ್ಲಿ ನಾಲ್ಕು ಕಡೆಯಲ್ಲಿಯೂ ಗಾಢಾಂಧಕಾರವು ಬಿದ್ದಿತ್ತು. ಅಲ್ಲಿ ಅವನು ತಾನು ಈಗ ಎಲ್ಲಿ ಇರುತ್ತೇನೆಂದು ನೋಡಲಿಕ್ಕೆ ಹತ್ತುವಷ್ಟರಲ್ಲಿ ಅಕಸ್ಮಾತ್ತಾಗಿ ದೊಡ್ಡ ಭಯಂಕರ ಧ್ವನಿ ಅವನ ಕಿವಿಗೆ ಬಿತ್ತು. ಇದರಿಂದ ಅವನು ಇಲ್ಲಿ ಎಲ್ಲಿಯಾದರೂ ಸಮೀಪದಲ್ಲಿಯೇ ಒಂದು ಅರಮನೆಯಾಗಲಿ ಕೋಟೆಯಾಗಲಿ ಇರ ಬಹುದು; ಅದರಲ್ಲಿ ಯಾವನಾದರೂ ಒಬ್ಬ ನಿರ್ಭಾಗ್ಯ ಮನುಷ್ಯನು ಅತ್ಯಂತ ಕ್ಲೇಶದಲ್ಲಿ ಬಿದ್ದಿರ ಬೇಕು ಎಂದು ತಿಳ ಕೊಂಡನು. ಅವನು ಆ ಶಬ್ದವನ್ನು ಕೇಳಿ ಕಳವಳಗೊಂಡನು. ದೂತನು ಅವನಿಗೆ "ದುಃಖ ಮಾಡುವ ಈ ಪುರುಷನ್ಯಾರು? ಮತ್ತು ಅವನು ಯಾವ ಠಿಕಾಣಿಯಲ್ಲಿರುತ್ತಾನೆ? ಹಾಂಗು ಅವನು ಇಂ

ಥಾ ಗೋಳಾಟವನ್ನು ಯಾಕೆ ಮಾಡುತ್ತಾನೆ? ಎಂಬದು ನಿನಗೆ ಗೊತ್ತುಂಟೋ?" ಎಂದು ಕೇಳಿದನು. ಆಗ ಅವನು ದೈನ್ಯ ಸ್ವರದಿಂದ "ಇಲ್ಲ ಸ್ವಾಮಿ, ನಿನಗೆ ಮಾತ್ರವೇ ಗೊತ್ತು ಇರ ಬಹುದು" ಅಂದನು. ದೂತನು ಹೇಳಿದ್ದು: "ಭಯ ಪಡ ಬೇಡ, ಇತ್ತ ಕಡೆ ಬಾ! ಈ ಕೋಟೆಯ ಬಾಗಲಲ್ಲಿ ನಿಂತು, ಈ ಸ್ಥಳದ ಹೆಸರೇನು? ಮತ್ತು ಅದರೊಳಗೆ ಯಾರು ಇದ್ದಾರೆ? ಏನು ಮಾಡುತ್ತಾರೆಂಬದನ್ನು ವಿಚಾರಿಸು." ಆಗಲವನು ಧೈರ್ಯ ಮಾಡಿಕೊಂಡು, ದೂತನು ಹೇಳಿದಂತೆ ಮಾಡಲಿಕ್ಕೆ ತೊಡಗಿದನು. ಆ ಕೋಟೆಯ ಬಾಗಲಲ್ಲಿ ನಿಂತು ಕೊಂಡು ಗಂಭೀರ ಸ್ವರದಿಂದ ಕೇಳಿದ್ದೇನಂದರೆ: "ಹೇ ಅಣ್ಣಾ, ಈ ಸ್ಥಳ ದಾವದು?"—ಒಳಗಿನಿಂದ "ಇದು ನರಕಲೋಕ, ಇಲ್ಲಿ ಅಗ್ನಿಯು ಎಂದೂ ಆರುವದಿಲ್ಲ; ಹುಳವು ಎಂದೂ ಸಾಯುವದಿಲ್ಲ" ಎಂಬ ಶಬ್ದ ಬಂತು. ಇದನ್ನು ಕೇಳುತ್ತಲೇ ಅವನ ಸರ್ವಾಂಗವು ಥರ ಥರ ನಡುಗಲಿಕ್ಕೆ ಹತ್ತಿತು. ಆದಾಗ್ಯೂ ಅಲ್ಲಿ ಗೋಳಾಡುವವನ್ಯಾರು? ಎಂತ ತಿಳಕೊಳ್ಳ ಬೇಕೆಂಬ ಇಚ್ಛೆಯಿಂದ ತಿರಿಗಿ ಅವನನ್ನು "ಹಾಗಾದರೆ ನೀನು ಯಾರು?" ಎಂದು ಕೇಳಿದನು. ಅವನು ಒಳಗಿನಿಂದ "ನಾನು ಮೂರ್ತಿಪೂಜಕನೂ ಎಲ್ಲಾ ಪಾಪದಲ್ಲಿ ಭ್ರಷ್ಟನಾದವನೂ ಆಗಿದ್ದೇನೆ" ಎಂದು ಉತ್ತರ ಕೊಟ್ಟನು. ತರುವಾಯ ಸ್ವಪ್ನಸ್ಥನು ಪುನಹ "ನಿಮ್ಮ ಮಧ್ಯದಲ್ಲಿ ಇನ್ನೂ ಯಾರಾದರೂ ಇದ್ದಾರೋ ಏನು?" ಎಂತ ಕೇಳಿದನು. ಅವನು "ಹೌದು, ನಮ್ಮಲ್ಲಿ ಕೆಲವರು ಚರ್ಚ ಆಫ್ ಇಂಗ್ಲಾಂಡ್, ಪ್ರೆಸ್‌ಬಿಟೇರಿಯನ್, ಮೆಥೊಡಿಸ್ಟ್, ವೆಸ್ಲಿಯನ್, ಬಾಪ್ಟಿಸ್ಟ್, ಕ್ವೆಕರ್ ಈ ಪ್ರಕಾರ ಅನೇಕ ತರದ ಮಂಡಲಿಯವರು ಕೂಡಿ ಇದ್ದೇವೆ. ಹಾಂಗು ನಾವು ನಮ್ಮ ನಮ್ಮ ಕರ್ಮಾನುಸಾರ ಶಿಕ್ಷೆಯನ್ನು ಅನುಭವಿಸುತ್ತಾ ಇದ್ದೇವೆ" ಎಂದು ಹೇಳಿದನು. ಇದನ್ನು ಕೇಳಿ ಈ ನಮ್ಮ ಸ್ವಪ್ನದರ್ಶಿ ಸ್ನೇಹಿತನು ಎದೆ ಬಡಕೊಂಡು ಗೋಳಾಡಲಿಕ್ಕೆ ಹತ್ತಿದನು. ಆದದರಿಂದ ದೇವದೂತನು ಸಮೀಪಕ್ಕೆ ಬಂದು, ಆ ಗೃಹಸ್ಥನಿಗೆ "ಮನುಷ್ಯನ ಮಗನೇ, ಅಳ ಬೇಡ!" ಎಂದು ಹೇಳಿ, ಅವನನ್ನು ಎಬ್ಬಿಸಿ, ತಿರಿಗಿ ದೂರ ಕರಕೊಂಡು ಒಂದು ಉನ್ನತ ಸ್ಥಳದ ಮೇಲೆ ನಿಲ್ಲಿಸಿದನು. ಅಲ್ಲಿ ಕತ್ತಲೆ ಇದ್ದಿಲ್ಲ. ಅಲ್ಲಿಯ ಮಹಿಮೆಯ ಪ್ರಕಾಶದಿಂದ ಆ ಸ್ಥಳವೆಲ್ಲ ಹೊಳೆಯುತ್ತಿತ್ತು. ಅಲ್ಲಿಯೇ ಒಂದು ಅತಿ ಸುಂದರವೂ ಶೋಭಾಯಮಾನವೂ ಆದಂಥಾ ಮಂದಿರವು ಅವನ ದೃಷ್ಟಿಗೆ ಬಿತ್ತು; ಅದರ ಸುತ್ತಮುತ್ತಲು ರಮಣೀಯವಾದ ವನವು ಇತ್ತು. ಅದು ಗಿಡ ಫಲ ಪುಷ್ಪ ಮುಂತಾದವುಗಳಿಂದ ತುಂಬಿ ಶೋಭಿಸುತ್ತಾ ಇತ್ತು; ಹಾಂಗು ಚಿನ್ನ, ಹವಳ, ಮಾಣಿಕ್ಯ, ಪಚ್ಚೆ, ಪುಷ್ಯರಾಗ, ನೀಲ, ಇತ್ಯಾದಿ ಅಮೂಲ್ಯ ವಸ್ತುಗಳಿಂದ ಝುಗಝುಗಿಸುತ್ತಿತ್ತು. ಮಂದಿರದೊಳಗಿಂದ ಮಧುರವಾದಂಥಾ ಸುಸ್ವರದ ಸಂತೋಷಕರವಾದಂಥಾ ಗಾಯನವು ಕೇಳ ಬರುತ್ತಿತ್ತು. ಆಗ ದೇವದೂತನು ಆ ಗೃಹಸ್ಥನಿಗೆ "ಮನುಷ್ಯನ ಮಗನೇ, ಈ ಮಂದಿರದ ಬಾಗಲಲ್ಲಿ ಹೋಗಿ ಈ ಸ್ಥಳದ ಹೆಸರೇನು? ಮತ್ತು ಇದರೊಳಗೆ ದಾವ ಜನರು ಇದ್ದಾರೆಂತ ವಿಚಾರಿಸು!" ಎಂದು ಹೇಳಿದನು. ಅದೇ ಪ್ರಕಾರ ಅವನು ಅತಿ ಆನಂದದಿಂದ ಮುಂದಕ್ಕೆ ಸಾಗಿ ಕೇಳಿದ್ದೇನಂದರೆ: "ಓ ಮಹಾರಾಜನೇ, ಈ ಸ್ಥಳದ ಹೆಸರೇನು?" ಒಳಗಿನಿಂದ "ಇದು ದೊಡ್ಡ ಅರಸನ ಪಟ್ಟಣವು, ಅಂದರೆ ಹೊಸ ಯೆರೂಸಲೇಮು, ಇಲ್ಲಿ ಪಾಪ ದುಃಖ ಮರಣ ಅಳುವಿಕೆ ಅಂಥ

ಕಾರ ಗಂಡಾಂತರ ಮುಂತಾದವುಗಳಲ್ಲಿ ಒಂದಾದರೂ ಇಲ್ಲವೆ ಇಲ್ಲ. ಇಲ್ಲಿ ಬರೇ ಸುಖ; ಅದು ಮಾರ್ಪಡದೆ ಕೆಡದೆ ಅನಂತ ಕಾಲ ಇರುತ್ತದೆ" ಎಂದು ಹೇಳಿದನು. ಸ್ವಪ್ನಸ್ಥನು ಪುನಹ "ನೀವು ಯಾರು? ಚರ್ಚ ಆಫ್ ಇಂಗ್ಲಾಂಡಿನವರೋ?" ಎಂದು ಪ್ರಶ್ನೆ ಮಾಡಿದನು. ಒಳಗಿನವನು "ಅಲ್ಲಾ!" ಎಂದು ಪ್ರತ್ಯುತ್ತರ ಕೊಟ್ಟನು. ಆಗಲವನು ಮತ್ತೂ "ಹಾಗಾದರೆ, ಪ್ರೆಸ್‌ಬಿಟೆರಿಯನ್ ಇದ್ಧಿಯಾ?" ಎಂದು ವಿಚಾರಿಸಿದನು. ಅವನು "ಇಲ್ಲಾ!"—"ಹೀಗಾದರೆ ಮೆಥೊಡಿಸ್ಟ್, ಬಾಪ್ಟಿಸ್ಟ್, ವೆಸ್ಲಿಯನ್, ಕ್ವೇಕರ್ ಇವುಗಳಲ್ಲಿ ಯಾವ ಮಂಡಲಿಯಲ್ಲಿ ಶೇರಿದವನು?"--"ನಾವು ಇದರಲ್ಲಿ ಯಾವ ಮಂಡಲಿಯಲ್ಲಿಯೂ ಇರಲಿಲ್ಲ" ಎಂತ ಹೇಳಿದನು. ಇದನ್ನು ಕೇಳಿ, ಈ ನಮ್ಮ ಗೆಳೆಯನು ಬಹಳ ವಿಚಾರದಲ್ಲಿ ಮುಳುಗಿದನು. ಆಗ ದೂತನು ಅವನಿಗೆ ಸೌಜ್ಞೆ ಮಾಡಿದ್ದೇನಂದರೆ, "ಹಾಗಾದರೆ ನೀವು ಯಾರು? ಎಂತ ಅವನನ್ನು ಕೇಳು." ಈ ಪ್ರಕಾರ ಅವನು ವಿಚಾರಿಸುವಾಗ, ಒಳಗಿನಿಂದ ಅತ್ಯಂತ ಮಂಜುಳ ಮತ್ತು ಪ್ರೇಮಯುಕ್ತವಾದ ಶಬ್ದದಿಂದ "ನಾವು ಕ್ರೈಸ್ತರು, ಕರ್ತನಾದ ಯೇಸುವಿನ ದಾಸರು; ನಮ್ಮ ಅಂಗಿಯನ್ನು ಕುರಿಮರಿಯ ರಕ್ತದಲ್ಲಿ ತೊಳದು ಶುದ್ಧ ಮಾಡಿ ಕೊಂಡವರಾಗಿದ್ಧೇವೆ. ಕರ್ತನಾದ ಯೇಸು ಕ್ರಿಸ್ತನಲ್ಲಿ ಯಾರು ಮನಃಪೂರ್ವಕವಾಗಿ ವಿಶ್ವಾಸ ಇಟ್ಟು ಆತನನ್ನು ಪ್ರೀತಿ ಮಾಡಿ ಆತನ ನಿಮಿತ್ತವಾಗಿ ಸಹೋದರರಲ್ಲಿ ಪರಸ್ಪರ ಪ್ರೀತಿ ಮಾಡುತ್ತಾರೋ, ಅವರಿಗೋಸ್ಕರ ಈ ಅಪ್ರತಿಮ ಸೌಖ್ಯಸ್ಥಾನವು ನಮ್ಮ ದಯಾಳು ಕರ್ತನಿಂದ ಸಿದ್ಧ ಮಾಡಿಯದೆ."

ಇಷ್ಟರಲ್ಲಿ ನಮ್ಮ ಸ್ವಪ್ನಸ್ಥ ಬಂದು ಎಚ್ಚರವಾದನು. ಅವನು ಈ ಚಮತ್ಕಾರವಾದ ಸ್ವಪ್ನದಿಂದ ಚಕಿತನಾಗಿ ಇದರ ಅರ್ಥ ಏನಾಗಿರುವದು? ಎಂತ ಆಲೋಚಿಸಲಿಕ್ಕೆ ತೊಡಗಿದನು. ಆಗ ನಿದ್ರೆ ಮಾಡುವದಕ್ಕಿಂತ ಮುಂಚೆ ತಾನು ಯಾವ ಆಲೋಚನೆಯಲ್ಲಿ ಚಿಂತಾಕ್ರಾಂತನಾಗಿದ್ದೆನು? ಎಂಬದರ ಜ್ಞಾಪಕವಾಯಿತು. ಈ ನಮ್ಮ ಸಹೋದರನಿಗೆ ಪೂರ್ವದಲ್ಲಿ ತನ್ನ ಸಭೆಯೇ ಯೋಗ್ಯವಾದದ್ದು, ಅದರಲ್ಲಿರುವವರು ಸತ್‌ಕ್ರೈಸ್ತರು; ಇದರಲ್ಲಿ ಶೇರದ ಹೊರ್ತು ರಕ್ಷಣೆ ಇಲ್ಲ ಎಂತ ತಿಳಕೊಂಡಿದ್ದನು. ಆದರೆ ಅದು ಈಗ ಈ ಸ್ವಪ್ನದಿಂದ ಹೀಗೆ ತಿಳಕೊಳ್ಳುವಂಥಾದ್ದು ತಪ್ಪು, ಕ್ರೂಜೆಗೆ ಹಾಕಲ್ಪಟ್ಟ ಯೇಸು ಕ್ರಿಸ್ತನಿಂದ ಹೊರ್ತು ರಕ್ಷಣೆಗೆ ಬೇರೆ ಆಧಾರ ಇಲ್ಲವೆಂತ ಅರಿಯುವಂಥವನಾದನು. ಯಾವನು ಆತನ ಮೇಲೆ ವಿಶ್ವಾಸ ಇಡುತ್ತಾನೋ ಅವನು ಪರಲೋಕಕ್ಕೆ ಹೋಗುತ್ತಾನೆ. ಹೀಗಿರುವದರಿಂದ ಸರ್ವರ ಮೇಲೆಯೂ ಪ್ರೀತಿ ಮಾಡುವದು ಯೋಗ್ಯವಾಗಿದೆ.

ಅವರು ಯಾರಂದರೆ ರಕ್ತಗಳಿಂದಲೂ ಮಾಂಸದ ಇಚ್ಛೆಯಿಂದಲೂ ಪುರುಷನ ಇಚ್ಛೆಯಿಂದಲೂ ಅಲ್ಲ, ದೇವರಿಂದಲೇ ಹುಟ್ಟಿದವರು.

(ಯೋಹಾ. ೧, ೧೩.)

ಈ ವಾಕ್ಯದ ಅಭಿಪ್ರಾಯವನ್ನು ಚನ್ನಾಗಿ ತಿಳು ಕೊಳ್ಳುವ ಹಾಗೆ ಅದರ ಹಿಂದಣ ಮಾತುಗಳನ್ನು ವಿಚಾರಿಸ ಬೇಕಾಗಿದೆ. ೧೧ನೇ ೧೨ನೇ ವಚನಗಳಲ್ಲಿ ಬರದದ್ದೇನಂದರೆ, ಸ್ವಂ

ತವಾದದ್ದಕ್ಕೆ ಬಂದನು. ಸ್ವಂತವಾದವರು ಅವನನ್ನು ಅಂಗೀಕರಿಸಲಿಲ್ಲ. ಆದರೆ ಅವನನ್ನು ಅಂಗೀಕರಿಸಿದವರಷ್ಟರಿಗೆ ದೇವರ ಮಕ್ಕಳಾಗುವ ಅಧಿಕಾರವನ್ನು ಕೊಟ್ಟನು. ಅವರ್ಯಾರಂದರೆ, ಅವನ ಹೆಸರನ್ನು ವಿಶ್ವಾಸಿಸುವವರು. ಇದರಲ್ಲಿ ಎರಡು ತಾತ್ಪರ್ಯ: ೧, ಅವನ ಸ್ವಜನರಲ್ಲಿ ಒಬ್ಬರು, ಅವನು ಬಂದಾಗ, ಅವನನ್ನು ತಳ್ಳಿದರು; ೨, ಅವನ ಸ್ವಜನರಾದ ಮತ್ತೊಬ್ಬರು ಅವನನ್ನು ಅಂಗೀಕರಿಸಿ ಮಾನಮರ್ಯಾದೆ ಮಾಡಿದರು. ತನ್ನನ್ನು ತಳ್ಳಿದವರನ್ನು ಬಿಟ್ಟು ದಾಟುತ್ತಾನೆ. ತನ್ನನ್ನು ಅಂಗೀಕರಿಸಿದವರಿಗೆ ದೇವರ ಮಕ್ಕಳಾಗುವ ಅಧಿಕಾರವನ್ನು ಕೊಡುತ್ತಾನೆ. ಈ ಪದವಿ ಇದಕ್ಕೆ ಇದ್ದ ಹಾಗೆ ಒಬ್ಬರಿಗೆ ಬರುವದು ಒಬ್ಬರಿಗೆ ಬರುವದಿಲ್ಲವೆಂದು ಯಾರೂ ನೆನಸದ ಹಾಗೆ, ಇವರು ರಕ್ತಗಳಿಂದಲೂ ಮಾಂಸದ ಇಚ್ಛೆಯಿಂದಲೂ ಪುರುಷನ ಇಚ್ಛೆಯಿಂದಲೂ ಅಲ್ಲ, ದೇವರಿಂದಲೇ ಹುಟ್ಟಿದರು ಎಂದು ಬರದದೆ. ಅವನನ್ನು ಅಂಗೀಕರಿಸಿದವರು, ರಕ್ತ ಮಾಂಸಗಳಿಂದಲೇ ಹುಟ್ಟಿದವರಾಗಿದ್ದರು. ಅವನನ್ನು ಅಂಗೀಕರಿಸುವವರು ದೇವರು ಅವರ ತಂದೆಯಾಗಿರುವದರಿಂದ, ಕ್ರಿಸ್ತನ ವಾಕ್ಯವನ್ನು ಮಹಾ ಕಾಂಕ್ಷೆಯಿಂದ ಅಂಗೀಕರಿಸುತ್ತಾರೆ.

ಹೊಸತಾಗಿ ಹುಟ್ಟಿದವರೇ ಕ್ರಿಸ್ತನವರು.

I. ನವಜನ್ಮದ ಹೊಸ ಹುಟ್ಟುವಿಕೆಯ ವಿಷಯವಾಗಿ ದೇವರ ಆತ್ಮವು ನಮ್ಮ ವಚನದಲ್ಲಿ ಕೊಟ್ಟ ಸಾಕ್ಷಿಯ ಅರ್ಥವೇನಂದರೆ:

೧. ರಕ್ತಗಳಿಂದ ಹುಟ್ಟಿದವರಲ್ಲ ಅಂದರೆ, ವಿಶ್ವಾಸಿಗಳು ಒಂದು ಜಾತಿ. ವಿಶ್ವಾಸವು ಒಂದು ಹುಟ್ಟುಗುಣ. ರಕ್ತಗಳಿಂದಲೇ ಹುಟ್ಟಿದವರಲ್ಲಿ ವಿಶ್ವಾಸವಿಲ್ಲ. ಪರಲೋಕರಾಜ್ಯಕ್ಕೆ ಬಾಧ್ಯವಾದ ಮಾಂಸಜನ್ಯ ಕುಲ ಲೋಕದಲ್ಲಿ ಇಲ್ಲ. ಭಕ್ತರಾದ ಹಿರಿಯರ ವಂಶದಲ್ಲಿ ಹುಟ್ಟುವದೇ ಸಾಲದು. ಸ್ವಭಾವದ ಪ್ರಕಾರ ಭೂಲೋಕದಲ್ಲಿ ಇರುವ ಎಲ್ಲಾ ಮನುಷ್ಯರು ಮೂಲತಂದೆಯಾದ ಆದಮನಿಂದಲೂ ಜಲಪ್ರಳಯದಲ್ಲಿ ಜೀವ ಉಳಿಸಿ ಕೊಂಡ ನೋಹನಿಂದಲೂ ಹುಟ್ಟಿದದರಿಂದ, ಅವರ ಸ್ವಭಾವದಲ್ಲಿ ವ್ಯತ್ಯಾಸವೇನೂ ಇಲ್ಲ. ಈ ಲೆಖ್ಖದಲ್ಲಿ ಎಲ್ಲರೂ ಒಂದೇ ಜಾತಿಯಾಗಿದ್ದಾರೆ. ಲೋಕಾಚಾರದ ಲೆಖ್ಖದಲ್ಲಿ ನಾನಾ ಜಾತಿಗಳುಂಟು. ಆ ಜಾತಿಗಳೊಳಗೆ ಬಹು ವಿಧದ ತಾರತಮ್ಯವದೆ. ಈ ತಾರತಮ್ಯವು ದೇವರ ದೃಷ್ಟಿಯಲ್ಲಿ ಸಲ್ಲುವದಿಲ್ಲ. ಯಾಕಂದರೆ ಅವನು ಒಂದೇ ರಕ್ತದಿಂದ ಎಲ್ಲಾ ಜನಾಂಗಗಳನ್ನು ಉಂಟು ಮಾಡಿದ್ದಾನೆಂದು ಅಪೊ. ಕ್ರಿ. ೧೭, ೨೬ರಲ್ಲಿ ಬರದದೆ. ದೇವರ ಲೆಖ್ಖದಲ್ಲಿಯೂ ಒಂದು ಕುಲಭೇದ ಉಂಟು; ಯಾಕಂದರೆ ದೇವರು ಅಬ್ರಹಾಮನನ್ನೂ ಅವನ ಬೀಜವನ್ನೂ ಆದು ಕೊಂಡು, ಈ ಕುಲದ ಸಂಗಡ ಕೃಪೆಯ ಒಡಂಬಡಿಕೆಯನ್ನು ಮಾಡಿಕೊಂಡನು. ಹೀಗಿರಲಾಗಿ, ಯೋಹಾನನು ರಕ್ತಗಳಿಂದ ಹುಟ್ಟಿದ ಕ್ರಮದ ಪ್ರಕಾರ ಮನುಷ್ಯರು ದೇವರ ರಾಜ್ಯದಲ್ಲಿ ಶೇರುವದು ಇಲ್ಲವೆಂದು ಹೇಳಿದರೆ, ಅವನ ಅಭಿಪ್ರಾಯವೇನಂದರೆ, ಲೋಕದಲ್ಲಿ ಹೆಸರ್ಗೊಂಡ ಕುಲಗಳವರು ಯೇಸುವನ್ನು ನಂಬಿ ಪರಲೋಕ ರಾಜ್ಯದಲ್ಲಿ ಶೇರಲಿಕ್ಕೆ ಹೆಚ್ಚು ತಕ್ಕವರಲ್ಲ. ಅಬ್ರಹಾಮನ ಕುಲದವರು ಸಹ ಅಬ್ರಹಾಮನು

ನಮ್ಮ ತಂದೆಯಾಗಿರುವದರಿಂದ, ಪರಲೋಕ ರಾಜ್ಯವು ನಮ್ಮದೆಂದು ಹೇಳ ಕೆಲಸವಿಲ್ಲ. ರಕ್ತಜಾತಿ ನಿರರ್ಥಕವಾದದ್ದು.

೨. ಮಾಂಸದ ಇಚ್ಛೆಯಿಂದ ಹುಟ್ಟಿದವರಲ್ಲವೆಂಬುವದೇನು? ಮಾಂಸದ ಇಚ್ಛೆ ಎಂಬುವದಕ್ಕೆ ಎರಡು ಅರ್ಥವದೆ: ಸ್ವಾಭಾವಿಕವಾದ ಮನುಷ್ಯನ ದೇಹದಲ್ಲಿ ದೇವರು ನಿರ್ಮಿಸಿದ ಭಾವದ ಪ್ರಕಾರ ಹುಟ್ಟುವ ಇಚ್ಛೆಗಳಿಗೆ ಮಾಂಸದ ಇಚ್ಛೆಗಳೆಂಬ ಹೆಸರು ಬರುತ್ತದೆ. ಈ ಅಭಿಪ್ರಾಯದ ಮಾಂಸದ ಇಚ್ಛೆಗಳಲ್ಲಿ ಪಾಪವು ಉಂಟೆಂದು ಹೇಳಿದರೆ, ಸಮವಲ್ಲ. ದೇವರು ನಿರ್ಮಿಸಿದ ಭಾವದಲ್ಲಿಯೂ ನೇಮದಲ್ಲಿಯೂ ತಪ್ಪು ಹಿಡಿಯುವದು ನ್ಯಾಯವಲ್ಲ. ೨ನೇ ಅರ್ಥವು ಯಾವದೆಂದರೆ, ಲೋಕದಲ್ಲಿ ಪ್ರಬಲವಾದ ಕಾಮವಿಕಾರದಿಂದ ಹುಟ್ಟುವ ದುರಿಚ್ಛೆಗಳಿಗೂ ಅವುಗಳ ಫಲವಾದ ಮೋಹ ಕುಚೇಷ್ಟೆ ಜಾರತ್ವ ಮೊದಲಾದ ಪಾಪಗಳಿಗೂ ಮಾಂಸದ ಇಚ್ಛೆಗಳೆಂಬ ಹೆಸರು ಬರುತ್ತದೆ. ಇದೆಲ್ಲಾ ಪಾಪವಲ್ಲವೆಂದು ಹೇಳಿದರೆ, ಸಮವಲ್ಲ. ಮನುಷ್ಯರು ಪಾಪದಲ್ಲಿ ಬಿದ್ದು ತಮ್ಮ ಆತ್ಮ ಶರೀರಗಳ ಭಾವಗಳನ್ನು ಕೆಡಿಸಿದದರಿಂದ, ಸ್ವಾಭಾವಿಕವಾದ ದೇಹೇಚ್ಛೆಗಳಿಗೂ ಪಾಪ ಹತ್ತುತ್ತದೆ. ಹೀಗಿರಲಾಗಿ ಮೇಲೆ ಬರದ ಮಾತಿನ ಅರ್ಥವು ಏನಂದರೆ: ದೇವರ ಮಕ್ಕಳಾಗಿ ಪರಲೋಕ ರಾಜ್ಯವನ್ನು ಪಡ ಕೊಳ್ಳ ಬೇಕಾದರೆ, ದುಷ್ಟರಾದ ತಂದೆತಾಯಿಗಳಿಂದ ಆಗಲಿ ಭಕ್ತರಾದ ತಂದೆತಾಯಿಗಳಿಂದ ಆಗಲಿ ಹುಟ್ಟಿರುವದು ಸಾಲದು.

೩. ಪುರುಷನ ಚಿತ್ತದಿಂದ ಹುಟ್ಟಿದವರಲ್ಲವೆಂಬುವದೇನು?

ಲೋಕದಲ್ಲಿರುವ ಮನುಷ್ಯರಲ್ಲಿ ಎರಡು ತರದ ಮನಸ್ಸು ಉಂಟು. ಮನುಷ್ಯನು ದೇವರ ನಿರ್ಮಾಣವಾಗಿರುವದರಿಂದಲೂ ದೇವರ ನ್ಯಾಯವು ಅವನ ಹೃದಯದಲ್ಲಿ ಪ್ರಕಟವಾಗಿರುವದರಿಂದಲೂ ದೇವರಿಗೂ ದೇವರ ನ್ಯಾಯಕ್ಕೂ ಒಪ್ಪುವ ಸಹಜವಾದ ಒಳ್ಳೇ ಮನಸ್ಸು ಅವನಲ್ಲಿ ಉಂಟು. ಆದಾಮನು ಪಾಪದಲ್ಲಿ ಬಿದ್ದಂದಿನಿಂದ ದೇವರ ದ್ರೋಹಿಯಾದ ಮನುಷ್ಯನು ಪಾಪಿಯಾಗಿರುವದರಿಂದ, ದೇವರಿಗೂ ದೇವರ ನ್ಯಾಯಕ್ಕೂ ವಿರೋಧವಾದ ಪಾಪಮಯವಾದ ಸಹಜವಾದ ಕೆಟ್ಟ ಮನಸ್ಸು ಅವನಲ್ಲಿ ಉಂಟು. ಈ ಎರಡು ವಿಧವಾದ ಮನಸ್ಸು ಎಲ್ಲಾ ಮನುಷ್ಯರಲ್ಲಿ ತೋರುತ್ತದೆ. ಉತ್ತಮವಾದ ಭಕ್ತರಲ್ಲಿ ಆದರೂ ಕೆಟ್ಟ ಮನಸ್ಸಿನ ದೋಷವು ಪೂರ್ಣವಾಗಿ ಅಳಿದು ಹೋಗುವದು ಇಲ್ಲ. ಅಗದಿ ಕೆಟ್ಟು ಹೋದ ಪಾತಕಿಯಲ್ಲಿಯೂ ಒಳ್ಳೇ ಮನಸ್ಸಿನ ಮೂಲವಾದ ಮನಸ್ಸಾಕ್ಷಿಯು ಅಳಿದು ಹೋಗಲಿಕ್ಕಿಲ್ಲ. ಆ ಆ ದುಷ್ಟ ಅಪರಾಧಿಗಳು ಸಹ ಆಗಾಗ್ಯೆ ಸನ್ಮಾರ್ಗದಲ್ಲಿ ನಡೆದು ಮುಕ್ತಿಯ ಪಡ ಕೊಳ್ಳ ಬೇಕೆಂದು ಇಚ್ಛೈಸುತ್ತಾರೆ. ನಿಜಭಕ್ತನಲ್ಲಿ ಮೋಕ್ಷದ ಆಶೆ ಹೆಚ್ಚು ಹೆಚ್ಚಾಗಿ ಬಲಗೊಳ್ಳುತ್ತದೆ. ಇಷ್ಟಾರ್ಥವನ್ನು ಹೊಂದುವದಕ್ಕೆ ಭಕ್ತನು ದೇವರ ನ್ಯಾಯವನ್ನು ಕೈಕೊಂಡು, ಪಾಪವನ್ನು ಹಗೆ ಮಾಡಿ, ನೀತಿವಂತನಾಗಿ ನಡ ಕೊಳ್ಳಲಿಕ್ಕೆ ಮನಃಪೂರ್ವಕವಾಗಿ ಯತ್ನ ಮಾಡುತ್ತಾನೆ. ಆದರೆ ದುಷ್ಟ ಪಾಪಿಗಳಲ್ಲಿ ಹುಟ್ಟುವ ವ್ಯರ್ಥವಾದ ಮೋಕ್ಷದ ಇಚ್ಛೆಯಿಂದಾದರೂ, ಭಕ್ತರಾದ ನೀತಿವಂತರು ಮುಕ್ತಿಯಾಸಕ್ತಿಯಿಂದ ನಡಿಸುವ ಪುಣ್ಯ ಧರ್ಮಗಳಿಂದಾದರೂ ದೇವರ ಮಕ್ಕಳಾಗಿ, ಪರಲೋಕರಾಜ್ಯವನ್ನು ಪ

ಡ ಕೊಳ್ಳುವ ಯೋಗ್ಯತೆ ಸಾರ್ಥಕವಾಗುವದು ಇಲ್ಲ. ಸ್ವಭಾವಬಲವು ಸಾಲದು, ದೇವರ ಕೃಪೆಯೂ ದೇವರ ಆತ್ಮವೂ ಬೇಕು. ದೇವರ ಆತ್ಮವನ್ನೂ ಕೃಪೆಯನ್ನೂ ಹೊಂದದವನು ಮುಮುಕ್ಷುವಾಗಿದ್ದರೂ, ದೇವರ ಮನಸ್ಸಿಗೆ ಪೂರ್ಣಾನುಕೂಲವಾಗ ಕೂಡದು. ಯಾಕಂದರೆ, ಸ್ವಭಾವಗುಣದಿಂದ ಸ್ವಭಾವಧರ್ಮವೇ ಹುಟ್ಟುತ್ತದೆ. ದೇವರ ಕಾರ್ಯಗಳನ್ನು ದೇವರ ಆತ್ಮದ ಹೊರ್ತು ಯಾರೂ ತಿಳ ಕೊಳ್ಳಲಾರರು. ದೇವರ ಆತ್ಮವು ನಿಮ್ಮಲ್ಲಿ ಇಲ್ಲದಿದ್ದರೆ, ಪರಲೋಕರಾಜ್ಯದಲ್ಲಿ ನಿಮಗೆ ಪ್ರವೇಶವಿಲ್ಲ. ಹೀಗಾಗಿರುವದರಿಂದ ದೇವರ ಮಕ್ಕಳಾಗುವ ಅಧಿಕಾರವನ್ನು ಹೊಂದುವವರ್ಯಾರು? ರಕ್ತಗಳಿಂದ ಹುಟ್ಟಿದವರಲ್ಲ, ಮಾಂಸೇಚ್ಛೆಯಿಂದ ಹುಟ್ಟಿದವರಲ್ಲ, ಪುರುಷನ ಇಚ್ಛೆಯಿಂದ ಹುಟ್ಟಿದವರಲ್ಲ, ದೇವರಿಂದ ಹುಟ್ಟಿದವರೇ; ದೇವರ ಚಿತ್ತವೇ ಹೊಸ ಜನನದ ಮೂಲವಾಗಿದೆ. ಮನುಷ್ಯರ ಇಚ್ಛೆ ಎಷ್ಟೋ ಒಳ್ಳೇದೂ ಎಷ್ಟೋ ಬಲವಾದದ್ದೂ ಆಗಿದ್ದರೂ, ವ್ಯರ್ಥವಾಗಿದೆ. ನನ್ನ ಇಚ್ಛೆಯಿಂದ ನನ್ನ ಇಷ್ಟಾರ್ಥವು ಪ್ರಾಪ್ತವಾದರೆ, ನೀವೆಲ್ಲರು ಒಟ್ಟಾಗಿ ಮುಕ್ತಿ ಪಡ ಕೊಳ್ಳುವಿರಿ. ತಂದೆ ತಾಯಿಗಳಿಂದ ಎಷ್ಟೋ ಮಂದಿ ಮಕ್ಕಳ ರಕ್ಷಣೆಗಾಗಿ ಪ್ರಾರ್ಥನೆ ಮಾಡುತ್ತಾ ಅತಿ ಕಾಂಕ್ಷೆಯಿಂದ ಮೊರೆ ಇಡುತ್ತಾ ಪ್ರಾಣದ ಆಶೆ ಬಿಟ್ಟು ಬಿನ್ನಹ ಮಾಡುತ್ತಾ ಬರುತ್ತಾರೆ. ಆದಾಗ್ಯೂ ಅನೇಕರಿಗೆ ಇಷ್ಟಾರ್ಥವು ಸಿಕ್ಕುವದಿಲ್ಲ. ಯೇಸು ಕ್ರಿಸ್ತನ ಮುಖಾಂತರ ಉಂಟಾಗುವ ದೇವರ ಚಿತ್ತವೇ ಸಾರ್ಥಕವಾದದ್ದು.

II. ಇದರಿಂದ ಹುಟ್ಟುವ ಬೋಧನೆಯನ್ನು ಈಗ ವಿವರಿಸುತ್ತೇನೆ, ಕೇಳಿರಿ! ಯೇಸು ಕ್ರಿಸ್ತನನ್ನು ನಿಜವಾಗಿ ಅಂಗೀಕರಿಸುವ ಹಾಗೆ ಆತನಲ್ಲಿ ವಿಶ್ವಾಸವಿಡುವವರು ಯಾರಂದರೆ, ಇದಕ್ಕೆ ಹುಟ್ಟಿದವರು. ಹುಟ್ಟುವವರೆಂದು ಹೇಳದೆ, ಹುಟ್ಟಿದವರೆಂದು ಕರ್ತನು ಹೇಳುತ್ತಾನೆ. ಮೊದಲು ದೇವರಿಗಾಗಿಯೂ ದೇವರ ರಾಜ್ಯಕ್ಕಾಗಿಯೂ ಹುಟ್ಟಿದ ಬಳಿಕ ಮನುಷ್ಯರು ದೇವರಿಂದಾಗುವ ನಿತ್ಯ ರಕ್ಷಣೆಯನ್ನು ಪಡ ಕೊಳ್ಳುತ್ತಾರೆ. ಹೊಸ್ತಾಗಿ ಹುಟ್ಟಿದ ಹೊರ್ತು ಯಾರೂ ದೇವರ ರಾಜ್ಯವನ್ನು ನೋಡಲಾರರು. ಹಾಗಾದರೆ, ದೇವರಿಂದ ಹುಟ್ಟದೆ ಇರುವವನು ಅದನ್ನು ನೋಡಲಾರನು. ದೇವರ ರಾಜ್ಯವು ಏನಾಗಿದ್ದರೂ ದೇವರಿಂದ ಹುಟ್ಟಿರುವದಕ್ಕಿಂತ ಮುಂಚೆ ಮನುಷ್ಯನು ಅದನ್ನು ನೋಡಲಾರನು. ದೇವರ ರಾಜ್ಯವು ಸುವಿಶೇಷದ ಮನೆವಾರ್ತೆಯಾಗಿದ್ದರೆ, ಇದನ್ನು ನೋಡಲಿಕ್ಕೆ ನವಜನ್ಮ ಸ್ಥಿತಿಯಲ್ಲಿ ಸೇರದೆ ಇರುವವನಿಗೆ ಅಸಾಧ್ಯವಾಗಿದೆ. ವಿಶ್ವಾಸವು ನವಜನ್ಮದ ಫಲವಾಗಿದೆ. ರಕ್ತಗಳಿಂದಲೂ ಮಾಂಸದ ಇಚ್ಛೆಯಿಂದಲೂ ಪುರುಷನ ಇಚ್ಛೆಯಿಂದಲೂ ಅಲ್ಲ, ದೇವರಿಂದಲೇ ಹುಟ್ಟಿದವರು ವಿಶ್ವಾಸಿಸುತ್ತಾರೆ. ಈಗ ನವಜನ್ಮದ ಭಾವವನ್ನೂ ದೇವರಿಂದ ಹುಟ್ಟಿದವರ ಲಕ್ಷಣಗಳನ್ನೂ ಕೆಲವು ಸಾಮ್ಯಗಳಿಂದ ವರ್ಣಿಸುವ.

೧. ನವಜನ್ಮದ ಭಾವವು.

೧. ಮಗು ಲೋಕದಲ್ಲಿ ಹುಟ್ಟುವದಕ್ಕಿಂತ ಮುಂಚೆ ತಾಯಿಯ ಬಸುರಿನ ಕತ್ತಲಾದ ಶೆರೆಯಲ್ಲಿ ಇರುವ ಪ್ರಕಾರ ದೇವರ ಮಗು ಹೊಸತಾಗಿ ಹುಟ್ಟುವದಕ್ಕಿಂತ ಮುಂಚೆ

ಪಾಪವೆಂಬ ಕತ್ತಲಾದ ಶೆರೆಯಲ್ಲಿ ಇರುತ್ತದೆ. ಜೀವಾತ್ಮವು ಸ್ವಭಾವಿಕ ಸ್ಥಿತಿಯಲ್ಲಿ ಇರುವಾಗ, ಒಂದು ವಿಧದ ಪ್ರೀತಿಯುಳ್ಳದ್ದಾಗಿದೆ; ಮರಳಿ ಹುಟ್ಟಿದ ಮೇಲೆ ಮತ್ತೊಂದು ವಿಧದ ಪ್ರೀತಿಯುಳ್ಳದ್ದಾಗುತ್ತದೆ.

೨. ದೇವರ ವಾಕ್ಯವು ನವಜನ್ಮವನ್ನು ತಾಯಿಯ ಬಸುರಿನಿಂದ ಹುಟ್ಟುವ ಮಗುವಿಗೆ ಹೋಲಿಸುವ ಪ್ರಕಾರ ಸಮಾಧಿಯಿಂದ ಏಳುವ ಮನುಷ್ಯನಿಗೂ ಹೋಲಿಸುತ್ತದೆ; ಹೊಸತಾಗಿ ಹುಟ್ಟುವವನು ಪಾಪಸಮಾಧಿಯಿಂದ ಏಳುತ್ತಾನೆಂದು ಬರದದೆ. ನಿದ್ರೆ ಮಾಡುವವನೇ, ಯಚ್ಚರವಾಗು! ಸತ್ತವರೊಳಗಿಂದ ಏಳು! ಕ್ರಿಸ್ತನು ನಿನಗೆ ಪ್ರಕಾಶವಾಗುವನು (ಎಫೆ. ೫, ೧೪.) ಪಾಪಸಮಾಧಿಯಿಂದ ಏಳುವದು ಎಂಬುವದಕ್ಕೂ ದೇವರ ಆತ್ಮದಿಂದ ತಿರಿಗಿ ಹುಟ್ಟುವದು ಎಂಬುವದಕ್ಕೂ ಒಂದೇ ಅಭಿಪ್ರಾಯ. ಪ್ರಕಟಣೆಯ ಮೊದಲನೇ ಸಂಧಿಯ ೫ನೆಯಲ್ಲಿ ಕ್ರಿಸ್ತನ ವಿಷಯವಾಗಿ ಒಂದು ಘನವಾದ ಮಾತು ಬರುತ್ತದೆ. ಅವನು ಸತ್ತವರಿಂದಾದ ಚೊಚ್ಚಲವನು ಎಂದು ಹೆಸರ್ಗೊಳ್ಳುತ್ತಾನೆ. ಇದಕ್ಕೆ ನಮ್ಮ ಪುನರ್ಜನ್ಮವು ಒಪ್ಪುತ್ತದೆ; ಹ್ಯಾಗಂದರೆ, ಮನುಷ್ಯನು ತಿರುಗಿ ಹುಟ್ಟಿದವನಾಗಿ ಮೇಲಿನ ಕಾರ್ಯಗಳನ್ನು ನೋಡಿದರೆ, ಕ್ರಿಸ್ತನ ಪುನರುತ್ಥಾನಕ್ಕೆ ಸರಿ ಬೀಳುವ ಪುನರ್ಜನ್ಮವುಂಟಾಯಿತು. ದೇವರ ಮಕ್ಕಳು ಈ ಕತ್ತಲಾದ ಲೋಕವೆಂಬ ಸಮಾಧಿಯಿಂದ ಎದ್ದು, ಆತನ ಪ್ರೀತಿಯ ಮಗನ ರಾಜ್ಯದಲ್ಲಿ ಶೇರಿದವರಾಗಿ, ಹೊಸ ಜೀವವನ್ನು ಹೊಂದುತ್ತಾರೆ. ಅದು ಪುನರ್ಜನ್ಮದ ಅಭಿಪ್ರಾಯ. ತಾಯಿಯ ಬಸುರಿನಿಂದ ಹೊರಗಾಗುವವನು ತಾಯಿಯ ಸಹಾಯದಿಂದ ಲೋಕದಲ್ಲಿ ಶೇರುವಂತೆ, ದೇವರಿಂದ ಹುಟ್ಟುವವನು ದೇವರ ಆತ್ಮದ ಸಹಾಯದಿಂದ ಪರಲೋಕರಾಜ್ಯದಲ್ಲಿ ಶೇರುತ್ತಾನೆ.

೨. ದೇವರಿಂದ ಹುಟ್ಟಿದವರ ಲಕ್ಷಣಗಳು.

೧ ಕೂಸು ಭೂಪತನವಾದ ಕೂಡಲೇ ಅಳುತ್ತದೆ; ಕೂಗದೆ ಇದ್ದರೆ ಮಗು ಸತ್ತು ಹೋಯಿತೆಂದು ಹೇಳುತ್ತಾರೆ. ದೇವರಿಂದ ಹುಟ್ಟಿದವರೆನ್ನಿಸಿ ಕೊಳ್ಳುವ ಕ್ರೈಸ್ತರೇ, ನೀವು ಅಳುಗುಣಿಗಳಲ್ಲದೆ ಇದ್ದರೆ, ಆತ್ಮೀಕ ಜೀವವಿಲ್ಲದವರಾಗಿದ್ಧೀರಿ. ದೇವರಿಂದ ಹುಟ್ಟಿದಿರಾದರೆ, ಕೂಗುಳಿಗಳಾಗಿದ್ಧೀರಿ. ದೇವರು ನಿಮ್ಮನ್ನು ಪಾಪವೆಂಬ ಕತ್ತಲಾದ ಶೆರೆಯಿಂದ ಬಿಡಿಸಿದ ಕೂಡಲೇ ಆತನಿಗೆ ಮೊರೆ ಇಟ್ಟು, ರಕ್ಷಣೆಯನ್ನು ಹೊಂದುವದಕ್ಕೆ ಏನು ಮಾಡ ಬೇಕೆಂದು ಕೂಗದೆ ಇರಲಾರಿರಿ. ದೇವರು ಆ ಶೆರೆ ಯಜಮಾನನ ಹೃದಯವನ್ನು ಮುಟ್ಟಿದ ಸಂಗಡಲೇ ಅವನು, ಸಹೋದರರಾದ ಮನುಷ್ಯರೇ, ರಕ್ಷಣೆಯನ್ನು ಹೊಂದುವ ಹಾಗೆ ನಾನೇನು ಮಾಡ ಬೇಕು? ಎಂದು ಕೂಗಿದನಲ್ಲ! ಐಯ್ಯೋ ದೇವರಿಗೆ ಮೊರೆ ಇಡದೆ ಪ್ರಾರ್ಥನೆ ಇಲ್ಲದ ಸಭೆಯವರು ಎಷ್ಟೋ ಮಂದಿಯಕಟಾ! ಸಾರಾಯಿ ಅಂಗಡಿಗಳು ನಿಮ್ಮನ್ನು ತಡಿಸುತ್ತವೆ; ವ್ಯಾಪಾರಗಳು ಪ್ರಾರ್ಥನೆಗೆ ಅಟಕಾಯಿಸುತ್ತವೆ; ಅಶನವಸನ ಹೊನ್ನು ಹೆಣ್ಣಾದಿಗಳು ಪ್ರಾರ್ಥನೆ ಮಾಡುವದಕ್ಕೆ ನಿಮ್ಮನ್ನು ಬಿಡುವದಿಲ್ಲ. ನೀವು ದೇವರಿಂದ ಹುಟ್ಟಿದವರಾಗಿದ್ದರೆ, ತಂದೆಗೆ ಮೊರೆ ಇಡುತ್ತಾ ಇರುವಿರಿ.

೨. ಅಳುವದನ್ನಲ್ಲದೆ ಮೊಲೆ ಹುಡುಕುವದು ಸಹ ಕೂಸಿಗೆ ಸಹಜವಾದದ್ದು. ಮೊಲೆಯನ್ನಲ್ಲದೆ ಕೂಸು ಬದುಕಲಾರದು. ಆದದರಿಂದ ಪೇತ್ರನು ಅದರಿಂದ ಬೆಳೆಯುವ ಹಾಗೆ ವಾಕ್ಯದ ಅಪೂಟ ಹಾಲಿಗೆ ಬಾಯಾರುವದು ಹೊಸತಾಗಿ ಹುಟ್ಟಿದ ಕೂಸಿಗೆ ನಿಜ ಲಕ್ಷಣವೆಂದು ಹೇಳುತ್ತಾನೆ. ಹಾಗಾದರೆ ನೀವು ದೇವರಿಂದ ಹುಟ್ಟಿದ್ಧೀರೆಂಬುವದಕ್ಕೆ ದೇವರ ವಾಕ್ಯದ ಮೊಲೆ ಹುಡುಕುವದರಿಂದ ದೃಷ್ಟಾಂತ ಕೊಡಿರಿ. ಲೌಕೀಕನ ಜೀವನವು ಬೇರೆ, ಯೇಸು ಕ್ರಿಸ್ತನನ್ನು ಹೊಂದಿದ ಕ್ರೈಸ್ತನ ಜೀವನವು ಬೇರೆ. ಯೆಶಾಯ ೪೬ನೇ ಸಂಧಿ. ದೇವರ ಮಕ್ಕಳಿಗೆ ದಿವ್ಯಾಹಾರ ಬೇಕು. ದೇವರ ವಾಕ್ಯವೆಂಬ ಹಾಲಿನಿಂದ ಅವರ ಆತ್ಮಗಳು ತುಂಬದಿದ್ದರೆ, ಅವರಿಗೆ ಸೌಖ್ಯವಿಲ್ಲ. ಆದರೆ ಸ್ವಭಾವಿಕ ಮನುಷ್ಯನಿಗೆ ದೇವರ ವಾಕ್ಯವು ಏನು? "ಕಾಣದ ಕನ್ನಡಿ ಅದೇತಕೆ? ಗೀರ್ವಾಣ ನುಡಿ ಕೊರವಂಕಗ್ಯಾತಕೆ? ಎತ್ತು ತೆಂಗಿನ ಕಾಯಿ ಬಲ್ಲುದೆ? ಕತ್ತೆ ಬಲ್ಲುದೆ ಕಸ್ತುರಿಯ ಪರಿಮಳ?" ಎಂಬ ಹಾಗೆ, ಇಹ ಭೋಗಿಯಾದ ಸ್ವಭಾವಿಕ ಮನುಷ್ಯನು ಪರದ ಸುಖಕ್ಕೆ ಹೇಸಿ, ದೇವರ ವಾಕ್ಯವನ್ನು ಗಣನೆ ಮಾಡುವದಿಲ್ಲ. ಭುಕ್ತಿಗೆ ಭಕ್ತಿಯ ಬೋಧನೆ ಯಾತಕ್ಕೆ? ಆದರೆ ದೇವರ ಮಗು ದೇವರ ವಾಕ್ಯವೆಂಬ ಹಾಲಿಲ್ಲದೆ ಬದುಕುವದು ಇಲ್ಲ. ತಾಯಿಯ ಮೊಲೆ ನಾಯಿಗೆ ಏನು? ಆದರೆ ಹಸು ಕೂಸು ರಾತ್ರಿ ಹಗಲು ಮೊಲೆ ಬಿಡಲೊಲ್ಲದೆ, ಅದು ಶಿಕ್ಕಿದರೆ ನೆಮ್ಮದಿಯಾಗಿರುತ್ತದೆ; ತಪ್ಪಿದರೆ ರಚ್ಚೆ ಇಡುತ್ತದೆ. ಅದೇ ಪ್ರಕಾರ ದೇವರ ಮಕ್ಕಳು ವಾಕ್ಯವನ್ನು ಬಿಡಲೊಲ್ಲರು. ಮಾಂಸಭಾವದ ಮನುಷ್ಯನಿಗೆ ಭಕ್ತನಲ್ಲಿ ಇರುವ ದಿವ್ಯವಾದ ಆಸಕ್ತಿ ಮರುಳಾಗಿ ತೋರುತ್ತದೆ. ಪರಲೋಕರಾಜ್ಯ ಬಾಧ್ಯಸ್ಥನಿಗೆ ಅದು ಪರಮ ಸುಖ.

೩ ತಾಯಿಯ ಬಸುರಿನ ಶಖೆಯಲ್ಲಿ ಶಾಖವಾಗಿದ್ದ ಎಳೇ ಕೂಸಿಗೆ ಹುಟ್ಟಿದ ಕೂಡಲೇ ಬೆಚ್ಚಗಾಗುವಂಥಾ ವಸ್ತ್ರಾದಿಗಳು ಬೇಕು. ದೇಹರಕ್ಷೆಗೆ ತಕ್ಕ ವಸ್ತ್ರಾದಿಗಳು ಶಿಕ್ಕದಿದ್ದರೆ, ಕೂಸು ಉಳಿಯುವದಿಲ್ಲ; ಯೇಸುವಿಗೆ ಸಹ ಹುಟ್ಟಿದ ಕೂಡಲೇ ಬಾಲತೊಡಿಗೆ ಸಿದ್ಧವಾಗಿತ್ತು. ಅದೇ ಪ್ರಕಾರವಾಗಿ ದೇವರ ಮಕ್ಕಳಿಗೆ ಹುಟ್ಟಿದಂದಿನಿಂದ ಕ್ರಿಸ್ತನ ನೀತಿ ಎಂಬ ವಸ್ತ್ರವು ಬೇಕಾಗಿದೆ. ಮಾಂಸಭಾವದವರಿಗೆ ಬೇರೆ ಹೊದಿಕೆಗಳುಂಟು. ಆತ್ಮಭಾವದವರಿಗೆ ಆತ್ಮೀಕವಾದ ಹೊದಿಕೆ ಅವಶ್ಯವಾಗಿದೆ. ಇದರ ವಿಷಯವಾಗಿ ಯೆಜೆಕಿಯೇಲನ ೧೬ನೇ ಸಂಧಿಯಲ್ಲಿ, ಭಂಗಾರದ ವರಕಿನಿಂದ ನಿನ್ನನ್ನು ಹೊದಿಸಿದೆನೆಂದು ಬರದದೆ. ಹೆಂಗಸರು ಬಸುರಾದರೆ, ಹುಟ್ಟುವ ಮಗುವಿಗಾಗಿ ಎಷ್ಟೋ ಚಲೋ ತೊಡಿಗೆಗಳನ್ನು ಸಿದ್ಧ ಮಾಡುತ್ತಾರೆ! ಆದರೆ ದೇವರು ಪರಿಶುದ್ಧಾತ್ಮದಿಂದ ತಿರಿಗಿ ಹುಟ್ಟಿದ ತನ್ನ ಮಕ್ಕಳಿಗೆ ಎಷ್ಟೋ ನಯವಾದ ವಸ್ತ್ರವನ್ನು ಸಿದ್ಧ ಮಾಡುತ್ತಾನೆ. ಹೆಂಗಸರು ತಮ್ಮ ಮಕ್ಕಳ ಸೌಂದರ್ಯವು ಚನ್ನಾಗಿ ಕಾಣಿಸುವ ಹಾಗೆ ಅವರನ್ನು ಬಹಳ ಅಕ್ಕರೆಯಿಂದ ಅಲಂಕರಿಸುತ್ತಾರಲ್ಲ? ಅದೇ ಪ್ರಕಾರವಾಗಿ ದೇವರು ತನ್ನ ಮಕ್ಕಳನ್ನು ಶೃಂಗಾರ ಮಾಡುತ್ತಾನೆ, ಯೆಜೆಕಿಯೇಲನ ೧೬ನೇ ಸಂಧಿ ೧೧ನೇಯಲ್ಲಿ ಬರದದ್ದು ಏನಂದರೆ: ಮತ್ತು ನಿನಗೆ ಆಭರಣಗಳಿಂದ ಅಲಂಕರಿ, ನಿನ್ನ ಕೈಗಳಿಗೆ ಕಡಗಗಳನ್ನು ಇಟ್ಟು, ನಿನ್ನ ಕುತ್ತಿಗೆಗೆ ಕಂಠಿಯನ್ನು ಹಾಕಿ, ನಿನ್ನ ಹಣೆಗೆ ಮುತ್ತಿನ ಜಟ್ಟಿ ಕಟ್ಟಿ, ನಿನ್ನ ಕಿವಿಗಳಿಗೆ ಒಂಟಿಗಳನ್ನು ನಿನ್ನ ತಲೆಗೆ ಸುಂದರವಾದ ಕಿರೀಟವನ್ನು

ಧರಿಸಿದ್ದೇನೆ. ದೇವರ ಮಕ್ಕಳಿಗೆ ಕ್ರಿಸ್ತನ ನೀತಿ ಎಂಬ ವಸ್ತ್ರವೂ ಕೃಪೆಯ ಆತ್ಮದ ಸದ್ಗುಣಗಳೆಂಬ ಆಭರಣಗಳೂ ಬೇಕಾಗಿವೆ, ಇವುಗಳ ಹೊರತು ಬದುಕಿ ಸೌಖ್ಯವಾಗಿರ ಕೂಡದು.

೪. ತಾಯಿ ಎಳೆ ಕೂಸನ್ನು ಮಡಲಲ್ಲಿಟ್ಟು ಮುದ್ದುಗಳಿಂದ ಸಾಕಿ, ಮಮತೆಯಿಂದ ನೋಡಿ, ಓಲೈಸುವ ಪ್ರಕಾರ, ತಂದೆಯಾದ ದೇವರು ತನ್ನ ಮಕ್ಕಳನ್ನು ಒಲುಮೆಯಿಂದ ಸತ್ಕರಿಸುತ್ತಾ ಬರುತ್ತಾನೆ. ತಾಯಿ ಕೂಸನ್ನು ಸಂತೈಸುವಂತೆ ನಾನು ನಿಮ್ಮನ್ನು ಸಂತೈಸುವೆನು ಎಂದು ಎಶಾಯನ ೬೬ನೇ ಸಂಧಿಯ ೧೩ನೇಯಲ್ಲಿ ಬರದದೆ. ಈ ಸಾಮ್ಯಗಳ ಅಭಿಪ್ರಾಯವೇನೆಂದು ಹೊಸದಾಗಿ ಹುಟ್ಟಿದವರೇ ತಿಳ ಕೊಳ್ಳುತ್ತಾರೆ.

೫. ಮಗುವಿಗೆ ತಂದೆಯ ಮುಖದ ಹೋಲಿಕೆ ಇರುವದು ವಾಡಿಕೆ. ತಂದೆಯ ಹೋಲೋ ಕಂದೈಯ್ಯನೆಂಬುವ ಪ್ರಸಿದ್ಧವಾದ ಗಾದೆ ನಮ್ಮ ತಂದೆಯಾದ ದೇವರಿಗೆ ತದ್ರೂಪನಾದ ಯೇಸು ಕ್ರಿಸ್ತನ ಹೋಲಿಕೆ ಹೊಸತಾಗಿ ಹುಟ್ಟಿದವರಲ್ಲೆಲ್ಲಾ ಕಾಣುತ್ತದೆ. ದೇವಜರಾದವರೆಲ್ಲರ ಮುಖಕ್ಕೆ ದಿವ್ಯ ಭಾವದ ಚಿನ್ಹೆ ಉಂಟು. ತಮಗೆ ಹೆಚ್ಚಾಗಿ ಹೋಲುವ ಮಕ್ಕಳನ್ನು ಮನುಷ್ಯರು ಹೆಚ್ಚಾಗಿ ಪ್ರೀತಿ ಮಾಡುತ್ತಾರೆ; ಹಾಗೆಯೇ ದೇವರು ತನ್ನ ಮಕ್ಕಳಲ್ಲಿ ನಿಜ ಮುಖಲಕ್ಷಣವನ್ನು ಕಂಡು, ಅವರಿಗೆ ಬಹಳ ಅಕ್ಕರೆಯಿಂದ ಮೆಚ್ಚುತ್ತಾನೆ. ದಿವ್ಯ ಮುಖಚಿನ್ಹೆ ಇಲ್ಲದವರು ದೇವರ ಮಕ್ಕಳಲ್ಲ. ಇವರು ದೇವರ ಕ್ರಿಯೆಗಳನ್ನು ನಡಿಸದೆ, ಪ್ರಪಂಚದವರಾಗಿದ್ದಾರೆ. ಅವರು ಸೈತಾನನಿಗೆ ಹೋಲುವದರಿಂದ, ಯೇಸು ಕ್ರಿಸ್ತನು ಅವರಿಗೆ ಸೈತಾನನ ಮಕ್ಕಳೆಂದು ಹೆಸರಿಡುತ್ತಾನೆ. ಅವರು ಸೈತಾನನ ಮಕ್ಕಳಾಗಿದ್ದು, ಸೈತಾನನ ಕ್ರಿಯೆಗಳನ್ನು ನಡಿಸುತ್ತಾರೆ; ಅನ್ಯಾಯದ ಕರ್ಮಗಳೆಲ್ಲಾ ಸೈತಾನನ ಕ್ರಿಯೆಗಳಾಗಿವೆ. ಪಾಪದಲ್ಲಿ ಬಿದ್ದ ಪ್ರಥಮ ಮನುಷ್ಯನಾದ ಆದಾಮನು ಭೂಭಾವದವನಾಗಿದ್ದ ಪ್ರಕಾರ, ಆದಾಮನ ಮಕ್ಕಳಾಗಿಯೆ ಹುಟ್ಟಿದವರು ಭೂಭಾವದವನಿಗೆ ಹೋಲುತ್ತಾರೆ. ದಿವ್ಯ ತಂದೆಯ ಮಕ್ಕಳು ದಿವ್ಯಭಾವಲಕ್ಷಣ ಉಳ್ಳವರಾಗಿದ್ದಾರೆ.

೬. ಒಬ್ಬನಿಗೆ ಮಗನು ಇದ್ದರೆ, ಅವನನ್ನು ತನ್ನ ಮೆಚ್ಚಿಗೆಗಾಗಿ ಸಾಕಿ ಸಲಹುತ್ತಾನೆ. ಮಕ್ಕಳು ತಂದೇ ಮನೆಯ ಆಚಾರಗಳನ್ನು ಕಲಿತು ಕೊಳ್ಳುತ್ತಾರೆ. ದೇವರಿಗೆ ಹುಟ್ಟಿದ ಮಕ್ಕಳು ಹಾಗೆಯೆ ದೇವರ ಮನೆ ಎಂಬ ಸಭೆಯ ಆಚಾರವನ್ನು ಕಲಿತು ಕೊಳ್ಳುತ್ತಾರೆ. ಆತ್ಮೀಕವಾದ ಮಕ್ಕಳು ಹುಟ್ಟಿದ ಕೂಡಲೆ, ನನ್ನ ತಂದೆಯೇ, ನನ್ನ ದೇವರೇ, ಎಂದು ಕೂಗುತ್ತಾರೆ. ಮತ್ತು ಬೆಳದು, ದೇವರ ಮನೆಯಲ್ಲಿ ಸಾಕಿ ಸಲಹಿಸಿ ಕೊಂಡು, ಈ ಲೋಕದಲ್ಲಿ ದೇವರ ಮಕ್ಕಳಿಗೆ ಯೋಗ್ಯವಾಗಿ ನಡ ಕೊಳ್ಳುವ ಹಾಗೆ ಕ್ರೈಸ್ತ ಸಭೆಯ ಪದ್ಧತಿ ಮರ್ಯಾದೆಗಳನ್ನು ಅಭ್ಯಾಸಿಸುತ್ತಾರೆ.

೭. ಮಕ್ಕಳಿಗೆ ಏನಾದರೂ ಬೇಕಾದರೆ, ತಂದೆ ಕೊಡುತ್ತಾನೆಂದು, ತಂದೆಗೆ ಕೇಳುವದು ಸಹಜವಾಗಿದೆ. ದೇವರ ಮಕ್ಕಳು ಅದೇ ಪ್ರಕಾರ ಮಾಡ ತಕ್ಕದ್ದು. ಮಗನಿಗೆ ರೊಟ್ಟಿ ಬೇಕಾದರೆ, ತಂದೆಯ ಬಳಿಗೆ ಹೋಗಿ ಹೇಳುತ್ತಾನಲ್ಲ? ವಸ್ತ್ರ ಬೇಕಾದರೆ ತಂದೆಗೆ ಬೇಡುತ್ತಾನಲ್ಲ? ಹಾಗೆಯೇ ನೀವು ಸಹ ಮಾಡ ಬೇಕು. ಸಹೋದರರೇ, ಜೀವದ ರೊಟ್ಟಿಯ ಮೇಲೆ ಹಸಿದರೆ, ದೇವರಿಗೆ ಹೇಳಿ! ನೀತಿ ಎಂಬ ವಸ್ತ್ರ ನಿಮಗೆ ಬೇಕಾದರೆ, ತಂದೆಯಾದ

ದೇವರ ಹತ್ತರ ಬೇಡಿ ಕೊಳ್ಳಿ! ಪಾಪವನ್ನು ಜೈಸುವದಕ್ಕೆ ಬಲ ಸಾಲದೆ ಹೋದರೆ, ದೇವರು ನಿಮಗೆ ಬಲ ಕೊಡ ಬೇಕೆಂದು ಪ್ರಾರ್ಥಿಸಿರಿ! ಸೈತಾನನು ನಿಮ್ಮನ್ನು ಶೋಧಿಸಿದರೆ, ಓಡಿ ಹೋಗಿ ಪರಲೋಕದಲ್ಲಿರುವ ನಿಮ್ಮ ತಂದೆಯನ್ನು ಆಶ್ರೈಸಿ ಕೊಂಡು, ನಿಮ್ಮ ಚಿಂತೆ ವ್ಯಸನಗಳೆಂಬ ಹೊರೆಯನ್ನು ಆತನ ಮುಂದೆ ತಂದು ಹಾಕಿರಿ! ಹೀಗೆ ಮಾಡುವದು ಮಕ್ಕಳಿಗೆ ಸಹಜವಲ್ಲ? ಯಾರಾದರೂ ಅವರಿಗೆ ತಂಟೆ ಮಾಡಿದರೆ, ಕೂಗಿ ತಂದೆ ಹತ್ತರ ಓಡಿ ಬರುತ್ತಾರಲ್ಲ? ಅದೇ ಪ್ರಕಾರವಾಗಿ ದೇವರಿಗೆ ಹುಟ್ಟಿದ ಮಕ್ಕಳು ಶೋಧನೆ ವೊದಲಾದ ಆಪತ್ತುಗಳು ಬಂದರೆ, ದೇವರ ಬಳಿಗೆ ತಿರುಗಿ ಕೊಂಡು ಅವನಿಗೆಲ್ಲಾ ಹೇಳುವದು ನ್ಯಾಯ.

III. ಈ ಬೋಧನೆಯಿಂದ ಹುಟ್ಟ ತಕ್ಕ ಆತ್ಮೀಕ ಶಿಕ್ಷೆಯ ಮಾತುಗಳು.

ಕ್ರೈಸ್ತರೆನ್ನಿಸಿ ಕೊಳ್ಳುವವರೆಲ್ಲರಿಗೆ ನಾನು ದೇವರಿಂದ ಹುಟ್ಟಿದವನೋ? ಅಲ್ಲವೋ? ಎಂದು ವಿಚಾರಿಸಿ ನೋಡುವದು ಮುಖ್ಯ ಕೆಲಸವಾಗಿದೆ. ಮೇಲೆ ವಿವರಿಸಿ ಇರುವ ಲಕ್ಷಣಗಳ ಪ್ರಕಾರ ಸ್ವಭಾವದ ಮಕ್ಕಳಾಗಿದ್ದೀರೋ? ಕೃಪೆಯ ಮಕ್ಕಳಾಗಿದ್ಧೀರೋ? ಎಂದು ಶೋಧನೆ ಮಾಡಿ ಕೊಳ್ಳಿರಿ.

ಲೋಕವೆಂಬ ಬತ್ತಲಾದ ಶೆರೆಯಿಂದ ಕ್ರಿಸ್ತನ ಬೆಳಕಿನಲ್ಲಿ ಶೇರಿದರೋ? ಏನೋ? ಅಪ್ಪಾ! ತಂದೆ! ಎಂದು ಕೂಗುವದನ್ನು ಕಲಿತಿರೋ? ಏನೋ? ಯೆರೆಮಿಾಯನ ೩ನೆ ಸಂಧಿಯ ೧೬ನೆಯಲ್ಲಿ, ನನ್ನನ್ನು ತಂದೆ ಎಂದು ಕರೆಯ ಬೇಕೆಂದು ನಿನಗೆ ಹೇಳಿದನು ಎಂದು ಬರದದೆ ಅಲ್ಲ? ದೇವರಿಗೆ ಹುಟ್ಟಿದ ಮಕ್ಕಳೆಲ್ಲರು ಕೂಗುಳಿಗಳು. ದೇವರ ವಾಕ್ಯವೆಂಬ ಹಾಲು ಕುಡಿದು ತುಂಬದಿದ್ದರೆ, ಸಮಾಧಾನವಾಗಿ ಇದ್ಧೀರೋ? ಇಲ್ಲವೋ? ಚನ್ನಾಗಿ ಪರೀಕ್ಷೆ ಮಾಡಿ ಕೊಳ್ಳಿರಿ. ದೇವರ ಮಕ್ಕಳ ಲಕ್ಷಣಗಳು ನಿಮ್ಮಲ್ಲಿ ಕಾಣದಿದ್ದರೆ, ದೇವರ ರಾಜ್ಯಕ್ಕೆ ತಪ್ಪದೆ ಇರರಿ. ಅದರಲ್ಲಿ ನಿಮಗೆ ಬಾಧ್ಯ ಇಲ್ಲ. ಬಾಧ್ಯರಲ್ಲದವರು ಇದರಲ್ಲಿ ಹೋಗಲಾರರು. ಕಳ್ಳ ಮಕ್ಕಳು ಬಂದು ಕರ್ತನೇ, ಕರ್ತನೇ, ನಮಗೆ ಬಾಗಲು ತೆಗಿ! ಎಂದು ಕೂಗಲು, ಆತನು ನಿಮ್ಮನ್ನು ಅರಿಯೆನೆಂದು ಹೇಳುವನು.

ದೇವರ ಮಕ್ಕಳಲ್ಲದವರಿಗೆ ಪರಲೋಕಬಾಧ್ಯತೆ ಇಲ್ಲ. ಮಕ್ಕಳಲ್ಲದ ಜನರಿಗೆ ದಾನಧರ್ಮ ಕೊಡುವದು ಉಂಟು. ಆದರೆ ಪಿತ್ರಾರ್ಜಿತ ಭೂಮಿಗಳನ್ನು ಪರರಿಗೆ ಎಂದಿಗೂ ಕೊಡುವದು ಇಲ್ಲ. ಕುಮಾರರ ಸಹಿತವಾಗಿ ಬಾಧ್ಯತೆಯನ್ನು ಸ್ವತಂತ್ರಿಸಿ ಕೊಳ್ಳುವೆವೆಂದು ಅನ್ನಿಸಿ ಕೊಳ್ಳುತ್ತಾ ಮಕ್ಕಳ ನಡೆನುಡಿ ಇಲ್ಲದವರಾಗಿ ಬದುಕಿದರೆ, ಮೋಸಹೋಗುವಿರಕಟ! ರಾಜಕುಮಾರನು ತೀರಿದುಂಬುವವರ ಹುಡುಗನ ಸಂಗಡ ಆಡುವದು ಕಂಡರೆ, ಛೀ! ಎಂದು ಹೇಳುವದಿಲ್ಲವೋ? ಹಾಗಾದರೆ ರಾಜಕುಮಾರರಾಗಿದ್ದರೆ, ರಾಜಕುಮಾರರಾಗಿ ಬದುಕಿರಿ. ಕ್ರಿಸ್ತನ ಸಂಗಡ ಎದ್ದವರಾಗಿದ್ದವರಾದರೆ, ಇಹಕ್ಕೆ ಅಲ್ಲ ಪರಕ್ಕೆ ಆಸಕ್ತರಾಗಿರಿ! ಕೂಡಿ ಬರುವ ವೇಳೆಯಲ್ಲಿ ತಂದೆ ಕೊಟ್ಟ ವಾಕ್ಯದ ವಿಷಯವಾಗಿ ಒಬ್ಬರ ಸಂಗಡಲೊಬ್ಬರು ಮಾತಾಡಿರಿ! ನೀವೆಲ್ಲರು ತಂದೆಯ ಅಪ್ಪಣೆಗೆ ಮೆಚ್ಚಿ ಸಂತುಷ್ಟರಾಗಿ, ಲೋಕದಲ್ಲಿ ನಿಮ್ಮ ಮೇಲೆ ಬೀಳುವ ಕಷ್ಟಗಳನ್ನು ತಾಳುವದು ಯುಕ್ತವಾಗಿದೆ.

ದೇವರ ಮಕ್ಕಳಾಗಿದ್ದರೆ, ಪ್ರೀತಿಯಿಂದ ಸಹವಾಸ ಮಾಡಿರಿ! ಲೋಕವು ನಿಮ್ಮ ಸಂಗಡ ಝುಗಳಾಡಿದರೆ, ಚಿಂತೆ ಇಲ್ಲ. ನೀವು ನಿಮ್ಮೊಳಗೆ ಝುಗಳಾಡಿದರೆ, ಮಹಾ ದೋಷ. ಈ ಪದ್ಧತಿ ನಿಮ್ಮಲ್ಲಿ ಇದ್ದರೆ, ಅದು ಮಾನ ಮರ್ಯಾದೆ ನಿಮ್ಮಲ್ಲಿ ಇಲ್ಲವೆಂಬುವದಕ್ಕೆ ಸಾಕ್ಷಿ. ಇಂಥಾ ನಡತೆ ದೇವರ ವಾಕ್ಯದಲ್ಲಿ ನಿಮಗೆ ನೇಮಕವಾದ ಕಟ್ಟಳೆಗಳಿಗೆ ಅನುಕೂಲವಾದದ್ದಲ್ಲ. ದೇವರ ಹೋಲಿಕೆಯುಳ್ಳ ಜೀವಾತ್ಮನನ್ನು ಪ್ರೀತಿ ಮಾಡು! ಪ್ರೀತಿ ಮಾಡು! ಇವನೂ ನಾನೂ ಒಂದು ದಿನ ಜೊತೆಯಾಗಿ ಮುಕ್ತಿ ಪಡ ಕೊಳ್ಳ ಬೇಕು ಎಂದುಕೋ! ಒಬ್ಬರನ್ನೊಬ್ಬರು ಸೇವಿಸಿರಿ! ಒಬ್ಬರಿಗೊಬ್ಬರು ಉಪಕಾರ ಮಾಡಿರಿ! ಯಾರಾದರೂ ನಿಮಗೆ ಅನ್ಯಾಯ ಮಾಡಿದರೆ, ದೇವರನ್ನು ನ್ಯಾಯ ತೀರಿಸ ಬೇಕೆಂದು ಪ್ರಾರ್ಥಿಸಿರಿ! ಸಹೋದರರನ್ನು ಪ್ರೀತಿ ಮಾಡಿರಿ!

ಕಡೆಗೆ, ದೇವರ ಮಕ್ಕಳಾಗಿದ್ದರೆ, ನೀವು ಕಲಿತು ಕೊಳ್ಳ ಬೇಕಾದ ಪಾಠವೇನಂದರೆ: ನಿಮ್ಮ ಬುದ್ಧಿಯ ನಡು ಕಟ್ಟಿ, ವಿಧೇಯತ್ವದ ಮಕ್ಕಳಾಗಿ, ಪೂರ್ವದಲ್ಲಿ ನಿಮ್ಮ ಅಜ್ಞಾನದಲ್ಲಿ ಇದ್ದ ಆಶೆಗಳಿಗೆ ಅನುಕೂಲವಾಗದೆ, ನಿಮ್ಮನ್ನು ಕರದ ಪರಿಶುದ್ಧಾತ್ಮನ ಪ್ರಕಾರ ನೀವು ಸಹ ಸಮಸ್ತ ನಡತೆಯಲ್ಲಿ ಪರಿಶುದ್ಧರಾಗಿರಿ! ಪರಿಶುದ್ಧ ದೇವರನ್ನು ನಿಮ್ಮ ತಂದೆ ಎಂದು ಜ್ಞಾಪಕ ಮಾಡಿ ಕೊಂಡು, ಮುಂದಿನ ದಿನದಲ್ಲಿ ತಂದೆಯ ಮುಖವನ್ನು ಸಂತೋಷದಿಂದ ಕಾಣ ಬೇಕೆಂಬ ಅಪೇಕ್ಷೆಯಿಂದ ಇಹದಲ್ಲಿ ದೇವರ ಮಕ್ಕಳು ನಡಿಯ ತಕ್ಕ ಮಾರ್ಗವನ್ನು ಕೈಕೊಳ್ಳಿರಿ! ಆಮೆನ್.

ಗೆತ್ಸೇಮನೆಯಲ್ಲಿ ಯೇಸು ಮಾಡಿದ ಪ್ರಾರ್ಥನೆ.

Du gehest in den garten beteu.

1=5 4/4 | 6 | 1 3'2' 1 7 | 6 2 17 | 6 ‖ 1 2 5'4' | 3 2 1 2 | 3¯ 0:|

1. ನೀ ಪ್ರಾ ರ್ಥಿ ಸ ಲ್ಕೆ ತೋಟ ದ ಲ್ಲಿ ಪ್ರವೇ ಶಿ ಸುತ್ತಿಯೇಸು ವೇ.
ನಾ ನಿ ನ್ನ ನ ಟ್ಟೆ, ಬ ಳಿ ಯ ಲ್ಲಿ ನಿಂತಿ ದ್ದು, ನಿ ನ್ನ ನ ಗ ಲೆ;

3'4' | 5 2 3 3 | 2 2 1¯ | 0 3 2 4 | 3'2' 1 7 7 | 6¯ 0 ‖

ನಿ ನ್ನಿಂದ ತ ಕ್ಕ ಪ್ರಾರ್ಥನೆ ಹ್ಯಾಗೆಂದು ಕ ಲ್ತುಕೊಳ್ಳು ವೆ.

2. ನೀ ಸಾಯುವಂತೆ ದುಃಖ ಪಟ್ಟೆ,
ನಡುಂಗುತಿದ್ದಿ, ಅಂಜಿದಿ.
ಇದೆನ್ನ ಹೃದಯಕ್ಕೆ ತಟ್ಟಿ,
ಪಾಪಾನುರಕ್ತಿ ಕೊಲ್ಲಲಿ!
ಯಥಾರ್ಥ ಮೊರೆಯಾದಿಯು
ಪಾಪಾನುತಾಪಿ ಮನಸು.

3. ನೀ ಬಿಟ್ಟು ಸರ್ವ ನರರನ್ನು,
ಏಕಾಂತದಲ್ಲಿ ಬೇಡುತಿ.
ನಾನಂತೆ ಬಿಟ್ಟು ಲೋಕವನ್ನು,
ಬೇಡೇನು ಪೂರ್ಣ ಮೌನದಿ;
ನನ್ನೊಡನೆನ್ನ ಕರ್ತನು,
ಮತ್ತ್ಯಾರು ಇರ ಬಾರದು.

4. ಕಾಲೂರಿ, ನಿನ್ನ ಮುಖದಿಂದ
ನೆಲಕ್ಕೆ ಬೊಗ್ಗಿ ಕೊಳ್ಳುತಿ.
ಈ ನಿನ್ನ ದೀನಾವಸ್ಥೆಯಿಂದ
ನನ್ನೆಲ್ಲ ಗರ್ವ ಹೋಗಲಿ!
ನಾನೆನ್ನ ಪಾಪವರಿತು,
ನಿನ್ನಂತೆ ಬೊಗ್ಗಿ ಕೊಂಬೆನು.

5. ನೀನ್ "ಅಬ್ಬ" ಎಂದು ಕೂಗಲಾಗಿ,
ನಿನ್ನನ್ನು ತಂದೆ ಕೇಳ್ದನು.
ನಾ ಬೇಡಲ್, ಆತ ನಿನಗಾಗಿ
ಕಾರುಣ್ಯ ಮಾಡ್ಯಾನೆನಗು;
ನಿನ್ನಡಿಯನ್ನು ಹಿಡಿದು,
"ಕೇಳಬ್ಬ" ಎಂದು ಕೂಗ್ವೆನು.

6. ವಿಶ್ವಾಸದಿಂದ, ಪ್ರೀತಿಯಿಂದ
ನಿನ್ನಪ್ಪಗೊಳಗಾಗಿದ್ಧಿ;
ಕಣ್ಣೀರು ಚಲ್ಲಿ, ಹೃದದಿಂದ
ದಿವಕ್ಕೆ ಮೊರೆ ಇಡುತಿ.
ವಿಶ್ವಾಸ ಪ್ರೀತಿ ಇಲ್ಲದೆ
ನಾ ಪ್ರಾರ್ಥಿಸೋದು ವ್ಯರ್ಥವೆ.

7. ನೀ ಬಹುಶಾಂತ ಕುರಿಯಾಗಿ
ತ್ರಿವಾರ ಗೈದಿ ಪ್ರಾರ್ಥನೆ.
ನಾ ನಿನ್ನ ಸತ್ಯ ಶಿಷ್ಯನಾಗಿ
ಅದೇ ಪ್ರಕಾರ ಮಾಡುವೆ;
ಸಕೃತ್ತು ಸಾಲದಿದ್ದರೆ,
ಅನೇಕ ಸಾರಿ ಬೇಡುವೆ.

8. ನಿನ್ನಿಚ್ಛೆ ತಂದೆಯಿಚ್ಛೆಯಲ್ಲಿ
ಸಂಪೂರ್ಣವಾಗಿ ಮುಳ್ಗಿತು.
ಹೀಗಾಗಿ, ನಾನು ಬೇಡುವಲ್ಲಿ
ದೇವಾನುಗ್ರಹಕ್ ಒಲಿದು,
ಇಂತಂಬೆ, ತಾಳ್ವ ಮನದಿ,—
"ಸರ್ವೇಶನಿಚ್ಛೆ ಆಗಲಿ!"

9. ನಿನ್ನನ್ನು ಮರೆದವರನ್ನು,
ನೀ ಕರ್ತ, ಮರ್ಯೊದಿಲ್ಲವು;
ಸ್ವಕಷ್ಟ ಪರಚಿಂತೆಯನ್ನು
ಮಾಡೋದಕ್ ಅಡ್ಡಿಯಾಗದು.
ನಾ ಪರರಕ್ಷೆ ಮರ್ದರೆ,
ಬೇಡೋಣ ಫಲಹೀನವೆ.

10. ನೀ ಬೇಡಿದ್ದಕ್ಕೆ ಸ್ಥಿರವಾಗಿ,
ವಿಜಯ ತ್ರಾಣ ಮಹಿಮೆ
ಇತ್ಯಾದಿಯನ್ನು ಹೊಂದಲಾಗಿ,
ಸುಬೋಧವಾಯಿತ್ ಎನಗೆ—:
ನಾ ಸ್ಥಿರವಾಗಿ ಬೇಡೊಡೆ,
ಐಶ್ವರ್ಯವಾಗಿ ಹೊಂದುವೆ.

11. ಓ ಯೇಸು ನೀ ಬೇಡಿದಂತೆ
ನಾ ಬೇಡಲಿಕ್ಕೆ ಬೋಧಿಸು!
ಅದಾಗಿ, ಸತ್ಯಪುತ್ರನಂತೆ
ನಾ ಬೇಡೆ, ಪಿತೃ ಕೇಳ್ವನು.
ಅದಾಗಿ, ಮೋಕ್ಷ ಪಡೆದು,
ನಿರಂತ್ಯ ಸ್ತುತಿ ಗೈಯ್ವೆನು.

J. M.

Odass ich tansend Fungen hätte.

1. ಸಹಸ್ರ ಜಿಹ್ವೆ ನನಗಿದ್ದು,
ಸಹಸ್ರ ಬಾಯ್ಗಳಿದ್ದರೆ,
ಕೃತಜ್ಞನಾಗಿ ಅಡ್ಡ ಬಿದ್ದು,
ನನ್ನಿಡಿ ಹೃತ್ತಿನಿಂದಲೆ
ದೈವಾನುಗ್ರಹದ್ ಉರುಬು
ಆದಷ್ಟು ಹಾಡುತಿದ್ದೆನು.

2. ಓ ಮನವೇ, ಸಂತೋಷನಾದ
ನಿನ್ನಿಂದ ಯಾಕೆ ಕೇಳೆನು?
ಎಚ್ಚತ್ತು, ನಿನ್ನ ದೇವರಾದ
ಸರ್ವೇಶನನ್ನು ಸ್ತುತಿಸು!
ನನ್ನಲ್ಲಿ ಪ್ರತಿ ಉಸುರು
ಆಗಿರಲ್ ಒಂದು ರಾಗವು!

3. ವೃಕ್ಷಾದಿಯೇ, ಅರಣ್ಯದಲ್ಲಿ
ಸರ್ವೇಶನಾಣ್ಮ ಹೊಗಳು!
ತೃಣಾದಿಯೇ, ತಗ್ಗಿನ್ನೆಯಲ್ಲಿ
ಯೆಹೋವನೊಲ್ಮೆ ತಿಳಿಸು!
ಸಮಸ್ತ ಚಂದ ಹೂಗಳೇ,
ದೈವಾತಿಶಯ ಸಾರಿರೇ!

4. ಸುತ್ತಿರ್ವುದ್ಭುತಕ್ ಅಂಕೆಯಿಲ್ಲ;
ಅದನ್ನು ವರ್ಣಿಸೋದಕೆ
ನನ್ನಲ್ಪ ಶಕ್ತಿ ಸಾಲ್ವದಿಲ್ಲ:
ಸಮಸ್ತ ಜೀವರಾಶಿಯೆ,
ನಾವೊಟ್ಟಗೆಮ್ಮ ದೇವರ
ಸಂಸ್ತುತಿಯನ್ನು ಮಾಡುವ!

5. ಶರೀರ ಜೀವ ಆಸ್ತಿಗಾಗಿ
ನೀ ಸ್ತೋತ್ರ ಪಡು, ತಂದೆಯೆ;
ಪ್ರಪಂಚದ್ ಎನ್ನುದ್ಯೋಗಕಾಗಿ
ನಿನ್ನೊಲ್ಮೆಯಂ ಕೊಂಡಾಡುವೆ;
ಕ್ಷೇಮಾದಿಗಳಿಗೋಸ್ಕರ
ತಕ್ಕೋ ಸಹಸ್ರ ಸ್ತುತಿಯ!

6. ಓ ಯೇಸುವೇ, ಕಾರುಣ್ಯದಿಂದ
ನೀ ಕ್ರೂರ ಮೃತ್ಯು ಪಡದು,
ನನ್ನನ್ನು ನರಕಾಗ್ನಿಯಿಂದ
ವಿಮೋಕ್ಷ ಮಾಡಿ, ನಿತ್ಯಕು
ನನ್ನೀಶನಾದ ನಿನ್ನನೆ
ಆದಷ್ಟು ಕೊಂಡು ಆಡುವೆ.

7. ನಿಂಗೂ, ಸ್ವೀಕಾರದೊತ್ತೆಯಾದ
ಪವಿತ್ರ ದೇವರಾತ್ಮವೇ,
ಸಂಸ್ತುತಿ! ಎಷ್ಟೊ ಆಶೀರ್ವಾದ
ನಿನ್ನಿಂದ ನಾನು ಹೊಂದಿದೆ!
ನನ್ನಲ್ಲಿ ಒಳ್ಳೆದೆಲ್ಲವು
ನಿನ್ನೋಜೆಯಿಂದ ಆದದು.

8. ಯಾರೆನ್ನ ಪಾಲಿಸುತ್ತಿದ್ಧಾನೆ?
ನೀನಲ್ಲವೋ, ಸುಧನಿಯೇ?
ಯಾರೆನ್ನ ಕಾಯುತ್ತಿರುತ್ತಾನೆ?
ನೀನಲ್ಲವೋ, ಸೈನ್ಯೇಶನೇ?
ನನ್ನಪರಾಧದಾವಳಿ
ಅಮಿತವಾಗಿ ತಾಳಿದಿ.

9. ಸುದಂಡವೀಯೊ ಕಾಷ್ಟವನ್ನು
ಉಮ್ಮಿಕ್ಕಿ, ನಿನ್ನ ತಿಳಿಕೆ
ನಂಗಿತ್ತ ಹೌರ ಕ್ರೂಜೆಯನ್ನು,
ಕಿರೀಟ ನೋಡಿ, ಹೊರುವೆ;
ಅದೆನ್ನ ತಿದ್ದೊದಲ್ಲದೆ
ಅಮೂಲ್ಯ ಸಾಕ್ಷಿ ಕೊಡುತೆ. (ಇಬ್ರಿ. 12, 6.)

10. ನೀನೆನಗೆಲ್ಲ ವ್ಯಥೆಯಲ್ಲಿ
ಉದ್ಧಾರ ಮಾಡುತಿಹುದು
ನನ್ನಿಹದಿಡಿ ಜೀವದಲ್ಲಿ
ಎಷ್ಟೋ ಆವರ್ತಿ ತೋಚಿತು!
ಗಂಡಾಂತ್ರ ದೊಡ್ಡದಾಗಲೆ
ಸಹಾಯ ಸಹ ದೊಡ್ಡದೆ.

11. ಹಾಗಿರೆ, ನಿನ್ನ ಶಾಂತಿಯಲ್ಲಿ
ಕೊಂಡಾಡಲಿರ್ವೆವಲ್ಲವೋ?
ವಿಜಯವೆಂದು, ಕಷ್ಟದಲ್ಲಿ
ಮುಂದಕ್ಕೆ ಹೋಗಲೊಲ್ಲೆನೋ?
ಹೌದಳಿವೊಳಗ್ ಹೋದರು,
ನಿಶ್ಚಿಂತನಾಗುತಿದ್ದೆನು!

12. ಯಾವತ್ತ್[1] ಈ ಜಿಹ್ವೆ ತಿರುಗುತ್ತೆ,
ತಾವತ್ತ್ ನಿನ್ನೊಲ್ಮೆ ಹಾಡುವೆ;
ಯಾವತ್ತ್ ಈ ಹೃತ್ತು ಬಡಿಯುತ್ತೆ,
ತಾವತ್ತ್ ಆನಂದದರ್ಪಣೆ
ನಿಂಗಿತ್ತು, ಬಾಯಿ ಕುಂಗಲು,
ನಿಟ್ಟುಸುರಿನಿಂದ ಹಾಡ್ವೆನು.

13. ದರಿದ್ರ ಸ್ತುತಿ ಭೂಮಿಯಲ್ಲಿ,
ನಂಗೊಲಿದ್, ಅಂಗೀಕರಿಸು!
ಅದಿನ್ನು ಮುಂದೆ, ದಿವದಲ್ಲಿ,
ಶ್ರೇಯಸ್ಸು[2] ವಿಧದಹುದು—
ವಿಮುಕ್ತರೊಳು ಹಾಡಲೆ:
"ಸಹಸ್ರ ಹಲ್ಲೆಲೂಲವೆ!"

J. M.

1. ಯಾವತ್ತ್—ತಾವತ್ತ್ ಅಂದರೆ, ಎಷ್ಟು ವರೆಗೋ ಅಷ್ಟು ವರೆಗೆ.
2. ಶ್ರೇಯಸ್ಸು ಅಂದರೆ, ಹೆಚ್ಚು ಒಳ್ಳೆ.

Printed by Stolz & Reuther, Basel Mission Press, Mangalore.

ಸಭಾಪತ್ರ

ತಿಂಗಳಿಗೆ ಒಂದು ಸಾರಿ ಪ್ರಕಟಿಸಲ್ಪಡುವದು.

ಪುಸ್ತಕ ೩. **JUNE 1871.** ಅಂಕೆ ೧೨.

ಒಬ್ಬ ಜಾಡರವನ ಕಥೆ.

ಓ ಕರ್ತ, ಅಪರೂಪ ಮಾರ್ಗದಿಂದ ಸ್ವಜನರಂ ಪರೀಕ್ಷೆ ಮಾಡುತ್ತೀ
ಹ್ಯಾಗಾದರೂ, ಸಂಪೂರ್ಣ ಪ್ರೀತಿಯಿಂದ ಸ್ವಪ್ರಜೆಯನ್ನು ಕಾಯುತ್ತಿರುವಿ.
ನಿನ್ನಲ್ಲಿ ನಂಬುವಂಥ ದಾಸಗೆ ಡೊಂಕಾದ ಮಾರ್ಗ ನೆಟ್ಟಗಹುದು;
ಆರಂಭದಲ್ಲಿ ಕತ್ತಲಿದ್ದರೂ, ಕಡೇಲಿ ಎಲ್ಲ ಬೆಳಕಾಗುತ್ತೆ.

1848ನೇ ಇಸವಿಯು ವಿಲಾಯತಿಯ ಅನೇಕ ಗ್ರಾಮ, ಊರು, ನಾಡು, ಶೀಮೆಗಳಿಗೆ ಅತ್ಯನರ್ಥದ ಸಂವತ್ಸರವಾಗಿ ಹೋಯಿತು; ಯಾಕಂದರೆ ಭಯಾನಕವಾದ ಅವಾಂತರ, ಕಾಟಕಾಯಿ, ದಂಗೆ, ಯುದ್ಧ ಮುಂತಾದವುಗಳ ನಿಮಿತ್ತದಿಂದ ಸಮಸ್ತವು ಗಲಿಬಿಲಿಯಾಗಿ ಹೋಗುವ ಸಂಗತಿಯು ಹೊರ್ತು ಬೇರೆ ಏನೂ ಕಾಣದೆ ಹೋಗಿದ್ದದರಿಂದ, ಅರಸುಗಳ ಸಿಂಹಾಸನಗಳು ಕದಲಲೂ, ರಾಜ್ಯಾಂಗಗಳು ಅಲ್ಲಾಡಲೂ, ಪ್ರಜೆಗಳು ಅದರಲೂ, ಅಧಿಕಾರಸ್ಥರಿಗೆ ತಮ್ಮ ಅಧಿಕಾರವು, ಧನವಂತರಿಗೆ ತಮ್ಮ ಧನವು, ಏನಿಲ್ಲದ ಬಡವರಿಗಾದರೆ ತಮ್ಮ ಜೀವವಾದರೂ ಹೋದೀತೆಂಬ ಭಯವು ಹಿಡಿಯಲು, ವ್ಯಾಪಾರವೂ ಬೇರೆ ಬೇರೆ ಕೆಲಸ ವೃತ್ತಿಗಳೂ ನಿಂತು, ಹೆಚ್ಚು ಕಡಿಮೆಯಾಗಿ ಸಮಸ್ತರಿಗೆ ಸಮಾಧಾನವೂ ಸುಖವೂ ಇಲ್ಲದೆ ಹೋಗಿ, ಚಿಂತೆ ಕಷ್ಟಗಳು ಹತ್ತಿ ಬಂದವು. ಅದೇ ಸಂವತ್ಸರದ ಶರತ್ಕಾಲದ ಒಂದಾನೊಂದು ಶನಿವಾರದ ಸಾಯಂಕಾಲಕ್ಕೆ ಪ್ರುಸ್ಸಿಯ ದೇಶದ ಒಂದು ಊರಿನಲ್ಲಿ ಭಕ್ತಿಯುಳ್ಳ ಕಷ್ಟದಾಳಾದ ಬಡ ಜಾಡರವನೊಬ್ಬನು ತನ್ನ ಬಿಡಾರಕ್ಕೆ ಬಂದು ಶೇರಿದನು. ಅವನ ಹೆಂಡತಿಯೂ ಐದು ಮಂದಿ ಮಕ್ಕಳೂ ಅವನು ಬರುವದನ್ನು ಹಂಬಲಿಸಿ ಕಾದು ಕೊಂಡಿದ್ದರು. ಹೀಗಾಗಿರಲಿಕ್ಕೆ ಅವನು ಮನೆಗೆ ಬಂದು ಶೇರುತ್ತಲೇ ಕೋಣೆಯೊಳಗೆ ಸಂತೋಷದ ಗೌಜಿಯುಂಟಾಗಿ, ಎರಡು ಮಂದಿ ಕಿರಿ ಮಕ್ಕಳು ಆದಷ್ಟು ಬೇಗನೆ ಓಡಿ ಬಂದು, ಅಪ್ಪನ ಕಾಲುಗಳನ್ನಪ್ಪಿ ಹಿಡ ಕೊಂಡರು. ಮೂರು ಜನ ಹಿರಿ ಮಕ್ಕಳು ಸಂತುಷ್ಟರಾಗಿ—ತಂದೆ ಬಂದರು, ತಂದೆ! ಎಂದು ಕೂಗಿದರು. ಗೆಣಸು ಗಡ್ಡೆಗಳನ್ನು ಸುಲಿಯುತ್ತಲಿದ್ದ ಅವನ ಹೆಂಡತಿಯು ಅಕ್ಕರೆಯಾಗಿ ವಂದಿಸಿದಳು. ಆದರೆ ಅವನು ಸುಮ್ಮಗಿ

ದ್ದು, ಕಾರಖಾನೆಯಲ್ಲಿ ಕೆಲಸ ಮಾಡಿ ಆ ವಾರದಲ್ಲಿ ದುಡಿದ ಸಂಬಳದ ಹಣವನ್ನು ಮೇ
ಜಿನ ಮೇಲಿಟ್ಟು, ಬದೀಲಿದ್ದ ಒಂದು ಕುರ್ಚಿಯ ಮೇಲೆ ಕುಳಿತು, ಎದೆಯೊಳಗಿಂದ ಉಕ್ಕಿ
ಬರಲಿಕ್ಕಿದ್ದ ನಿಟ್ಟುಸುರು ಆದಷ್ಟಾಗಿ ಅಣಗಿಸಿ, ಒಂದು ಕೈಯಿಂದ ತನ್ನ ಮೋರೆಯನ್ನು ಸ್ವಲ್ಪ
ಉದ್ದಿ, ಮರೇ ಹಾಕಿ, ಮತ್ತೊಂದರಿಂದ ತನ್ನ ಕಾಲುಗಳಿಗೆ ವಾಲಿಕೊಂಡ ಎರಡು ಕಿರಿ ಮ
ಕ್ಕಳನ್ನು ಮೆಲ್ಲ ಮೆಲ್ಲನೆ ತುಸ ದೂರ ಮಾಡಲಿಕ್ಕೆ ನೋಡಿದನು. ಇದೆಲ್ಲವು ಅವನ ಹೆಂಡ
ತಿಗೆ ಗೋಚರಿಸದೆ ಹೋಗಲಿಲ್ಲ. ಭಯಸ್ಥಳಾಗಿ ಅವಳು ಅವನ ಮುಖವನ್ನು ಕಣ್ಣೂರಿ
ನೋಡಿ, ಕಳೆಗುಂದಿ ಹೋದದ್ದನ್ನು ಕಂಡು—ಕಾಂತನೇ, ಏನಕಟಾ! ಕೇವಲ ದುಃಖಾಕ್ರಾಂ
ತನಾಗಿ ಕಾಣಿಸುತ್ತೀ? ಏನು ಕಾರಣ? ಎಂದು ಕೇಳಿದಳು. ಅವನು—ವಲ್ಲಭೇ, ಬೆಬ್ಬರ
ಬೀಳದೆ, ಸಮಾಧಾನವಾಗಿರು. ಧನಿಗಳು ನನ್ನನ್ನು ನಿರುದ್ಯೋಗಿಯಾಗ ಮಾಡಿದರೂ,
ನಿರಾಧಾರಿಯಾಗ ಮಾಡಲಾರರು, ಎನಲು, ಅವಳು—ಹಾಗಾದರೆ ಧನಿಗಳು ನಿನ್ನನ್ನು ಕೆ
ಲಸದಿಂದ ತೆಗದು, ಕಳುಹಿಸಿ ಬಿಟ್ಟರೇನೋ! ಅಯ್ಯಯ್ಯೋ ದೇವರೇ! ಎಂದು ದುಃಖಿಸಿ
ಕೂಗಲಾಗಿ, ಗಂಡನು—ಪ್ರಿಯಳೇ, ತಪ್ಪಿ ಹೋಗ ಬೇಡ, ಬೇರೆ ಕೆಲಸದವರ ಸಂಗಡ ನನ
ಗೂ ರವಾನೆಯಾಯಿತು. ಧನಿಗಳು ಅವರಿಗೆ ಅಪ್ಪಣೆ ಕೊಟ್ಟು, ನನ್ನ ಕೆಲಸಕ್ಕೆ ಇನ್ನು ಬ
ರ ಕೂಡದು; ಎಲ್ಲಿಯಾದರೂ ಉದ್ಯೋಗ ಮಾಡಿ ದುಡಿಯುವ ಹಾಗೆ, ನೋಡಿರೆಂದು ಹೇ
ಳುವಾಗ, ನನ್ನನ್ನು ಸರ್ವಥಾ ಬಿಟ್ಟು ಕಳುಹಿಸಲಿಕ್ಕಿಲ್ಲವೆಂದು ನೆನಸಿದ್ದೆ; ಯಾಕಂದರೆ ಹದಿ
ನೈದು ದಿವಸಗಳ ಹಿಂದೆ ಸಕಲ ಕೆಲಸದವರ ಎದುರಿನಲ್ಲಿ ನನ್ನನ್ನು ಹೊಗಳಿ, ಎಲ್ಲವರು ನ
ನ್ನ ಹೇಳಿಕೆಯಲ್ಲಿರ ಬೇಕೆಂದು ಅಪ್ಪಣೆ ಕೊಟ್ಟರು. ಆದರೆ ಈ ಹೊತ್ತು ಕಡು ಕಡೆಗೆ ನನ
ಗೂ, ಹೋಗಿ ಮತ್ತೆ ಬರ ಬಾರದೆಂಬ ಅಪ್ಪಣೆ ಕೊಟ್ಟರು. ಧನಿಗಳಿಗೆ ನನ್ನ ಪೂರ್ವೋತ್ತ
ರಗಳನ್ನು ನೆನಪಿಗೆ ತರಿಸಿ, ನಾನು ಈಗ ಹದಿಮೂರು ವರುಷಗಳಿಂದ ಬಹು ನಂಬಿಗಸ್ತಿಕೆ
ಯಿಂದ ಕೆಲಸ ಮಾಡಿ ಸೇವಿಸುತ್ತಾ ಬಂದದ್ದರ ಸುದ್ದಿಯನ್ನು ಸಹ ತೆಗದು, ಎಷ್ಟು ಮಾ
ತಾಡಿ ಬೇಡಿದರೂ, ಅವರು ಕೇಳದೆ ಹೋದದ್ದನ್ನು ನೋಡಿ, ಬೆಪ್ಪಾಗಿ, ಇದ್ಯಾತಕ್ಕೆಂದು
ತಿಳಿಯದೆ, ದಿಕ್ಕು ಕಾಣದೆ ಹೋದೆ. ಆದರೆ ಅಷ್ಟರೊಳಗೆ "ಓ ಕರ್ತ, ಅಪರೂಪ ಮಾ
ರ್ಗದಿಂದ ಸ್ವಜನರಂ ಪರೀಕ್ಷೆ ಮಾಡುತ್ತೀ" ಎಂಬ ಆದಿವಾಕ್ಯವುಳ್ಳ ಗೀತವು ನನಗೆ ನೆನ
ಪಾಗಿ, ಅದನ್ನು ಬುಡದಿಂದ ತುದೀ ವರೆಗೆ ಸ್ಮರಿಸಿ, ಉಪಶಮನ ಹೊಂದಿದ್ದೇನೆ. ಈ ಗೀ
ತದ ಅಭಿಪ್ರಾಯಗಳನ್ನು ನೀನು ಸಹಾ ಶುದ್ಧ ಅಮೃತವೆಂದು ನಂಬಿ, ಪಾನಾ ಮಾಡಿ,
ದುಃಖೋಪಶಮನ ಪಡ ಕೊಳ್ಳ ಬೇಕು; ಎಂದು ನುಡಿದನು.

ಆದರೆ ಇದನ್ನು ಕೇಳಿ, ನೇಯುಗಾರನ ಹೆಂಡತಿ ಪ್ರಳಾಪಗೊಂಡು, ಬಿಕ್ಕಿ ಬಿಕ್ಕಿ ಅತ್ತ
ಳು. ಹಿರಿ ಮಕ್ಕಳು ತಂದೆಯನ್ನು ಮುತ್ತಿ ಬಂದು ಕಣ್ಣೀರಿಟ್ಟರು. ಕಿರಿ ಮಕ್ಕಳು ಸಹಾ
ಏನು ಕಾರಣವೆಂದು ಅರಿಯದಿದ್ದಾಗ್ಯೂ, ಕೂಡಾ ಅಂಗಲಾಚಿ ಅತ್ತರು. ಹೀಗಾಗಿರಲಿಕ್ಕೆ
ಆ ಜಾಡನಿಗೆ ಪಿತ್ತ ಏರಿ ತಲೆ ತಿರುಗುವ ಹಾಗಾದಾಗ್ಯೂ, "ನಿಮ್ಮ ತಲೆ ಕೂದಲುಗಳೆಲ್ಲ
ಎಣಿಸಲ್ಪಟ್ಟವೆ" ಎಂಬ ವಾಕ್ಯದಿಂದ ತಾಪಶಮನವಾಗಿ, ಅವನು—ಗೋಳಾಡ ಬೇಡಿರಿ! ದೇ
ವರು ಮೃತನಾಗಲಿಲ್ಲವಲ್ಲಾ! ಆತನು ಮೃತಿಯನ್ನು ಹೊಂದಿದ್ದಾದರೆ ಗೋಳಾಟಕ್ಕೆ ಹೇ


ತುವಾಗಿರುತ್ತಿತ್ತು. ನಿನ್ನೆ ಬೆಳಿಗ್ಯೆ ಓದೋಣಾದ ಪಾರಾಯಣದ ವಾಕ್ಯದಲ್ಲಿಯ "ನಿಮಗೆ
ಯಾವದು ಅಗತ್ಯವೋ ನೀವು ಅವನನ್ನು ಬೇಡಿ ಕೊಳ್ಳುವದಕ್ಕಿಂತ ಮುಂಚೆ ನಿಮ್ಮ ತಂದೆ
ಬಲ್ಲನು" ಎಂಬುವ ವಚನವು ನಿಮಗೆ ಮರತು ಹೋಯಿತೇನೋ? ನನ್ನ ಹೃದಯಕ್ಕೆ ಅದು ವಿ
ಶೇಷವಾಗಿ ತಾಗಿ, ನಾಟಿ ಹೋಯಿತು ಎಂಧೇಳಿ, ತನ್ನ ಹೆಂಡತಿಯನ್ನು—ನಮಗೆ ಈಗ ಅತ್ಯ
ಗತ್ಯವಾದದ್ದೇನೆಂದು ಬಲ್ಲಿಯಾ, ಕಾಂತೇ? ಎಂತ ಕೇಳಿ, ದೇವರ ಪ್ರೀತಿಯಲ್ಲಿಯೂ ವಿಶ್ವಾಸ
ದಲ್ಲಿಯೂ ಹೆಚ್ಚುವದೇ, ಅಂದನು. ತನ್ನ ಹಿರಿ ಮಕ್ಕಳಿಗೆ—ಜಗಳಾಟಗಳೂ ಹಟಗಳೂ, ದೇ
ವವಾಕ್ಯದ ಮೇಲೆಯೂ ಪ್ರಾರ್ಥನೆಯ ಮೇಲೆಯೂ ನೀವು ಆಗಿಂದಾಗ್ಯೆ ತೋರಿಸುತ್ತಿದ್ದ
ಆಲಸ್ಯವೂ ಈಗ ನಿಮಗೆ ದೂರವಾಗಿ, ನೀವು ಗುಣ ಪಟ್ಟೇರೆಂದು ಕೋರುತ್ತೇನೆಂದನು.

ಬರುವ ದಿವಸವು ಆದಿತ್ಯವಾರವಾಗಿತ್ತು. ಆ ದಿನದಲ್ಲಿ ವಿಶೇಷವಾದದ್ದೇನೂ ಸಂಭವಿ
ಸಲಿಲ್ಲ. ಸೋಮವಾರದ ಬೆಳಿಗ್ಯೆ ಜಾಡರವನು ಎದ್ದು ಬೇರೆ ಬೇರೆ ವ್ಯಾಪಾರಸ್ಥರ ಹತ್ತ
ರ ಉದ್ಯೋಗಾರ್ಥಿಯಾಗಿ ಹೋಗಿ, ಕೆಲಸ ಕೇಳಿದನು; ಆದರೆ ಹಿಂದೆ ಸೂಚಿಸಿದ ಪ್ರಕಾ
ರ ಕಾಟಕಾಯಿ, ಯುದ್ಧ ಇತ್ಯಾದಿಗಳ ಭಯದ ನಿಮಿತ್ತ, ಸರ್ವ ವೃತ್ತಿ ವ್ಯಾಪಾರಗಳು
ನಿಂತು ಹೋಗಿದ್ದ ಕಾರಣ, ವ್ಯರ್ಥ ಪ್ರಯತ್ನಗಳನ್ನು ಮಾಡಿದವನಾಗಿ ಸಂಜೆಗೆ ತಿರಿಗಿ ತ
ನ್ನ ಮನೆಗೆ ಬಂದನು. ಇದೇ ರೀತಿಯಾಗಿ ಆ ವಾರದ ಎಲ್ಲಾ ದಿವಸಗಳು ಕಳದು ಹೋ
ದವು. ಬರುವ ಸಪ್ತಕದ ಸೋಮವಾರದಲ್ಲಿ ಜಾಡಗಿತ್ತಿಯು ತನ್ನ ಕುಟುಂಬಕ್ಕೆ ಬರೀ ಅಂ
ಬಲಿ ಬಡಿಸಿ ಹೇಳಿದ್ದು—ಈಗ ಅನ್ನವೂ ಹಣವೂ ಮುಗಿಯಿತು; ಈ ಅಂಬಲಿ ಕುಡಿದು ಇಂ
ದಿಗೆ ಒಂಧೊತ್ತಿನ ಮೇಲಿರ ಬೇಕು. ನಾಳೆಗೆ ಏನೂ ಇಲ್ಲಾ, ಅಂದದ್ದಕ್ಕೆ ಶಾಲೆಗೆ ಹೋಗು
ತ್ತಿದ್ದ ಮೂರು ಮಂದಿ ಹಿರಿ ಮಕ್ಕಳು—ಈ ಹೊತ್ತು ನಾವು ಉಣ್ಣದೆ ಶಾಲೆಗೆ ಹೋಗು
ತ್ತೇವೆ, ನಮಗೆ ಹಶಿವೆ ಇಲ್ಲ. ಫ್ರೀದರೀಕನೂ ಕ್ರಿಸ್ತೀನಳೂ ಎಲ್ಲಾ ಕುಡಿಯಲಿ ಎಂಧೇ
ಳಿದರು. ಆದರೆ ಅವರ ತಂದೆ—ವಿಶ್ವಾಸಿಸಿ ಇದ್ದದ್ದನ್ನು ಉಂಡು ಕುಡಿಯುವದು ವಿಶ್ವಾಸ
ವಿಲ್ಲದೆ ಉಪವಾಸ ಮಾಡುವದಕ್ಕಿಂತ ಒಳ್ಳೇದು; ಕರ್ತನ ಕರುಣೆ ಮುಗಿದು ಹೋಗದು
ಎಂದು ಬುದ್ಧಿ ಹೇಳಿದಾಗ, ಅವರು ಪ್ರಾರ್ಥನೆ ಮಾಡಿ, ಕಿರಿ ಮಕ್ಕಳು ಸಹಾ—"ಅಪ್ಪಾ, ಆ
ಶೀರ್ವದಿಸು, ಆಮೆನ್!" ಎಂದು ತೊದಲು ಮಾತಿನಿಂದ ಬೇಡಿ, ಎಲ್ಲವರು ಊಟಕ್ಕೆ ಕುಳಿ
ತು ಕೊಂಡರು. ಉಂಡು, ತೃಪ್ತಿ ಹೊಂದಿ, ಕರ್ತನನ್ನು ಸಂಕೀರ್ತನೆ ಮಾಡಿದರು. ಆ
ಮೇಲೆ ಜಾಡನು ಕೆಲಸ ಹುಡುಕಲಿಕ್ಕೆ, ಹಿರಿ ಮಕ್ಕಳು ಶಾಲೆಗೆ, ಹೊರಟರು. ಜಾಡಗಿತಿ
ಒಂದು ಕಿಟಕಿಯನ್ನು ತೆರದು, ದುಃಖಿತಳಾಗಿ ಅವರ ಬೆನ್ನು ನೋಡಿದಳು. ಅವರು ಕಾಣ
ದೆ ಹೋದ ಮೇಲೆ ಕಿಟಕಿಯನ್ನು ಮುಚ್ಚಿ ಹಾಕದೆ, ತಿರಿಗಿ ಕೊಂಡು ಕೋಣೆಯಲ್ಲಿ ಎ
ಲ್ಲಾನ್ನು ಆಯಕಟ್ಟು ಮಾಡಲಿಕ್ಕೆ ಹತ್ತಿದಳು. ಆ ಕೆಲಸದಲ್ಲಿರುವಾಗಲೇ ಆಕೆಯ ಹಿಂಗ
ಡೆಯಲ್ಲಿ ಫಕ್ಕನೆ ಒಂದು ಸದ್ದಾಗಿ, ಆಕೆ ಬೆರಗಾಗಿ, ತತ್ಕ್ಷಣದಲ್ಲಿ ತಿರಿಗಿ ಕೊಂಡು, ಏನೆಂ
ದು ನೋಡಲಾಗಿ, ಸತ್ತ ಒಂದು ಕಾಗಿ ಬಿದ್ದದ್ದನ್ನೂ ತುಂಟನಾಗಿದ್ದ ಒಬ್ಬ ಹುಡುಗನು ಆ
ಕಿಟಕಿಯ ಬದಿಯಲ್ಲಿಂದ ಓಡಿ ಹೋಗುವದನ್ನೂ ಕಂಡು, ಓಡಿ ಹೋಗುವಾಗ ಅವನು—
"ಮುಕ್ಕರೇ, ರಾಗಿ ಇಲ್ಲವಾದರೆ, ಕಾಗಿ ಇಲ್ಲವೋ?" ಎಂಧೇಳಿ ಕೇಕೇ ಹಾಕುವದನ್ನು ಸುದಾ

ಕೇಳಿದಳು. ದುಃಖ ಚಿಂತೆಗಳಿಂದ ಘಾಯ ಬಿದ್ದಿದ್ದ ಆಕೆಯ ಗುಂಡಿಗೆ ಹುಡುಗನ ಈ ಗೇಲಿಯು ಬರೆ ಹಾಕಿದಂತಾಯಿತು. ಗಂಡನು ತಿರಿಗಿ ಬರುವ ತನಕ ಅಳುವದು, ನಿಟ್ಟುಸುರುಗಳನ್ನು ಬಿಡುವದು, ಧಾರೆಯಾಗಿ ಕಣ್ಣೀರಿಕ್ಕುವದು ಇದರ ಹೊರ್ತು ಬೇರೇನೊಂದೂ ಅವಳಿಂದ ಆಗದೆ ಹೋಯಿತು; ಆದರೆ ಅವನು ಸಹ ಕೇವಲ ದುಃಖಾಕ್ರಾಂತನಾಗಿ ಬಂದನು; ಯಾಕಂದರೆ ಆ ದಿನದಲ್ಲಿಯೂ ಅವನು ವೃತ್ತಿಯನ್ನು ಹುಡುಕಿದ್ದು ವ್ಯರ್ಥವಾಯಿತು. ಅವನು ಮನೆಗೆ ಬಂದ ಕೂಡಲೇ ಆಕೆಯು—ಉಸುರು ನನಗೆ ಕಟ್ಟಿ ಹೋಗಿದೆ. ಪ್ರಾಣ ಹಾರಿ ಹೋಗಲಿಕ್ಕೆ ಅದೆ. ಮಚ್ಚರೂ ತುಂಟರೂ ನಮ್ಮ ಉಪದ್ರವ ನೋಡಿ, ತಮ್ಮನ್ನು ಮೋದಿಸಿ ಕೊಳ್ಳುತ್ತಾರೆ ಅಂದು, ಆ ಕಾಗಿಯನ್ನು ತೋರಿಸಿ, ಆ ಹುಡುಗನ ಸಂಗತಿಯನ್ನು ವಿವರಿಸಿ ತಿಳಿಸಿದಳು. ನೇಯುಗಾರನು ಮೌನವಾಗಿ ಕಾಗೆಯನ್ನು ಎತ್ತಿ, ಹೊರಗೆ ಬಿಸಾಡಿ ಬಿಡಲಿಕ್ಕೆ ಹೋದನು. ಆದರೆ ಸತ್ತು ಹೋದ ಆ ಕಾಗೆಯ ಮೇಲೆ ಅಂತಃಕರಣ ಹುಟ್ಟಿ, ಅವನು—ಅಯ್ಯಯ್ಯೋ ಬಡ ಪ್ರಾಣಿ! ಹೊಟ್ಟೆಗಿಲ್ಲದ ಕಾರಣದಿಂದ ನಿನಗೆ ಸಾಯುವ ಸಂಗತಿಯಾಯಿತೇನೋ! ಅಂದು ಕೊಂಡು, ಕಾಗೆಯ ಹೆಣವನ್ನು ಸ್ವಲ್ಪ ಕಣ್ಣಿಟ್ಟು ನೋಡಿದನು. ಹೀಗೆ ದೃಷ್ಟಿಸಿ ನೋಡುತ್ತಿದ್ದಲ್ಲಿ ಕಾಗೆಯ ಹೊಟ್ಟೆ ದೊಡ್ಡದೆಂದೂ ಪೂರಾ ತುಂಬಿ ಹೋದದ್ದೆಂದೂ ಕಂಡು ಆಶ್ಚರ್ಯ ಪಟ್ಟು, ಕೈಯಿಂದ ಅದಕ್ಕೆ ತಡಹಿದಾಗ, ಬಹು ಘಟ್ಟಿಯಾದದ್ದೊಂದು ಪದಾರ್ಥವು ಒಳಗಿರುವ ಹಾಗೆ ತೋಚಲು, ಅವನು ಒಂದು ಚಾಕು ತೆಗದು, ಅದರ ಹೊಟ್ಟೆಯನ್ನು ಕೊಯಿದು ಬಿಚ್ಚಿಸಲಾಗಿ, ಹಳದಿ ಬಣ್ಣವುಳ್ಳ ಒಂದು ಸರಪಣಿ ಕಾಣಿಸಿದ್ದರಿಂದ ಅವನ ಆಶ್ಚರ್ಯ ಮಿಗಿಲಾಯಿತು. ಜಾಡಗಿತಿ ಬೇಗನೇ ಹೋಗಿ, ಒಂದು ಹರಿವಾಣದಲ್ಲಿ ನೀರು ತುಂಬಿಸಿ ತಂದು, ಆ ಒಡವೆಯನ್ನು ತೊಳದು ಶುಚಿಸಿದಾಗ, ಅದು ರತ್ನ ಖಚಿತ ಚಿನ್ನದ ಸರಪಣಿ ಎಂದು ಕಂಡು ಬಂತು. ಆಶ್ಚರ್ಯದ ಭರ್ತವು ಸ್ವಲ್ಪ ಇಳ್ಳವಾಗಿ ಬಂದ ಮೇಲೆ, ನೇಯುಗಾರನು —ಈ ಹಕ್ಕಿ ನಮ್ಮ ಮನೆಯೊಳಗೆ ಬಿಸಾಡಿ ಬಂದದ್ದಕ್ಕೆ ದೇವರಿಗೆ ಸ್ತೋತ್ರವಾಗಲಿ! ಈ ಆಭರಣದ ಒಡವೆಯನ್ನು ಕಳಕೊಂಡವರು ಅದಕ್ಕಾಗಿ ಹೇರಳ ಚಿಂತೆಯಲ್ಲಿದ್ದಾರು. ಅವರು ಐಶ್ವರ್ಯವಂತರಾಗಿರ ಬೇಕು. ಹೀಗಾಗಿ ಈ ಒಡವೆ ಹ್ಯಾಗಾದರೂ ನಮಗೆ ಕೆಲ ದಿವಸದ ಅನ್ನವನ್ನೊದಗಿಸಲಿಕ್ಕೆ ಸಾಕು, ಎಂದು ಹೇಳಿ, ಸರಪಣಿಯನ್ನೂ ಕಾಗಿಯನ್ನೂ ತೆಗದು ಕೊಂಡು, ಆ ಒಡವೆಯ ಒಡೆಯರ ವಿಷಯವಾದ ವಿಚಾರಣೆ ಮಾಡಿ ಗೊತ್ತು ಹತ್ತಿಸಿ ಕೊಳ್ಳುವ ಬಗ್ಯೆ, ಅಕ್ಕಸಾಲಿಗನೊಬ್ಬನ ಬಳಿಗೆ ಹೋದನು. ಇವನು ಸರಪಣಿಯನ್ನೂ ಅದರ ಬೀಗಕ್ಕೆ ಖಚಿಸಿದ್ದ ರತ್ನಗಳನ್ನೂ ಪರಿಶೋಧಿಸಿ, ಅವನಿಗೆ—ಇದು ಮಿಂತರ್ ಸಾಹೇಬರ ಮಗಳದ್ದು, ನಾನೇ ಅವರಿಗೆ ಮಾಡಿ ಕೊಟ್ಟದ್ದು; ನೋಡಿ ಇಲ್ಲಿ ನನ್ನ ಮುದ್ರೆ ಅದೆ. ಇದನ್ನು ನೀವು ಅವರಿಗೆ ತಂದು ಕೊಟ್ಟರೆ, ಅವರು ಅಧಿಕ ಸಂತೋಷ ಪಟ್ಟು, ನಿಮಗೆ ಒಳ್ಳೇ ಇನಾಮು ಕೊಡದೆ ಇರಲಿಕ್ಕಿಲ್ಲಾ. ಧೊರೆ ತಾವೇ ನನ್ನಲ್ಲಿಗೆ ಬಂದು, ಈ ಸರಪಣಿ ಕಾಣದೆ ಹೋದ ವರ್ತಮಾನ ತಿಳಿಸಿ, ಅದರ ವಿಷಯದಲ್ಲಿ ನನಗೆ ಎಂದಾದರೂ ಯಾವದಾದರೊಂದು ಜಾಡೆಯಾದರೆ, ತಮಗೆ ತಿಳಿಸ ಬೇಕೆಂದು ಹೇಳಿ ಕೊಂಡು ಹೋದರು. ತಡೆಯದೆ ನೀವೇ ಈಗ ಅವರಲ್ಲಿಗೆ ಹೋಗಿ

ರೆಂದು ಹೇಳಿದನು. ಇದನ್ನು ಕೇಳಿ ಬಡ ನೇಯುಗಾರನಿಗೆ ಉಂಟಾದ ಸಂತೋಷ ನಾನು ವರ್ಣಿಸಲಾರೆ. ಯಾಕಂದರೆ ಅಕ್ಕಸಾಲಿಗ ಹೇಳಿದ ಮಿಂತರ್ ಸಾಹೇಬ ಅವನನ್ನು ಉದ್ಯೋಗದಿಂದ ತೆಗದು ಕಳುಹಿಸಿ ಬಿಟ್ಟ ಧನಿಯೇ. ಅಕ್ಕಸಾಲೆಯವನ ಮನೆಯಿಂದ ನೆಟ್ಟಗೆ ಮಿಂತರ್ ಧೊರೆಯ ಬಂಗಲೆಗೆ ಹೋದನು. ಧೊರೆಯ ಮಗಳು ಆ ಸರಪಣಿಯನ್ನು ಅವನ ಕೈಯಲ್ಲಿ ಕಂಡ ಕೂಡಲೇ ಸಂತೋಷದ ಹೆಚ್ಚಿಕೆಯಿಂದ ಬೊಬ್ಬಿಟ್ಟು ಕೂಗಿದಳು. ಅವಳ ಕೂಗನ್ನು ಕೇಳಿ, ಅವಳ ತಂದೆ ತನ್ನ ಆಫಿಸಿನಿಂದ ಓಡಿ ಬಂದನು. ಬಂದು ನೇಯುಗಾರನನ್ನೂ ತನ್ನ ಮಗಳ ಕೈಯಲ್ಲಿ ಸರಪಣಿಯನ್ನೂ ಕಾಗಿಯನ್ನೂ ಕಂಡು, ಆದದ್ದೆಲ್ಲಾದರ ವಿವರವನ್ನು ಕೇಳಲಪೇಕ್ಷಿಸಿದನು. ಜಾಡನು ತನಗೆ ತಿಳಿದಿದ್ದಷ್ಟು ವಿವರಿಸಿ ಹೇಳಿದ್ದಕ್ಕೆ, ಧೊರೆಯು ಪ್ರತಿಯಾಗಿ ಏನೂ ನುಡಿಯಲಶಕ್ತನಾಗಿ ಹೋದನು. ಅವನ ಮಗಳು ಮಾತ್ರ ಮೌನ ಭಂಗಿಸಿ, ಬೋಳತನದೊಂದಿಗೆ ಕಾಗಿಯ ಸಂಗಡ ಮಾತಾಡಿ ಹೇಳಿದ್ದು—ಅಯ್ಯೋ ನನ್ನ ವಾಯಸರಾಜಾ! ಬಹು ಅಕ್ಕರೆಯಾಗಿ ನಾನು ನಿನ್ನನ್ನು ಸಾಕುತ್ತಾ ಬಂದದ್ದಕ್ಕೆ ನೀನು ಪ್ರತ್ಯುಪಕಾರಕ್ಕಾಗಿ ನನ್ನ ಸರಪಣಿಯನ್ನು ಕದ್ದುಕೊಳ್ಳ ಬೇಕಾಗಿತ್ತೋ? ಕಳ್ಳನಾಗಿ ಚೋರತನದ ಫಲವ ತಿಂದು ಸಾಯ ಬೇಕೆಂಬುವದು ನಿನ್ನ ಹಣೇಬರಹವೋ? ನೀನು ಅಸ್ವಸ್ಥವಾದಾಗ ನಿನ್ನ ಮೇಲೆ ಕರುಣವಿಟ್ಟೆ; ಸತ್ತ ಮೇಲೆ ದುಃಖ ಪಟ್ಟೆ, ನಿನ್ನ ಕರ್ಮವು ನನಗೆ ತಿಳಿದಿದ್ದದ್ದಾದರೆ, ನಾನು ವ್ಯರ್ಥ ದುಃಖ ಪಡದೆ, ನಿನ್ನ ಕತ್ತು ಕೊಯಿದು ರೋಗೋಪಶಮನ ಮಾಡುತ್ತಿದ್ದೆ ಎಂಬದಾಗಿ ಲಾಪಿಸಿದ ಮೇಲೆ, ಧೊರೆ ನೇಯುಗಾರನಿಗೆ ಕೈ ನೀಡಿ ಕೊಟ್ಟು ಹೇಳಿದ್ದು—ಸ್ನೇಹಿತನೇ, ಕ್ಷಮೆ ಬೇಡುತ್ತೇನೆ. ನಿನಗೆ ಬಹಳ ಅನ್ಯಾಯವಾಗಿ ನಡಿಸಿದ್ದೇನೆ. ನೀನು ಈ ಆಭರಣದ ಒಡವೆಯನ್ನು ಕದ್ದು ಕೊಂಡಿರ ಬೇಕೆಂದು ನೆನಸಿ, ನಿನ್ನ ಮೇಲೆ ಕಳ್ಳತನದ ಗುಮಾನವಿಟ್ಟು, ನಿನ್ನನ್ನು ಕಳುಹಿಸಿ ಬಿಟ್ಟೆ. ಅಷ್ಟು ವರುಷಗಳಿಂದ ಎಲ್ಲಾ ವಿಷಯಗಳಲ್ಲಿ ನಂಬಿಗಸ್ತಿಕೆಯೂ ಜಾಗ್ರತೆಯೂ ಉಳ್ಳವನಾಗಿ ನೀನು ನನಗೆ ಸೇವಿಸುತ್ತಾ ಬಂದ ಮೇಲೆ, ನಾನು ನಿನ್ನನ್ನು ಈ ಪ್ರಕಾರ ಕಳುಹಿಸಿ ಬಿಟ್ಟದ್ದನ್ನು ನಾನೇ ನನಗೆ ಮನ್ನಿಸ ಕೂಡದು. ಈ ಸರಪಣಿ ಕಾಣದೆ ಹೋದ ದಿನದಲ್ಲಿ ನೀನೊಬ್ಬ ಮಾತ್ರವೇ ನನ್ನ ಮಗಳ ಕೋಣೆಯನ್ನು ಹಾದು ಹೋದಿ. ನನ್ನ ಮಗಳು ಸಾಕುತ್ತಿದ್ದ ಈ ಕಾಗೆಯು ಅದನ್ನು ಹಿಡಿದು ನುಂಗಿ ಬಿಟ್ಟಿರ ಬಹುದೆಂಬ ಆಲೋಚನೆ ನನಗೆ ತುಸವಾದರೂ ಬಾರದೆ, ನಿರಾಪರಾಧಿಯಾದ ನಿನ್ನ ಮೇಲೆ ನಾನು ಕಳ್ಳತನದ ಅಪರಾಧ ಹೊರಿಸಿದೆ. ಈ ನನ್ನ ತಪ್ಪನ್ನು ನನಗೆ ಕ್ಷಮಿಸ ಬೇಕು. ಆದರೆ ನೀನು ತಿರಿಗಿ ನಿನ್ನ ಉದ್ಯೋಗದಲ್ಲಿ ಸೇರಿ, ನಾನು ನಿನ್ನನ್ನು ಕಳುಹಿಸಿ ಬಿಟ್ಟ ದಿವಸದಂದಿನಿಂದ ಸಾಯುವ ಪರಿಯಂತರಕ್ಕೆ ಇಮ್ಮಡಿ ಸಂಬಳವನ್ನು ಹೊಂದ ಬೇಕೆಂದು ನಿರ್ಣಯಿಸಿ ಕೊಂಡಿದ್ದೇನೆ, ಎಂದು ಹೇಳಿದನು. ಜಾಡನು ಸಂತೋಷದಲ್ಲಿ ನಿಮಗ್ನನಾಗಿ, ತನ್ನ ಮನೆಗೆ ಹಿಂತಿರುಗಿ, ಹೆಂಡತಿ ಮಕ್ಕಳು ಸಹಿತವಾಗಿ, ಒಂದು ಕಾಗೆಯ ಹೆಣದ ಮೂಲವಾಗಿ ತನಗೆ ಉದ್ಯೋಗವನ್ನೂ ಅನ್ನವನ್ನೂ ಮಾನವನ್ನೂ ತಿರಿಗಿ ಒದಗಿಸಿ ಕೊಟ್ಟ ದೇವರನ್ನು ಪ್ರಾರ್ಥನೆ ಮಾಡಿ ಕೊಂಡಾಡಿದನು.

ಕೆಳಗಿನ ಚಿತ್ರವು ಹುಬ್ಬಳಿ ಠಾಣ್ಯವನ್ನು ತೋರಿಸುತ್ತದೆ. ಅದರಲ್ಲಿ 1 ಎಂಬುದು ಬಂಗ್ಲೆ, 2 ಎ. ದೇವಾಲಯ, 7 ಎ. ಅನಾಥಹುಡುಗರ ಶಾಲೆ, 8 ಎ. ಮಧ್ಯಶಾಲೆ ಮತ್ತು ಉಪದೇಶೀ ಮನೆ, 9—16 ಎ. ಕ್ರೈಸ್ತರ ಮನೆಗಳು.



ವರ್ತಮಾನಗಳು.

ಪಶ್ಚಿಮ ಹಿಂದುಸ್ಥಾನದ ದೇಶಸ್ಥಕ್ರೈಸ್ತ ಸಂಘವು.

ಇತ್ತಲಾಗೆ ಮುಂಬಾಯಿ ಸಂಸ್ಥಾನದ ಕ್ರೈಸ್ತರು, ತಮಗಿರುವ ಆತ್ಮಿಕ ಅನ್ಯೋನ್ಯವನ್ನು ಬಹಿರಂಗ ಮಾಡಿದರೆ ಈ ಅನ್ಯೋನ್ಯವು ಸಫಲವಾಗಿ ಅನೇಕರ ವಿಶ್ವಾಸವೂ ಪ್ರೀತಿಯೂ ಬಲಗೊಳ್ಳುವದು ಎಂದು, ಮೇಲಿನ ಹೆಸರುಳ್ಳ ಒಂದು ಸಂಘವನ್ನು ಸ್ಥಾಪಿಸಿ, ಹೋದ ಏಪ್ರಿಲ್ ತಿಂಗಳಿನ ಆರಂಭದಲ್ಲಿ ಮುಂಬಾಯಿ, ಗುಜರಾತ, ಮಹಾರಾಷ್ಟ್ರ, ದಕ್ಷಿಣ ಮುಂತಾದ ಶೀಮೆಗಳ ಅನೇಕ ಕ್ರೈಸ್ತಸಭೆಯವರು ಮುಂಬಾಯಿ ಪಟ್ಟಣದಲ್ಲಿ ಕೂಡಿ ಬಂದರು.

ಮೊದಲನೇ ಕೂಟದಲ್ಲಿ ಅವರು ಈ ನಿರ್ಣಯ ಮಾಡಿದರು: ಅಮೇರಿಕ ಮತ್ತು ವಿಲಾಯತಿಯ ಬೇರೆ ಬೇರೆ ಮಿಶ್ಯನ್ ಸಂಘಗಳೂ ದೇವವಾಕ್ಯವಿಸ್ತಾರಕಾರ್ಥಕ ಮುಂತಾದ ಬೇರೆ ಬೇರೆ ಸಂಘಗಳೂ ತಮ್ಮ ಕೆಲಸದವರನ್ನು ಈ ದೇಶಕ್ಕೆ ಕಳುಹಿಸಿ ಅವರ ಮುಖಾಂತರ ಅನೇಕ ಕ್ರೈಸ್ತ ಸಭೆಗಳನ್ನು ಸ್ಥಾಪಿಸಿ ನಾನಾ ವಿಧವಾಗಿ ಈ ದೇಶದ ಜನರಿಗೆ ಬಹಳ ಉಪಕಾರ ಮಾಡಿದಕ್ಕಾಗಿ ಈ ಸಭೆಯವರು ತಮ್ಮ ಮನಃಪೂರ್ವಕವಾದ ಕೃತಜ್ಞತೆಯನ್ನು ಅರಿಕೆ ಮಾಡುತ್ತಾರೆ.

ಒಟ್ಟಿಗೆ ೮ ಕೂಟಗಳು ಆದವು. ಕೆಲವು ದೇಶಸ್ಥ ಬೋಧಕರು ಪ್ರಬಂಧಗಳನ್ನು ಓದಿ, ಕೂಡಿದವರು ಧರ್ಮದ ಕೆಲಸಗಳು, ಮಕ್ಕಳ ಶಿಕ್ಷೆ ಮುಂತಾದ ಸಂಗತಿಗಳನ್ನು ಆಲೋಚಿಸಿದರು. ಹೆಚ್ಚಾದವರು ಮಹರಾಷ್ಟ್ರ, ಕೆಲವರು ಗುಜರಾತಿ, ಹಿಂದುಸ್ಥಾನಿ, ಕನ್ನಡ ಭಾಷೆಯಲ್ಲಿ ಸಹ ಮಾತಾಡಿದರು. ಈ ಪ್ರಕಾರ, ಕುಲದ ಮತ್ತು ಭಾಷೆಯ ಭೇದ ಇದ್ದರೂ, ಎಲ್ಲರಿಗಿರುವ ಅನ್ಯೋನ್ಯವು ಪ್ರಕಟವಾಯಿತು. ಬೇರೆ ಬೇರೆ ಶೀಮೆಗಳ ಕ್ರೈಸ್ತರ ಪರಿಚಿತಿ ಮಾಡುವದರಲ್ಲಿಯೂ, ಅವರವರು ಹೊಂದಿದ ಆತ್ಮದ ವರಗಳನ್ನು ನೋಡುವದರಲ್ಲಿಯೂ ಎಲ್ಲರು ಸಂತೋಷ ಪಟ್ಟರು.

ಏಪ್ರಿಲ್ ೨ನೆಯಲ್ಲಿ, ಕೂಟದವರು ಅಮೇರಿಕನ್ ಮಿಶ್ಯನ್ ದೇವಾಲಯದಲ್ಲಿ ರಾತ್ರಿ ಭೋಜನಕ್ಕೆ ಹೋಗಿ, ಮರು ದಿವಸ ಅವರಲ್ಲಿ ಸುಮಾರು ೧೫೦ ಮಂದಿ ಪಟ್ಣದ ಬೇರೆ ಬೇರೆ ಸ್ಥಳಗಳಲ್ಲಿ ದೇವರ ವಾಕ್ಯವನ್ನು ಪ್ರಸಂಗಿಸಿದರು.

ಬೇರೊಂದು ದಿನದಲ್ಲಿ ಕೆಲವು ವಿಲಾಯತೀ ಕ್ರೈಸ್ತರು ಕೂಟದವರನ್ನು ಒಂದು ಬಂಗ್ಲೆಯಲ್ಲಿ ಕೂಡಿಸಿ ಉಪಚರಿಸಿದರು. ಎರಡು ಪಕ್ಷದವರು ಪ್ರಸಂಗಗಳನ್ನು ಸಹ ಮಾಡಿದರು.

ಕೂಟದ ಒಂದು ನಿರ್ಣಯ ಯಾವದಂದರೆ: ದೇಶಸ್ಥ ಸಭೆಯವರು ಒಂದು ಮಿಶ್ಯನ್ ಸ್ಥಾಪಿಸಿ ಸ್ವಂತ ಸಾಹಸದಿಂದ, ವಿಲಾಯತೀ ಕ್ರೈಸ್ತರ ಸಹಾಯವಿಲ್ಲದೆ, ನಡಿಸ ಬೇಕು. ಅದರ ಆರಂಭ ರತ್ನಗಿರಿಯಲ್ಲಿ ಆಗ ಬೇಕು. ಈ ಉದ್ದೇಶಕ್ಕೆ ರುಪಾಯಿ ೪೫೦ ಆಗಲೆ ಕೂಡಿಸಿಟ್ಟರು. ಇದಲ್ಲದೆ ಕ್ರೈಸ್ತರ ಹುಡುಗರದೊಂದು ಪೋಷಣಾಶಾಲೆಯನ್ನೂ ದ್ವಿಭಾಷಕ ಒಂದು ಸಭಾಪತ್ರವನ್ನೂ ಸ್ಥಾಪಿಸಲಿಕ್ಕೆ ನೇಮಕವಾಯಿತು. ಈ ಸುಕೃತಗಳೆಲ್ಲಾನ್ನು ಕರ್ತನು ಅನುಕೂಲಿಸಲಿ!

ಜೂಲೈ ತಿಂಗಳಿನ ಆದಿವಾರದಲ್ಲಿ ಬಾಸೆಲ್ ಪಟ್ಣದಲ್ಲಿ ಮಿಶ್ಯನ್ ಹಬ್ಬವನ್ನಾಚರಿಸಿದರು. ಅದರ ವಿವರವಾದ ವೃತ್ತಾಂತವು ಇನ್ನು ತಲ್ಪಲಿಲ್ಲ.

ಹಿಂದಿನ ಒಂದು ಪತ್ರದಲ್ಲಿ ಅಶಂತೆ ರಾಜ್ಯದ ಅರಸನು ಶೆರೆಗೆ ವೈದು ಕೊಂಡ ಇಬ್ಬರು ಮಿಶ್ಯನೆರಿಗಳೂ ಒಬ್ಬ ಧೊರೆಸಾನಿಯೂ ಇವರ ವಿಷಯವಾದ ವರ್ತಮಾನ ಸಹ ಬಂದದೆ. ಅವರಿಗೆ ಪ್ರಯಾಣದಲ್ಲಿಯೂ ಶೆರೆಯಲ್ಲಿಯೂ ಬಿಸಿಲಿನಿಂದ ಮತ್ತು ನಾನಾ ತರದ ಕೊರತೆಯಿಂದ ಹೇರಳ ಕಷ್ಟ ಬಿದ್ದರೂ, ಅವರು ಇನ್ನು ಬದುಕಿ, ಸ್ಥಿತಿಗೆ ತಕ್ಕ ಮಟ್ಟಿಗೆ ಸ್ವಸ್ಥದಲ್ಲಿರುತ್ತಾರೆ. ಒಂದು ಕೂಸು ಮಾತ್ರ ತಕ್ಕ ಆಹಾರ ಇಲ್ಲದೆ ತೀರಿ ಹೋಯಿತು. ಇನ್ನು ಅವರು ಯಾವಾಗ ಬಿಡುಗಡೆಯಾಗುವರೆಂಬದು ಕಾಣುವದಿಲ್ಲ; ಆದರೂ ಈಗ ದೇವರ ವಾಕ್ಯವನ್ನು ಸಾರುವದಕ್ಕೆ ಅವರಿಗೆ ಸ್ವತಂತ್ರವಾಯಿತು. ಆದದರಿಂದ ಈ ಕೇಡಿನಿಂದ ಆ ಜನಾಂಗಕ್ಕೆ ಒಳ್ಳೇದಾಗುವ ಹಾಗೆ ದೇವರು ಮಾಡ್ಯಾನೆಂಬ ಕೋರಿಕೆ ಉಂಟು.

ಚಂದಾದಾರರಿಗೆ.

ಸಭಾಪತ್ರವನ್ನು ಈ ಮೂರು ವರುಷ ನಡಿಸಿದವರಿಗೆ ಬೇರೆ ಹೆಚ್ಚು ಕೆಲಸ ಬಿದ್ದದರಿಂದ ಪತ್ರವನ್ನು ಒಂದು ವರುಷ ನಿಲ್ಲಿಸಲಿಕ್ಕೆ ಆಲೋಚನೆ ಹುಟ್ಟಿತು. ಆದರೆ ನಮ್ಮ ದಕ್ಷಿಣ ಕನ್ನಡದಲ್ಲಿ ಅದು ಅನೇಕರಿಗೆ ಪ್ರಿಯವಾದದರಿಂದ, ಇನ್ನು ಮುಂದೆ ಸಹಾ ಆದಷ್ಟು ಪ್ರಯತ್ನ ಮಾಡೇವು. ಮಾತ್ರ, ಒಂದೊಂದು ಅಂಕೆ ಪ್ರಕಟಿಸಲಿಕ್ಕೆ ಸ್ವಲ್ಪ ತಡವಾದರೆ, ಚಂದಾದಾರರು ಬೇಸರ ಮಾಡ ಬಾರದು.

ಮೇಲ್ಮೈಮೆಯಲ್ಲಿ ಸುಮಾರು ೧೫೫ ಮಂದಿಗೆ ಪತ್ರವು ಇನ್ನು ಬೇಡವಂತೆ. ಹೀಗಾಗಿ ಅದರ ಖರ್ಚನ್ನು ವಂತಿಗೇ ಹಣದಲ್ಲಿ ನಡಿಸಲಿಕ್ಕಾಗುವದಿಲ್ಲ. ಇದು ಸಮವಲ್ಲ. ಚಂದಾದಾರರ ಲೆಖ್ಖ ಪೂರ್ತಿಯಾಗುವ ಹಾಗೆ, ನಮ್ಮ ಜಿಲ್ಲೆಯ ಸಭೆಯವರು ಪ್ರಯತ್ನ ಮಾಡ್ಯಾರೆಂಬ ಕೋರಿಕೆ ನಮಗುಂಟು.

ಉಪದೇಶಿಗಳಾಗಲಿ ಸಭೆಯವರಾಗಲಿ ಛಾಪಿಸ ತಕ್ಕ ಪತ್ರಗಳನ್ನು ಬರದು ಕಳುಹಿಸುವದಾದರೆ ಒಳ್ಳೇದು.

Printed by Stolz & Reuther, Basel Mission Press, Mangalore.

ಬಾಲಪತ್ರ.

ಪುಸ್ತಕ ೨. 1870. ಅಂಕೆ ೧.

ಹಡಗ ನಷ್ಟ ಪಟ್ಟ ನಾವಿಕನು.

2ನೆ ಭಾಗ.

(ಇದರಲ್ಲಿ ಜೇಮ್ಸನು ಪಾದ್ರಿಥೊರೆಗೆ ತನ್ನ ಚರಿತ್ರೆಯನ್ನು ಹೇಳುತ್ತಾನೆ.)

೯. ತಾಮ್ವೆಯ ಎನ್ನನು ಮಠದಿಂದ
ಕಳುಹಿದ ಮೇಲೆನ್ ಮನೆಗ್ಹೋಗಿ,
ಮನೆ ಬಿಟ್ಟು ನಾನಿದ್ದ ಊರಿಂದ
ಹೊರಟೆನು ಒಂಟಿಗ ನಾನಾಗಿ;
ತರುವಾಯ ಒಂದ್ಹಡಗ ಕಂಡದನು
ನಾವಿಕನಾಗಿಯೆ ಶೇರಿದೆನು.

೧೦. ಭೂಮಿಯ ವಿವಿಧ ಭಾಗದಲಿ
ಮಾಡುತಲಿದ್ದೆವು ಜಲಯಾತ್ರೆ,
ಹೀಗೆಯೆ ಎಮ್ಮಯ ಯಾತ್ರೆಯಲಿ
ಕಂಟಕವೆಡರಿತು ಒಂದು ರಾತ್ರೆ;
ಆ ರಾತ್ರಿ ಎಂಹಡಗ ಒಡದ್ಹೋಗಿ
ಬಿದ್ದೆವು ನಾವ್ವೆಯ ನೀರಿನಲಿ.

೧೧. ಬಿದ್ದಲ್ಲಿ ಬಂಡೆಯು ಎನ್ಕೈಗೆ
ಶಿಕ್ಕಲು ನಾನದನಾಘಳಿಗೆ
ಹಿಡಿಯುತಲೇರ್ದೆನು ನಡುಗುತ್ತಾ,
ನಿಂತೆನು ನಿಮ್ಮನೆ ನೆನಸುತ್ತಾ;
ಮತ್ತೈಯಾ ತಾವೆನಗೆ ಕಲಿಸಿಪ್ಪ
ಪಾಠಗಳೆನಗಲ್ಲಿ ನೆನಪ್ಯಾತು—

೧೨. ತೆರಗಳು ಎನ್ನತ್ತ ಬರಲಾಗಿ
ಅವೆ ಎನ್ ಶವಕುಣಿ ಎಂಬಂತೆ
ನಾನಲ್ಲಿ ಅಲೆಯುತಲಿರಲಾಗಿ
ಆದರ ಕೊಟ್ಟಂಥ ದಿವವಾರ್ತೆ
"ಬಂಡೆಗಳ ತುದಿಯಿಂದ ಅವನನ್ನು
ನೋಡ್ವೆನು*" ಎಂಬುವ ವಚನಗಳೇ.

೧೩. ಆಗಲೆ, ನಾ ಮುಂಚೆ ಲಕ್ಷಿಸದ
ಯೇಸುವ ನಾಮವನ್ ಉಚ್ಚರಿಸಿ,
ತತ್ಕ್ಷಣ ಪ್ರಾರ್ಥಿಸಲೆಸಗುತ್ತಾ
ಮೊಣಕಾಲ್ ಊರ್ದೆನು ವಿನಯದಲಿ.
ಈ ಸ್ಥಿತಿಯೊಳ್ ಇರುಳನ್ನು
ಬಂಡೆಯೊಳು
ಕಳದೆನು ನೀರಿನ ಮಧ್ಯದೊಳು.

೧೪. ಉದಯದಿ ಕಂಡೆನು ಹತ್ರದಲಿ
ತೇಲುತ ಬರುವಂಥ ಹಲಿಗೆಯನು
ಅದನ್ ಹಿಡುಕೊಳ್ಳುತ ಸೌಖ್ಯದಲಿ
ಶೇರಿದೆನೂರಿನ ತೀರವನು.
ಅಲ್ಲಿರಲು, ನೀವೆನಗೆ ಕಲಿಸಿಪ್ಪ
ವೇದದ ಸತ್ಯಗಳ್ ನೆನಪ್ಯಾತು.

೧೫. ಹೀಗೆಯೆ ಪರಸ್ಥಳ ಶೇರಿರಲು
ಮತ್ತೊಂದ್ಹಡಗವ ಕಂಡದರೊಳ್
ಶೇರ್ದರು ಬಹು ವಿಧ ಉಪದ್ರದೊಳು

(*ಅಂಕೆಗಳು. ೨೩, ೮.)

ಸೌಖ್ಯದೊಳ್ ಎನ್‌ಮನೆ ಮುಟ್ಟಿದೆನು.
ಈಗೆನ್ನ ವಂದನೆಯಂ ನಿಮಗಿನ್ನು
ಹೇಳಲಿಕಿಲ್ಲಿಗೆ ಬಂದಿಹೆನು.

೧೬. ತಾವೆನಗೋಸ್ಕರ ಪಟ್ಟಂಥಾ
ವಿವಿಧ ಕಷ್ಟದ ಫಲ ಕಂಡು,
ಅತಿ ಮುದಗೊಳ್ಳಿರಿ ಎಂದೆಣಿಸಿ
ತಿಳಿಸಲಿಕ್ಕಿಲ್ಲಿಗೆ ಬಹೆನೆನಲೂ,
ಬೋಧಕನು ಇನ್ನಾದ್ರೂ ಇವನನ್ನು
ನಂಬದೆ ಈ ಪರಿ ನೆನಸಿದನು—

೧೭. ಇವನತಿ ತಂತ್ರ ಕುಯುಕ್ತಿಯನು
ಮಠದಲ್ಲಿ ತೋರ್ಸಿದರಿಂದಿನ್ನು
ನಾವೆಯ ಧೊರೆಯನ್ನೆ ಕೇಳುವೆನು
ಎನ್ನುತ ಕಾಗದ ಕಳುಹಿದನು;
ಆ ಧೊರೆಯು ಜೇಮ್ಸ್ ವಿಷಯ
ಬರೆದದ್ದು
ಪೇಳ್ವೆನು ಮೂರನೆ ಭಾಗದೊಳು.

3ನೆ ಭಾಗ.

(ಪಾದ್ರಿಧೊರೆಯು ಹಡಗದ ಯಜಮಾನನಿಗೆ ಬರೆದ ಕಾಗದವೂ ಹೊಂದಿದ ಉತ್ತರವೂ.)

೧೮. ನಾವೆಯ *ಕೆಪ್ಟನ್ ಧೊರೆಗಳ್ಗೆ
ಪಾದ್ರಿ ಫೆನುವೇಲ್ ಮಾಡೋ ವಂದನೆ;
ಎನ್ ಪ್ರಿಯ ಔಗುಸ್ತಿನ್ ಐಯಾ,
ಕ್ಷಮಿಸಿರಿ ತಾವು ಎನಗೈಯಾ!
ತಮ್ಮನ್ನಿಂದು ಉಪದ್ರಿಸೋದಕೆ
ತಾವೈ ಕ್ಷಮಿಸ ಬೇಕಿಂದೆನಗೆ,
ಪ್ರೀತಿ ಇಟ್ಟು ಎನ್ನ ಪ್ರಶ್ನೆಗೆ
ಬರಿಯಿರಿ ಉತ್ತರವನ್ನೆನಗೆ.

೧೯. ಜೇಮ್ಸನು ಎಂಬುವ ನಾವಿಕನು
ಆಸ್ಯ ಹಡಗದೊಳ್ಗೆ ನಿಮಗೆ
ಇದ್ದರೆ ಆತನ ನಡತೆಯನು
ವರ್ಣಿಸಿ ಕಳುಹಿಸೊದಿಂದೆನಗೆ;
ಆತನ್ ಎನಗೆ ಪೇಳ್ದ ಚರಿತ್ರೆ
ನಂಬದಲಿದನು ನಾನ್ನೈ ತಮಗೆ
ಬರ್ದಿದ್ಧೇನೆ; ಜೇಮ್ಸನ ಚರಿತ್ರೆ
ತಿಳಿಸಿರಿ, ವಂದನೆಯ್ಯೆ ನಿಮಗೆ.

೨೦. ವಂದಿತ ಫೆನುವೇಲ್ ಬೋಧಕಗೆ
ವಂದನೆ ಔಗುಸ್ತಿನ್ ಕೆಪ್ಟನ್ ಕಡೆಯಿಂ,
ತಮ್ಮದು ಪತ್ರಿಕೆ ಇಂದೆನಗೆ
ತಲ್ಪಿತು, ಅದಕ್ಕಾನ್ ಬಹು ಖುಷಿಯಿಂ
ಅಲ್ಪ ಸ್ವಲ್ಪ ಮಾತುಗಳ ಬರದು
ಜೇಮ್ಸನ ನಡತೆಗುಣವಂ ಕುರಿತು,
ಈಗ ವರ್ಣಿಸಿ ಕಳುಹಿಸುವದನು
ಓದಲು ಖುಷಿ ತಮಗಾದೀತು.

೨೧. ಜೇಮ್ಸನು ಎನ್ನೊಟ್ಟಿರಲಾಗಿ
ಆತನ ನಡತೆ ತಿದ್ದೋಕ್ಕೆನಂಗೆ
ಕಾರಣವಿರಲಿಲ್ಲವಾದದರಿಂ
ಅವನಲ್ಲಿಟ್ಟೆನು ಭರವಸವೆ;
ಹೀಗೆಯೆ ಜೇಮ್ಸನದುತ್ತಮ ಗುಣಕೆ
ಆತನನ್ ಹೊಗಳೋ ಕಾರಣವಿರುತೆ,
ಬಲ್ಲೆನಿದನ್ ಅವನನ್ನು ಕುರಿತು;
ಇನಿತ್ಯೆ ತಮಗೆನ್ ವಂದನೆಯು.

೨೨. ಔಗುಸ್ತಿನ್ ಧೊರೆಗಳ ಉತ್ತರವು
ಪಾದ್ರಿ ಫೆನುವೇಲ್ ಧೊರೆಗಳ ಬಳಿಗೆ
ತಲಪುವ ಮುಂಚೆ ಜೇಮ್ಸ್ ಹೊರಟು
ಹೋದನಿನ್ನೊಮ್ಮೆ ಜಲನಿಧಿಗೆ;
ನಾವಿಕಕೆಲಸ ಇದೊಂದನ್ನೊಲಿದು
ಶೇರಿ ಔಗುಸ್ತಿನ್ ಧೊರೆಗಳ ಬಳಿಲಿ
ಮುಂಚಿನ ನಾವೆಯೊಳ್ಗೆ ತಿರಿಗಿ
ಜಲಸಂಚಾರವ ಮಾಡಿದನು.

೨೩. ತನ್ಮಧ್ಯೆ ಫೆನುವೇಲ್ ಧೊರೆಗಳ್ಗೆ
ತಲ್ಪಿತು ಔಗುಸ್ತಿನ್ನೈಯನ ಪತ್ರಿಕೆ,


(*ಕೆಪ್ಟನ್=ಹಡಗದ ಯಜಮಾನನು.)

ಅವರದನೋದುತ ಇರಲಾಗಿ
ಹರುಷವು ತುಂಬಲು ಮನದಲ್ಲಿ,
ನಂಬಿ ಜೇಮ್ಸನ ಅರಿಕೆಯ ನೆಲವಂ
ಕಂಡರ್ ತನಯ ಕಷ್ಟದ ಫಲವಂ
ಹೀಗೆಯೆ ದಾಟಿತು ಸ್ವಲ್ಪ ಸಮಯ
ಇವರಿಬ್ಬರ್ ಕಾಗದ ಬರಿಯದಲೇ.

೨೪. ಮುಂದಿನ ಕಥೆಯಂ ಹೇಳೊದಕೆ
ತೊಡಗೋ ಮೊದಲು ಮುಗಿಪೆನು
ಇದನು,
ಮೂರನೆ ಭಾಗವನಂತ್ಯಕ್ಕೆ
ತರುವೆನು; ಮುಂದಿನ ಚರಿತ್ರೆಯೊಳು-
ಜೇಮ್ಸನದಂತ್ಯ ಯಾತ್ರೆಯ ಚರಿತ್ರೆ,
ಆತನ ಕಡೆಯ ಜೀವದ ಚರಿತ್ರೆ
ಪೇಳ್ವೆನು, ಪೂರ್ಣ ಮನಸಿಟ್ಟದರೊಳ್
ಓದಿರಿ ನಾಲ್ಕನೆ ಭಾಗದೊಳು.


(To be continued.) M. E. A.

ಒಂದು ಮೊಹರು.



ಇದು ಲುಥರನು ಮಾಡಿಸಿದ ಮೊಹರು. ತಾನು ಅದರಲ್ಲಿ ಸೂಚಿಸಲಿಕ್ಕಿದ್ದ ಆಲೋಚನೆಗಳ ವಿವರವು ತಾನು ಒಬ್ಬ ಸ್ನೇಹಿತನಿಗೆ ಬರದ ಪತ್ರದಲ್ಲಿ ಕಾಣ ಬರುತ್ತದೆ. ಅದು ಏನಂದರೆ: ಕೆಂಪು (ಅಂದರೆ ಸ್ವಭಾವಿಕ) ಬಣ್ಣವಿರುವ ಹೃದಯದಲ್ಲಿ ಒಂದು ಕಪ್ಪು ಕ್ರೂಜೆ ಅದೆ. ಇದರಿಂದ ಕ್ರೂಜೆ ತಾಳಿದ ಯೇಸು ಕ್ರಿಸ್ತನಲ್ಲಿಯ ವಿಶ್ವಾಸದಿಂದ ರಕ್ಷಣೆ ಉಂಟಾಗುತ್ತದೆಂದೂ ನಂಬುವವನು ನೀತಿವಂತನಾಗಿದ್ದಾನೆಂದೂ ನೆನಪು ಹುಟ್ಟ ತಕ್ಕದ್ದು. ಕ್ರೂಜೆ ಕಪ್ಪು; ಯಾಕಂದರೆ ಸ್ವಭಾವವನ್ನು ನೋಯಿಸುತ್ತದೆ; ಆದರೂ ಕೊಲ್ಲದೆ ಬದುಕಿಸುವದು. ವಿಶ್ವಾಸವು ಆದರಣೆ ಸಂತೋಷ ಸಮಾಧಾನಗಳನ್ನು ಕೊಡುತ್ತದೆಂದು ತೋರಿಸಲಿಕ್ಕೆ ಅಂಥ ಹೃದಯವು ಬಿಳೀ ಗುಲಾಬಿನ ಹೂವಿನಲ್ಲಿರ ತಕ್ಕದ್ದು. ಯಾಕಂದರೆ ಬಿಳೀ ಬಣ್ಣವು ಆತ್ಮಗಳ ದೂತರ ಬಣ್ಣವು. ಇದು ಲೋಕವು ಕೊಡುವಂಥ ಸಂತೋಷ ಸಮಾಧಾನವಲ್ಲ. ಗುಲಾಬಿಯಾದರೂ ಆಕಾಶನೀಲ ಬಣ್ಣದಲ್ಲಿ ಅದೆ; ಯಾಕಂದರೆ ಆತ್ಮದ ಸಂತೋಷವು ಮುಂದಿನ ಪರಲೋಕದ ಸಂತೋಷದ ಆರಂಭವಾಯಿತು. ಅದು ಈಗ ಇನ್ನು ಸಂಪೂರ್ಣವಾಗದಿದ್ದರೂ ಪ್ರತೀಕ್ಷೆಯು ಅದನ್ನು ಹಿಡು ಕೊಳ್ಳುತ್ತದೆ. ಅದೆಲ್ಲಾದರ ಸುತ್ತಲು ಭಂಗಾರ ಬಣ್ಣದ ಉಂಗರವದೆ. ಭಂಗಾರವು ಎಲ್ಲ ಲೋಹಗಳಲ್ಲಿ ಬೆಲೆಯುಳ್ಳದ್ದು ಹ್ಯಾಗೋ ಹಾಗೆಯೇ ಈ ಪರಲೋಕದ ಭಾಗ್ಯವು ನಿರಂತರವಾದದ್ದೂ, ಬೇರೆ ಎಲ್ಲ ಸಂತೋಷಕ್ಕೂ ಸಂಪತ್ತಿಗೂ ಶ್ರೇಷ್ಠವಾದ್ದೂ ಎಂದು ತೋರಿಸುವದಕ್ಕಾಗಿಯೇ.

ನರಿಯೂ ದ್ರಾಕ್ಷಾಫಲವೂ.



ಇದು ದ್ರಾಕ್ಷೇ ಹಣ್ಣುಗಳನ್ನು ಭಕ್ಷಿಸುವ ಮೂರು ನರಿಗಳ ಚಿತ್ರವು. ಇವು ವಿಲಾಯತಿಯಲ್ಲಿ ದ್ರಾಕ್ಷೆತೋಟದವರಿಗೆ ಬಹು ತೊಂದರೆ ಕೊಡುತ್ತವೆ; ಯಾಕಂದರೆ ಒಳ್ಳೇ ಶೀಯಾದ ಹಣ್ಣು ಮಾತ್ರ ತಿಂದು ಸುಮಾರು ತರದ್ದು ಮುಟ್ಟದೆ ಒಕ್ಕಲಿಗರಿಗೆ ಬಿಡುವವು; ಹಾಗೆಯೇ ಕೊಡಗು ಶೀಮೆಯ ಕಾಪಿ ತೋಟಗಳಲ್ಲಿ ಮಾಡುತ್ತವಲ್ಲ.

ಆದರೂ ಕುಯುಕ್ತಿಯುಳ್ಳ ನರಿ ಸಹಾ ಒಂದೊಂದಾವರ್ತಿ ಕೃತಾರ್ಥವಾಗದೆ ಹೋಗಬೇಕು. 2000 ವರುಷ ಹಿಂದೆ ಗ್ರೀಕ ದೇಶದಲ್ಲಿ ಒಬ್ಬ ಜ್ಞಾನಿಯು ಬರದ ಈ ವಿಷಯವಾದ ನೀತಿಕಥೆಯನ್ನು ಕೇಳಿರಿ:

ಒಂದಾನೊಂದು ನರಿಯು ಹಸಿದು ತಿರುಗುತ್ತಿರಲಾಗಿ, ಒಂದು ದ್ರಾಕ್ಷೇ ಮಂಟಪದೊಳಗೆ ಹೊಕ್ಕು, ಮೇಲಕ್ಕೆ ನೋಡುವ ಸಮಯದಲ್ಲಿ, ಬಹಳ ಸೌಂದರ್ಯವಾದ ದ್ರಾಕ್ಷೆಯ ಗೊನೆಗಳು ಜೋತಾಡುತ್ತಿದ್ದವು. ಅದನ್ನು ಕಂಡು, ಆ ಮಂಟಪವು ಉನ್ನತವಾಗಿದ್ದ ಕಾರಣ, ಕೈಗೆ ನಿಲುಕದೆ ಇರುವದರಿಂದ, ಹಾರಿ ಹಾರಿ, ನರಿಯು ದಣಿಯುವಂಥಾದ್ದಾಯಿತೇ ಹೊರ್ತು, ಒಂದು ದ್ರಾಕ್ಷೆಯಾದರೂ ಪ್ರಾಪ್ತಿಯಾಗಲಿಲ್ಲ. ಕಟ್ಟಕಡೆಗೆ ಸ್ವಲ್ಪ ದೂರ ದ್ರಾಕ್ಷೆಯ ಕಡೆಗೆ ನಿಂತು ಕೊಂಡು ಹೇಳಿದ್ದೇನಂದರೆ: ಈ ದ್ರಾಕ್ಷೆಯನ್ನು ಯಾವನಾದರೂ ಯಾಕೆ ತಕ್ಕೊಳ್ಳವಲ್ಲ? ಇವು ಕಸಗಾಯಿ ಹುಳಿ ಎಂದು ನಾನು ಮಾತ್ರ ಬಿಟ್ಟು ಹೋಗುತ್ತೇನೆ ಎಂದು ಹೊರಟು ಹೋಯಿತು.

ಅದಕ್ಕವನು ಕೊಡುವ ತಾತ್ಪರ್ಯವೇನಂದರೆ—

ಕೆಲವು ಜನರು ಹೀಗೆ ಇರುತ್ತಾರಲ್ಲ: ತಮಗೆ ಯಾವ ವಸ್ತು ಕೈಶೇರುವದಿಲ್ಲವೋ, ಆ ವಸ್ತುವಿಗೆ ಏನಾದರೂ ದುರ್ಗುಣವ ಯೋಚಿಸಿ ಕುಂದನ್ನಿಡುತ್ತಾರೇ ಹೊರ್ತು ತಮ್ಮಲ್ಲಿ ಹಗುರತನ ತೋರಿಸುವದಿಲ್ಲ. ಇದು ಸರಿಯೋ?

ನರಿಯ ಕುಯುಕ್ತಿಯನ್ನು ಸೂಚಿಸುವ ಮತ್ತೊಂದು ಕಥೆ ಉಂಟು. ಅದು ಸಂಭವಿಸಿತೇನೋ ನೀವು ಹೇಳಿರಿ! ಒಂದು ಕಾಗೆಯು ಒಂದು ಮಾಂಸ ತುಂಡು ಕದ್ದುಕೊಂಡು ಒಂದು ಮರದಲ್ಲಿ ಕೂತು ತಿನ್ನುತ್ತಿತ್ತು. ಆದರೆ ಸುಮ್ಮನೆ ಇರ ಕೂಡದೆ ತಿನ್ನುವಾಗ ಕ್ರಾ ಕ್ರಾ ಎಂದ್ಹೇಳಿತು. ಹಶಿವೆ ಇದ್ದ ಒಂದು ನರಿ ಅದನ್ನು ಕೇಳಿ ಬಂದು, ಕಾಗೆ ಭಕ್ಷಿಸುವದನ್ನು ನೋಡಿ, ಅತಿ ಆಶೆಯುಳ್ಳವನಾಗಿ, ನಮಸ್ಕಾರ ಮಾಡಿ ಯುಕ್ತಿಯಿಂದ ಮಾತಾಡಿದ್ದೇ

ನಂದರೆ: ಓ ಕಾಗೆಯೇ, ನಿನ್ನಂಥ ಸುಂದರವಾದ ಪಕ್ಷಿ ನಾನು ಎಂದೂ ನೋಡಿದ್ದಿಲ್ಲ. ನಿನ್ನ ಸ್ವರವು ನಿನ್ನ ತುಪ್ಪಳಿನಷ್ಟು ರಮ್ಯವಾಗಿದ್ದರೆ, ನೀನು ಪಕ್ಷಿಗಳ ಅರಸನಾಗಿರ ತಕ್ಕವನೇ ಸರಿ. ಕಾಗೆಯು ಈ ಸ್ತೋತ್ರವನ್ನು ಕೇಳುತ್ತಲೇ ಉಬ್ಬಿ ಕೊಂಡು ತನ್ನ ಸ್ವರವನ್ನು ಕೇಳಿಸಲಿಕ್ಕೆ ಉಚ್ಚು ತೆರದಿತ್ತು. ಆಗ ಮಾಂಸ ತುಂಡು ಬಿದ್ದು ಹೋಯಿತು. ನರಿಯು ಕಾಗೆಗೆ ಹಾಸ್ಯ ಮಾಡಿ, ತಾನು ಆಶಿಸಿದ ಪದಾರ್ಥವನ್ನು ನುಂಗಿ ಬಿಟ್ಟು ಹೋಯಿತು.

ಶೋಧನೆಯು.

ಒಂದಾನೊಂದು ಸಾರಿ ಬಹಳ ಭಕ್ತಿಯುಳ್ಳ ದೇವದತ್ತನೆಂಬ ಒಬ್ಬ ಮುದುಕನ ಹತ್ತರ ಇಬ್ಬರು ಯೌವನಸ್ಥರು ಬಂದು—ಅಜ್ಜಾ, ದುರ್ವ್ಯಸನಗಳನ್ನಗಲಿ ಕಾಮಾದಿಗಳನ್ನು ನಿಗ್ರಹಿಸಿ ಬಿಡುವ ಉಪಾಯವೇನೆಂದು ಕೇಳಿದರು. ಅದಕ್ಕೆ ಆ ಮುದುಕನು ಒಬ್ಬನಿಗೆ ಒಂದು ಸಣ್ಣ ಗಿಡವನ್ನೂ, ಇನ್ನೊಬ್ಬನಿಗೆ ಆತನಷ್ಟೆ ಉದ್ದವಾದ ಒಂದು ಗಿಡವನ್ನೂ ತೋರಿಸಿ, ಇವುಗಳನ್ನು ಕಿತ್ತು ಹಾಕಿರೆಂದು ಹೇಳಿದನು. ಮೊದಲನೇಯವನು ಏನೂ ಪ್ರಯಾಸವಿಲ್ಲದೆ, ಆ ಚಿಕ್ಕ ಗಿಡವನ್ನು ಕಿತ್ತು ಹಾಕಿದನು. ಇನ್ನೊಬ್ಬನೂ ಆ ದೊಡ್ಡ ಸಸಿಯನ್ನು ಬೇರುದರಿಸಿ ಹಾಕಿ ಬಿಟ್ಟನು; ಆದರೆ ಇದನ್ನು ಎರಡು ಕೈಯಿಂದ ಹಿಡಿದು, ಬಲವಾಗಿ ಮೀಟಿ ಪ್ರಯಾಸ ಪಟ್ಟದರಿಂದ ಮಾತ್ರವೇ ಕಿತ್ತು ಹಾಕಲಿಕ್ಕೆ ಕೈಕೂಡಿ ಬಂತು. ಕಡೆಯಲ್ಲಿ ಆ ಮುದುಕನು ಅವರಿಗೆ ಉದ್ದವಾದ ಆಳಿನಷ್ಟು ನೀಳವುಳ್ಳ, ಬೇರು ತಕ್ಕಷ್ಟಾಗಿ ಊರಿ ಹೋಗಿದ್ದಂಥಾ ಒಂದು ಮರವನ್ನು ತೋರಿಸಿ—ಈಗ ಈ ಸಣ್ಣ ಮರವನ್ನು ಕಿತ್ತು ಹಾಕಿರೆಂದಾಗ, ಅವರಿಬ್ಬರೂ ಹೋಗಿ ಎಷ್ಟೋ ಕಷ್ಟ ಪಟ್ಟು ಮೀಟಿ, ಕಿತ್ತಾಡಿ, ಪ್ರಯತ್ನ ಮಾಡಿದರೂ, ಕಿತ್ತು ಹಾಕಲಾರದೆ, ಬಿಟ್ಟು ಬಿಡ ಬೇಕಾಯಿತು. ಅಷ್ಟಾದನಂತರ ಆ ಮುದುಕನು—ಮಕ್ಕಳೇ, ತಿಳಿದು ಬಂತೋ? ಆ ಸಸ್ಯಾದಿಗಳು ದುರ್ವ್ಯಸನ ದುರಾಶಾಪಾಶಗಳಿಗೆ ಉಪಮೆ ಆಗಿದ್ದಾವೆ. ಇವುಗಳು ಬೀಜವಾಗಿ ಮೊಳಿತು, ಬೆಳೆಯಲಾರಂಭಿಸುತ್ತಲೇ ಕಿತ್ತು ಹಾಕಲ್ಪಡ ಬೇಕು; ಸ್ವಲ್ಪ ಬೆಳದು ಬಂದ ಮೇಲೆ ಅವುಗಳನ್ನು ನಿರ್ಮೂಲ ಮಾಡುವದು ಪ್ರಯಾಸವು; ಬೇರೂರಿ, ಹೆಚ್ಚಾಗಿ ಬೆಳದಿರುವ ಇಷ್ಟ ಆಶೆಗಳನ್ನು ಜೈಸಿ ಬಿಡೋಣ ಸುಮಾರು ಅಸಾಧ್ಯ ಕೆಲಸವಾಗಿದೆ. ಅದುಕಾರಣ ಜಯಕ್ಕೆ ಇನ್ನೂ ಮಾರ್ಗವಿರುವಾಗಲೇ ಯುದ್ಧಕ್ಕೆ ಹತ್ತಿ ಜಾಗ್ರತೆಯಾಗಿಯೂ ಧಿಟವಾಗಿಯೂ ಹೋರಾಡ ಬೇಕು. ಸರ್ಪದ ಸಮುಖದಲ್ಲಿಂದ ಓಡಿ ಹೋಗುವ ಪ್ರಕಾರ ಪಾಪಕ್ಕೆ ಓಡಿ ತಪ್ಪಿಸಿ ಕೊಳ್ಳ ಬೇಕು ಎಂಬುವ ಮಾತಿಗೆ ಅನುಸಾರವಾಗಿ ನಡದ ಒಬ್ಬ ಹುಡುಗನ ಕಥೆಯನ್ನು ಹೇಳುತ್ತೇನೆ:

ಅನಾಥ ಹುಡುಗನೊಬ್ಬನು ತಿರಿಕನಾಗಿ ಸಂಜೇ ವೇಳೆಯಲ್ಲಿ ಒಂದು ಮನೆಯ ಬಾಗಲಿನ ಹತ್ತರ ಬಂದು, ರಾತ್ರಿಗೆ ಉಳುಕೊಳ್ಳುವ ಬಗ್ಗೆ ಬಿಡುದೀ ಸ್ಥಳವನ್ನು ಬೆಸಗೊಂಡನು. ಆ ಮನೆಯ ಯಜಮಾನನು ಬಡ ಹುಡುಗನನ್ನು ಕನಿಕರಿಸಿ, ಕೋಣೆಯಲ್ಲಿಯೇ ಒಂದು ಬೇಂಚಿನ ಮೇಲೆ ಹುಲ್ಲು ಹಾಸಿ, ಮಲಗಿಸಿದನು. ಮನೆಯವರೆಲ್ಲರೂ ಸಹ ಮಲಗಿಕೊಂಡು ನಿದ್ದೆ ಹೋದ ಮೇಲೆ, ಆ ಹುಡುಗನು ಇನ್ನೂ ಜಾಗರನಾಗಿದ್ದು, ತನ್ನ ಪೂರ್ವೋ

ತ್ರರಗಳನ್ನು ಮನನೆ ಮಾಡಿ ಕೊಳ್ಳುತ್ತಿದ್ದಾಗ, ಅವನ ಸಮೀಪದಲ್ಲಿ ಗೋಡೆಗೆ ತೂಗ್ಹಾಕಿದ್ದ ಗಡಿಯಾರ ಟಿಕ್ ಟಿಕ್ ಎನ್ನುವ ಶಬ್ದ ಅವನ ಕಿವಿಗೆ ಕೇಳ ಬಂತು; ಅದನ್ನು ಕೇಳಿದ ಕೂಡಲೇ—ಪಸಂದಾಯಿತು, ನಾನು ಮೆಲ್ಲ ಮೆಲ್ಲಗೆ ಎದ್ದು, ನಿಃಶಬ್ದವಾಗಿ ಗಡಿಯಾರ ಪರಿಗ್ರಹಿಸಿ, ಓಡಿ ಹೋದರೇನು? ರಾತ್ರಿ ಇರುವಾಗಲೇ ಓಡಿ ತಪ್ಪಿಸಿ ಕೊಂಡರೆ, ಆಯಿತಲ್ಲಾ ಎಂಬ ಆಲೋಚನೆ ಅವನ ಮನಸ್ಸಿನಲ್ಲಿ ಹುಟ್ಟಿತು; ಆದರೆ ಅವನ ತಾಯಿ ಅನೇಕಾವರ್ತಿ ಹೇಳುತ್ತಿದ್ದ, ಕದ್ದುಕೊಳ್ಳ ಬಾರದೆಂಬ ದೇವರ ಆಜ್ಞೆಯು ನೆನಪಿಗೆ ಬಂದದರಿಂದ, ಫಕ್ಕನೆ ಹುಟ್ಟಿದ ದುರಾಶೆಯ ಆಲೋಚನೆಯನ್ನು ಸ್ವಲ್ಪ ಹೊತ್ತಿಗೆ ಅಣಗಿಸಿ ಕೊಳ್ಳಲಿಕ್ಕಾಯಿತು; ಆದರೆ ತಿರಿಗಿ ಮತ್ತಷ್ಟು ಬಲವಾಗಿ ತಲೆ ಮೇಲೆ ಮಾಡಿಕೊಂಡು ಬಂದು, ಶೋಧಕನು ಯುಕ್ತಿಯ ಮಾತನ್ನು ಹೇಳಿ, ಬೋಧಿಸಿದ್ದೇನಂದರೆ: ಸಂಶಯ ಪಟ್ಟು ತಡೆಯುವದ್ಯಾಕೆ? ಈ ಮನೆಯಲ್ಲಿ ತಕ್ಕಷ್ಟು ಆಸ್ತಿಪಾಸ್ತಿ ಇರುವ ಹಾಗೆ ಕಾಣುತ್ತದಲ್ಲಾ? ಈ ಮನೆಯವರಿಗೆ ಈ ಗಡಿಯಾರ ಇದ್ದರೇನು? ಹೋದರೇನು? ಆದರೆ ಕೇವಲ ಗರೀಬನಾದ ನಿನಗೆ ಅದರಿಂದ ಬಹಳ ಸಹಾಯವೂ ಪ್ರಯೋಜನವೂ ಆದೀತು. ಅದನ್ನು ತೆಗದು, ಮಾರಿ ಬಿಟ್ಟು, ಸಿಕ್ಕುವ ಹಣಕ್ಕೆ ತಕ್ಕ ವಸ್ತ್ರಾದಿಗಳನ್ನು ತೆಗದು ಕೊಳ್ಳ ಬಹುದು. ಆಗ್ಯೆ ಒಂದು ಕಾಸಿಗಾದರೂ ಬಾರದ ನಿನ್ನ ಹರಕು ಬಟ್ಟೆಗಳನ್ನು ಬಿಸಾಡಿ, ಮರ್ಯಾದೆಯ ವಸ್ತ್ರಗಳನ್ನು ಹಾಕಿಕೊಂಡು, ಯಾರ ಹತ್ತರಾದರೂ ಹೋಗಿ, ಒಂದು ಚಾಕ್ರಿ ಮಾಡಿ ಕೊಂಡು, ತಿರಿದುಂಬುವ ಹೀನ ಮಾರ್ಗವನ್ನು ಬಿಟ್ಟು, ನಿನ್ನ ಕಷ್ಟಾರ್ಜನೆ ತಿಂದು, ಮಾನಸ್ಥನಾದ ಗೃಹಸ್ಥನಾಗ ಬಹುದು. ನಿಶ್ಚಯವಾಗಿ ದೇವಘಟನೆಯಿಂದಲೇ ಇಂಥಾ ಅನುಕೂಲವಾದ ಸಂದರ್ಭವು ನಿನಗೆ ಬಿದ್ದು ಅದೆ. ಆದರೆ ಕಾಲೋಚಿತವಾಗಿ ನಡೆದು, ಘಾಳಿ ಬೀಸುತ್ತಿರುವಾಗಲೇ ತೂರ ಬೇಕು ಎಂದು ಈ ಪ್ರಕಾರವಾಗಿ ಪ್ರೇರೇಪಿಸಿ, ಮನಸನ್ನೆಬ್ಬಿಸ ಯತ್ನೈಸಿದ ಶೋಧಕನಿಗೆ ಆ ಹುಡುಗನು ಕಿವಿ ಕೊಡದೆ, ಅಂಜಿ ಕೊಂಡು, ತೀವ್ರವಾಗಿ ಎದ್ದು, ಕೋಣೆಯ ಕಿಟಕಿಯನ್ನು ತೆರದು, ಹೊರಗೆ ಹಾರಿ ಯಮನ ದೂತರು ಬೆನ್ನು ಹತ್ತಿ ಬರುತ್ತಾರೋ? ಮೆಟ್ಟಿದ ಭೂಮಿ ಬೆಂಕಿ ಹೊತ್ತಿ ಸುಡುತ್ತದೋ? ಏನೋ? ಎಂದು ಭಯದಿಂದ ಓಡುತ್ತಾ, ಓಡುತ್ತಾ ಸಮೀಪದಲ್ಲಿದ್ದ ಒಂದು ತೋಪಿನಲ್ಲಿ ಶೇರಿದನು. ಶೇರುವಾಗ ಎಡವಿ ಬಿದ್ದನು. ಮರು ದಿವಸ ಹೊತ್ತು ಮೂಡುವ ಪರ್ಯಂತರ ಬಿದ್ದಲ್ಲಿಯೇ ಮಲಗಿ ಕೊಂಡನು. ರಾತ್ರಿ ಹೋಗಿ ಅರುಣೋದಯವಾಗುತ್ತಲೇ ಎಚ್ಚರವಾಗಿ ನೋಡುವಾಗ, ತಾನು, ಗಲ್ಲಿಗೆ ಹಾಕಲ್ಪಟ್ಟು ತಮ್ಮ ಕರ್ಮಗಳ ಫಲವ ಹೊಂದಿ ಸತ್ತು ಹೋದ ಕಳ್ಳರ ಎಲುವುಗಳಿಗೆ ಕಾಲು ತಗಲಿ, ಎಡವಿ ಬಿದ್ದು, ತೂಗು ಮರದ ಕೆಳಗೆ ಮಲಗಿ ಕೊಂಡಿದ್ದದ್ದನ್ನು ಕಂಡನು. ಕೂಡಲೇ ವಿಸ್ಮಿತನಾಗಿ ಎದ್ದು, ಶೋಧನೆಯನ್ನು ಎದುರಿಸಿ, ಜಯಿಸಿ ಬಿಡುವ ಹಾಗೆ, ತನಗೆ ಬುದ್ಧಿ ತ್ರಾಣಗಳನ್ನು ದಯ ಪಾಲಿಸಿದ ದೇವರನ್ನು ಕೊಂಡಾಡಿ, ರಾತ್ರಿಯಲ್ಲಿ ಓಡಿ ಬಿಟ್ಟ ಮನೆಗೆ ತಿರಿಗಿ ಹೋಗಿ, ತಾನು ಓಡಿ ಹೋದ ಕಾರಣವನ್ನು ಹೇಳಿ ತಿಳಿಸಿದನು. ಮಕ್ಕಳಿಲ್ಲದವನಾಗಿದ್ದ ಆ ಧನವಂತ ಗೃಹಸ್ಥನು ಅದನ್ನು ಕೇಳಿ, ಬಹಳ ಸಂತೋಷ ಪಟ್ಟು, ಆ ಹುಡುಗನನ್ನು ಪುತ್ರಸ್ವೀಕಾರ ಮಾಡಿ ಕೊಂಡನು.

ಕನಕವೃಷ್ಟಿಯ ಕಾಲವು ಪ್ರಾತಃಕಾಲವೇ.

ಕನಕವೃಷ್ಟಿ ಆಗುತ್ತಿದ್ದರೆ, ಅಂದರೆ ಆಕಾಶದಿಂದ ಮಳೆಯು ಸುರಿದು ಬರುವ ಪ್ರಕಾರ ಭಂಗಾರವು ಸುರಿದು ಬರುತ್ತಿದ್ದರೆ, ಎಷ್ಟೋ ಸಂತೋಷವಾದೀತಲ್ಲಾ? ಭಂಗಾರವು ನಾಳೆಯ ಪ್ರಾತಃಕಾಲಕ್ಕೆ ತಪ್ಪದೆ ಮಳೆಯ ಹಾಗೆ ಆಕಾಶದಿಂದ ಬೀಳುವ ವರ್ತಮಾನವು ಹುಟ್ಟಿ, ಹಬ್ಬಿ ಹೋಗಲಿಕ್ಕೆ ನಿಜ ಕಾರಣವಿರುವ ಪಕ್ಷದಲ್ಲಿ ಭಂಗಾರವನ್ನು ಕೂಡಿಸಿ ಸಂಗ್ರಹ ಮಾಡಲಿಕ್ಕೆ ನಾಳೇ ಮುಂಜಾನೆಯಲ್ಲಿಯೇ ಶಯನ ಬಿಟ್ಟು, ಏಳದೆ ಹೋಗುವವರ್‍ಯಾರಾದರೂ ಇದ್ದಾರೋ? ಅಂಥ ಶುಭ ಸಮಾಚಾರವನ್ನು ಕೇಳಿದವರೆಲ್ಲರಲ್ಲಿ, ನಾನು ನಾಳೆ ಬಹಳ ಮುಂಜಾನೆಯಲ್ಲಿಯೇ ಎದ್ದು, ಕೈಲಾಗುವಷ್ಟು ಹೆಕ್ಕಿಕೊಂಡು ಸಂಚಿಸ ಬೇಕೆಂಬುವ ಮನಸ್ಸು ಹುಟ್ಟದೆ ಹೋಗಲಿಕ್ಕಿಲ್ಲ. ಆದರೆ ಕನಕವೃಷ್ಟಿ ಎಂಬ ಭಂಗಾರಮಳೆ ಎಂದೂ ಬರಲಿಲ್ಲ, ಬರಲಿಕ್ಕೂ ಇಲ್ಲ. ಹಾಗಾದರೆ ಕನಕವೃಷ್ಟಿಯ ಕಾಲವು ಪ್ರಾತಃಕಾಲವೇ ಎಂಬರ್ಥವುಳ್ಳ ಗೆರ್ಮಾನರಲ್ಲಿ ವರ್ತಿಸುವ ಗಾದೆಯಲ್ಲಿ ಏನೂ ಸತ್ಯವಿಲ್ಲವೆಂಬ ಹಾಗಾಯಿತಲ್ಲಾ! ಅಲ್ಲಾ, ತಮ್ಮಾ! ಹಾಗಲ್ಲಾ! ಈ ಗಾದೆಯ ಶಬ್ದಾರ್ಥದಲ್ಲಿ ಏನೂ ನಿಜವು ಕಾಣದಿದ್ದರೂ, ಅದರ ಅಭಿಪ್ರಾಯಾರ್ಥವು ತೀರಾ ನಿಜವೂ ಸೂಕ್ಷ್ಮವೂ ಆಗಿರುತ್ತದೆ. ತಾಮಸಿಯಾಗಿರದೆ, ದಿನ ದಿನಕ್ಕೆ ಪ್ರಾತಃಕಾಲದಲ್ಲಿಯೇ ಎದ್ದು, ತನ್ನ ಉದ್ಯೋಗದ ಕೆಲಸಗಳನ್ನು ಸತ್ಯವಂತನಾಗಿ ನಡಿಸುತ್ತಾ ಬರುವವನು ಭಂಗಾರ ಕಂಡು ಕೊಂಡು ಸಂಪಾದಿಸ ಬಹುದು. ಇಂಥವನ ಕೈಗಾರಿಕೆಯ ಉದ್ಯೋಗವು ಅವನ ಮನೆಯ ಚಿನ್ನಾಧಾರವಾಗಿದೆ.

ಆದರೆ ನಿನಗೆ ಭಾರಿ ಭಂಗಾರ ಪ್ರಾಪ್ತವಾದರೂ, ಪ್ರಯೋಜನವೇನು? ಅದು ಕಾಲಾಂತರದಲ್ಲಿ ಬರುತ್ತದೆ, ಕಾಲಾಂತರದಲ್ಲಿ ಹೋಗುತ್ತದೆ. ಅದನ್ನು ಹೆತ್ತವಳೂ ತಿನ್ನುವವಳೂ ಪೃಥ್ವಿಯೇ. ಮಣ್ಣಿನಿಂದಾದದ್ದು ಮಣ್ಣಾಗಿ ಹೋಗುವಂಥಾದ್ದಾಗಿದೆ. ಹೀಗಿರುವದರಿಂದ ಭಂಗಾರವನ್ನಲ್ಲ, ದೇವರನ್ನೇ ಆಶಿಸಿ ಹುಡುಕುತ್ತಿರು! ಸೂರ್ಯೋದಯವಾಗುವದಕ್ಕಿಂತ ಮುಂಚೆ ಆತನ ಕರುಣಾಕಟಾಕ್ಷವನ್ನು ಅರಸಿಕೋ! ಜಗದೀಶ್ವರನ ದಯವಿದ್ದರೆ, ಜಗತ್ತೆಲ್ಲಾ ನಿನ್ನದು. ದೇವರು ಅಖಿಲಾಂಡದ ಸರ್ವ ಪದಾರ್ಥಗಳಿಗೆ ಮೇಲಾಗಿ ಮೇಲಾದವನು. ಹೊನ್ನು ನಿನಗೆ ಏನೂ ಆದರ ಕೊಡಲಾರದ ಒಂದು ಜಡ ವಸ್ತು. ನಿನಗೆ ದಿಕ್ಕು ಕಾಣದೆ ಹೋಗಿ, ಕಡು ಕಂಟಕಸಂಕಷ್ಟಗಳು ನಿನ್ನ ಪ್ರಾಣ ಕಂಠಗತವಾಗ ಮಾಡುವ ಸಮಯದಲ್ಲಿಯಾದರೂ ದೇವರು ಆಲೋಚನಾಕರ್ತನಾಗಿಯೂ ಆದರಿಕನಾಗಿಯೂ ಸಹಾಯಕನಾಗಿಯೂ ರಕ್ಷಕನಾಗಿಯೂ ನಿನ್ನನ್ನು ಸಂದರ್ಶಿಸ ಬಹುದು. ಭಂಗಾರವು ನಿರ್ಭಯ, ಸಮಾಧಾನ ಭಾಗ್ಯವನ್ನು ಹರಣ ಮಾಡುವದು. ದೇವರು ಭಯ, ಸಂತಾಪ ನಿರ್ಭಾಗ್ಯವನ್ನು ಹರಣ ಮಾಡುವವನು. ಪ್ರಾತಃಕಾಲದಲ್ಲಿಯೇ ಆತನನ್ನು ಸ್ಮರಣೆ ಮಾಡು. ಹಳೆ ಒಡಂಬಡಿಕೆಯ ಭಕ್ತರು ಆತನಿಗೆ ತಮ್ಮ ಮುಂದೆ ಮರ ಹೊಲಗಳ ಪ್ರಥಮ ಫಲಗಳನ್ನು ಅರ್ಪಿಸುತ್ತಿದ್ದರು. ನೀನಾದರೆ ಹಗಲಿನ ಪ್ರಥಮ ಘಳಿಗೆಯನ್ನಾದರೂ ಆತನಿಗೆ ಒಪ್ಪಿಸಿ ಸೇವಿಸು. ದೇವರು ಸಹಾ ಪ್ರಾತಃಕಾಲದಲ್ಲಿ ನಿನ್ನನ್ನು ಜ್ಞಾಪಕ ಮಾಡಿ ಕೊಳ್ಳುತ್ತಾನೆ. ಕರ್ತನ ಕರುಣೆಗಳು ಒಂದೊಂದು ಹೊತ್ತಾರೆಯಲ್ಲಿ ನಿನ್ನ ಮೇಲೆ ಹೊಸದಾಗಿವೆ. ಕ

ಪಟ ಭಕ್ತನಾಗಿ, ಲೋಕಾಚಾರವಾದ ಹೊರ ತರದ ಭಕ್ತಿಗೂ ಕ್ರೈಸ್ತ ಜನಪದ್ಧತಿಗೂ, ಬ್ರಾಹ್ಮಣರು ದಿನಂಪ್ರತಿಯಲ್ಲಿ ಸಂಧ್ಯಾವಂದನೆ ಮಾಡುವ ಪ್ರಕಾರವಾಗಿ ಅಲ್ಲ, ದೇವರು ಹ್ಯಾಗೆ ನಿನ್ನ ಮೇಲೆ ದಯವಿಟ್ಟು ನಿನ್ನನ್ನು ನೆನಪು ಮಾಡಿಕೊಳ್ಳ ಬೇಕೆಂದು ನೀನು ಇಚ್ಛೈಸುತ್ತಿಯೋ ಹಾಗೆಯೇ ನೀನು ಆತನನ್ನು ಸತ್ಯವಾಗಿ ಸ್ಮರಣೆ ಮಾಡು. ನಿನಗೆ ಬರೀ ಬಾಯುಪಚಾರ ಹ್ಯಾಗೆ ಮೆಚ್ಚುವದಿಲ್ಲವೋ ಅದೇ ಪ್ರಕಾರ ಕಪಟ ಭಕ್ತಿಯು ದೇವರನ್ನು ಮೆಚ್ಚಿಸಲಾರದು. ಪ್ರಾತಃಕಾಲದಲ್ಲಿ ದೇವರು ನಿನ್ನನ್ನು ರಾತ್ರಿಯಲ್ಲಿ ಕಾಪಾಡಿದ್ದಕ್ಕಾಗಿ ಆತನಿಗೆ ಸ್ತೋತ್ರವನ್ನೂ, ಹಗಲಿನಲ್ಲಿ ನಿನ್ನನ್ನು ಪಾಪಕ್ಕೂ ಯಾವ ಅನಾರ್ಥ ಕೇಡಿಗೂ ತಪ್ಪಿಸಿ, ಸಂರಕ್ಷಿಸಿ ಕಾಪಾಡ ಬೇಕೆಂಬ ಬಿನ್ನಹವನ್ನೂ ಮಾಡು. ಈ ಪ್ರಕಾರವಾಗಿ ಪ್ರಾರ್ಥನೆಯಿಂದ ಪ್ರತಿಷ್ಠೆಯಾದ ದಿವಸವು ನಿನಗೆ ಸುಲಗ್ನದ ದಿನವಾಗುವದು. ಇಂಥ ದಿನದಲ್ಲಿ ನಿನಗೆ ಭಂಗಾರವು ಪ್ರಾಪ್ತಿಸದೆ ಹೋದರೂ, ದೇವಾನುಗ್ರಹವೂ, ಆಶೀರ್ವಾದವೂ ಸಫಲತೆಯೂ ನಿನ್ನನ್ನೂ ನಿನ್ನ ಪ್ರಯತ್ನಗಳನ್ನೂ ಮಂಡಲಿಸಿ, ಭಾಗ್ಯ ಪಡಿಸದೆ ಹೋಗಲಿಕ್ಕಿಲ್ಲಾ.

ದೇವರ ವಾಕ್ಯದ ಪ್ರಶ್ನೆಗಳು.

ಆರನೇ ಅಂಕೆಯಲ್ಲಿ ಹಾಕಿದ ೧೩—೧೫ನೇ ಪ್ರಶ್ನೆಗಳಿಗೆ ಮಂಗಳೂರಿಂದ ೧೪, ಹುಬ್ಬಳ್ಳಿಯಿಂದ ೧, ಉತ್ತರ ಬಂದವೆ. ಅವುಗಳಲ್ಲಿ ೪ ಮಾತ್ರ ಪೂರ್ಣ ಸಮವಾಗಿದ್ದವು. ಬರದವರಿಗೆ ಒಂದೊಂದು ಪುಸ್ತಕ ಶಿಕ್ಕಿತು ಹೊರ್ತು, ಉಳಿದವರಿಗೆ ಈ ಸರ್ತಿ ಏನೂ ಶಿಕ್ಕಲಿಲ್ಲ.

ಸರಿಯಾದ ಉತ್ತರಗಳು ಯಾವವಂದರೆ:

13. ೨ ದಿನಚರ್ಯ. ೩೬, ೨೧.
14. ೧ ಸಮುವೇಲ. ೧೭, ೧೩. ಮತ್ತು ೧ ದಿನಚರ್ಯ. ೨, ೧೪. ೧೫. ಬರದದೆ.
15. ನ್ಯಾಯಾಧಿಪತಿ. ೩, ೯. ಯೂದ. ೨೫.

ಹೊಸ ಪ್ರಶ್ನೆಗಳು.

16. ಕರ್ತನಾದ ಯೇಸು ಕ್ರಿಸ್ತನಿಗೆ ಅಪೊಸ್ತಲನೆಂಬ ಹೆಸರು ಎಲ್ಲಿ ಇಟ್ಟದೆ?
17. ಗೊಲೆಯಾತನ ಸಹೋದರನ ಹೆಸರೇನು?
18. ಸಾಯದಂಥ ೫ ಜೀವಿಗಳ ವೃತ್ತಾಂತ ಹೊಸ ಒಡಂಬಡಿಕೆಯಲ್ಲಿ ಅದೆ. ಅವು ಬೇರೆ ಬೇರೆ ತರ. ಅವುಗಳ ಹೆಸರೇನು?

ಆರಂಭದಲ್ಲಿ ತಿಳಿಸಿದ ಪ್ರಕಾರ, ಉತ್ತರ ಬರದು ಕಳುಹಿಸುವವರು ಯಾರ ಸಹಾಯವಿಲ್ಲದೆ ತಾವೇ ಅವುಗಳನ್ನು ಹುಡುಕಿ ಕಂಡು ಕೊಂಡಿರ ಬೇಕು, ಮತ್ತು ಅವರ ಪ್ರಾಯವು ೧೫ ವರುಷ ಮೀರ ಬಾರದು.

ಬಾ. ಪ. ಕ.

Printed by Stolz & Reuther, Basel Mission Press, Mangalore.

ಬಾಲಪತ್ರ.

ಪುಸ್ತಕ ೧. 1870. ಅಂಕೆ ೧.

ಹಡಗ ನಷ್ಟ ಪಟ್ಟ ನಾವಿಕನು.

4ನೆ ಭಾಗ.

(ಜೇಮ್ಸ್ಸ ಸಂಡರ್ಸನ ಕಡೇ ಯಾತ್ರೆಯೂ ಮರಣವೂ ಸಮಾಪ್ತಿ ವಾಕ್ಯಗಳೂ.)

೨೫. ಪೇಳ್ದಂತೆ ಜೇಮ್ಸ್ ಸಂಡರ್ಸ್ ಕಡೆ
ಯಾತ್ರೆ
ಹೊರಟು ಔಗುಸ್ತಿನ್ ಧೊರೆಯೊಟ್ಟು
ಹೋಗಲು ದೂರದ ಸ್ಥಳಗಳಿಗೆ
ಆತನಿಗಂಟಿತು ಕಡು ಜ್ವರವು.
ಈ ಸ್ಥಿತಿಯೊಳ್—ಪರಸ್ಥಳದೊಳ್—
ಹಾಸಿಗೆ ಮೇಲ್
ಇರಲಿವನ್ ಕರದನು ನಾವಿಕರಂ.

೨೬. ನಾವಿಕರ್ ಹಾಸಿಗೆ ಬಳಿಯಲ್ಲಿ
ಕುಳಿತಿರಲಿವನು ಕೈಯಲ್ಲಿ
ವೇದವ ಹಿಡಿದದರೊಳಗಿಂದ
ಓದಿದ ಮೇಲವರ್ಗಿಂತೆಂದ:
"ಸ್ಥಿರವಾದ — ಬಂಡೆಗಿಂದು — ಅಂಟೆ
ಕೊಳ್ಳಿ."
ಈ ಪರಿ ಅವರಂ ಬೋಧಿಸಿದ.

೨೭. ತನಗಿಷ್ಟು ಸೌಖ್ಯವು ಇರಲಾಗಿ
ಕರ್ದವರ್ಗಿತ್ತನು ಉಪದೇಶ;
ಈ ಪರಿ ಜ್ವರವಷ್ಟು ಹೆಚ್ಚಾಗಿ
ಕರ್ದವರ್ಗೋದಿದನೀ ಪುರುಷ
ಕಡೆ ಸರ್ತಿ;—ದಿವವಚನ—ಹಿಡಿದಿರಲ್ಕೆ
ಬೋಧಿಸಿ ಈ ಪರಿ ಹೇಳಿದನು:

೨೮. "ಯೇಸುವ ಬೆಲೆಯುಳ್ಳ ನೆತ್ತರದಿಂ
ಅತಿ ಕೆಟ್ಟ ಪಾಪಿಯು ಆದೆನಗೆ
ಕೃಪೆಯನ್ನು ದೊರಕಿತು, ನೀವಿದರಿಂ
ಧೈರ್ಯವ ತಕ್ಕೊಳ್ಳಿ; ಆ ಕ್ಷಣವೇ
ನಾವೀಗ—ಪ್ರಾರ್ಥಿಸುವಾ"—ಎಂಥೇಳಿ
ಪ್ರಾರ್ಥಿಸಿ ಶಾಂತಿಲಿ ತೀರಿದನು.

೨೯. ಜೇ. ಸಂಡರ್ಸ್ ಎಂಬ ತನ್ನ ಶಿಷ್ಯನಿಗೆ
ಈ ವಿಧ ಸುಮೃತಿಯು ಆದದನು
ಕೇಳ್ವದು ಆತನ ಬೊಧಕಗೆ
ಅತಿ ಮುದವಾಗುವದೆಂಬದನು
ಈ ಧೊರೆಯು — ನೆನಸಿದರಿಂ — ಅದ
ನ್ನೆಲ್ಲಾ
ಬಣ್ಣಿಸಿ ಅವರಿಗೆ ಕಳುಹಿದರು.

* * *

ಸಮಾಪ್ತಿ ವಾಕ್ಯಗಳು.

೩೦. ವೇದದ ವಚನಗಳಿಂ ಮನದೊಳ್
ನಾವಿನ್ನು ಬಾಲಕರಾಗಿರಲೇ
ಸಂಗ್ರಹಿಸೋದತಿ ಹಿತ, ಅದರೊಳ್
ಕಾಣ್ಬೆವು ಜೀವದ ಫಲಗಳನೇ.
ಭೂಮಿಾಲಿ–ಬಿದ್ದಿಪ್ಪ–ಕಾಳುಗಳೋಲ್
ಫಲವನ್ನೀಯೊದು ಒಂ ದಿವಸ.

೩೧. ಜೇ. ಸಂಡರ್ಸ್ ಅತಿ ದುಷ್ಟನಾಗಿ
ರಲು
ಮಠದಲಿ ಕಲ್ತ ವಚನಗಳು,
ಆತನು ಬಂಡೆಯ ಮೇಲಿರಲು
ತೆರೆಗಳು ಸುತ್ತಲು ಗರ್ಜಿಸಲು
ನೆನಪಾಗಿ—ಅವನನ್ನು—ಆ ಕ್ಷಣವೇ
ನಡಿಸಿತು ಯೇಸುವ ಹತ್ತರಕೆ.

೩೨. ಎರಡನೆ ಭಾಗದಿ ಪೇಳ್ದಂತೆ
ಅವನೀ ಕಷ್ಟದೊಳ್ ಕರ್ತನನು
ಹುಡುಕುತ ಬೇಡುತ ನಡುಗುತಲೇ
ಪ್ರಾರ್ಥಿಸ ಮುಂಕೊಂಡು ತೊಡಗಿದನು.
ಹೀಗಾಗಿ—ಕೃಪೆಯನ್ನು—ಶಿಕ್ಕಿದರಿಂ
ಕ್ಷೇಮದಿ ಊರನು ಶೇರಿದನು.

೩೩. ಹೀಗಿರೆ ಭಕ್ತಿ ಅಭ್ಯಾಸವನು
ಕಷ್ಟಗಳಿಲ್ಲವೆ ಮೃತಿ ತಾನೇ
ಬಪ್ಪಂಥ ಹೊತ್ತಿನ ವರೆಗಿನ್ನು
ಬಿಡೊದಕ್ಕಾಹುದೆ? ಬಾಲಕರೇ!
ಹಾಗಲ್ಲ — ಸುಖದುಃಖದೊಳ್ — ಬಾ
ಲ್ಯದೊಳೂ
ಭಕ್ತಿ ಅಭ್ಯಾಸವ ಬಿಡದಿರುವಾ!

೩೪. ಕೇಳ್ದಿರಿ ಸಂಡರ್ಸನ ಕಥೆಯನ್ನು,
ಬಲ್ಲಿರಿ ಆತನು ಬಾಲ್ಯದೊಳು
ಶಾಲೆಗೆ ಹೋಗುತ ವೇದವನು
ಕಲಿತದ್ದು, ನೀವೆಳೆ ಪ್ರಾಯದೊಳು
ವೇದವನೇ — ಬೋಧಿಸುವ — ಮಠ
ಕ್ಕೋಗಿ
ವೇದವ ಕಲಿಯಿರಿ ಮೊದಲಾಗಿ!

೩೫. ಬಾಲ್ಯದೊಳ್ ವೇದದ ಅಭ್ಯಾಸ
ಮಾಡುತ ಅದನ್ನು ಸ್ನೇಹಿಸುವ
ಸರ್ವರು ತಮ್ಮಯ ಹೃದಯಗಳೂ,
ತಮ್ಮನ್ನೂ ಕರ್ತನಿಗೊಪ್ಪಿಸೊದು
ಅತಿ ಸುಲಭ–ಎಂಬದನು–ಕಾಣುವರು.
ನಿಮ್ಮನ್ನೆ ಒಪ್ಪಿಸಿ ಕರ್ತನಿಗೆ.

೩೬. ನಾವೆಲ್ಲರೆಮ್ಮನ್ನು ಕರ್ತನಿಗೆ
ಒಪ್ಪಿಸಲ್, ಇನ್ನು ಇಹದಲ್ಲಿ
ಆತನು ಎಮ್ಮನ್ನು ಇಡೊ ವರೆಗೆ
ಅವನನ್ ಸೇವಿಸಿ ಸತ್ಯದಲಿ
ಅವನ್ ತ್ವರೆಯೊಳ್ — ಇಲ್ಲವಾದ್ರೆ—
ತಡವಾಗಿ
ಕರೆಯಲ್ ಹೋಗಲ್ಕೆ ಸಿದ್ಧಿಸುವಾ.

M. E. A.

ಅರಸನಾದ ಫ್ರೀದರೀಕನೂ ಅವನ ಮೈಗಾವಲು ಹುಡುಗನೂ.

ಪ್ರುಸ್ಸಿಯ ರಾಜ್ಯವನ್ನು ಆಳಿದ ಮಹಾ ಫ್ರೀದರಿಕನೆಂಬ ಅರಸನು ಒಂದಾನೊಂದು ದಿವಸ ಘಂಟೆ ಬಡಿದು ತನ್ನ ಸೇವಕನನ್ನು ಕರದನು; ಆದರೆ ಯಾರೂ ಉತ್ತರ ಕೊಡದದರಿಂದ, ಅವನು ಮೆಲ್ಲಗೆ ಬಾಗಲು ತೆರದು, ಹೊರಗೆ ಬಂದು ನೋಡುವಾಗ, ತನ್ನ ಮೈಗಾವಲು ಹುಡುಗನು ಒಂದು ಕೈಗುರ್ಚಿಯ ಮೇಲೆ ನಿದ್ರೆ ಮಾಡಿರುವದನ್ನು ಕಂಡನು. ಮತ್ತು ಅವನನ್ನು ಎಚ್ಚರಿಸುವಷ್ಟರೊಳಗೆ, ಅವನ ಕಿಶೆಯೊಳಗೆ ಅರ್ಧ ಶಿಕ್ಕಿಸಿರುವದೊಂದು ಕಾಗದವನ್ನು ನೋಡಿ, ಅದೇನೆಂದು ನೋಡ ಬೇಕೆಂಬ ಅಪೇಕ್ಷೆಯಿಂದ ಅದನ್ನು ಮೆಲ್ಲಗೆ ತೆಗದು, ತೆರದು ಓದಿ ನೋಡಿದನು. (ಅರಸಾಗಿದ್ದರೂ, ಆ ಹುಡುಗನ ಅನುಮತಿ ಇಲ್ಲದೆ, ಅವನ ಕಾಗದವನ್ನು ತೆರದು ನೋಡುವದು ಧರ್ಮವಾಗಿರಲಿಲ್ಲ, ಸರಿ; ಆದರೆ ಅವನು ದಯೆಯೂ ಪ್ರೀತಿಯೂ ಉಳ್ಳ ಅರಸನಾಗಿದ್ದದರಿಂದ ಅವನಿಗೆ ಮನ್ನಿಸುವಾ.) ಅದು ಆ ಹುಡುಗನ ತಾಯಿಯು ಬರದ ಕಾಗದವಾಗಿತ್ತು. ಅದರಲ್ಲಿ ಅವಳು, ಮಗನು ತನ್ನ ಅಲ್ಪ ಸಂಬಳದಲ್ಲಿ ಜೀವನದ ಬಗ್ಯೆ ಒಂದು ಭಾಗವನ್ನು ಕಳುಹಿಸಿದ್ದಕ್ಕಾಗಿ ಕೃತಜ್ಞತೆ ಪಟ್ಟು, ಅಂತಃಕರಣದ ಮಾತುಗಳಿಂದ ಅವನಿಗೆ ಬುದ್ಧಿಮಾರ್ಗ ಹೇಳಿದ್ದಳು; ಮತ್ತು ಈ ಮಮತಾ ಕಾರ್ಯಕ್ಕಾಗಿ ದೇವರು ಹುಡುಗನಿಗೆ ಪ್ರತಿಫಲ ಕೊಟ್ಟು ಆಶೀರ್ವದಿಸಲಿ ಎಂದು ಬರದು, ಕಾಗದವು ಮುಗಿಸಿತ್ತು.

ಈ ಕಾಗದವನ್ನು ಓದಿ ತೀರಿಸಿದಾಗ, ಅರಸನಿಗೆ ಹುಡುಗನ ಮೇಲೂ ಅವನ ಬಡ ತಾಯಿಯ ಮೇಲೂ ಕರುಣ ಹುಟ್ಟಿತು; ಮತ್ತು ಏನೂ ಸರಬರಿಸದೆ, ತನ್ನ ಕೋಣೆಗೆ ತಿರಿಗಿ ಹೋಗಿ, ತುಂಬ ನಾಣ್ಯಗಳಿರುವದೊಂದು ಚೀಲವನ್ನು ತಂದು, ಆ ಕಾಗದದ ಸಂಗಡ ಆ ಹುಡುಗನ ಕಿಶೆಯಲ್ಲಿಟ್ಟನು. ಮತ್ತು ತಿರಿಗಿ ತನ್ನ ಕೋಣೆಗೆ ಬಂದು, ದೊಡ್ಡ ಸ್ವರ ಹುಟ್ಟುವ ಹಾಗೆ ಘಂಟೆ ಹೊಡಿಯಲು, ಆ ಹುಡುಗನು ಎಚ್ಚರವಾಗಿ, ಘಾಬರಿಯಿಂದ ಓಡಿ ಬಂದು, ತನ್ನ ಒಡೆಯನ ಮುಂದೆ ನಿಂತನು.

ಅರಸನು ಕೇಳಿದ್ದು: “ನಿನಗೆ ಒಳ್ಳೇ ನಿದ್ರೆ ಹತ್ತಿತ್ತಲ್ಲ?”

ಆ ಹುಡುಗನು ಘಾಬರಿಯಿಂದ, ಹ್ಯಾಗೆ ಹೇಳಿ ಕೊಳ್ಳುವದೆಂದು ಅರಿಯದೆ, ಫಕ್ಕನೇ ಕೈಯನ್ನು ತನ್ನ ಕಿಶೆಯೊಳಗೆ ಹಾಕಲು, ನಾಣ್ಯದ ಚೀಲ ಶಿಕ್ಕಿದರಿಂದ, ಭಯಭ್ರಮೆಯಿಂದ ಅದನ್ನು ಹೊರಗೆ ತೆಗದು, ಕಳೆಗುಂದಿ, ಏನೂ ಮಾತಾಡಲರಿಯದೆ, ತಟಸ್ಥನಾಗಿ, ಅರಸನ ಕಡೆಗೆ ನೋಡಿ, ಕಣ್ಣೀರಿಡ ತೊಡಗಿದನು.

ಅರಸನು: “ಏನು ಸಂಗತಿ? ಯಾಕೆ ಅಳುತ್ತೀ?”

ಆಗ ಆ ಹುಡುಗನು ಅಳುತ್ತಲೇ ಅರಸನ ಕಾಲಿಗೆ ಬಿದ್ದು ಬೇಡಿ ಕೊಂಡು ಹೇಳಿದ್ದು: “ಓ ಮಹಾರಾಯನೇ, ಯಾರೋ ನನ್ನ ಕೇಡನ್ನು ಹುಡುಕುತ್ತಾರೆ: ನನ್ನ ಕಿಶೆಯಲ್ಲಿ ಈಗಲೇ ಶಿಕ್ಕಿದ ಈ ಹಣದ ಚೀಲದ ವಿಷಯ ನಿಶ್ಚಯವಾಗಿ ನಾನೇನೂ ಅರಿಯೆ.”

ಅದಕ್ಕೆ ಫ್ರೀದರಿಕ್ ಮಹಾರಾಯನು ಅವನನ್ನು ಸಂತೈಸಿ ಅಂದದ್ದು: “ನನ್ನ ಎಳೇ

ಸ್ನೇಹಿತನೇ, ದೇವರು ನಿದ್ರೆಯಲ್ಲಿ ಸಹ ನಮಗೆ ಇಂಥಾ ಉಪಕಾರಗಳನ್ನು ಮಾಡುತ್ತಾನೆ; ಈ ಹಣವನ್ನು ನಿನ್ನ ತಾಯಿಗೆ ಕಳುಹಿಸು; ಅವಳಿಗೆ ನನ್ನ ಸಲಾಮು ಹೇಳು; ಮತ್ತು ಅವಳಿಗೂ ನಿನಗೂ ನಾನು ಸಂರಕ್ಷಿಸುವೆನು ಎಂದು ಅವಳಿಗೆ ತಿಳಿಸು."

ಆತಿಥ್ಯವು.

ಒಂದಾನೊಂದು ದಿವಸ ಚಿಕ್ಕ ಟೋಮಿಯು ಅಡಿಗೇಕೋಣೆಗೆ ಬಂದು ಕೂಗಿದ್ದು: "ಅಮ್ಮಾ, ಅಮ್ಮಾ! ಹೊರಬಾಗಲಿನಲ್ಲಿ ಒಂದು ಮುದುಕಿಯು ಒಂದು ಕೂತಿದ್ದಾಳೆ. ನಮ್ಮ ನಾಯಿಯನ್ನು ಅವಳ ಮೇಲೆ ಬಿಡಲೋ?"

"ಅಪ್ಪಪ್ಪ! ನಾಯಿಯನ್ನು ಬಿಡುತ್ತೀಯಾ? ಯಾಕೆ? ಅವಳೇನು ಮಾಡಿದಳು?"

ಟೋಮಿಯು ಸ್ವಲ್ಪ ನಾಚಿಕೆಯುಳ್ಳವನಾಗಿ ಗುಣುಗುಟ್ಟಿದ್ದು: "ಯಾಕಂದರೆ—ಅವಳು—ಅವಳು ಒಂದು ವೇಳೆ ಕಳವು ಮಾಡ್ಯಾಳೆಂದು ನೆನಸುತ್ತೇನೆ."

ಆಗ ತಾಯಿಯು ತನ್ನ ಇನ್ನೊಬ್ಬ ಮಗಳನ್ನು ಕರದು, ಹೇಳಿದ್ದು: ಎಸ್ತರಳೇ, ಹೊರಗೆ ಹೋಗಿ, ಆ ಬಡ ಹೆಂಗಸಿಗೆ ಏನಾದರೂ ಬೇಕೋ? ಕೇಳು. ಒಂದು ವೇಳೆ ಅವಳು ಗುಡ್ಡೆಗಳಲ್ಲಿ ನಡದು ದಣಿದು ಇದ್ದಾಳು."

ಎಸ್ತರಳು ಕೂಡಲೇ ಹೊರಬಾಗಲಿಗೆ ಬಂದು, ಹೊರಗೆ ನೋಡುವಾಗ, ಅಗೋ, ಆ ಮುದುಕಿ ಹೊರಗಿರುವ ಆಲದ ಮರದ ನೆರಳಿನಲ್ಲಿ ಕೂತು ವಿಶ್ರಮಿಸಿ ಕೊಳ್ಳುತ್ತಿದ್ದಳು.

ಆಗ ಎಸ್ತರಳು ಅವಳನ್ನು ಕೇಳಿದ್ದು: "ಬಡ ಮುದುಕೀ! ನಿನಗೇನು ಬೇಕು?"

ಅದಕ್ಕೆ ಆ ಮುದುಕಿ: "ಓ ಪ್ರಿಯ ಹುಡುಗಿ, ನಿನಗೆ ಶುಭವಾಗಲಿ! ನನಗೆ ಬಹಳ ದಾಹವಾಗುತ್ತದೆ; ಕುಡಿಯುವದಕ್ಕೆ ಸ್ವಲ್ಪ ನೀರು ತಂದರೆ, ನನಗೆ ಬಹಳ ಉಪಕಾರವಾಗುವದು."

ಎಸ್ತರಳು ತಿರುಗಿ ತ್ವರೆಯಾಗಿ ಮನೆಯೊಳಗೆ ಹೋಗಿ, ಕ್ಷಣದೊಳಗೆ ನಿರ್ಮಲವಾದ ತಣ್ಣೀರು ತಕ್ಕೊಂಡು ಬಂದು, ಆ ಬಡ ಮಾರ್ಗಸ್ಥಳಿಗೆ ಕುಡಿಯ ಕೊಟ್ಟಳು.

ಅವಳು ತನ್ನ ದಾಹ ಪರಿಹರಿಸಿದ ಮೇಲೆ, ಬಹಳ ಕೃತಜ್ಞತೆಯುಳ್ಳವಳಾಗಿ, ಅಂದದ್ದು: "ಪ್ರಿಯ ಮಗುವೇ, ನನಗೆ ಆತಿಥ್ಯ ಮಾಡಿದಕ್ಕಾಗಿ ಬಹಳ ಕೃತಜ್ಞಳಾಗಿರುತ್ತೇನೆ. ಈ ನೀರು ಬಹಳ ರುಚಿಯುಳ್ಳದ್ದು! ಹಿಂದೆ ಒಂದು ಸಾರಿ ನಮ್ಮ ಕರ್ತನಾದ ಯೇಸುವು ಒಂದು ಚಂಬು ನೀರಿನ ವಿಷಯ ಏನು ಹೇಳಿದನೆಂದು ಬಲ್ಲಿಯಾ, ಮಗಳೇ?"

ಎಸ್ತರಳು ಮೌನವಾಗಿದ್ದಳು.

"ಹಾಗಾದರೆ, ನಾನು ಹೇಳುತ್ತೇನೆ; ಅದೇನಂದರೆ: ಶಿಷ್ಯನ ಹೆಸರಿನಲ್ಲಿ ಒಂದು ಪಾತ್ರೆ ತಣ್ಣೀರು ತನ್ನ ಜನರಲ್ಲಿ ಒಬ್ಬನಿಗೆ ಕುಡಿಯ ಕೊಡುವವನ್ಯಾವನೋ, ಅವನು ತನ್ನ ಪ್ರತಿಫಲವನ್ನು ಕಳಕೊಳ್ಳುವದಿಲ್ಲ, ಎಂದು ಆತನು ಹೇಳುತ್ತಾನೆ. ಪ್ರಿಯ ಚಿಕ್ಕ ಹುಡುಗಿಯೇ, ಕರ್ತನು ತಾನೇ ನಿನ್ನನ್ನು ಆಶೀರ್ವದಿಸಲಿ!"

ಆ ಮುದುಕಿಯ ಮಾತುಗಳಿಂದ ಆ ಚಿಕ್ಕ ಹುಡುಗಿಯ ಹೃದಯಕ್ಕೆ ಆನಂದಾಸ್ಪದ ವಾಯಿತು; ಯಾಕಂದರೆ, ಆ ಬಡವಳ ಆಶೀರ್ವಾದವು ಅವಳ ಮೇಲೆ ಆವಾಸವಾಯಿತು.

ಎಲ್ಲಾ ಒಳ್ಳೇದಕ್ಕೆ ಕೈಗೂಡುವದು.

ಅಕಿಬ ಎಂಬ ಒಬ್ಬ ಯೆಹೂದ ರಬ್ಬಿಯು, ಕ್ರೂರವಾದ ಹಿಂಸೆಯ ಸಮ್ಮಂಧ, ತನ್ನ ಸ್ವ ದೇಶವನ್ನು ಬಿಟ್ಟು, ಕಾಡು ಗುಡ್ಡೆಗಳಲ್ಲಿಯೂ ಅರಣ್ಯ ಅಡವಿಗಳಲ್ಲಿಯೂ ಸಂಚರಿಸುತ್ತಿದ್ದನು. ಅವನ ಪ್ರಯಾಣದ ಸಾಹಿತ್ಯವು ಇಷ್ಟೆ: ಅವನು ರಾತ್ರಿಯಲ್ಲಿ ತನ್ನ ನ್ಯಾಯಗ್ರಂಥ ವನ್ನು ಓದುವದಕ್ಕೆ ಉಪಯೋಗಿಸುವದೊಂದು ದೀಪ; ಗಡಿಯಾರದ ಬದಲಾಗಿ ಪ್ರಾತಃಕಾಲ ತನ್ನನ್ನು ಎಚ್ಚರಿಸುವದಕ್ಕೆ ಒಂದು ಕೋಳಿ; ಮತ್ತು ತಾನು ಏರುವ ಒಂದು ಕತ್ತೆ; ಇಷ್ಟು ಬಗೆ ಸಂಗಡ ತೆಕ್ಕೊಂಡು ಸಂಚರಿಸುತ್ತಾ ಇರುವಾಗ, ಸೂರ್ಯ ಅಸ್ತಮಾನವಾಗಲಿಕ್ಕಾಯಿತು. ಈ ಬಡ ಸಂಚಾರಿಗೆ ಎಲ್ಲಿ ಆಶ್ರಯ ಶಿಕ್ಕುವದು? ತನ್ನ ದಣಿದ ಶರೀರವನ್ನು ಎಲ್ಲಿ ಶ್ರಮಿಸುವದು? ಎಂದು ತಿಳಿಯಲಿಲ್ಲ. ಹೀಗೆ ನಡದು ನಡದು, ಹಶಿವೆಯಿಂದಲೂ ದಾಹದಿಂದಲೂ ನಿತ್ರಾಣಿಯಾಗಿ ಕಡೆಗೆ ಒಂದು ಚಿಕ್ಕ ಗ್ರಾಮಕ್ಕೆ ಬಂದು ಮುಟ್ಟಿದನು. ಆ ಗ್ರಾಮವು ಬಹಳ ಚಿಕ್ಕದಾದರೂ ನಿವಾಸಿತವಾಗಿರುವದನ್ನು ಕಂಡು, ಅವನಿಗೆ ಧೈರ್ಯ ಬಂತು; ಯಾಕಂದರೆ, ನರಪ್ರಾಣಿಗಳು ಇರುವಲ್ಲಿ ದಯೆಯೂ ಅಂತಃಕರಣವೂ ದೊರಕುವದು ಎಂದು ಅವನು ನೆನಸಿದನು. ಆದರೆ ಆ ಭರವಸವು ವೃಥಾ ಆಯಿತು; ಹ್ಯಾಗಂದರೆ, ಅವನು ಅಲ್ಲಿ ಒಂದೇ ರಾತ್ರಿಗೆ ವಸ್ತಿ ಮಾಡ ಅನುಮತಿ ಕೇಳಿದಾಗ, ಅದು ಅವನಿಗೆ ತಿರಸ್ಕರಿಸೋಣಾಯಿತು. ಆ ಇಡೀ ಗ್ರಾಮದಲ್ಲಿ ಆತಿಥ್ಯವರಿಯದ ನಿವಾಸಿಕರೊಳಗೆ ಒಬ್ಬನಾದರೂ ಅವನಿಗೆ ಆಶ್ರಯ ಕೊಡಲಿಲ್ಲ. ಆದದರಿಂದ ಅವನು ಒಂದು ನೆರೆ ಕಾಡಿಗೆ ಹೋಗಿ, ಅಲ್ಲಿ ವಿಶ್ರಾಂತಿ ಹುಡುಕ ಬೇಕಾಯಿತು. ಹೋಗುವಾಗ ಅವನು ಹೇಳಿದ್ದು: "ಇಂಥಾ ಅಕಾಲವಾದ ರಾತ್ರಿಯ ಹೊತ್ತಿನಲ್ಲಿ ದಯ ತೋರಿಸಿ ನನ್ನನ್ನು ಆದರಿಸುವವನೊಬ್ಬನಾದರೂ ಇಲ್ಲವಲ್ಲ! ಕಷ್ಟ! ಬಹಳ ಕಷ್ಟ!—ಆದರೆ ದೇವರು ನೀತಿಯುಳ್ಳವನಾಗಿದ್ದಾನೆ. ಆತನು ಮಾಡುವದೆಲ್ಲ ಒಳ್ಳೇದಕ್ಕೇ."

ಕಾಡಿಗೆ ಬಂದು, ಒಂದು ಮರದ ಕೆಳಗೆ ಕೂತು ಕೊಂಡು, ದೀಪವನ್ನು ಹಚ್ಚಿ, ತನ್ನ ನ್ಯಾಯಗ್ರಂಥವನ್ನು ಓದಲಿಕ್ಕೆ ಆರಂಭಿಸಿದನು. ಆದರೆ ಒಂದೇ ಅಧ್ಯಾಯ ಓದುವಷ್ಟರೊಳಗೆ ಒಂದು ದೊಡ್ಡ ಬಿರುಘಾಳಿ ಬಂದು, ಅವನ ದೀಪವು ಆರಿ ಹೋಯಿತು. ಆಗ ಅವನು ವ್ಯಸನ ಪಟ್ಟು ಅಂದದ್ದು: "ಏನು! ನನ್ನ ಪ್ರಿಯ ಪುಸ್ತಕವನ್ನಾದರೂ ಓದಗೊಡ ಬಾರದೇ!—ಚಿಂತಿಲ್ಲ, ದೇವರು ನೀತಿಯುಳ್ಳಾತನು. ಆತನು ಮಾಡುವದೆಲ್ಲ ಒಳ್ಳೇದಕ್ಕೇ."

ಆದರೆ ಅವನು, ಸ್ವಲ್ಪ ತಾಸು ನಿದ್ರೆಯಾಗಲೀ ಬರಲಿ ಎಂದು, ಆ ಬರೀ ನೆಲದ ಮೇಲೆ ಮಲಗಿದನು. ಅವನ ಕಣ್ಣು ಮುಚ್ಚಿತಷ್ಟೇ, ಒಂದು ತೋಳ ಬಂದು ಅವನ ಕೋಳಿಯನ್ನು ಎತ್ತಿಕೊಂಡು ಹೋಗಿ, ತಿಂದು ಬಿಟ್ಟಿತು. ಅದನ್ನು ಕಂಡು ವ್ಯಾಕುಲ ಪಟ್ಟ ಆ ಅಕಿ


ಬನು ಜರಿಗಿದ್ದು: "ಇದೇನು ಹೊಸ ದುರಾದೃಷ್ಟ! ನನ್ನನ್ನು ಎಚ್ಚರಿಸುವ ಗೆಳೆಯನು ಹೋದನಕಟಾ! ನನ್ನ ನ್ಯಾಯಗ್ರಂಥವನ್ನು ಓದಲಿಕ್ಕೆ ಯಾರು ಇನ್ನು ಮುಂದೆ ನನ್ನನ್ನು ಎಚ್ಚರಿಸುವರು! ಆದರೆ ಚಿಂತಿಲ್ಲ, ದೇವರು ನೀತಿಯುಳ್ಳಾತನೇ ಸರಿ; ಬಡ ಮರ್ತ್ಯರಾದ ನಮಗೆ ಒಳ್ಳೇದೇನೆಂದು ಆತನು ಬಲ್ಲನು." ಈ ಮಾತು ಹೇಳಿ ಬಹಳ ಹೊತ್ತಾಗಲಿಲ್ಲ; ಅಷ್ಟರಲ್ಲಿ ಸ್ವಲ್ಪ ದೂರದಲ್ಲಿರುವ ಮರಗಳ ಹಿಂದೆ ಹೊಂಚಿಕೊಂಡಿದ್ದ ಒಂದು ಸಿಂಹವು ಇವನ ಸ್ವರವನ್ನು ಕೇಳಿ ಬಂದು, ಕತ್ತಲೆಯಲ್ಲಿ ಇವನನ್ನು ಕಾಣದೆ, ಫಕ್ಕನೇ ಶಿಕ್ಕಿದ ಅವನ ಕತ್ತೆಯನ್ನು ಹಿಡಿದು, ಕೊಂದು, ತಕ್ಕೊಂಡು ಹೋಯಿತು. ಆಗ ಆ ಬಡ ವನವಾಸಿಯು ಅತಿ ದುಃಖದಿಂದ ಕೂಗಿದ್ದು: "ಈಗ ಏನು ಮಾಡಲಿ! ಎಲ್ಲಿ ಹೋಗಲಿ! ನನ್ನ ದೀಪವೂ ಹೋಯಿತು! ನನ್ನ ಕೋಳಿಯೂ ಹೋಯಿತು! ನನ್ನ ಬಡ ಕತ್ತೆ ಸಹ ಹೋಯಿತು! ಎಲ್ಲಾ ಹೋಯಿತು!—ಆದರೆ ದೇವರಿಗೆ ಸ್ತೋತ್ರವಾಗಲಿ! ಅವನು ಮಾಡುವದೆಲ್ಲ ಒಳ್ಳೇದಕ್ಕಾಗಿದೆ!"

ಈ ಪ್ರಕಾರ ಅವನು ಇಡೀ ರಾತ್ರಿ ನಿದ್ದೆಗೆಟ್ಟು ಪ್ರಾತಃಕಾಲವಾಗುತ್ತಲೇ ಎದ್ದು, ಮುಂದೆ ಎಲ್ಲಿ ಆದರೂ ಪ್ರಯಾಣ ಮಾಡುವದಕ್ಕೋಸ್ಕರ ಒಂದು ಕುದುರೆಯಾಗಲೀ ಕತ್ತೆಯಾಗಲೀ ದೊರಕುವದೋ ಎಂದು ನೋಡುವ ಬಗ್ಗೆ ಆ ಗ್ರಾಮಕ್ಕೆ ತಿರಿಗಿ ಹೋದನು. ಆದರೆ ಏನು ಹೇಳಲಿ! ಅಲ್ಲಿ ಜೀವವಿರುವ ಒಂದು ನರಪ್ರಾಣಿಯಾದರೂ ಕಾಣದಿರುವದು ಎಷ್ಟು ಆಶ್ಚರ್ಯವಾಗಿತ್ತು!

ಕಾರಣವೇನಂದರೆ: ಆ ರಾತ್ರಿಯಲ್ಲಿ ಆ ಗ್ರಾಮಕ್ಕೆ ಒಂದು ಕಳ್ಳರ ಗುಂಪು ಬಂದು, ಅವರನ್ನು ಹೊಡದು, ಅವರ ಬದುಕನ್ನೆಲ್ಲ ಸುಲುಕೊಂಡು, ಅವರನ್ನೆಲ್ಲ ಕೊಂದು ಹೋಗಿ ಬಿಟ್ಟಿದ್ದರು ಎಂತ ಕಂಡು ಬಂತು. ಅಕಿಬನು ಈ ಅದ್ಭುತ ಕಾರ್ಯವನ್ನು ನೋಡಿ, ಆಶ್ಚರ್ಯಭರಿತನಾಗಿ ಉದ್ವೇಗಿಸಿದನು. ಮತ್ತು ಆ ಕ್ಷಣವೇ ತನ್ನ ಸ್ವರವನ್ನೆತ್ತಿ, ಹರುಷದಿಂದ ಅವನು ಕೂಗಿ ಪ್ರಾರ್ಥಿಸಿದ್ದು:—


"ಓ ಅಪಾರ ಮಹಿಮೆಯುಳ್ಳ ದೇವರೇ! ಅಬ್ರಹಾಮನ, ಈಸಾಕನ, ಯಾಕೋಬನ ದೇವರೇ! ಬಡ ಮರ್ತ್ಯ ಮನುಷ್ಯರು ಅಲ್ಪ ದೃಷ್ಟಿಯುಳ್ಳವರೂ ಕುರುಡರೂ ಆಗಿರುವದರಿಂದ, ಅವರ ರಕ್ಷಣೆಗಾಗಿ ನೀನು ಅನುಗ್ರಹಿಸುವದನ್ನು ಕೇಡುಗಳಾಗಿ ಎಣಿಸುತ್ತಾರೆ ಎಂದು ಅನುಭವದಿಂದ ನಾನು ಈಗ ತಿಳುಕೊಳ್ಳುವವನಾದೆ. ಆದರೆ, ನೀನು ಮಾತ್ರವೇ ನೀತಿವಂತನಾಗಿಯೂ ದಯಾವಂತನಾಗಿಯೂ ಕರುಣವಂತನಾಗಿಯೂ ಇದ್ಧೀ! ಕಠಿಣ ಹೃದಯವುಳ್ಳ ಆ ಗ್ರಾಮಸ್ಥರು ಅಲಕ್ಷಿಸಿ ನನಗೆ ಹೊರಗೆ ಹಾಕದೆ ಇದ್ದರೆ, ನಾನು ನಿಶ್ಚಯವಾಗಿ ಅವರ ಗತಿಯನ್ನೇ ಹೊಂದುತ್ತಿದ್ದೆ; ನನ್ನ ದೀಪವು ಆರಿ ಹೋಗದೆ ಇದ್ದರೆ, ಕಳ್ಳರು ಅದನ್ನು ನೋಡಿ, ನಾನಿದ್ದಲ್ಲಿಗೆ ಬಂದು, ನನ್ನನ್ನು ಸಹ ಸುಲುಕೊಂಡು, ಕೊಲ್ಲುತ್ತಿದ್ದರು. ನನ್ನ ಎರಡು ಜೀವಿಗಳು ಅಲ್ಲದಿದ್ದರೆ, ಸಿಂಹವು ಬಂದು ನನ್ನನ್ನು ಕೊಂದು ತಿಂದು ಬಿಡುತ್ತಿತ್ತು. ಓ ಪ್ರಿಯ ದಯಾಳು ಕರ್ತನೇ, ನಿನ್ನ ನಾಮಕ್ಕೆ ಎಂದೆಂದಿಗೂ ಸ್ತೋತ್ರವಾಗಲಿ!"

ನೀರಾನೆಯು.



ನಮಗೆ ಗೊತ್ತಾಗಿರುವ ಎಲ್ಲಾ ಜೀವಜಂತುಗಳಲ್ಲಿ ನೀರಾನೆಯು ದೊಡ್ಡದು ಎಂಬು
ವದಕ್ಕೆ ಅನುಮಾನವಿಲ್ಲ. ಗ್ರೀನ್‌ಲಂಡ್ ದೇಶದ ದೊಡ್ಡ ನೀರಾನೆಯ ಪ್ರಮಾಣವು ಹ್ಯಾ
ಗಾದರೂ ಅಪೂರ್ವವಾದದ್ದೇ ಸರಿ. ಅದು ಅರುವತ್ತು ಎಪ್ಪತ್ತು ಅಡಿ ಉದ್ದವಾಗಿರುವದು
ವಾಡಿಕೆ. ಸಾಮಾನ್ಯವಾಗಿ ಮೀನಿನ ಉದ್ದಳತೆಯು ಹೆಚ್ಚು ಕಡಿಮೆ ಮೂರನೇ ಭಾಗವಾ
ದ ಬಾಯಿಶೀಳಿನ ಉದ್ದವು ಹೆಚ್ಚು ಕಡಿಮೆ ಇಪ್ಪತ್ತು ಅಡಿಯಾಗಿದೆ. ಬಾಲವು ಹೆಚ್ಚು ಕ
ಡಿಮೆ ಇಪ್ಪತ್ತನಾಲ್ಕು ಅಡಿ ಅಗಲವಾಗಿರುತ್ತದೆ. ಅದರ ಬಡಿತದ ಬಲವು ಒಂದೊಂದು ವೇ
ಳೆ ಅಭ್ಭುತವಾಗಿದೆ. ಗ್ರೀನ್‌ಲಂದಿನ ಸುತ್ತಿನ ಸಮುದ್ರದಲ್ಲಿ ಅನೇಕಾವರ್ತಿ ಒಂದು ಕೂ
ಗಳತೆಗಿಂತ ಅಧಿಕ ಉದ್ದವಾಗಿಯೂ ನೂರು ಅಡಿಗಳ ಮೇಲೆ ದಪ್ಪವಾಗಿಯೂ ಇರುವ
ಘಟ್ಟಿಯಾದ ಗಾರದ ಉಂಡೆಗಳ ನಡುವೆ ಆಗುವ ನೀರಾನೆಗಳ ಬೇಟೆಯು ಅತ್ಯಂತ ಆ
ಶ್ಚರ್ಯವಾದ ನೋಟವಾಗಿದೆ. ಈ ಕೆಲಸದಲ್ಲಿ ಶೇರುವ ಒಂದೊಂದು ಹಡಗಕ್ಕೆ ಆರಾರು
ದೋಣಿ ಅದೆ. ಒಂದೊಂದು ದೋಣಿಯಲ್ಲಿ ಹುಟ್ಟು ಹಾಕುವ ಆರಾರು ಜನರು, ನೀರಾ
ನೆಯನ್ನು ತಿವಿಯುವದಕ್ಕೆ ಭರ್ಚಿಯವನೊಬ್ಬನು. ಈ ದೋಣಿಗಳಲ್ಲಿ ಎರಡು ಯಾವಾಗ
ಲೂ ಹಡಗಕ್ಕೆ ಸ್ವಲ್ಪ ದೂರದಲ್ಲಿ ಕಾವಲಿಯಾಗಿರುತ್ತವೆ. ನೀರಾನೆಯು ಕಾಣಿಸಿ ಕೊಂಡ
ಕೂಡಲೇ ಆ ಎರಡು ದೋಣಿಗಳು ಅದರ ಬೆನ್ನಟ್ಟಿಕೊಂಡು ಓಡುತ್ತವೆ; ಬಾಲ ಎತ್ತಿ ಇಳಿ
ಯುವದಕ್ಕಿಂತ ಮುಂಚೆ ಅವುಗಳಲ್ಲಿ ಒಂದು ಸಮೀಪ ಬಂದರೆ, ಭರ್ಚಿಯವನು ಅದರ
ಮೇಲೆ ಭರ್ಚಿ ಎಸೆದು ತಿವಿಯುತ್ತಾನೆ. ಅದನ್ನು ತಿವಿದ ಕೂಡಲೇ ಆ ಜನರು ಹಡಗಕ್ಕೆ
ಸೌಜ್ಞೆ ಮಾಡುತ್ತಾರೆ; ಸಂಗಡಲೇ ಕಾವಲಿಯವನು "ಬೀಳಿ, ಬೀಳಿ" ಎಂತ ಬೊಬ್ಬೆ ಹಾಕಿ,

ಮಿಕ್ಕಾದವರಿಗೆ ಎಚ್ಚರ ಕೊಡುತ್ತಾನೆ. ಕೂಡಲೇ ಬೇರೆ ದೋಣಿಗಳೆಲ್ಲಾ ಮೊದಲಿನವುಗಳ ಸಹಾಯಕ್ಕೆ ಹೋಗುತ್ತವೆ. ನೀರಾನೆಯು ತನಗೆ ಘಾಯವಾಯಿತೆಂದು ತಿಳಿಯುತ್ತಲೆ ಆಶ್ಚರ್ಯವಾದ ವೇಗದಿಂದ ಓಡಿ ಹೋಗುತ್ತದೆ. ಒಂದೊಂದು ವೇಳೆ ನೆಟ್ಟಗೆ ಕೆಳಗೆ ಇಳಿಯುತ್ತದೆ. ಒಂದೊಂದು ವೇಳೆ ನೀರಿನ ಸ್ವಲ್ಪ ಆಳದಲ್ಲಿ ಮುಳುಗಿ ಹಾರಿ ಹೋಗುತ್ತದೆ. ಭರ್ಚಿಗೆ ಕಟ್ಟಿದ ಹಗ್ಗವು ಹೆಚ್ಚು ಕಡಿಮೆ ಇನ್ನೂರು ಮೂರು ಉದ್ದವಾಗಿದೆ.



ಒಂದು ದೋಣಿಯ ಹಗ್ಗವೆಲ್ಲಾ ಮುಗಿದು ಹೋದರೆ, ಮತ್ತೊಂದು ದೋಣಿಯದನ್ನು ತತ್‌ಕ್ಷಣವೇ ಅದಕ್ಕೆ ಗಂಟು ಹಾಕುತ್ತಾರೆ. ಅವಶ್ಯವಾದರೆ ಮತ್ತೂ ಮತ್ತೂ ಹಾಗೇ ಮಾಡುತ್ತಾರೆ; ಆಗಾಗ್ಯೆ ಆರು ದೋಣಿಗಳಲ್ಲಿ ಇದ್ದ ಹಗ್ಗವೆಲ್ಲಾ ಖರ್ಚಾದದ್ದು ಉಂಟು. ನೀರಾನೆ ಮುಳುಗಿ ಕೆಲವು ನೂರು ಮಾರಿನ ಆಳಕ್ಕೆ ಇಳಿದು ಹೋದ ಮೇಲೆ ಶ್ವಾಸ ತೆಗದು ಕೊಳ್ಳುವದಕ್ಕೆ ಮೇಲೆ ಬಂದರೆ, ನೀರು ಬಾಯಿಂದ ಉಗುಳಿ, ಕೆಲವರು ಫಿರಂಗಿಯ ಆರ್ಭಟಕ್ಕೆ ಸರಿಯಾಗಿದೆಂದು ಹೇಳುವ ಘರ್ಜನೆ ಮಾಡುತ್ತದೆ. ಅದು ನೀರಿನ ಮೇಲೆ ಮೈದೋರಿದ ಕೂಡಲೇ, ಭರ್ಚಿಯವರಲ್ಲಿ ಕೆಲವರು ಇನ್ನೊಂದು ಭರ್ಚಿಯನ್ನು ಅದರಲ್ಲಿ ಎಸೆದು ನೆಡುತ್ತಾರೆ; ಆಗ ಅದು ಪುನಹಾ ಸಮುದ್ರದಲ್ಲಿ ಬಿದ್ದು ಮುಣುಗುತ್ತದೆ. ಅದು ಎರಡನೇ ಸಾರಿ ಮೇಲೆ ಬರುತ್ತಲೇ ಸಮುದ್ರವು ಎಲ್ಲಾ ನೊರೆಯಾಗುವ ಹಾಗೆ ರೆಕ್ಕೆಗಳಿಂದಲೂ ಬಾಲದಿಂದಲೂ ತೆರೆಗಳನ್ನು ಬಡಿದು ನೀರಿಗೆ ಬದಲಾಗಿ ರಕ್ತಪ್ರವಾಹಗಳನ್ನು ಕಾರುವ ವರೆಗೆ ಭಲ್ಲೆಗಳಿಂದ ಇರಿಯುತ್ತಾರೆ. ಸಾಯುತ್ತಾ ಇರಲಾಗಿ ಮೊಗಚಿ ಬೀಳುತ್ತದೆ; ಅದನ್ನು ಧಡಕ್ಕಾಗಲಿ, ಕರೆ ದೂರವಾಗಿದ್ದರೆ, ಹಡಗಕ್ಕಾಗಲಿ ಎಳದು ಹಾಕುತ್ತಾರೆ.

☞ ಹಿಂದಿನ ಅಂಕೆಯಲ್ಲಿ ಹಾಕಿದ ಪ್ರಶ್ನೆಗಳಿಗೆ ಒಂದು ಉತ್ತರವಾದರೂ ಬಾರದಿರುವದರಿಂದ ಈ ಸರ್ತಿ ಹೊಸ ಪ್ರಶ್ನೆಗಳನ್ನು ಸೇರಿಸುವದಿಲ್ಲ.

ಬಾ. ಕ.

Printed by Stolz & Reuther, Basel Mission Press, Mangalore.

ಬಾಲಪತ್ರ.

ಪುಸ್ತಕ ೧. 1871. ಅಂಕೆ ೩.

ಆಶ್ಚರ್ಯ, ಆಶ್ಚರ್ಯ!

ನಮ್ಮ ಕರ್ತನ ಮಂಗಳ ಜನನದ ಹಬ್ಬವು ಸಮೀಪಿಸುತ್ತಾ ಕಡೆಯಲ್ಲಿ ಆ ಹಬ್ಬದ ಸಾಯಂಕಾಲವೇ ಬಂದೊದಗಿತು; ದೇವಾಲಯದ ಘಂಟೆಗಳು, ಉಲ್ಲಾಸದ ಹಬ್ಬವು ಬಂದೊದಗಿತು ಎಂತ, ತಮ್ಮ ನಾದದಿಂದ ಬಾರಿಸಿ ತಿಳಿಸುತ್ತವೆ. ಮಕ್ಕಳೆಲ್ಲರು ತಮ್ಮ ಹೆತ್ತವರೂ ಸ್ನೇಹಿತರೂ ತಮಗೆ ಕೊಡಲಿಕ್ಕಿರುವಂಥಾ ಇನಾಮುಗಳು ತೂಗುತ್ತಿರುವ ಕ್ರಿಸ್ತ್ಮಸ್ ಮರದ ಕೆಳಗೆ ಸಂತೋಷಭರಿತವಾದ ಹೃದಯಗಳಿಂದ ಒಬ್ಬರ ಸಂಗಡಲೊಬ್ಬರು ಸಂಭಾಷಿಸುತ್ತಾ ಓಡ್ಯಾಡುತ್ತಾರೆ; ಬೇರೆ ಮಕ್ಕಳು ತಮ್ಮ ಬಡ ತಾಯಂದಿಯರು ಹಬ್ಬಕ್ಕೆ ತಮಗಾಗಿ ಮಾಡಿರುವ ದೋಶೆ, ಸಕ್ಕರೆ, ಮಿಠಾಯಿ, ವಡೆ ಮುಂತಾದ ಖಜ್ಜಾಯಗಳು ಇಟ್ಟಿರುವ ಮೇಜಿನ ಸುತ್ತಲು ನಿಂತಿರುತ್ತಾರೆ. ಎಲ್ಲ ಮನೆಗಳು ಸಂತೋಷಭರಿತವಾಗಿದ್ದವು.

ಆದರೆ ಅಕಟಾ! ಕ್ರಿಸ್ತ್ಮಸ್ ಮರವು ನೆಟ್ಟಾಗಲಿ ಹಬ್ಬಕ್ಕೆ ಬೇಕಾದ ಖಜ್ಜಾಯಗಳು ಮಾಡಿಯಾಗಲಿ ಇರದ ಒಂದು ಮನೆಯು ಸಹಾ ಅಲ್ಲಿ ಇತ್ತು; ಈ ಮನೆಯು ಗ್ರಾಮದ ಒಂದು ಮೂಲೆಯಲ್ಲಿತ್ತು. ಅದರಲ್ಲಿ ಮುಂಚೆ ಹಡಗದ ಯಜಮಾನನಾಗಿದ್ದವನೊಬ್ಬನ ಹೆಂಡತಿಯು ತನ್ನ ಮೂರು ಮಕ್ಕಳೊಂದಿಗೆ ಜೀವಿಸುತ್ತಿದ್ದಳು, ಇವಳ ಗಂಡನು ಹೋದ ಹಡಗವು ಒಡದು ಹೋದ್ದರಿಂದಲೂ ಗಂಡನು ಇನ್ನು ಬದುಕುತ್ತಾನೋ? ಇಲ್ಲವೋ? ಎಂಬದು ಇವಳಿಗೆ ತಿಳಿಯ ಬಾರದ್ದರಿಂದಲೂ ಇವಳು ಮುಂಚಿನ ಮನೆಯನ್ನು ಬಿಟ್ಟು ಬಿಟ್ಟಿದ್ದಳು; ಮತ್ತು ತನ್ನ ಹೊಲಿಗೆಯಿಂದಲೇ ಜೀವನ ಮಾಡಿದ್ದಲ್ಲದೆ, ಮನೆಯ ಬಾಡಿಗೆಯನ್ನು ಸಹಾ ಅದರಿಂದಲೇ ತೀರಿಸುತ್ತಿದ್ದಳು. ಹಬ್ಬದ ಸಂಜೆಯಲ್ಲಿ ಮಕ್ಕಳು ತಮ್ಮ ತಾಯಿಯ ಹತ್ತರ ಹಬ್ಬದ ವಿಷಯವೂ ಅದಕ್ಕಾಗಿ ಮಾಡುವ ಎಲ್ಲವುಗಳ ವಿಷಯವೂ ಮಾತಾಡಿದಾಗ ತಾಯಿ ಉತ್ತರ ಕೊಟ್ಟದ್ದು: ಮಕ್ಕಳೇ, ಒಂದೇ ತುತ್ತು ಹಿಟ್ಟೂ ಒಂದು ಚಿಕ್ಕ ರೊಟ್ಟಿಯೂ ಮಾತ್ರ ನಮಗೆ ಇರುತ್ತದೆ; ಹೀಗಿರುವದರಿಂದ ನೀವು ನಾಳೆ ಖಜ್ಜಾಯ ಇಲ್ಲದೆ ಹಬ್ಬವಾಚರಿಸ ಬೇಕಾಗುವದು.—ಕಡೆಗೆ ಅವರೆಲ್ಲರೂ ಏಕ ಮತಿಯಾಗಿ ಹ್ಯಾಗಾದರೂ ಕ್ರಿಸ್ತ್ಮಸ್ ಮರವನ್ನು ಮಾಡ ಬೇಕೆಂತಾ ಬೇಡಿ ಕೊಂಡಲ್ಲಿ, ತಾಯಿ ಕಣ್ಣೀರಿನಿಂದ ಹಾಗೆ ಮಾಡಲಿಕ್ಕೆ ಮಾತು ಕೊಟ್ಟಳು. ಅಷ್ಟರಲ್ಲಿ ರಾತ್ರಿಯಾದ್ದರಿಂದ ಆ

ಒಂದೇ ರೊಟ್ಟಿಯನ್ನು ಮುರಿದು ಮಕ್ಕಳಿಗೆ ರಾತ್ರೇ ಊಟವನ್ನು ಮಾಡಿಸಿ, ತನ್ನ ವಾಡಿಕೆಯಂತೆ ಅವರ ಸಂಗಡ ಮೊಣಕಾಲೂರಿ ಪ್ರಾರ್ಥಿಸಿ, ಅವರನ್ನು ಬಹಳ ಕಾಲದಿಂದ ತಾನು ಕಾಣದಿರುವ ತನ್ನ ಗಂಡನನ್ನೂ ದೇವರ ಕೈಯಲ್ಲಿ ಒಪ್ಪಿಸಿದನಂತರ ಮಕ್ಕಳನ್ನು ಮುದ್ದಿಟ್ಟು ಮಲಗಿಸಿದಳು.

ಮಕ್ಕಳು ಸುಖವಾಗಿ ನಿದ್ದೆ ಮಾಡುವಾಗ್ಯೆ, ತಾನು ಅವರಿಗೆ ಮಾತು ಕೊಟ್ಟ ಹಾಗೆ ಒಂದು ಚಿಕ್ಕ ಕ್ರಿಸ್ತ್‌ಮಸ್ ಮರವನ್ನು ಮಾಡಿಟ್ಟು, ತನ್ನ ಆಸ್ತಿಯಾಗಿದ್ದ ಒಂದೇ ಚಿತ್ರವನ್ನು ತಂದು ಅದರ ಮೇಲೆ ಇಟ್ಟಳು. ಇದೇ ಆ ಮರವು ಸುಂದರವಾಗಿ ಕಾಣಿಸುವ ಹಾಗೆ ಮಾಡಲಿಕ್ಕೆ ಅವಳಿಗಿದ್ದ ಸಾಹಿತ್ಯ. ಅನಂತರ ಆ ತುತ್ತು ಹಿಟ್ಟಿನಿಂದ ಸ್ವಲ್ಪ ರೊಟ್ಟಿ ಮಾಡ ಹತ್ತಿದಳು. ಅದು ರುಚಿಯುಳ್ಳದ್ದಾಗ ಮಾಡಲಿಕ್ಕೆ ಒಂದಿಷ್ಟು ಉಪ್ಪೇ ಹೊರ್ತು, ಬೇರೇನೂ ಅವಳಿಗಿರಲಿಲ್ಲ. ಈ ಪ್ರಕಾರವಾಗಿ ಅವಳು ಮಾಡುವ ಕೆಲವು ರೊಟ್ಟಿಗಳು ರಾತ್ರಿ ಮಕ್ಕಳಿಗೆ ಕೊಟ್ಟು, ಉಳಿದ ಅರ್ಧ ರೊಟ್ಟಿಯು ಇವೇ ಅವರ ಹಬ್ಬದ ಭೋಜನವಾಗಿತ್ತು.

ರೊಟ್ಟಿ ಮಾಡುತ್ತಿರುವಷ್ಟರಲ್ಲಿ ಬಹಳ ರಾತ್ರೆಯಾದ್ದರಿಂದ ಬರೀ ಘಾಳಿಯ ಧ್ವನಿಯ ಹೊರ್ತು ಮತ್ತೇನೂ ಕೇಳಿಸಲಿಲ್ಲ; ಆಗ ಇವಳು ಒಲೆಯ ಹತ್ತರ ಕೂತಿದ್ದು, ೫ ವರುಷಗಳ ಮುಂಚೆ ತಾನು ಭಕ್ತಿಯುಳ್ಳ ತನ್ನ ಗಂಡನ ಜತೆಯಲ್ಲಿ ಅನುಭವಿಸಿದ ಸುಖವನ್ನೂ ಈಗ ತಾನು ಪಡುವ ದುಃಖವನ್ನೂ ಕುರಿತು ಆಲೋಚಿಸುತ್ತಿದ್ದಳು—ನನ್ನ ಗಂಡನು ಎಲ್ಲಿದ್ದಾನೋ! ಸಮುದ್ರದ ತೆರೆಗಳ ಮಧ್ಯದಲ್ಲಿ ಮುಣುಗಿದನೋ! ಉಸುಬಿನ ಅರಣ್ಯಗಳಲ್ಲಿ ದಾರಿ ತಪ್ಪಿ ಅಲೆಯುತ್ತಾನೋ! ಎಂದೀ ಪರಿ ದುಃಖದಿಂದ ಚಿಂತಿಸುತ್ತಿರುವಾಗ, ಯಾರೋ ಬಾಗಲಿಗೆ ಫಕ್ಕನೆ ತಟ್ಟಿದ ಶಬ್ದವನ್ನು ಕೇಳಿ, ದಿಗಿಲು ಬಿದ್ದಳು; ಹೊರಗಿಂದ ಯಾರೋ ಕರಿಯುವ ಶಬ್ದವನ್ನು ಕೇಳಿ, ಬಂದು, ಬಾಗಲ ತೆರೆದಾಗ, ಇಗೋ ದೊಡ್ಡದೊಂದು ಚೀಲವನ್ನು ಹಾಕಿ ಕೊಂಡು, *ಲೀಮರ್ ಧೊರೆಯ ಹೆಂಡತಿಯನ್ನು ವಿಚಾರಿಸುವ ಒಬ್ಬ ಯಾತ್ರಿಕನು ಒಳಗೆ ಬಂದನು. ಇವಳು ಆತನ ಸ್ವರದಿಂದ ಇವನು ೫ ವರುಷಗಳಿಂದ ತಾನು ಸತ್ತನೆಂತ ನೆನಸಿದ ತನ್ನ ಗಂಡನೇ ಎಂದು ತಿಳಿದು, ಅವನನ್ನು ಅಪ್ಪಿ ಕೊಂಡಳು. ಅವಳ ಗಂಡನು ತನ್ನ ಸಮಾಚಾರವನ್ನು, ಅವಳು ಮಕ್ಕಳು ಹೇಳಿದ್ದೆಲ್ಲವನ್ನು ಒಬ್ಬರಿಗೊಬ್ಬರು ತಿಳಿಸಿ, ಆನಂದದಿಂದ ಕಣ್ಣೀರು ಸುರಿಸಿದರು. ಆ ಮೇಲೆ ಅವಳು ತನ್ನ ಗಂಡನು ತಂದ ಉತ್ತಮವಾದ ಭಂಗಾರದ ನಾಣ್ಯಗಳನ್ನೂ ವಜ್ರಗಳನ್ನೂ ಮರದ ಕೊಂಬೆಗಳಿಗೆ ಕಟ್ಟಿದಳು; ಕೊಂಬೆಗಳು ಆ ಭಾರದಿಂದ ನೆಲಕ್ಕೆ ಬೊಗ್ಗಿದವು. ಮರುದಿನ ಮಕ್ಕಳು ಇದನ್ನು ನೋಡಿ, ಆಶ್ಚರ್ಯ! ಆಶ್ಚರ್ಯ! ಎಂತ ಹೇಳಿ ಕೊಂಡು, ತಾವು ಸತ್ತವನಾಗಿ ಎಣಿಸಿದ ತಮ್ಮ ತಂದೆಯನ್ನು ನೋಡಿ, ಬಹಳವಾಗಿ ಸಂತೋಷಿಸಿ ದೇವರನ್ನು ಹೊಗಳಿದರು.

---

* ಲೀಮರ್ ಎಂಬದು ಇವಳ ಗಂಡನ ಹೆಸರು.

ಹಳೇ ಪುಸ್ತಕವು.

ಚಿಕ್ಕಪ್ಪ: ಚಾರ್ಲಿ, ಈಗ ನಾನು ನೋಡುತ್ತಿರುವ ಒಂದು ಹಳೇ ಪುಸ್ತಕದ ವಿಷಯ ನಿನಗೆ ಹೇಳಲಿಕ್ಕೆ ಉಂಟು.

ಚಾರ್ಲಿ: ಸೈಸೈ, ಚಿಕ್ಕಪ್ಪ ಅದು ಸೈ. ಆ ಪುಸ್ತಕ ಎಷ್ಟು ಹಳೇತು?

ಚಿ: ಅದಕ್ಕೆ ೫ ಇಲ್ಲವೆ ೬ ಸಾವಿರ ವರುಷ ಮಾತ್ರ ಆದೀತು.

ಚಾ: ಅಪಪ! ೫ ಇಲ್ಲವೆ ೬ ಸಾವಿರ ವರುಷ! ನೀನು ನನಗೆ ಚೇಷ್ಟೆ ಮಾಡುತ್ತೀ ಎಂತ ಕಾಣುತ್ತದೆ! ಇರಲಿ, ಅದರಲ್ಲಿ ಏನಾದರೂ ಚಿತ್ರಗಳುಂಟೇನು?

ಚಿ: ಚಿತ್ರಗಳೋ! ಚಿತ್ರಗಳೇ ಅಲ್ಲದೆ ಅದರಲ್ಲಿ ಬೇರೆ ಏನಿಲ್ಲ. ಅದರಲ್ಲಿರುವ ಚಿತ್ರಗಳಲ್ಲಿ ಕೆಲವು ಗಂಭೀರವಾಗಿಯೂ, ಬೇರೆ ಕೆಲವು ಭಯಂಕರವಾಗಿಯೂ, ಇನ್ನು ಕೆಲವು ಸೌಂದರ್ಯವಾಗಿಯೂ, ಮತ್ತು ಕೆಲವು ಒಂದು ನಿಮಿಷ ಮಾತ್ರ ಅವುಗಳನ್ನು ನೋಡಿದಾಕ್ಷಣ ಕಣ್ಣೀರು ಬರುವಷ್ಟು ಪ್ರಜ್ವಲಿತವಾಗಿಯೂ ಅವೆ; ಆ ಪುಸ್ತಕದಲ್ಲೆಲ್ಲಾ ಇಂಥಾ ಚಿತ್ರಗಳು ಸಾವಿರಾರುಗಟ್ಲೆಯಾಗಿ ತುಂಬಿರುತ್ತವೆ. ಮತ್ತು ಅವುಗಳಂತು ಎಷ್ಟು ದೊಡ್ಡವೆಂತ ಹೇಳಲಿ!

ಚಾ: ಸಾವಿರಗಟ್ಲೆ ದೊಡ್ಡ ಚಿತ್ರಗಳುಂಟೇ! ಹಾಗಾದರೆ ಆ ಪುಸ್ತಕವನ್ನು ನಮ್ಮ ಅಗಲವಾದ ದೊಡ್ಡ ಮೇಜಿನ ಮೇಲೆ ತೆರಿಯುವ. ಈ ಹೊತ್ತು ನಮಗೊಂದು ತಮಾಶೆ ಇರುವದಲ್ಲಾ! ಹಳೇ ಪುಸ್ತಕ ಚಿಕ್ಕಪ್ಪ! ಆ ಚಿತ್ರಗಳ ಪುಸ್ತಕ! ಒಳ್ಳೇ ತಮಾಶೆ!

ಚಿ: ಆದರೆ ಹುಡುಗಾ, ಅಗಲವಾದ ಈ ದೊಡ್ಡ ಮೇಜಿನ ಮೇಲೆ ಅದನ್ನು ತೆರಿಯುವದೋ? ಅದು ಸಾಧ್ಯವಲ್ಲ! ಯಾಕಂದರೆ ಎಷ್ಟು ದೊಡ್ಡ ಮೇಜು ಇದ್ದರೂ ಅದನ್ನು ಹಿಡಿಯದು.

ಚಾ: ಇಂಥಾ ಮಲಾಮತಿ ನಾನು ಎಂದೂ ಕೇಳಲಿಲ್ಲಪ್ಪ! ಈ ಅಗಲವಾದ ದೊಡ್ಡ ಮೇಜಿಗಿಂತಲೂ ದೊಡ್ಡದಾದ ಪುಸ್ತಕ—ಇದೇನು ಆಶ್ಚರ್ಯ! ಹಾಗಾದರೆ ನಮ್ಮ ದೊಡ್ಡ ನಡುಕೋಣೆಯ ನೆಲದ ಮೇಲೆ ಅದನ್ನು ತೆರಿಯುವ.

ಚಿ: ದೊಡ್ಡ ಕೋಣೆಯ ನೆಲವಾದರೂ ಅದರ ಒಂದು ಮೂಲೆಗೆ ಸಾಲದು.

ಚಾ: ಚಿಕ್ಕಪ್ಪ, ನೀನು ನನ್ನನ್ನು ಭ್ರಮಿಸುತ್ತೀ! ಹ್ಯಾಗೂ, ಅದು ಎಷ್ಟು ದೊಡ್ಡದಾದರೂ ಚಿಂತಿಲ್ಲ, ಆ ಪುಸ್ತಕವನ್ನು ತೆರಿಯಲೇ ಬೇಕು. ಸಮೀಪ ಇರುವ ನಮ್ಮ ಮೈದಾನಿನಲ್ಲಿ ಆದರೂ ಅದಕ್ಕೆ ಸ್ಥಳ ಸಾಕಾಗದೆ ಇರದು ಎಂದು ನನಗೆ ನಿಶ್ಚಯ ಉಂಟು.

ಚಿ: ಹಾಗಲ್ಲ, ಚಾರ್ಲಿಯೇ! ನಾನು ಹೇಳುವಂಥಾ ಪುಸ್ತಕವು ಈ ಇಡೀ ಲೋಕಕ್ಕಿಂತಲೂ ದೊಡ್ಡದಾಗಿದೆ.

ಚಾ: ಏನು! ಲೋಕಕ್ಕಿಂತ ದೊಡ್ಡದೇನು? ಹಾಗಾದರೆ ಚಿಕ್ಕಪ್ಪನೇ, ಆ ಪುಸ್ತಕ ಎಂಥಾದಾಗಿದ್ದರೂ ಲೋಕಕ್ಕಿಂತ ದೊಡ್ಡದಾಗಿದೆ ಎಂದು ನೀನು ಹ್ಯಾಗೆ ಹೇಳ ಬಲ್ಲಿ?

ಚಿ: ಆಕಾಶವು ನಾನು ಹೇಳುವಂಥಾ ಹಳೇ ಪುಸ್ತಕವೆಂದೂ ಅದರಲ್ಲಿ ವಿಸ್ತಾರವಾ

ಗಿರುವ ಲೋಕಗಳೆಲ್ಲಾ, ಅದನ್ನು ಅಲಂಕರಿಸುವ ಮೇಘಗಳೆಲ್ಲಾ ಅದರಲ್ಲಿರುವ ಚಿತ್ರಗಳೆಂದೂ ನಾನು ಹೇಳಿ ವಿವರಿಸುವಾಗ ನೀನು, ಹೌದು ಎಂದು ಒಪ್ಪಿಕೊಳ್ಳುವಿ ಎಂದು ನೆನಸುತ್ತೇನೆ.

ಚಾ: ಆಕಾಶ!—ಆದರೆ ನೀನು ಯಾಕೆ ಅದನ್ನು ಪುಸ್ತಕವೆಂದು ಕರಿಯುತ್ತೀ? ಪುಸ್ತಕವಂದರೆ ಓದುವಂಥಾದ್ದು, ಆದರೆ ಆಕಾಶವನ್ನು ಓದುವದು ಹ್ಯಾಗೆ?

ಚಿ: ಸ್ವಲ್ಪ ಕಲಿಸಿದ್ದಾದರೆ, ನೀನು ಅದನ್ನು ಚನ್ನಾಗಿ ಓದಲಾಪಿ ಎಂದು ನಂಬುತ್ತೇನೆ—ನಮ್ಮ ಪರಲೋಕದ ತಂದೆಯ ಎರಡು ದೊಡ್ಡ ಪುಸ್ತಕಗಳ ವಿಷಯ ನೀನು ಕೇಳಿದ್ದಿಯಷ್ಟೆ; ಯಾವವಂದರೆ: ಪ್ರಕಟಣೇ ಪುಸ್ತಕವೂ ಸೃಷ್ಟೀ ಪುಸ್ತಕವೂ. ಈಗ, ಸೃಷ್ಟಿ ಎಲ್ಲಾ ಒಂದು ಪುಸ್ತಕವೆಂದು ಕರಿಯಲ್ಪಟ್ಟದೆ. ಆಕಾಶ ಸಹ ಒಂದು ಪುಸ್ತಕವೆಂತ ಯಾಕೆ ಹೇಳಬಾರದು? ಯಾಕಂದರೆ ಅದು ದೇವರ ಕೈಕೆಲಸಗಳಲ್ಲಿ ಒಂದಲ್ಲವೋ? ನಮ್ಮ ಸೃಷ್ಟಿಕರ್ತನನ್ನು ಕುರಿತು ಓದ ಬಹುದಾದ ಅನೇಕ ವಿಷಯಗಳು ಅದರಲ್ಲಿ ನೋಡುತ್ತೇವೆ. ಜೊತೀಷ್ಯಗಾರರು ಆಕಾಶದ ಪುಸ್ತಕವನ್ನು ಓದುತ್ತಾರೆ, ಪಂಡಿತರು ಅದನ್ನು ಓದುತ್ತಾರೆ; ಹಾಗಾದ ಮೇಲೆ ಕ್ರೈಸ್ತರು ಅದನ್ನು ಯಾಕೆ ಓದ ಬಾರದು? ಈ ಪುಸ್ತಕದ ಚಿತ್ರವನ್ನು ದಿನಾಲು ನೋಡುವಂಥಾ ಸಾವಿರಾರು ಜನರೊಳಗೆ ಅದರ ಅರ್ಥವೇನೆಂದು ಗ್ರಹಿಸುವವರು ಎಷ್ಟು ಸ್ವಲ್ಪ ಮಂದಿ! ಸಾವಿರಾರು ಜನರು ಆಕಾಶದ ಅಕ್ಷರಮಾಲೆಯನ್ನು ಇನ್ನೂ ಸಹ ಕಲಿಯಲಿಲ್ಲ.—ಆದರೆ ಈ ಚಿತ್ರಗಳೊಳಗೆ ಕೆಲವುಗಳ ತಾತ್ಪರ್ಯ ವಿವರಿಸುತ್ತೇನೆ, ಕೇಳು; ಯಾಕಂದರೆ ದೇವರು ಅವುಗಳ ಮುಖಾಂತರ ನಮ್ಮ ಸಂಗಡ ಮಾತಾಡುತ್ತಾನೆ, ಮತ್ತು ನಾವು ಅವನ ಅಭಿಪ್ರಾಯಗಳನ್ನು ತಿಳಕೊಳ್ಳ ಬೇಕು. ರಾತ್ರಿಯ ಸಮಯದಲ್ಲಿ ನಾವು ಮೇಲಕ್ಕೆ ನೋಡಲು, ಆಕಾಶವೆಂಬ ದೊಡ್ಡ ಪುಸ್ತಕ ತೆರಿಯಲ್ಪಡುತ್ತದೆ; ಅದರಲ್ಲಿ ಪ್ರಕಾಶವುಳ್ಳ ನಕ್ಷತ್ರಗಳೆಂಬ ಚಿತ್ರಗಳು ನಮ್ಮ ಮುಂದೆ ಹಾಸಲ್ಪಡುತ್ತದೆ. ದೇವರು ಇವುಗಳ ಮೂಲ ತನ್ನ ಜ್ಞಾನವನ್ನೂ ಬಲವನ್ನೂ ಒಳ್ಳೇತನವನ್ನೂ ನಮಗೆ ಪ್ರಕಟ ಮಾಡುತ್ತಾನೆ. ಈ ಚಿತ್ರದ ಭಾಷೆ ಏನಂದರೆ: "ನನ್ನನ್ನು ನಂಬು!"

ಚಾ: ನೀನು ಅದನ್ನೆಲ್ಲಾ ಚಂದವಾಗಿ ವಿವರಿಸಿ ಸರಿಯಾಗಿ ಮಾಡುತ್ತೀ ಎಂದು ಬಲ್ಲೆ.

ಚಿ: ಒಂದು ಬಿರುಘಾಳಿ ಬಂದು, ದೊಡ್ಡ ಕಪ್ಪು ಮೇಘಗಳು ಆಕಾಶದಲ್ಲಿ ಭಾರವಾಗಿ ತಿರುಗಿ, ಕಣ್ಣೆವಿಯುವಂಥಾ ಮಿಂಚು ಆಕಾಶದಲ್ಲಿ ಅತ್ತಿತ್ತ ತೂರಿ, ಗಡಗಡನೆ ಒಡೆಯುವ ಗುಡುಗು ಅಖಂಡವಾಗಿರುವ ಭೂಮಿಯನ್ನೂ ಅಂತರಿಕ್ಷವನ್ನೂ ತಲ್ಲಣಿಸುವಂತೆ ತೋರುವಾಗ, ಒಂದು ಪ್ರಳಯದ ಹಾಗೆ ಥರಥರನೆ ಮಳೆ ಸುರಿಯುತ್ತದಲ್ಲ? ಆಕಾಶದ ಇಂಥಾ ವಿಕಾರವಾದ ಚಿತ್ರದ ಅಭಿಪ್ರಾಯವೇನೆಂದು ಬಲ್ಲಿಯಾ? ಅದು ಪರಿಶುದ್ಧನಾಗಿರುವಾತನ ಸ್ವರ ಎಂಬಂತೆ ಸ್ಪಷ್ಟವಾಗಿ ಒದರುವದೇನಂದರೆ: "ನನಗೆ ಭಯ ಪಡು!"

ಚಾ: ಇದೊಂದು ಭಯಂಕರವಾದ ಚಿತ್ರವೇ ಸರಿ! ಚಿಕ್ಕಪ್ಪನೇ, ನೀನು ಹೇಳಿದ್ದೆಲ್ಲಾ ನನಗೆ ತಿಳಿಯ ಬರುತ್ತದೆ.

ಚಿ: ಮತ್ತೆ ಬಿರುಘಾಳಿಯು ಶಾಂತವಾಗಿ, ಮಳೆ ಬಿಡುತ್ತಲೇ, ಆಕಾಶಮಂಡಲದ

ಒಂದು ಪಾರ್ಶ್ವದಲ್ಲಿ ಮಹಿಮಾಂಕಿತ ಸೂರ್ಯನು ಪ್ರಕಾಶಿಸಿ, ಮತ್ತೊಂದು ಪಾರ್ಶ್ವದಲ್ಲಿ ವಿವಿಧ ಬಣ್ಣವುಳ್ಳ ಮಳೆಬಿಲ್ಲು ತೋರಿ, ಅಲಂಕರಿಸಲ್ಪಟಂಥಾ ಆಕಾಶದ ಚಿತ್ರವು ಪ್ರತಿ ದೃಷ್ಟಿಗೂ ಪ್ರತಿ ಹೃದಯಕ್ಕೂ ಮೊರೆ ಇಡುತ್ತದೆ, ದೇವರು ಅದರ ಮುಖಾಂತರ ಮಾತಾಡುತ್ತಾನೆ, ಎಂತೆಂದರೆ: "ನನ್ನಲ್ಲಿ ಭರವಸವಿಡು!"

ಚಾ: ಬಹಳ ಚಲೋದು, ಚಲೋದು! ಚಿಕ್ಕಪ್ಪ! ನೀನು ನಿಶ್ಚಯವಾಗಿ ಆಕಾಶದ ಚಿತ್ರಗಳನ್ನು ಓದುವವನಾಗಿ ಕಾಣುತ್ತೀ.

ಚಿ: ಮೇಲಿರುವ ಮೇಘಮಂಡಲವು ನಿರ್ಮಲವಾಗಿಯೂ ಪ್ರಕಾಶವಾಗಿಯೂ ಶಾಂತವಾಗಿಯೂ ಇರುವಾಗ, ಹಿಮರಾಶಿಯಾದ ಮೇಘಗಳು ನಿಶ್ಚಲವಾಗಿದ್ದು ಅದರ ಅಂಚುಗಳು ಸೂರ್ಯಕಿರಣಗಳಿಂದ ವಿವಿಧವರ್ಣಗಳಾಗಿ ಮಿಂಚುತ್ತಿರುವಾಗ, ಮತ್ತು ಮೇಲಿನ ಅಂತರೀಕ್ಷವು, ನಿನ್ನ ಪ್ರಾಣವು ಸಂತೋಷದಿಂದಲೂ ಕೃತಜ್ಞತೆಯಿಂದಲೂ ವಿಕಸಿಸುವಷ್ಟು ನಿಶ್ಶಬ್ದವಾಗಿರುವಾಗ, ತಿರಿಗಿ ದೇವರು ಮಾತಾಡುವ ಹಾಗೆ ಕಾಣುತ್ತದೆ. ಆಗ ಆ ಹಳೇ ಪುಸ್ತಕದ ಭಾಷೆ ಏನಂದರೆ: "ನನ್ನನ್ನು ಪ್ರೀತಿ ಮಾಡು!"

ಚಾ: ಚಿಕ್ಕಪ್ಪ! ನೀನು ಒಬ್ಬ ಗುಡುಗಾರನಾಗಿರ ಬೇಕಿತ್ತು!

ಚಿ: ಪೂರ್ವದಿಕ್ಕಿನಲ್ಲಿ ಉದಯವಾಗಿರುವಂಥಾ ಸೂರ್ಯನು ಆಕಾಶವನ್ನು ಮಹಿಮೆಯಿಂದ ತುಂಬಿಸಿ, ಪ್ರಾತಃಕಾಲದಲ್ಲಿ ಕಪಿಶ, ನೀಲ, ರಕ್ತ ವರ್ಣಗಳು ಮಿಲಿತವಾದ ಪ್ರಳಯದಂತೆ, ಇಲ್ಲವೆ ಕರಗಿಸಿದ ಭಂಗಾರದ ಸಮುದ್ರದಂತೆ ಕಾಣುವ ಕಿರಣಗಳಿಂದ ತುಂಬಿದ ಸೂರ್ಯನು ಅಸ್ತಮಿಸುವಾಗ, ಇಂಥಾ ಸೌಂದರ್ಯ ಚಿತ್ರವನ್ನು ಆಶ್ಚರ್ಯದಿಂದಲೂ ಭ್ರಮೆಯಿಂದಲೂ ದೃಷ್ಟಿಸಿ, ಆನಂದಬಾಷ್ಪಗಳಿಂದ ಅರ್ಧಕುರುಡರಾದರೂ, ನಮ್ಮ ಎದುರು ಇರುವಂಥಾ ಆ ಚಿತ್ರವನ್ನು ಓದ ಬಹುದು; ಆಗ ಪರಲೋಕ ಭೂಲೋಕಗಳನ್ನು ಉಂಟು ಮಾಡಿದ ಕರ್ತನು ಅಷ್ಟು ಸ್ಪಷ್ಟವಾಗಿ ಹೇಳುವ ವಚನವೇನಂದರೆ: "ನನ್ನನ್ನು ಕೊಂಡಾಡು!"

ಚಾ: ಎಲ್ಲಾ ಚಿತ್ರಗಳ ಅರ್ಥವನ್ನು ಎಷ್ಟು ಚನ್ನಾಗಿ ವಿವರಿಸಿದ್ಧೀ! ಅದು ತದ್ರೂಪವೇ ಸರಿ!

ಚಿ: ಈಗ ನಾನು ಆ ಹಳೇ ಪುಸ್ತಕದ ಕೆಲವು ಚಿತ್ರಗಳನ್ನು ವಿವರಿಸಿದೆನಷ್ಟೆ. ಆದರೆ ಕೆಲವು ಸಾರಿ ಆ ಚಿತ್ರಗಳು ಮಿಶ್ರವಾಗಿ ಪರಸ್ಪರ ವಿರೋಧವಾಗಿಯೂ ಭಯಂಕರವಾಗಿಯೂ ಗ್ರಾಹ್ಯವಾಗಿಯೂ ಸುಂದರವಾಗಿಯೂ ಥಳಥಳಿಸುವಂಥಾದ್ದಾಗಿಯೂ ಇರುವದರಿಂದ ಆಗ್ಯಾಗ್ಯೆ ಒಂದೊಂದಾಗಿ ನಮ್ಮನ್ನು ತೃಪ್ತಿ ಪಡಿಸುವದಕ್ಕೆ ಸಾಲದು, ಮತ್ತು ಇದೆಲ್ಲಾವನ್ನು ನೋಡಿದಾಗ, ನಾವು ಆತನನ್ನು ಏಕ ಹೃದಯದಿಂದ ವಿಶ್ವಾಸಿಸಲಿಕ್ಕೂ ಭಯ ಪಡಲಿಕ್ಕೂ, ಆತನಲ್ಲಿ ಭರವಸ ಇಡಲಿಕ್ಕೂ, ಆತನನ್ನು ಪ್ರೀತಿಸಲಿಕ್ಕೂ ಕೊಂಡಾಡಲಿಕ್ಕೂ ಆತುರ ಪಡುತ್ತೇವೆ.

ಚಾ: ಒಳ್ಳೇದು! ಚಿಕ್ಕಪ್ಪನೇ, ನೀನು ಆರಂಭದಲ್ಲಿ ಒಂದು ಹಳೇ ಪುಸ್ತಕದ ವಿಷಯ ಹೇಳುವಾಗ, ಈಗ ಸ್ಪಷ್ಟವಾಗಿ ಅರಿತ ಪ್ರಕಾರ ಆಗಿತ್ತೆಂದು ನಾನು ನೆನಸಲಿಲ್ಲ. ಆರಂ

ಭದಲ್ಲಿ ನೀನು ಸಾವಿರ ದೊಡ್ಡ ಚಿತ್ರಗಳನ್ನು ಕುರಿತು, ಅವು ಆಕಾಶದಲ್ಲಿ ಉಂಟೆಂದು ಹೇಳುವಾಗ, ನನಗೆ ಸರಿಯಾಗಿ ಕಾಣಲಿಲ್ಲ; ಆದರೆ ಈಗ ನೀನು ನನ್ನನ್ನು ತೃಪ್ತಿ ಪಡಿಸಿದಿ. ಆಕಾಶವು ನನಗೀಗ ನಿಶ್ಚಯವಾಗಿ ಚಿತ್ರದ ಪುಸ್ತಕವಾಗಿ ಕಾಣುತ್ತದೆ. ನಾನು ಅದನ್ನು ಓದ ಕಲಿಯಲಿಕ್ಕೂ ಅದರಲ್ಲಿರುವಂಥಾ ಚಿತ್ರಗಳನ್ನು ಕೂಡುವಷ್ಟರ ಮಟ್ಟಿಗೆ ತಿಳುಕೊಳ್ಳಲಿಕ್ಕೂ ನನ್ನ ಪೂರ್ಣ ಹೃದಯದಿಂದ ಪ್ರಯತ್ನ ಮಾಡುವೆನು.

"ದೇವರ ವರ್ಗಕ್ಕೆ ಅಯ್ಯಾ!"

ಪ್ರುಸ್ಯ ದೇಶದ ಫ್ರೀದರೀಕ ರಾಜನು ತನ್ನ ರಾಜ್ಯದಲ್ಲಿ ಒಮ್ಮೆ ಪ್ರಯಾಣ ಮಾಡುತ್ತಿರುವಾಗ, ಒಂದು ಗ್ರಾಮವನ್ನು ಹಾದು ಹೋಗುತ್ತಿದ್ದನು. ಅಲ್ಲಿ ಒಂದೆರಡು ತಾಸು ಕಳಿಯ ಬೇಕಾಯಿತು. ಗ್ರಾಮಸ್ಥರು ತಮ್ಮ ಅರಸನು ಅಲ್ಲಿ ಆಗಮಿಸಿದ್ದಕ್ಕೆ ಬಹಳ ಸಂಭ್ರಮ ಪಟ್ಟು, ಅವನನ್ನು ಬಹುಮಾನದೊಡನೆ ಎದುರ್ಗೊಳ್ಳಿಸುವದಕ್ಕೆ ತಮ್ಮಿಂದ ಆಗುವಷ್ಟು ಸನ್ನಾಹ ಮಾಡಿದರು. ಅಲ್ಲಿರುವದೊಂದು ಶಾಲೇ ಹುಡುಗರು ಅವನು ಬರುವ ದಾರಿಯಲ್ಲಿ ಹೂವುಗಳನ್ನು ವರ್ಷಿಸಿದರು. ಮತ್ತು ಒಬ್ಬ ಹುಡುಗಿಯು: "ಅರಸನಿಗೆ ಶುಭವಾಗಲಿ" ಎಂಧೇಳುವದೊಂದು ಪತ್ರ ಬರದಿದ್ದಳು. ಅರಸನು ಪ್ರೀತಿಯಿಂದ ಅದನ್ನು ಕೇಳಿ, ಸಂತೋಷ ಪಟ್ಟು, ಚನ್ನಾಗಿ ಬರದದೆ ಎಂದು ಹೇಳಿದನು. ಹಾಗೆಯೇ ಉಪಾಧ್ಯಾಯನ ಕಡೆಗೆ ತಿರುಗಿ, ಶಾಲೇ ಹುಡುಗಿಯರಿಗೆ ಅವರು ಕಲಿತ ಪಾಠಗಳಲ್ಲಿ ಕೆಲವು ಪ್ರಶ್ನೆಗಳನ್ನು ಕೇಳ ಮನಸ್ಸುಂಟೆಂದು ಹೇಳಿದರಿಂದ, ಹುಡುಗಿಯರು ಸಿದ್ಧವಾಗಿ ನಿಂತರು.

ಅರಸನ ಕಾಣಿಕೆಗಾಗಿ ಕೆಲವು ಕಿತ್ತಲೇ ಹಣ್ಣುಗಳು ತುಂಬಿದೊಂದು ಹರಿವಾಣವು ಅಲ್ಲಿಟ್ಟಿತ್ತು. ಅರಸನು ಅವುಗಳಲ್ಲೊಂದನ್ನು ಹಿಡಿದು, "ಮಕ್ಕಳೇ, ಇದು ಯಾವ ವರ್ಗಕ್ಕೆ ಶೇರಿರುತ್ತದೆ?" ಎಂದು ಕೇಳಿದ್ದಕ್ಕೆ,

ಒಬ್ಬ ಹುಡುಗಿಯು ಉತ್ತರ ಕೊಟ್ಟದ್ದು: "ಇದು ಸಸ್ಯಾದಿಗಳ ವರ್ಗಕ್ಕೆ ಶೇರಿದ್ದು."

ಬಳಿಕ ಅರಸನು ತನ್ನ ಕಿಶೆಯಲ್ಲಿರುವ ಚಿನ್ನದೊಂದು ನಾಣ್ಯವನ್ನು ತೆಗದು ತೋರಿಸಿ, "ಇದು ಯಾವ ವರ್ಗಕ್ಕೆ ಶೇರಿದೆ?" ಎಂದು ಕೇಳಿದನು.

ಅದಕ್ಕೆ ಅವಳು: "ಲೋಹಾದಿಗಳ ವರ್ಗಕ್ಕೆ ಶೇರಿದ್ದು" ಎಂದು ಉತ್ತರ ಕೊಡಲಾಗಿ,

ಅರಸನು: "ಹಾಗಾದರೆ, ಪ್ರಿಯ ಮಗುವೇ, ನಾನು ಯಾವ ವರ್ಗಕ್ಕೆ ಶೇರಿರುತ್ತೇನೆ?" ಎಂದು ಕೇಳಿ, ಸಹಜವಾದ ಕ್ರಮವಿರುವಂತೆ "ಜೀವಾದಿಗಳ ವರ್ಗಕ್ಕೆ" ಎಂದು ಅವಶ್ಯವಾಗಿ ಅವಳು ಉತ್ತರ ಕೊಡುವಳೆಂದು ದೃಢ ಮಾಡಿ ಕೊಂಡಿದ್ದನು.

ಆದರೆ ಆ ಹುಡುಗಿಯು ಏನು ಉತ್ತರ ಹೇಳುವದೆಂದರಿಯದೆ, ಮುಖ ಕೆಂಪಾದವಳಾಗಿ, ಸ್ವಲ್ಪ ಹೊತ್ತು ಮೌನವಾಗಿದ್ದಳು. ಯಾಕಂದರೆ, ಅರಸನು ಜೀವಾದಿಗಳ ವರ್ಗಕ್ಕೆ ಶೇರಿರುತ್ತಾನೆಂದು ಹೇಳಿದರೆ, ಅವನಿಗೆ ತಕ್ಕದಾದ ಘನತರದ ಉತ್ತರವಲ್ಲವೆಂದು ಸಂಶಯ ಪಟ್ಟಳು. ಮತ್ತು ಅವಳ ಬಾಲಬುದ್ಧಿಯನ್ನು ಪ್ರಯೋಗಿಸಿ, ಆಲೋಚಿಸುವಾಗ,

ದೇವರ ವಾಕ್ಯದ ಉತ್ಪತ್ತಿ ಪುಸ್ತಕದಲ್ಲಿ ಬರದ "ದೇವರು ಮನುಷ್ಯನನ್ನು ತನ್ನ ರೂಪವಾಗಿ ಸೃಷ್ಟಿಸಿದನು, ದೇವರ ರೂಪವಾಗಿ ಅವನನ್ನು ಸೃಷ್ಟಿಸಿದನು" ಎಂಬ ವಚನವನ್ನು ನೆನಪು ಮಾಡಿ, ಕಡೆಗೆ ಅವಳು ಉತ್ತರವಾಗಿ ಹೇಳಿದ್ದು: "ದೇವರ ವರ್ಗಕ್ಕೆ ಅಯ್ಯಾ!"

ಅರಸನದನ್ನು ಕೇಳುತ್ತಲೇ ಹೃದಯ ತಿವಿದವನಾಗಿ, ಕಣ್ಣುಗಳಲ್ಲಿ ಬಾಷ್ಪಗಳು ತುಂಬಿ, ಬಗ್ಗಿ, ಆ ಹುಡುಗಿಯ ತಲೆಯ ಮೇಲೆ ಕೈಯನ್ನು ಇಟ್ಟನು; ಯಾಕಂದರೆ ಆ ಹುಡುಗಿಯ ನಿಷ್ಕಪಟ ಮಾತುಗಳು ಅವನಿಗೆ ಚುಚ್ಚಿದವು. ಮತ್ತು ಅವನು ನೆಟ್ಟುಸುರಿಟ್ಟು, ಅಂದದ್ದು: "ಆ ದೇವರ ರಾಜ್ಯಕ್ಕೆ ನಾನು ತಕ್ಕವನೆಂದು ಎಣಿಸಲ್ಪಡುವ ಹಾಗೆ, ದೇವರು ದಯ ಪಾಲಿಸಲಿ!"

ನಮ್ಮ ಕರ್ತನ ಮಂಗಳ ಜನನ.

ದೇವಾಧಿ ದೇವಪುತ್ರ
ನರನಾದ ಸ್ತುತಿ ಸ್ತೋತ್ರ || ಪಲ್ಲವಿ ||

ದಿವ್ಯ ತೇಜಸನ್ನು ಬಿಟ್ಟು
ಅವ್ಯಯ ಶ್ರೀ ತೆಗದಿಟ್ಟು |
ದೇವರ ಕುಮಾರ—ಪರದಿಂದ
ಅವತಾರ—ಎತ್ತಿ ಬಂದ

ಸ್ವರ್ಲೋಕದ ಅರಸುಕುಮಾರ
ಭೂಲೋಕದ ನರಗನುಸಾರ |
ಆದನು ಕೇಳಿರಿ—ಮನಸ್ಸಿಗೆ ತನ್ನಿರಿ
ಅಂದದಿ ಪಾಡಿರಿ—ನುತಿಯನ್ನು ಎತ್ತಿರಿ

ಲಲನೆ ಉದರದೊಳು ಅತಿ ಬಡತನದಲಿ
ಲಲಿತ ನರಶಿಶುವಿನ ಸಮ ಪರಿಯಲಿ |
ಮಹಾ ಅತಿಶಯ ಕಾರ್ಯವು ಇದು
ಆಹಾ ಸಂತಸಕರ ಇದು ಹೌದು || ೧ || ದೇವಾಧಿ—

ಕುರುಬರೊಂದು ರಾತ್ರಿಯೊಳಗೆ
ಕುರಿಗಳನ್ನು ಕಾಯುವೆಡೆಗೆ |
ದಿವದಿಂದ ದೂತ—ದಯ ಮಾಡಿ
ಅಂದನಾತ—ಭಯ ಬೇಡಿ,

ಬೆತ್ಲೇಮ ಊರೊಳು ಬಂದು ಸಾಗಿ
ಇತ್ಲಾಗಿ ಜನಿಸಿದ ನಿಮಗಾಗಿ |

ಲೋಕದ ರಕ್ಷಕ—ಧರಣಿ ಉದ್ಧಾರಕ
ಏಕ ವಿಮೋಚಕ—ನರಕುಲನಾಯಕ |

ಒಡನೆ ನೆರದೊದಗಿತು ದಿವಸಮುದಯ
ನಿಡು ಸರಪದದಲಿ ಸೊಗಸಿನೊಳು ನುಡಿಯು
ಮಹೋನ್ನತಿಗೆ ಘನರಸೆಗೆ ಸಮಾಧಾನ
ಇಹನರರಿಗೆ ದಯವೆಂಬ ಗಾನ || ೨ || ದೇವಾಧಿ—

ನೆರೆದ ಜನರೆ, ಪಡಿರಿ ಮುದವ
ತೆರೆಯಿರೊಡನೆ ನಿಮಯ ಹೃದವ |
ಶಿಶುವಿನ ಬಳಿಗೆ—ಸರಸರನೆ
ಇದೆ ಘಳಿಗೆ—ಬರ್ರಿ ಒಡನೆ |

ಮಾಂಗಲ್ಯ ಸಂಭವಿಸುವ ಹಾಗೆ
ಅಂಗೀಕರಿಸ್ಯಾತನ ಹೃದದಾಗೆ |
ಅಸುಗೆಲಿ ಆಗಲು—ಅಸುವಿನೊಡೆಯನಿಗೆ
ಅಸುಗತಿ ಹೋಗಲು—ಎಸಗಿರಿ ಹೊಗಳಿಕೆ

ಸಕಲ ತರದ ನುತಿ ಸುತಿ ಪದಗಳೊಡನೆ
ಅಖಿಲ ಜನರ ಸಮುದಯದ ಒಡನೆ
ಪರಮಂಡಲ ದೂತರ ಸಹಿತ
ಸರಿ ಮಾಡಿರಿ ಮಧುರ ಸಂಗೀತ || ೩ || ದೇವಾಧಿ—

A. G. A.

ಉತ್ತರಗಳು.

೧೬, ೧೭, ೧೮ನೇ ಪ್ರಶ್ನೆಗಳಿಗೆ ಹುಬ್ಬಳಿಯಿಂದ ೪ ಉತ್ತರಗಳು ಬಂದವೆ. ಸರಿಯಾದ ಉತ್ತರಗಳು ಯಾವವಂದರೆ:

16. ಇಬ್ರಿಯರ ಪತ್ರಿಕೆ ೩, ೧.
17. ಲಹ್ಮಿಯನು. ೧ ದಿನಚರ್ಯ. ೨೦, ೫.
18. ೪ ಜೀವಿಗಳು. ಪ್ರಕಟಣೆ. ೪, ೬—೮. ಸಾಯದಂಥ ಹುಳವು. ಮಾರ್ಕ. ೯, ೪೪.

ಹೊಸ ಪ್ರಶ್ನೆಗಳು.

19. ಕಿವುಡರು ಕೇಳಿ ಕುರುಡರು ದೃಷ್ಟಿಸಿ ನೋಡ ಬೇಕೆಂದು ಎಲ್ಲಿ ಹೇಳಿಯದೆ? (ಇದು ಹಳೆ ಒಡಂಬಡಿಕೆಯಲ್ಲಿ.)
20. ಯೇಸು ಕ್ರಿಸ್ತನ ಮುಂಚೆ ಹುಟ್ಟಿ ಇನ್ನು ಸಾಯದೆ ಹೋದವನ ಹೆಸರೇನು?
21. ಹೊಸ ಒಡಂಬಡಿಕೆಯಲ್ಲಿ ಮಿಶ್ಯನ್ ಹಬ್ಬಗಳ ವರ್ತಮಾನ ಎಲ್ಲಿ ಬರದದೆ?

Printed by Stolz & Reuther, Basel Mission Press, Mangalore.

ಬಾಲಪತ್ರ.

ಪುಸ್ತಕ ೧. 1871. ಅಂಕೆ ೪.

ಸಂತುಷ್ಟನಾದ ಉಪಾಧ್ಯಾಯನು.

ಹಿಂದಿನ ಕಾಲದಲ್ಲಿ ಹುಡುಗರು ಕಿಂಚಿತವಾದರೂ ವಿದ್ಯ ಕಲಿಯುವಂಥಾದ್ದು ಬಹು ಪ್ರಯಾಸವಾಗಿತ್ತು. ಈಗ ನಮಗಿರುವಂತೆ ಮನೋರಂಜಕ ಸುಲಭ ಪುಸ್ತಕಗಳು ಆಗ ಇರಲಿಲ್ಲ; ಶಾಲೆಗಳೇನಾದರೂ ಇದ್ದರೆ, ಅವು ಅಗಮ್ಯವಾದ ಸ್ಥಳಗಳಲ್ಲಿದ್ದವು; ಮತ್ತು ಅವುಗಳ ಉಪಾಧ್ಯಾಯರು ಬಹಳ ಕಠಿಣರಾಗಿದ್ದರು. ಒಬ್ಬ ಹುಡುಗನು ದಡ್ಡನಾಗಿದ್ದರೆ, ಇಲ್ಲವೆ ಪಾಠ ತಪ್ಪಿದರೆ, ಬೆತ್ತದಿಂದಾಗಲಿ ರೋಲರಿನಿಂದಾಗಲಿ ಹೊಡಿಯುವದು, ಇಲ್ಲವೆ ಕೋಲ್ದಂಡೆಯಲ್ಲಿ ತೂಗಿಸಿ ಮೈಮೇಲೆ ಬೆಲ್ಲದ ನೀರು ಮತ್ತು ಕಚ್ಚುವ ಇರುವೆಗಳನ್ನು ಹಾಕುವದು, ಇಲ್ಲವೆ ಇನ್ನೊಬ್ಬ ಹುಡುಗನನ್ನು ಬೆನ್ನಿನ ಮೇಲೆ ಕುಳ್ಳಿರಿಸಿ ಚಬುಕಿನಿಂದ ಹೊಡಿಸುವದು, ಇಂಥಾ ಅನೇಕ ತರದ ಕಠಿಣವಾದ ಶಿಕ್ಷೆಗಳು ರೂಢಿಯಾಗಿತ್ತು. ಆದರೆ ಅವುಗಳೆಲ್ಲಾ ವಿವರಿಸುವ ಅವಶ್ಯವಿಲ್ಲ, ಯಾಕಂದರೆ ಪೂರ್ವದ ಬೋಧಕರು ಕೊಡುತ್ತಿದ್ದ ಶಿಕ್ಷೆಯ ಸ್ವಭಾವವನ್ನು ಕುರಿತು ನಮ್ಮ ಹುಡುಗರು ಕೇಳಿದ್ದಾರು. ಆದರೆ ಈಗಿನವರಾದ ನಮ್ಮ ಕಾಲದಲ್ಲಿ ಒಂದು ಬದಲಾಯಿತು; ಹ್ಯಾಗಂದರೆ, ಉತ್ತಮ ಬೋಧಕನಿಗೆ ಕಠಿಣತೆಗಿಂತಲೂ ದಯವೇ ತಕ್ಕದ್ದಾಗಿದೆಂದು ಕಂಡು ಬಂದದೆ.

ಒಂದು ಶೀಮೆಯ ಪುರದಲ್ಲಿ, ವಸಂತಕಾಲದಂಥ ಸಂತುಷ್ಟಮುಖವುಳ್ಳ ಒಬ್ಬ ಉಪಾಧ್ಯಾಯನು ಇದ್ದನು. ಅವನು ತನ್ನ ಹುಡುಗರನ್ನು ಪಸಂದಾಗಿ ತರಬೇತು ಮಾಡುತ್ತಾನೆ. ರಜದ ದಿವಸಗಳೊಂದರಲ್ಲಿ ಹುಡುಗರು ರಂಗಸ್ಥಳದಲ್ಲಿ ಆಡುತ್ತಿರುವಾಗ, ಸಮೀಪವಿರುವ ಮರದ ನೆರಳಿನಲ್ಲಿ ಅವನು ಒಮ್ಮೆ ಕೂತು ಕೊಂಡು ಓದುತ್ತಿದ್ದನು. ಓದುತ್ತಾ, ತನ್ನ ಕನ್ನಡಕವನ್ನು ತೆಗದು, ಚಂಡುಕೋಲಾಟವಾಡುತ್ತಿರುವ ಆ ಹುಡುಗರನ್ನು ಕರದು ಹೇಳಿದನು: ಹುಡುಗರೇ, ನಿಮ್ಮ ಆಟವನ್ನು ಒಂದು ಘಳಿಗೆ ನಿಲ್ಲಿಸಿರಿ; ನಾನು ಒಂದು ಚಂದವಾದ ಕಥೆ ಹೇಳುವೆನು.—

ಅವರು ತತ್ಕ್ಷಣವೇ ಆಟವನ್ನು ಬಿಟ್ಟು, ನಿಮಿಷದೊಳಗೆ ತಮ್ಮ ದಯಾವಂತ ಬೋಧಕನೆಡೆಗೆ ಬಂದರು. ಮತ್ತು ತಾನು ಹತ್ತರ, ತಾನು ಹತ್ತರವೆಂದು ಸ್ವಲ್ಪ ಹೊತ್ತು ನೂಕ್ಯಾಡಿ ಕೊಂಡ ಮೇಲೆ, ನಿಶ್ಯಬ್ದವಾಗಿ ನಿಂತು, ತಮ್ಮ ಉಪಾಧ್ಯಾಯನನ್ನು ಕೇಳುವ

ದಕ್ಕೆ ಅವನ ಮುಖವನ್ನೇ ನೋಡುತ್ತಿದ್ದರು. ಎಲ್ಲರೂ ಮೌನವಾದ ಬಳಿಕ ಅವನು ಈ ಕಥೆಯನ್ನು ಹೇಳಿದನು:—

ಬಹಳ ವರುಷಗಳ ಹಿಂದೆ ಯಾವದೋ ಒಂದು ಕಾರಣದಿಂದ ಒಬ್ಬ ವಜೀರನನ್ನು ಯಾವಜ್ಜೀವ ಪರ್ಯಂತರ ಒಂದು ಎತ್ತರವಾದ ಗೋಪುರದೊಳಗೆ ಶೆರೆಯಲ್ಲಿ ಹಾಕಿದರು; ರಾತ್ರಿಯಲ್ಲಿ ಅವನ ಹೆಂಡತಿ ಅವನಿರುವ ಗೋಪುರದ ಕೆಳಗೆ ಬಂದು ಅಳುತ್ತಿದ್ದಳು.

ತಲೆಗೊಂದು ಮುಂಡಾಸು ಇಟ್ಟು ಕೊಂಡಂಥಾ ಆ ವಜೀರನು ಆ ಗೋಪುರದ ಕಿಟಕಿಯಿಂದ ಹೊರಗೆ ಹಣಿಕಿ, ಅವಳಿಗೆ: ನಿನ್ನ ದುಃಖವನ್ನು ನಿಲ್ಲಿಸು; ಸದ್ಯಕ್ಕೆ ಮನೆಗೆ ಹೋಗಿ, ಒಂದು ತುಂಬಿಯನ್ನೂ ಸ್ವಲ್ಪ ತುಪ್ಪವನ್ನೂ ಮೂರು ತರದ ಪೆಂಡೆಗಳನ್ನೂ ಅಂದರೆ, ಒಂದು ಒಳ್ಳೇ ರೇಶ್ಮೆ ನೂಲಿನದು, ಮತ್ತೊಂದು ಸುತ್ಲಿದು, ಇನ್ನೊಂದು ಅದಕ್ಕಿಂತ ಥೋರವಾದ ನೂಲುಹಗ್ಗದ್ದು, ಮತ್ತು ಘಟ್ಟಿಯಾದ ಆಲಾತದ ಒಂದು ಕಟ್ಟು; ಇವುಗಳನ್ನೆಲ್ಲಾ ಸಂಪಾದಿಸಿ ಕೊಂಡು, ನೀನು ಇಲ್ಲಿ ಬರ ಬೇಕೆಂದು ಹೇಳಿ, ಅವಳನ್ನು ಕಳುಹಿಸಿದನು.

ತನ್ನ ಗಂಡನ ಅಪ್ಪಣೆಯ ಪ್ರಕಾರ ಅವಳು ಎಲ್ಲವನ್ನು ಸಿದ್ಧ ಮಾಡಿ ಕೊಂಡು, ಆ ಗೋಪುರದ ಕೆಳಗೆ ಬಂದಳು. ಆಗ ಅವನು, ಆ ತುಂಬಿಯ ತಲೆಗೆ ಸ್ವಲ್ಪ ತುಪ್ಪ ತಾಗಿಸಿ ಅದರ ಶರೀರಕ್ಕೆ ರೇಶ್ಮೆ ಉಂಡೆಯ ನೂಲಿನ ಒಂದು ತುದಿಯನ್ನು ಕಟ್ಟಿ ಗೋಪುರದ ಗೋಡೆ ಮೇಲೆ ಆ ಕಿಟಕಿ ಇರುವ ಕಡೆಗೆ ಬಿಡು, ಅಂದನು. ಅವಳು ಹಾಗೆ ಮಾಡಿದಳು.

ಆ ತುಂಬಿಯು ತನ್ನ ತಲೆಯಲ್ಲಿರುವ ತುಪ್ಪದ ಪರಿಮಳದಿಂದ ಮರುಳಾಗಿ, ಎಲ್ಲಿಯೋ ಮೇಲೆ ತುಪ್ಪದ ಸಂಗ್ರಹ ಇರ ಬೇಕೆಂದು ನೆನಸಿ, ಏರುತ್ತಾ ಏರುತ್ತಾ ವಜೀರನು ಇದ್ದ ಕಿಟಕಿಯ ವರೆಗೆ ಬಂದು, ಆ ನೂಲಿನ ತುದಿ ವಜೀರನ ಕೈಗೆ ಶಿಕ್ಕುವ ಹಾಗೆ ಕಿಟಕಿಯೊಳಗೆ ಹೊಕ್ಕಿತು. ಅದು ಶಿಕ್ಕಿದ ಮೇಲೆ ಅದರಿಂದ ಅವನು ಸುತ್ಲಿಯ ದಾರವನ್ನೂ, ಅನಂತರ ಥೋರ ನೂಲು ಹಗ್ಗವನ್ನೂ ಇದರ ಮೂಲಕ ಅವನು ತನ್ನ ಭಾರವನ್ನು ಹೊರುವಷ್ಟು ಘಟ್ಟಿಯಾದಂಥಾ ಆಲಾತವನ್ನೂ ಎಳಕೊಂಡು, ಅದನ್ನು ಗೋಪುರದ ಒಂದು ತೋಳಕ್ಕೆ ಕಟ್ಟಿ ಕಿಟಕಿಯ ಹೊರ ನುಗ್ಗಿ, ಅದನ್ನು ಹಿಡಿದು ಕೆಳಗೆ ಇಳಿದನು. ಈ ಪ್ರಕಾರ ತನಗೆ ಬಂಧಿಸಿದ್ದಂಥಾ ಶೆರೆಯಿಂದ ಬಿಡುಗಡೆಯಾಗಿ, ಓಡಿ ಹೋಗಿ, ಸುರಕ್ಷಿತನಾದನು.—ಒಳ್ಳೇದು, ಈ ಕಥೆಯ ಮೂಲವಾಗಿ ನಾವು ಹ್ಯಾಗೆ ಒಂದು ಚಿಕ್ಕ ಆರಂಭದಿಂದ ದೊಡ್ಡ ಅಂತ್ಯವನ್ನು ಸಾಧಿಸಿ ಕೊಳ್ಳ ಬಹುದೆಂತ ತಿಳಿಯ ಬಹುದು.—

ಈ ಕಥೆಯನ್ನು ಕೇಳಿ, ಹುಡುಗರೆಲ್ಲರಿಗೆ ಬಹಳ ಸಂತೋಷವಾಯಿತು; ಆದರೆ, ಆ ಒಳ್ಳೇ ಉಪಾಧ್ಯಾಯನು ಅದನ್ನು ಕುರಿತು ಇನ್ನೂ ಹೇಳಲಿಕ್ಕಿರುವದರಿಂದ, ಇಲ್ಲಿ ನಿಲ್ಲಿಸದೆ, ಅದನ್ನು ಮುಂದೆ ಸಾಗಿಸಿದ್ದು ಹ್ಯಾಗಂದರೆ:

ಈ ಕಥೆಯ ಅಭಿಪ್ರಾಯವು ನಮ್ಮೆಲ್ಲರಿಗೆ ಹೋಲುವಂಥಾದ್ದಾಗಿ ಕಾಣುತ್ತದೆ. ನನ್ನ ಶಾಲೆಯಲ್ಲಿ ಯಾವ ಹುಡುಗನಿಗಾದರೂ ಮುಂಡಾಸು ಇಲ್ಲದಿದ್ದರೂ, ಪ್ರತಿ ಹುಡುಗನನ್ನು ಒಬ್ಬ ವಜೀರನೆಂತ ಕರದು, ಎತ್ತರವಾದ ಅಜ್ಞಾನದ ಗೋಪುರವೆಂಬ ಶೆರೆಮನೆಯಲ್ಲಿ ಹಾಕಲ್ಪಟ್ಟಿದ್ದಾನೆಂತ ಹೇಳ ಬಹುದು; ಆದರೆ ಇಂಥಾ ಗೋಪುರದಿಂದ ಬಿಡುಗಡೆಯಾಗಲಿ

ಕ್ಕೆ ಏನು ಉಪಾಯ? ತಕ್ಕ ಸಾಹಿತ್ಯವನ್ನು ಸಿದ್ಧ ಮಾಡುವ ಒಬ್ಬ ವಜೀರನ ಹೆಂಡತಿ ಬೇಕು. ಅಜ್ಞಾನಗೋಪುರದಲ್ಲಿರುವ ವಜೀರನೆಂಬ ಪ್ರತಿ ಹುಡುಗನು ಅದರಿಂದ ಹೊರಗೆ ಬರುವ ಹಾಗೆ, ವಜೀರನ ಹೆಂಡತಿ ಮಾಡಿದ ಕೆಲಸವನ್ನು ಈ ಶಾಲೆಯಲ್ಲಿರುವ ಹುಡುಗನಿಗೆ ಛಾಪಖಾನೆಯು ಅನುಕೂಲ ಮಾಡುತ್ತದೆ. ಛಾಪಖಾನೆ ಇಲ್ಲದ ಪಕ್ಷಕ್ಕೆ ಏನು ಮಾಡ ಬಹುದಿತ್ತೆಂದು ನಾನರಿಯೆ.

ಆದರೆ ಒಂದು ಕಪ್ಪು ತುಂಬಿಯು ನಮಗೆ ಎಲ್ಲಿ ಶಿಕ್ಕುವದು? ಹ್ಯಾಗಾದರೂ ನಮಗೊಂದು ಇರ ಬೇಕಲ್ಲ? ನಿಮ್ಮ ಉಪಾಧ್ಯಾಯನೇ ಆ ತುಂಬಿಯಾಗಿರ ಬೇಕೆಂದು ನನ್ನ ಆಲೋಚನೆಗೆ ತೋರುತ್ತದೆ. ನಾನು ತುಂಬಿಯಂತೆ ಮಾಡ ಬೇಕು, ಸರಿ.

ಹಾಗಾದರೆ, ನೀವು ಒಳ್ಳೆಯವರಾಗ ಬೇಕೆಂದು, ನಿಮ್ಮ ಹಿತ ಬಯಸುವದೇ ನನ್ನನ್ನು ನಿಮ್ಮ ಕಡೆಗೆ ಆಕರ್ಷಿಸುವ ತುಪ್ಪ. ತುಪ್ಪವೆಂಬ ಈ ನನ್ನ ಅಪೇಕ್ಷೆಯು, ನೀವು ಅಜ್ಞಾನ ಗೋಪುರದಲ್ಲಿ ಇರುವನಕ ನಿಮ್ಮನ್ನು ಸೇವಿಸುವಂತೆ, ಸಾಕಷ್ಟು ಇರುತ್ತದೆ. ಈ ಪ್ರಕಾರ ನೀವು ಹೊರಗೆ ಬರುವದಕ್ಕೆ ಸಹಾಯ ಮಾಡ ನನ್ನಿಂದ ಉಪಾಯವಾಗುವದು.

ನಾನು ಮೊದಲಾಗಿ ನಿಮಗೆ ತರುವ ರೇಶ್ಮೆ ನೂಲು ಅಕ್ಷರಮಾಲೆಯೇ; ಅದು ಬಹಳ ಸಣ್ಣ ಆರಂಭವಾಗಿದ್ದರೂ ಅದರಿಂದ ಬಹಳ ದೊಡ್ಡ ಮತ್ತು ಪ್ರಯೋಜನಕರವಾದ ಅಂತ್ಯವನ್ನು ಪಡಿಯ ಬಹುದು. ಅಕ್ಷರಮಾಲೆ ಇಲ್ಲದಿದ್ದರೆ, ನೀವು ಬರಹ ಕಲಿಯುವದೇ ಅಸಾಧ್ಯವಾಗಿತ್ತು. ಈಗ ಅಕ್ಷರಮಾಲೆಯು ನಮ್ಮ ರೇಶ್ಮೆ ನೂಲಾಗಿದ್ದರೆ, ಶಬ್ದಗಳು ನಮ್ಮ ಸುತ್ಲಿದಾರವೆಂತ ನೆನಸ ಬಹುದು. ಅಕ್ಷರಗಳು ಕೂಡಿ ಮಾತುಗಳು ಆಗುತ್ತವೆ. ಮತ್ತು ನಾವು ಪ್ರವರ್ತಿಸುತ್ತಾ ಕ್ರಮೇಣವಾಗಿ ಜ್ಞಾನದಲ್ಲಿ ಹೆಚ್ಚುತ್ತೇವೆ.

ಶಬ್ದಗಳನಂತರ ವಚನಗಳು ಬರುತ್ತವೆ; ಇವು ನಮ್ಮ ಭಾರವಾದ ಹಗ್ಗವಾಗಿರುವದು. ಅದರ ಹಿಂದೆ ಪುಸ್ತಕಗಳು ಬರುತ್ತವೆ. ಇವೇ ನಮ್ಮನ್ನು ಅಜ್ಞಾನದ ಗೋಪುರದೊಳಗಿಂದ ಹೊರಗೆ ತರುವಂಥಾ ಘಟ್ಟಿಯಾದ ಆಲಾತವಾಗಿದೆ. ಹುಡುಗರೇ, ಪುಸ್ತಕಗಳು ನಿಮಗೆ ಹೇಳಿದ್ದೇ; ಮುಖ್ಯವಾಗಿ ಪುಸ್ತಕಗಳ ಪುಸ್ತಕ, ದೇವರ ಪರಿಶುದ್ಧ ವಾಕ್ಯ, ಪರಿಶುದ್ಧ ಬರಹ! ಅದು "ಕ್ರಿಸ್ತ ಯೇಸುವಿನಲ್ಲಿರುವ ವಿಶ್ವಾಸದಿಂದ ರಕ್ಷಣೆಗಾಗಿ ನಿಮಗೆ ಜ್ಞಾನವನ್ನು ಕೊಡ ಶಕ್ತವಾಗಿದೆ." (೨ ತಿಮೊ. ೩, ೧೫.)

ಈಗ, ಹುಡುಗರೇ, ತುಂಬಿಯು ನಿಮಗೆ ರೇಶ್ಮೆನೂಲನ್ನೂ ಸುತ್ಲಿದಾರವನ್ನೂ ಘೋರವಾದ ನೂಲುಹಗ್ಗವನ್ನೂ ಕಡೆಗೆ ಆಲಾತವನ್ನೂ ತಂದು ಕೊಟ್ಟು ನಿಮಗೆ ಸಹಾಯ ಮಾಡುತ್ತಾ ಇರುವದರಿಂದ, ನಿಮ್ಮ ಚಂಡುಕೋಲಾಟ ತೀರಿಸಿದ ತರುವಾಯ, ನೀವು ಅಜ್ಞಾನದ ಗೋಪುರಕ್ಕೆ ಎಂದಿಗೂ ಬೆನ್ನು ಹಾಕುವವರಾಗಿ, ಸ್ವತಂತ್ರದಲ್ಲಿ ಸಂತೋಷ ಪಡುವಂತೆ, ನಿಮ್ಮ ಪುಸ್ತಕಗಳನ್ನು ಆಗುವಷ್ಟು ತವಕದಿಂದ ಕಲಿಯಲಿಕ್ಕೆ ಪ್ರಯತ್ನ ಮಾಡಿರಿ!

ಯೋಗ್ಯನಾದ ಶಿಷ್ಯನು.

ಒಬ್ಬ ವಿದ್ವಾಂಸನು ತನಗೊಬ್ಬ ಶಿಷ್ಯನು ಮಾಡಿ ಕೊಳ್ಳ ಬೇಕೆಂಬ ಮನಸ್ಸುಳ್ಳವನಾಗಿ, ಯಾರನ್ನು ಆರಿಸಿ ಕೊಳ್ಳುವದೆಂದು ಪರೀಕ್ಷೆ ಮಾಡುವ ಬಗ್ಯೆ, ಹತ್ತಿಪ್ಪತ್ತು ಹಡುಗರನ್ನು ತರಿಸಿದನು. ಮತ್ತು ಕೆಲವು ಕಿತ್ತಲೇ ಹಣ್ಣುಗಳನ್ನು ಸಹ ತೆಕ್ಕೊಂಡು ಒಬ್ಬೊಬ್ಬನಿಗೆ ಕೊಟ್ಟು: ಹೋಗಿ, ಯಾರೂ ನೋಡದ ಹಾಗೆ ತಿಂದು ಕೊಂಡು ಬನ್ನಿರಿ! ಎಂದು ಹೇಳಿ ಕಳುಹಿಸಿದನು. ಮರು ದಿವಸ ಅವರೆಲ್ಲರೂ ತಿರಿಗಿ ಬರಲು, ಹ್ಯಾಗೆ ತಿಂದಿರೆಂದು ಕೇಳಿದಾಗ, ಉತ್ತರ ಕೊಟ್ಟದ್ದು:

ಒಬ್ಬನು: ನಾನು ನಮ್ಮ ಮನೆಯ ಸಮೀಪವಿರುವ ಕಾಡಿಗೆ ಹೋಗಿ, ಯಾರೂ ನೋಡದಂತೆ ಒಂದು ಮರದ ಮೇಲೆ ಹತ್ತಿ, ಅಲ್ಲಿ ನನ್ನ ಹಣ್ಣು ತಿಂದು ಬಿಟ್ಟು ಬಂದೆನೆಂದು ಹೇಳಿದನು.

ಇನ್ನೊಬ್ಬನು: ನಾನು ನಮ್ಮ ಮನೆಯ ಮಾಳಿಗೆ ಮೇಲೆ ಏರಿ, ಎಲ್ಲರೂ ಕೆಳಗಿಳಿದ ವೇಳೆ, ಒಂದು ಮೂಲೆಯಲ್ಲಿ ಕೂತು ನನ್ನ ಹಣ್ಣು ತಿಂದು ಬಿಟ್ಟು ಬಂದೆನು.

ಮೂರನೆಯವನು: ನಾನು ನನ್ನ ಹಣ್ಣನ್ನು ತಕ್ಕೊಂಡು, ರಾತ್ರಿ ವರೆಗೂ ಪೆಟ್ಟಿಗೆಯಲ್ಲಿ ಗುಪ್ತವಾಗಿ ಇಟ್ಟೆ. ರಾತ್ರಿ ಊಟವಾಗಿ, ದೀಪ ನಂದಿಸಿ, ಎಲ್ಲರೂ ಮಲಗಿದ ಮೇಲೆ ಅದನ್ನು ಭಕ್ಷಿಸಿದೆನು.

ಹೀಗೆ ಒಬ್ಬೊಬ್ಬನು, ಒಂದೊಂದು ಪ್ರಕಾರವಾಗಿ, ತಿಂದೆನೆಂದು ಉತ್ತರ ಕೊಟ್ಟನು.

ಕಡೆಗೆ ಒಬ್ಬನು ಮಾತ್ರ ಉಳಿದನು; ಅವನು ಆ ಹಣ್ಣನ್ನು ತಿನ್ನದೆ ಹಿಂದೆ ತಂದಿದ್ದಾನೆ. ಏನು ಕಾರಣವೆಂದು ಕೇಳಲಾಗಿ, ಈ ಉತ್ತರ ಕೊಟ್ಟನು: ಈ ಹಣ್ಣು ಯಾರೂ ಇಲ್ಲದ ಕಡೆಗೆ ಹೋಗಿ ತಿನ್ನ ಬೇಕೆಂದು ನೋಡಿದೆ; ಆದರೆ ದೇವರು ಸರ್ವವ್ಯಾಪಿಯಾಗಿದ್ಧಾನಾದರಿಂದ, ನಾನು ಎಲ್ಲಿ ಹೋದರೂ ಅವನು ಅಲ್ಲಿ ಇದ್ಧಾನಲ್ಲ! ನೀವು ಯಾರೂ ನೋಡದಂತೆ ತಿಂದು ಬಾ ಎಂದು ಹೇಳಿದ್ದಿರಷ್ಟೆ; ಸರ್ವ ಕಡೆಯಲ್ಲಿರುವ ಆತನನ್ನು ಅಡಗಿಸಿ ಹ್ಯಾಗೆ ತಿನ್ನಲಿ? ಇದು ನನ್ನಿಂದ ಅಸಾಧ್ಯವಪ್ಪಾ! ಎಂದು ಹೇಳಿದನು.

ಅದಕ್ಕೆ ಆ ವಿದ್ವಾಂಸನು ಮೆಚ್ಚಿ, ದೇವರು ಸರ್ವವ್ಯಾಪಿ ಎಂಬ ಜ್ಞಾನವುಳ್ಳ ಈ ಹುಡುಗನೇ ತನಗೆ ಶಿಷ್ಯನಾಗಲಿಕ್ಕೆ ಯೋಗ್ಯನೆಂದು ಹೇಳಿ, ಆತನನ್ನು ಅಂಗೀಕರಿಸಿ ಕೊಂಡು, ಆತನಿಗೆ ವಿದ್ಯ ಕಲಿಸಿ, ತನ್ನಂತೆ ಮಾಡಿದನು. ಆದದರಿಂದ ಪ್ರಿಯ ಓದುವವನೇ, ದೇವರು ಸರ್ವತ್ರದಲ್ಲಿಯೂ ಇದ್ಧಾನೆಂದು ನೀನು ಬಲ್ಲಿಯಾ? ಬಲ್ಲಿಯಾದರೆ, ಈ ಜ್ಞಾನವನ್ನು ನೀನು ಯಾವಾಗಲೂ ಮರಿಯದಿರು! ಪಾಪ ಮಾಡುವದಕ್ಕೆ ನಿನಗೆ ಶೋಧನೆ ಆಗುವಾಗಲೇ ಅದು ನಿನ್ನ ನೆನಪಿಗೆ ಬರಲಿ!

ವೃದ್ಧ ಶಿಷ್ಯನ ಅನುಭವಾಧಾರವು.

ಡಾಕ್ತರ ಪೈಸನ್ ಪಾದ್ರಿ ಧೊರೆ ಎಂಬವರು ಯೌವನಸ್ಥರ ಕೂಟಕ್ಕೆ ಕೊಟ್ಟ ಒಂದು ವಾಗ್ನಿರೂಪಣದಿಂದ.

ನನ್ನ ಪ್ರಿಯ ಯೌವನಸ್ಥರೇ,

ನಾನು ಈಗ ಹೊರಡ ಬೇಕಾಗಿರುವ ದೊಡ್ಡ ಸಾಗರಪಯಣವನ್ನು ನೀವು ಸಹಾ, ಹಿಂದೆಯಾಗಲಿ ಮುಂದೆಯಾಗಲಿ, ಒಂದು ದಿವಸ ಗಮಿಸ ಬೇಕಾಗುವದು. ಈ ಪಯಣದಲ್ಲಿ ಸುರಕ್ಷಿತವಾಗಿ ನಮ್ಮನ್ನು ನಡಿಸುವ ನಾವಿಕನು ಯಾರೆಂದೂ, ಅವನು ಎಷ್ಟು ಅಮೌಲ್ಯವಾಗಿದ್ಧಾನೆಂದೂ ನಿಮಗೆ ವಿವರಿಸಿದ್ಧೇನೆ. ಮತ್ತು ಆತನನ್ನು ನೀವು ಸಹ ಎಲ್ಲಾ ವಿಷಯಗಳಲ್ಲಿ ನಿಮ್ಮನ್ನು ಎಂದೆಂದಿಗೂ ನಡಿಸುವವನಾಗಿ ಪರಿಗ್ರಹಿಸಿ ಕೊಳ್ಳ ಬೇಕೆಂದು ಅಪೇಕ್ಷಿಸುತ್ತೇನೆ. ನಾನು ನಿಮಗೆ ಬೋಧಿಸಿದ ಧರ್ಮವು ನನ್ನನ್ನು ಮರಣದ ವರೆಗೂ ಆದರಿಸುವದೋ? ನನ್ನ ವಿಶ್ವಾಸಭಕ್ತಿಯು ಮರಣದ ವರೆಗೂ ನೆಲೆಯಾಗಿರುವದೋ? ಏನೆಂದು ನೀವು ತಿಳಿಯ ಬೇಕೆಂದು ಅಪೇಕ್ಷಿಸುತ್ತೇನೆ.

ಈ ಲೋಕಕ್ಕೆ ನನ್ನನ್ನು ಅಂಟಿಸುವಂಥಾ ಅನೇಕ ಪಾಶಗಳಿರುತ್ತವೆ, ಸರಿ; ಅತಿ ಮಮತೆಯಿಂದ ಆಕರ್ಷಿಸುವ ಬಂಧುಬಳಗ ಮುಂತಾದ ಕುಟುಂಬ, ಮತ್ತು ಅಷ್ಟೆ ಪ್ರಿಯಕರವಾದ ನನ್ನ ಆಪ್ತ ಸ್ನೇಹಿತಜನರು, ಈ ಲೋಕದ ಇತರ ಭೋಗಾದಿಗಳು—ಇವುಗಳೆಲ್ಲಾ ನನ್ನ ಮನಸ್ಸನ್ನು ಬಲೀಯವಾಗಿ ಆಕರ್ಷಿಸುತ್ತವೆ, ಸರಿ; ಆದರೆ ಈ ಎಲ್ಲಾ ಪಾಶಗಳಿಗಿಂತಲು ಅಧಿಕವಾಗಿ ಪರಲೋಕವು ನನ್ನ ಹೃದಯವನ್ನು ಹೀರಿ ಕೊಳ್ಳುತ್ತದೆ. ನಾನೀಗ ವೃದ್ಧನಾಗಿದ್ಧೇನೆ, ಹೌದು; ಪ್ರತಿ ರಾತ್ರೆಯಲ್ಲಿ ಮರಣವು ನನ್ನ ಆತ್ಮವನ್ನು ಶರೀರದಿಂದ ಕಸಕೊಳ್ಳುವದೆಂಬ ಭಯ ಹುಟ್ಟಿಸುವಂಥಾ ಭಯಂಕರ ಮಂದಸನ್ನಿಯ ರೂಪವಾಗಿ ನನ್ನ ಹಾಸಿಕೆಯ ಬಳಿಯ ಬಂದು ಕಾದಾಡುತ್ತದೆ. ಈ ಸನ್ನಿ ಇನ್ನು ಕಠಿಣವಾಗುತ್ತಾ ಬಂದು, ನನ್ನನ್ನು ಬಹಳ ಶ್ರಮೆ ಪಡಿಸುತ್ತದೆ. ಈ ಪ್ರಕಾರ ನನ್ನ ಶರೀರವು ಯಾತನೆ ಪಡುವ ವೇಳ್ಯ, ನನ್ನ ಆತ್ಮವು ಪೂರ್ಣವಾಗಿ ಸಮಾಧಾನವುಳ್ಳದ್ದಾಗಿಯೂ ಸುಖವಾಗಿಯೂ—ನಾನು ನಿಮಗೆ ವರ್ಣಿಸ ಬಹುದಾದಕ್ಕಿಂತ ಅಧಿಕ ಸುಖವಾಗಿಯೂ—ಬಾಳುತ್ತೇನೆ. ಹೇಳಕೂಡದ ಆನಂದದಿಂದ ನನ್ನ ಆತ್ಮವು ತುಂಬಿರುತ್ತದೆ. ದೇವರು ನನ್ನ ಮೇಲೆ ಸುರಿಸುವ ತನ್ನ ಮಹಿಮೆಯ ಪ್ರಳಯದಲ್ಲಿ ನಾನು ಈಜಾಡುವ ಹಾಗೆ ಕಾಣುತ್ತದೆ. ನಾನು ಅನುಭವಿಸಲಿಕ್ಕಿರುವ ಪರದ ಮಹಿಮಾನಂದವು ತೊಡಗಿಯದೆ ಮಾತ್ರವೆಂದು ಬಲ್ಲೆ, ಹೌದು, ನಿಶ್ಚಯವಾಗಿ ಬಲ್ಲೆ. ಮತ್ತು ಈ ಸುಖವು ಉನ್ನತಿಯಾಗುತ್ತಾ ನನ್ನಲ್ಲಿ ನಿತ್ಯಕ್ಕೂ ಬಾಳುವದೆಂಬದಕ್ಕೆ ಸಂಶಯ ಪಡಲಾರೆ. ಈಗ ಇದೆಲ್ಲ ನನ್ನ ಭ್ರಮೆ ಮಾತ್ರವೇ ಎಂದು ನೆನಸುತ್ತೀರಾ? ಹಾಗಾದ ಪಕ್ಷಕ್ಕೆ ಇಂಥಾ ಭ್ರಮೆಯು ನಿಜತ್ವಕ್ಕಿಂತಲು ಉತ್ತಮವಾಗಿರುತ್ತದಲ್ಲ! ಇದು ಭ್ರಮೆಯಲ್ಲ, ಅರೆನಿದ್ರೆಯ ಮಾತಲ್ಲ, ಈಗ ದಿವಸವಾಗಿರುವಷ್ಟೆ ಪ್ರತ್ಯಕ್ಷವಾದ ಅನುಭವವೇ ಎಂದು ನನ್ನ ಅಂತರ್ಯ ಹೇಳುತ್ತದೆ. ಇವೆಲ್ಲಾ ನಾನು ಅನುಭವಿಸುವೆನೆಂದು ಬಲ್ಲೆ ಮಾತ್ರವಲ್ಲ, ಈಗಲೇ ಅನುಭವಿಸುತ್ತೇನೆ.

ನನ್ನ ಯೌವನ ಸ್ನೇಹಿತರೇ! ನಾನು ಇಡೀ ಲೋಕದ ಯಜಮಾನನಾದ ಪಕ್ಷಕ್ಕೂ ಇಂಥಾ ಆನಂದ ನನಗೆ ದೊರಿಯುವದೇ? ಲೋಕದ ಎಲ್ಲಾ ಐಶ್ವರ್ಯವನ್ನು ನನ್ನ ಕಾಲುಗಳ ಅಡಿಯಲ್ಲಿ ಸುರಿಸಿ, ಅದರ ನಿವಾಸಿಗಳೆಲ್ಲಾ ನನ್ನನ್ನು ಸುಖಿಯಾಗ ಮಾಡ ಪ್ರಯತ್ನಿಸಿದ ಪಕ್ಷಕ್ಕೂ ಇವರಿಂದೇನಾದೀತು? ಏನೂ ಇಲ್ಲ! ಇವರಿಂದ ನನಗೆ ಇಂಥಾ ಆನಂದ ದೊರಿಯುವದು ಅಸಾಧ್ಯ! ನನಗಿರುವ ಎಲ್ಲಾ ಸುಖದ ಮೂಲವು, ನಾನು ನಿಮಗೆ ಪ್ರಸಂಗಿಸಿದ ಧರ್ಮವೂ ಹಿಂದೆ ನನ್ನ ಹೃದಯದೊಳಗೆ ಉಂಟಾದ ದೊಡ್ಡ ಮಾರ್ಪೂ ಆಗಿರುತ್ತವೆ. ಈ ಪ್ರಕಾರ ಹೃತ್ಪರಿಣಾಮದ ಮಾರ್ಪಾಟವು ಆತ್ಮರಕ್ಷಣೆಗೆ ಅತ್ಯವಶ್ಯಕವೆಂದು ನಿಮಗೆ ಅನೇಕ ಸಾರಿ ಹೇಳಿದ್ಧೇನೆ. ನೀವು ಹೃತ್ಪರಿಣಾಮ ಪಟ್ಟ ಹೊರತು ದೇವರ ರಾಜ್ಯವನ್ನು ನೋಡಲಾರಿರಿ ಎಂದು ಇನ್ನೊಮ್ಮೆ ಹೇಳುತ್ತೇನೆ.


ನಾನೀಗ ಉಭಯ ಲೋಕಗಳನ್ನು ವಿಂಗಡಿಸುವ ಅಂಚಿನ ಮೇಲೆ ನಿಂತಿರುವ ವೃದ್ಧನಾಗಿದ್ದು, ನನ್ನ ಆತ್ಮವು ನಿಲಕುವ ಮಟ್ಟಿಗೆ ಪ್ರಪಂಚದ ಅತ್ಯಂತ ಸುಖವಾಗಲಿ ಅತ್ಯಂತ ದುಃಖವಾಗಲಿ ಅನುಭವಿಸಿದವನಾಗಿ, ನಿಮ್ಮ ಅವಸ್ಥೆಯನ್ನು ನನ್ನ ಅವಸ್ಥೆಯಿಂದ ತೂಗಿ ನೋಡಿ, ನಿಮ್ಮ ಅವಸ್ಥೆಯು ತುದಿ ವರೆಗೂ ಸಂತೋಷದಿಂದಾಗಲೀ ಸಂಕಟದಿಂದಾಗಲೀ ತುಂಬಲಾಪವೆಂದು ಅರಿತಿರುತ್ತಾ, ನನ್ನ ಪ್ರಿಯ ಮಕ್ಕಳೇ, ನೀವು ಮರಣವನ್ನಲ್ಲ ನಿತ್ಯಜೀವವನ್ನೆ ಆರಿಸಿ ಕೊಳ್ಳ ಬೇಕೆಂದು ನನ್ನ ಹೃದಯವು ನಿಮ್ಮ ಮೇಲೆ ಕನಿಕರ ಪಡುವದು ಆಶ್ಚರ್ಯವೇ? ಮತ್ತು ಈ ಪ್ರಕಾರ ನಿಮ್ಮಲ್ಲಿ ಪ್ರತಿ ಒಬ್ಬನ ಕೈಯಲ್ಲಿ ಸುಖಾಮೃತದ ಪಾತ್ರವನ್ನು ಕೊಟ್ಟು, ನೀವು ಅದು ಕುಡಿಯುವದನ್ನು ನೋಡುವರೆ ನಾನು ಬಹಳ ಆತುರನಾಗಿರುವದು, ಮತ್ತು ನನ್ನ ಎಲ್ಲಾ ಸುಖಕ್ಕೆ ಕಾರಣವಾದ ಮೂಲಬುಗ್ಗೆಯಿಂದ ನಾನು ಆರಿಸಿ ಕೊಂಡ ಪ್ರಕಾರವೇ ನೀವು ಸಹ ಆರಿಸಿ ಕೊಳ್ಳ ಬೇಕೆಂದು ನಾನು ಕಾಂಕ್ಷಿತನಾಗಿರುವದು ಆಶ್ಚರ್ಯವೇ?

ಈ ಲೋಕವನ್ನು ಬಿಡಲಿಕ್ಕಿರುವ ಒಬ್ಬ ಯೌವನಸ್ಥನು: "ಯುದ್ಧ ತೀರಿತು, ಯುದ್ಧ ತೀರಿತು! ಯುದ್ಧ ತೀರಿತಷ್ಟೆ; ಆದರೆ ಜಯವು ಎಂದೆಂದಿಗೂ ಸಾಧ್ಯವಾಗಲಿಲ್ಲವಲ್ಲ!" ಎಂದು ಕೂಗಿ ಸತ್ತನಂತೆ. ಆದರೆ ನನ್ನ ಅರಿಕೆ ಏನಂದರೆ: "ಯುದ್ಧ ತೀರಿತು, ಮತ್ತು ಜಯವಾಯಿತು; ಎಂದೆಂದಿಗೂ ಜಯವಾಯಿತು!"—ನಾನು ಶುದ್ಧತೆಯೂ ದಯೆಯೂ ಆನಂದವೂ ಆಗಿರುವ ಸಾಗರದಲ್ಲಿ ಸದಾಕಾಲಕ್ಕೂ ಮಜ್ಜನ ಮಾಡುವದಕ್ಕೆ ಹೋಗುತ್ತೇನೆ. ಈಗ, ನನ್ನ ಪ್ರಿಯ ಮಕ್ಕಳೇ, ನಾನು ನಿಮ್ಮನ್ನು ಆಶೀರ್ವದಿಸುವೆ; ಬಡ, ಕ್ಷೀಣ, ಸಾಯುವ ಮನುಷ್ಯನ ಆಶೀರ್ವಾದದಿಂದಲ್ಲ, ಅಪಾರವಾದ ದೇವರ ಆಶೀರ್ವಾದದಿಂದ ನಿಮ್ಮನ್ನು ಆಶೀರ್ವದಿಸುತ್ತೇನೆ:

ದೇವರ ಕೃಪೆಯೂ ಯೇಸು ಕ್ರಿಸ್ತನ ಪ್ರೀತಿಯೂ ಪರಿಶುದ್ಧಾತ್ಮನ ಐಕ್ಯವೂ ನಿಮ್ಮೆಲ್ಲರ ಸಂಗಡಲೂ ಒಬ್ಬೊಬ್ಬನ ಸಂಗಡಲೂ ಸದಾಸರ್ವಕಾಲಕ್ಕೂ ಇರಲಿ! ಆಮೆನ್.

ಛಾಪಖಾನೆಯು.

ಹಿಂದಿನ ಒಂದು ಕಥೆಯಲ್ಲಿ ಛಾಪಖಾನೆಯ ವಿಷಯ ಒಂದು ಮಾತು ಬಂದದೆ. ಇದು ಏನೆಂತ ಮಂಗಳೂರಲ್ಲಿರುವ ಹುಡುಗರಿಗೆಲ್ಲ ಗೋಚರವಾಗಿದೆ. ಕೆಳಗಿನ ಚಿತ್ರವು ನಮಗೆ ಮೊದಲನೇ ಛಾಪಖಾನೆ ತೋರಿಸುತ್ತದೆ. ಇದು ಮೈನ್ಸ್ ಎಂಬ ಜರ್ಮನಿಯ ಒಂ



ದು ಪಟ್ಟಣದಲ್ಲಿ ಗುತ್ತೆಂಬೆರ್ಗ್, ಫೌಸ್ತು, ಶೆಫೆರ್ ಎಂಬೀ ಮೂರು ಗೃಹಸ್ಥರಿಂದ ಸ್ಥಾಪಿತವಾಯಿತು. ಅವರಲ್ಲಿ ಗುತ್ತೆಂಬೆರ್ಗೆಂಬವನು ಮುಖ್ಯಸ್ಥನು. ಆ ಕಾಲದ ವರೆಗೆ ಗ್ರಂಥಗ

ಳು ಕೈಬರಹದಲ್ಲಿ ಮಾತ್ರ ಬರಿಯಲ್ಪಟ್ಟಿದ್ದವು; ಹಾಗೂ ದೇವರ ವಾಕ್ಯದ ಪುಸ್ತಕದ ಪ್ರತಿಗಳು ಮಠಗಳಲ್ಲಿದ್ದ ವೈರಾಗಿಗಳು ಹೆಚ್ಚಾಗಿ ಬರದು, ಆಯಾ ಸಂಧಿಯ ಆರಂಭವನ್ನು ವಿಚಿತ್ರ ಅಕ್ಷರಗಳಿಂದ ಶೃಂಗರಿಸುತ್ತಿದ್ದರು. ಪ್ರಯಾಸ ಪಟ್ಟು ಬರದ ಇಂಥಾ ಪುಸ್ತಕಗಳ ಕ್ರಯವು ಹೇರಳವಾಗಿತ್ತು, ಆದದರಿಂದ ಬಡವರು ದೇವರ ವಾಕ್ಯದ ಪ್ರತಿಯಾಗಲೀ ಇತರ ಪುಸ್ತಕಗಳಾಗಲೀ ಸಂಪಾದಿಸಿ ಕೊಳ್ಳುವದು ಕಷ್ಟವಾಗಿತ್ತು. ಮತ್ತು ವಿದ್ಯೆಯು ಸಹಾ ಸ್ವಲ್ಪ ಮಂದಿಯ ಆಸ್ತಿಯಾಗಿತ್ತು.

ಸುಮಾರು ೧೪೩೦ನೇ ವರುಷದಲ್ಲಿ ಹೊಲ್ಲಾಂದಿನಲ್ಲಿ ಒಬ್ಬನಿಗೆ ಈ ಆಲೋಚನೆ ಹುಟ್ಟಿತು: ಒಂದು ಹಲಿಗೆಯಲ್ಲಿ ಅಕ್ಷರಗಳನ್ನು ಕೆತ್ತಿ ಅದರಿಂದ ಛಾಪಿಸ ಬಹುದೆಂಬದು. ಇದು ಚೀನದವರು ಈಗಲೂ ಅನುಸರಿಸುವ ರೀತಿಯೇ. ಆದರೂ ಈ ಕೆಲಸ ಬಹಳ ಕಷ್ಟದ್ದೂ ಮೆಲ್ಲಗೆ ನಡಿಯುವಂಥಾದ್ದೂ. ಗುತ್ತೆಂಬೆರ್ಗ್ ಎಂಬವನಲ್ಲಿ ಇದಕ್ಕಿಂತ ಸೂಕ್ಷ್ಮವಾದ ಆಲೋಚನೆ ಹುಟ್ಟಿತು, ಏನಂದರೆ: ಒಂದೊಂದು ಅಕ್ಷರ ಪ್ರತ್ಯಪ್ರತ್ಯೇಕ ಮಾಡಿ, ಅವುಗಳಿಂದ ಬೇಕಾದ ಶಬ್ದಗಳನ್ನು ಕೂಡಿಸಿ ಛಾಪಿಸಿದನಂತರ ಬಿಚ್ಚಿ ತೆಗಿಯುವ ಹಾಗೆ ಮಾಡ ಬೇಕೆಂಬದು. ಈ ರೀತಿಯಾಗಿ ಅವೇ ಅಕ್ಷರಗಳನ್ನು ಬೇರೆ ಬೇರೆ ಶಬ್ದಗಳಿಗೂ ಪುಸ್ತಕಗಳಿಗೂ ಪ್ರಯೋಗಿಸಲಿಕ್ಕೆ ಅನುಕೂಲವಾಯಿತು. ಇದಲ್ಲದೆ ಗುತ್ತೆಂಬೆರ್ಗನೂ ಅವನ ಜತೆಗಾರರೂ ಸೀಸ ಮುಂತಾದ ಲೋಹವನ್ನು ಎರಕ ಹೊೖಸಿ ಅಕ್ಷರಗಳನ್ನು ಮಾಡುವ ವಿದ್ಯವನ್ನೂ, ಛಾಪಿಸ ತಕ್ಕ ಮಶಿ ಮಾಡುವ ಕ್ರಮವನ್ನೂ ಶೋಧಿಸಿ ಕೊಂಡರು. ಅಂದಿನಿಂದ ಛಾಪಿಸುವ ಕೆಲಸವು ಅಭಿವೃದ್ಧಿಯಾಗುತ್ತಾ ಬಂತು. ಮರದ ಯಂತ್ರಗಳ ಬದಲಾಗಿ ಕಬ್ಬಿಣದ ಯಂತ್ರಗಳನ್ನು ಕಲ್ಪಿಸಿ, ವಿವಿಧವಾಗಿ ಮುದ್ರಾಕ್ಷರ ವಿದ್ಯವನ್ನು ಪ್ರಬಲಿಸುತ್ತಾ ಬಂದರು. ಈ ಪ್ರಕಾರ ಪುನಃಸ್ಥಾಪನೆಯ ಕಾಲ ಹಿಡಿದು ನಮ್ಮ ಕಾಲದ ವರೆಗೆ ಈ ಚಮತ್ಕಾರದಿಂದ ವಿದ್ಯಾಭಿವೃದ್ಧಿಗೂ ದೇವರ ರಾಜ್ಯದ ವಿಸ್ತಾರಕ್ಕೂ ಬಹಳ ಅನುಕೂಲವಾಯಿತು.

☞ ಕಳದ ಸಾರಿ ಹಾಕಿದ ಪ್ರಶ್ನೆಗಳಿಗೆ ಇನ್ನು ಉತ್ತರ ಬರಲಿಲ್ಲ.

Printed by Stolz & Reuther, Basel Mission Press, Mangalore.

ಬಾಲಪತ್ರ.

ಪುಸ್ತಕ ೨. 1871. ಅಂಕೆ ೫.

ಶ್ರೇಷ್ಠವಾದ ಒಂದು ಸರ್ವೋಪಶಮನವು.

ಒಂದು ದಿವಸ ಸಂಜೆಗೆ ಒಬ್ಬ ಸ್ನೇಹಿತನ ಮನೆಗೆ ಹೋದಾಗ, ಅಲ್ಲಿ ಸಂಭಾಷಿಸುತ್ತಾ, ಮಾತಿನಲ್ಲಿ "ಆಹಾ! ಇದು ನಿಶ್ಚಯ, ಶಾಂತವಾದ ಉತ್ತರವು ಸರ್ವೋಪಶಮನವಾಗಿದೆ" ಎಂದು ಹೇಳಿದೆ.

ಅಲ್ಲಿ ಇರುತ್ತಿದ್ದ ಮೇಜಿನ ಹಿಂದೆ ಕೂತು ಕೊಂಡು ವ್ಯಾಕರಣವನ್ನು ಕಲಿಯುತ್ತಿದ್ದ ಒಬ್ಬ ಹುಡುಗನು ಆಗ ನಮ್ಮ ಸಂಭಾಷಣೆಗೆ ಮನಸ್ಸು ಕೊಡ ತೊಡಗಿದನು; ಮತ್ತು ತನ್ನಷ್ಟಕ್ಕೆ ಮಾತಾಡಿ ಕೊಂಡು, ತಿರಿಗಿ "ಶಾಂತವಾದ ಉತ್ತರವು ಸರ್ವೋಪಶಮನವಾಗಿದೆ" ಎಂದು ತಾನೊಮ್ಮೆ ಹೇಳಿದನು.

"ಹೌದು, ಅದೀಗ ನಾನು ಹೇಳುವಂಥಾದ್ದು" ಎಂದು ಒದರಿ, ವಿಸ್ಮಯ ಪಟ್ಟು, ಮಾತಾಡಿದ್ದು ಯಾರೆಂದು ಸುತ್ತಲೂ ತಿರಿಗಿ ಕೊಂಡು ನೋಡಿದೆ. "ಹೌದು, ಅದೀಗ ನನ್ನ ಅಭಿಪ್ರಾಯ; ನನ್ನ ಹುಡುಗನೇ, ಹಾಗೆ ನೀನು ಸಹ ನೆನಸುತ್ತಿಯಲ್ಲವೋ?" ಎಂತ ಆ ಹುಡುಗನ ಕಡೆಗೆ ನೋಡಿ ಹೇಳಿದೆ.

ಆ ಹುಡುಗನು ತನಗೆ ನೋಡಿ ಮಾತಾಡಿದಕ್ಕಾಗಿ ಸ್ವಲ್ಪ ನಾಚಿ ಕೊಂಡು, ಸ್ವಲ್ಪ ತಡದು, ಅನಂತರ "ಐಯ್ಯಾ, ನೀವು ಹೇಳಿದ ಅಭಿಪ್ರಾಯವು ನನಗೆ ಪೂರ ಆಗಲಿಲ್ಲ" ಎಂತ ಹೇಳಿದವನ ಕಡೆಗೆ ನನ್ನ ಕುರ್ಚಿಯನ್ನು ತಿರಿಗಿಸಿ ಕೊಂಡು, "ಒಳ್ಳೇದು, ಹಾಗಾದರೆ ನಾನು ಅದನ್ನು ನಿನಗೆ ವಿವರಿಸುವೆನು; ಯಾಕಂದರೆ, ಆ ಸೂತ್ರದ ಅಭಿಪ್ರಾಯವನ್ನು ನೀನು ಸಹ ತಿಳು ಕೊಂಡು, ಅದರ ಪ್ರಕಾರ ನಡಿಯುವದು ನಿನಗೆ ತಕ್ಕದ್ದಾಗಿದೆ. ಅದಲ್ಲದೆ ಇದರ ಮೂಲವಾಗಿ ಇಡೀ ಲೋಕವನ್ನು ಸಹ ಜಯಿಸಲಾಪಿ." ಇದನ್ನು ಕೇಳಿ, ಹುಡುಗನು ಬಹಳ ಗಲಿಬಿಲಿಯಾಗಿ, ಈ ಮಾತಿನಲ್ಲಿ ಮಹಾ ಅಲೆಕ್ಸಂದರನ ಸಾಮರ್ಥ್ಯಕ್ಕೆ ಸರಿಯಾದಂಥಾ ಏನೋ ಒಂದು ಅಭಿಪ್ರಾಯ ಇರ ಬೇಕು; ಇದನ್ನು ತಾನು ತಿಳಿಯುವದು ಹಿತವೆಂದು ನೆನಸಿದನು.

ನಾನು: "ಆ ಮಾತು ನನ್ನನ್ನು ಮೊದಲಾಗಿ ಹ್ಯಾಗೆ ಜೈಸಿತೆಂದು ಹೇಳಿ, ನಿನಗೆ ಅದನ್ನು ಕುರಿತು ವಿವರಿಸುವೆನು. ನನ್ನ ತಂದೆಯು ದಂಡಿನ ಸರದಾರನಾಗಿದ್ದನು; ಮತ್ತು ಎ

ಲ್ಲಾ ಕಾರ್ಯಗಳನ್ನು ಯುದ್ಧದಿಂದ ಸಾಧಿಸ ತಕ್ಕದೆಂದು ಅವನ ತಾತ್ಪರ್ಯವಾಗಿತ್ತು. ಒಬ್ಬ ಹುಡುಗನು ನನಗೆ ಏನಾದರೂ ಕೆಟ್ಟ ಮಾತುಗಳಾಡಿದರೆ, ತಂದೆಯು: ಚಾರ್ಲಿ, ಚನ್ನಾಗಿ ಅವನಿಗೆ ಹೊಡಿ! ಎಂದು ಅವನು ನನಗೆ ಹೇಳಿ ಕೊಡುತ್ತಿದ್ದನು.

"ಕಾಲಕ್ರಮದಲ್ಲಿ ನನ್ನನ್ನು ಒಂದು ದೊಡ್ಡ ಶಾಲೆಯಲ್ಲಿ ಹಾಕಿದರು. ಅಲ್ಲಿ ನನ್ನ ವರ್ಗದಲ್ಲಿ ತೋಮಸ್ ಟಕ್ಕರನೆಂಬ ಒಬ್ಬ ಹುಡುಗನು ನನ್ನ ಸಂಗಡ ಕೂತು ಕೊಳ್ಳುತ್ತಿದ್ದನು. ಅವನು ಆ ಶಾಲೆಯ ಹಿಂದೆ ಇರುವ ಒಂದು ಚಿಕ್ಕ ಮನೆಯಲ್ಲಿ ವಾಸವಾಗಿದ್ದನು. ಹುಡುಗರು ಆಡುವ ಹೊತ್ತಿನಲ್ಲಿ ನಾನು ಅವನ ಸಂಗಡ ಸ್ವಲ್ಪ ತಿರುಗಾಡುತ್ತಾ, ನನ್ನ ತಂದೆಯ ವಿಷಯ ಅವನ ಹತ್ತರ ಮಾತಾಡುತ್ತಾ ಇರುತ್ತಿದ್ದೆ. ಆದರೆ ಅವನು ಶಾಲೆಯಲ್ಲಿ ಒಳ್ಳೇ ತರದ ವಿದ್ಯಾರ್ಥಿಯಾಗಿದ್ದು, ಇತರ ಹುಡುಗರಿಂದ ಮಿಗಿಲಾಗಿ ಪ್ರಶಂಸೆ ಹೊಂದುತ್ತಿದ್ದನು. ಅದು ಹೊರ್ತು ಅವನು ಚಂಡಾಟದಲ್ಲಿ ಘಟ್ಟಿಗ ಹುಡುಗನಾಗಿರುವದರಿಂದ, ಅವನ ಹತ್ತರ ನನಗೆ ಬಹಳ ಸ್ನೈಯಾಡ ಬಿತ್ತು. ಮತ್ತು ನಾವು ಏಕಮತ್ಯದ ಸ್ನೇಹಿತರಾಗಿ ಕೆಲವು ಕಾಲ ನಡೆದೆವು. ಹೀಗೆ ನಡಿಯುತ್ತಾ ಒಂದಾನೊಂದು ಸಾರಿ ನನ್ನ ಸ್ಥಿತಿಯು ಕೆಲವು ಹುಡುಗರೂ ನಾನೂ ಸಹ ಹಿರಿಮಣಿಗಳಲ್ಲಿ ಒಬ್ಬನ ಸಮ್ಮಂಧವಾಗಿ ತೊಂದರೆಯಲ್ಲಿ ಬಿದ್ದೆವು. ಮತ್ತು ಕುರುಹು ಗೊತ್ತಿಗೆ ಹತ್ತಿ, ತೋಮಸ್ ಟಕ್ಕರನು ಅದರ ಕಾರಣವಾಗಿದ್ದನೆಂದು ತಿಳಿಯ ಬಂತು.

"ಆಗ ನಾನು ಕೋಪದಿಂದ ಜರಗಿ: ತೋಮಸ್ ಟಕ್ಕರ! ಅವನ್ಯಾರು? ಬೇಕಾದರೆ, ನಾನು ಯಾರೆಂದು ಅವನಿಗೆ ಕಲಿಸ ಬಲ್ಲೆನು—ಎಂದು ಹೇಳಿ, ನನ್ನಷ್ಟಕ್ಕೆ ತೋಳದ ಸ್ವಭಾವ ಮಾಡಿ ಕೊಂಡು ಝಗಳಾಡಿದೆನು. ಹುಡುಗರು ಆಗ ನನ್ನನ್ನು ಟಕ್ಕರನ ಮೇಲೆ ಝಗಳ ಮಾಡ ಪುಸ್ತಿ ಕೊಟ್ಟು, ಅವನ ಮೇಲೆ ದೊಬ್ಬಿದರು. ನಾನು ವಿಪರೀತ ಕೋಪದಿಂದ ಉಬ್ಬಿ, ಅವನ ಕೈ ಹಿಸಿಕಿ, ಈ ಪ್ರಕಾರ ನೀನು ಮಾಡಿದ್ದಕ್ಕೆ ನಿನಗೆ ನಿಶ್ಚಯವಾಗಿ ಪ್ರತಿಕಾರ ಮಾಡದೇ ಬಿಟ್ಟೇನೆಂದು ತಿಳಿದೆಯಾ? ಎಂದು ಅಬ್ಬರಿಸಿದೆನು. ಆದರೆ ಅವನು ಕಿಂಚಿತ್ತಾದರೂ ಭಯ ಪಡದೆ, ಒಂದು ಕುರಿಮರಿಯಂತೆ ಶಾಂತ ಮುಖದಿಂದ ಮೌನವಾಗಿ ನಿಂತನು. 'ಏನು ದಗೆ ಮಾಡಿದಿ? ಎಂದು ಚನ್ನಾಗಿ ಬೊಗಳು! ಇಲ್ಲವಾದರೆ ನಾನು. . .' 'ಕೊಲ್ಲುವೆನು' ಎಂದು ಹೇಳಲಿಕ್ಕೆ ನಾನು ಬಾಯಿ ತೆರದಿದ್ದೆ; ಆದರೆ ನನಗೆ ಧೈರ್ಯ ಸಾಲಲಿಲ್ಲ. ಅವನು ಮುಂದರಿದು, ನಿಧಾನದಿಂದ ಮಾತಾಡಿ ಹೇಳಿದ್ದು: 'ಚಾರ್ಲಿಯೇ, ನಿನಗೆ ಮನಸ್ಸಿದ್ದಷ್ಟು ನನಗೆ ಹೊಡಿಯ ಬಹುದು, ಚಿಂತಿಲ್ಲ; ಆದರೆ ನಾನು ನಿನಗೆ ಒಂದು ಪೆಟ್ಟಾದರೂ ಕೊಡಲೊಲ್ಲೆನು. ಆದರೆ ನಮ್ಮೊಳಗಿರುವ ವಿರೋಧಗಳನ್ನು ಇತ್ಯರ್ಥ ಪಡಿಸುವದಕ್ಕೆ ಝಗಳಾಡಿ ಫಲವೇನು? ನೀನು ಈಗ ಕೋಪವಶವಾಗಿದ್ಧೀ; ನೀನು ಚಾರ್ಲಿಯಾದ ಬಳಿಕ, ನಿನ್ನ ಹತ್ತರ ವಿವೇಕದಿಂದ ಮಾತಾಡುವೆನು.'

"ಹಾ ಹಾ! ಇದು ಎಂಥಾ ಉತ್ತರವಾಗಿತ್ತು! ನನ್ನ ಕೋಪದ ಮಾತುಗಳಿಗೂ ಅವನ ಶಾಂತ ಉತ್ತರಕ್ಕೂ ಎಷ್ಟೋ ಹೆಚ್ಚು ಕಡಿಮೆ! ಅವನು ಹಾಗೆ ಅಂದ ಕ್ಷಣ ನನ್ನ ಕೋಪವೆಲ್ಲಾ ಶಾಂತವಾಗಿ, ಎಚ್ಚರಕ್ಕೆ ಬಂದು, ನನ್ನ ಬುದ್ಧಿಹೀನ ಮಾತುಗಳಿಗಾಗಿ ನನ್ನಷ್ಟಕ್ಕೆ ನಾಚಿ ಕೊಂಡು ಕುಗ್ಗಿದೆನು. ಆಗ ವಿವೇಕವಿಲ್ಲದೆ ಝಗಳಾಡುವದು ಎಷ್ಟು ಹುಚ್ಚು

ಕೆಲಸವೆಂದು, ನಾನು ಅರಿತೆ. ನಾನು ಆ ತೋಮಸನನ್ನು ಚನ್ನಾಗಿ ಹೊಡದು ನೆಲಕ್ಕೆ ಅಪ್ಪಳಿಸ ಬೇಕೆಂದು ಆಲೋಚನೆ ಮಾಡಿ ಕೊಂಡು ಹೋಗಿದ್ದರೂ, ಅವನು ಅಂಥಾ ಪರಾಕ್ರಮವೇನೂ ಇಲ್ಲದೆ ನನ್ನನ್ನು ಪೂರ್ಣವಾಗಿ ಜೈಸಿದನಲ್ಲ! ಅಂದಿನಿಂದ ಆ ತೋಮಸನಿಗೆ ನನ್ನ ಮನಸ್ಸಿನ ಮೇಲೆ ಯಾರೂ ತೊಲಗಿಸ ಕೂಡದಂಥಾ ಸ್ವಾತಂತ್ರ್ಯವು ಉಂಟಾಯಿತು. ಅದು ಒಳ್ಳೇದಕ್ಕಾಗಿಯೇ; ಯಾಕಂದರೆ, ಅವನ ಸಂಸರ್ಗದಲ್ಲಿ ವಿವೇಕದ ಪ್ರಯೋಜನವನ್ನು ಕಲಿತೆ. ಈ ಪ್ರಕಾರ ಶಾಂತ ಉತ್ತರದ ಸಾಮರ್ಥ್ಯ ಎಷ್ಟು ಉಂಟೆಂದು ನಿನಗೆ ತಿಳಿಯಿತಷ್ಟೇ.

"ದೊಡ್ಡವನಾದ ಮೇಲೆ ಲೋಕದ ಅನೇಕ ಪ್ರಾಂತ್ಯಗಳಲ್ಲಿ ನಾನು ಸಂಚರಿಸಿದ್ದೇನೆ, ನಾನು ಈ ವರೆಗೆ ಕಂಡು ಅರಿತ ಕುಟುಂಬದ ಪುರುಷರೊಳಗೆ, ಸ್ತ್ರೀಯರೊಳಗೆ, ಅಥವಾ ಮಕ್ಕಳೊಳಗೆ, ನೆರೆಯಲ್ಲಿ ಆಗಲೀ ಜನಾಂಗದೊಳಗಾಗಲೀ, ಎಷ್ಟು ಕಠಿಣ ಝಗಳವಿದ್ದರೂ ಶಾಂತವಾದ ಉತ್ತರದಿಂದ ಅದು ನಿವಾರಿಸಲ್ಪಟ್ಟದೆ ಎಂದು ನನಗೆ ವಾಸ್ತವಿಕವಾಗೆದೆ; ಮತ್ತು ಇದಕ್ಕೆ ಆಧಾರವಾಗಿ ದೇವವಾಕ್ಯದಲ್ಲಿ 'ಶಾಂತವಾದ ಉತ್ತರವು ಕೋಪವನ್ನು ತಿರಿಗಿಸಿ ಬಿಡುತ್ತದೆ' ಎಂಬ ವಚನವು ಸರ್ವಸಿದ್ಧಾಂತವಾಗಿದೆ."

ಹುಡುಗರೇ, ಈ ವಚನದ ತಾತ್ಪರ್ಯವನ್ನು ನಿತ್ಯ ಅಭ್ಯಾಸಿಸಿರಿ. ಇದನ್ನು ದಿನಚರ್ಯದಲ್ಲಿ ನಿಮ್ಮ ಲಕ್ಷೆಗೆ ತಂದು ಕೊಳ್ಳಿರಿ! ಝಗಳಾಡುವ ಉದ್ದೇಶವು ಈ ಸಾವಿರಾರು ವರ್ಷಗಳಿಂದ ಲೋಕದಲ್ಲಿ ಸಾಧಿಸೋಣಾಗಿದ್ದರೂ, ಅದರ ಫಲವು ಕೆಟ್ಟದ್ದೇ ಹೊರ್ತು ಒಳ್ಳೇದಲ್ಲವೆಂದು ಎಲ್ಲರೂ ಒಪ್ಪುತ್ತಾರೆ; ಯಾಕಂದರೆ ಅದು ಅಕ್ರಮವನ್ನು ಹೆಚ್ಚಿಸುತ್ತದೆ, ವಿವೇಕವನ್ನು ನಶಿಸುತ್ತದೆ, ವಿರೋಧವನ್ನು ಬೆಳಿಸುತ್ತದೆ. ಕೋಪದಿಂದ ವಿರೋಧ ಹುಟ್ಟುತ್ತದೆ, ವಿರೋಧದಿಂದ ಝಗಳ ಹುಟ್ಟುತ್ತದೆ, ಹೀಗೆ ಮುಂದಕ್ಕೆ ಒಂದರನಂತರ ಇನ್ನೊಂದು ಕೇಡಿಗೆ ಕಾರಣವಾಗುತ್ತದೆ. ಕೋಪದಿಂದಾಗಲೀ ಝಗಳದಿಂದಾಗಲೀ ಕಲಹಗಳು ನಿವರ್ತಿಯಾಗುವದಿಲ್ಲ. ಆದ್ದರಿಂದ ಸರ್ವೋಪಶಮನಕರವಾದಂಥಾ ಈ ಮಾತನ್ನು ಕೈಕೊಳ್ಳುವ. ನಮ್ಮ ಮನಸ್ಸು ಕೋಪಕ್ಕೆ ಎಂದೂ ವಶವಾಗದೆ ಇರಲಿ! ನಮ್ಮ ಬಾಯಿಂದ ಶಾಂತವಾದ ಮಾತುಗಳೇ ಹೊರಡಲಿ! ಹಾಗೆ ನಡ ಕೊಳ್ಳುವದಕ್ಕೆ ದೇವರು ಪ್ರೀತಿಯೂ ಸಾತ್ವಿಕತ್ವವೂ ಸಮಾಧಾನವೂ ಆಗಿರುವಂಥ ತನ್ನ ಪರಿಶುದ್ಧಾತ್ಮದ ಸಾಹಾಯವನ್ನು ಕೊಡುವಂತೆ ಆತನ ಹತ್ತರ ಬೇಡಿ ಕೊಳ್ಳುವ. ನಾವು ಸಮಾಧಾನವನ್ನೇ ಪ್ರಾಪ್ತಿಸುವಂಥವುಗಳನ್ನು ಹುಡುಕಿ, ಎಲ್ಲಾ ಮನುಷ್ಯರ ಸಂಗಡ ವಿವೇಕದಿಂದಲೂ ಸಮಾಧಾನದಿಂದಲೂ ಇರುವ ಹಾಗೆ ದೇವರು ಅನುಗ್ರಹಿಸಲಿ!

ನಾವೇನು ಮಾಡ ತಕ್ಕದ್ದು?

ನಾವೇನು ಮಾಡ ತಕ್ಕದ್ದು? ಎಂಬ ಪ್ರಶ್ನೆಯು ಅನೇಕ ಸಾರಿ ನಮಗೆನೇ ಹಾಕ ತಕ್ಕಂಥಾದ್ದಾಗಿರುತ್ತದೆ.

ಒಮ್ಮೆ ಚಿಕ್ಕ ಹುಡುಗಿಯಾದ ಸುಚಿತ್ರಳು ತನ್ನ ತಂಗಿಯಾದ ದೇವದಾಸಿಗೆ ಹಾಕಿದ ಪ್ರಶ್ನೆಯನ್ನು ಒಂದು ವೇಳೆ ನೀವು ಕೇಳಲಪೇಕ್ಷಿಸುವಿರಿ.

ಸುಚಿತ್ರಳು: ದೇವದಾಸೀ, ಇಲ್ಲಿ ಬಾ! ನಮ್ಮ ತಾಯಿಯು ನನಗೆ ಕೇಳುತ್ತಿದ್ದ ಕೆಲವು ಚೋದ್ಯವಾದ ಪ್ರಶ್ನೆಗಳನ್ನು ನಿನಗೂ ಕೇಳ ಬೇಕೆಂದು ಮನಸ್ಸುಂಟು. ದಶಂಬರದಲ್ಲಿ ಘಾಳಿ ಬರಲು ನಾವೇನು ಮಾಡ ತಕ್ಕದ್ದು?

ದೇವದಾಸಿ: ಬೇರೇನು ಮಾಡೇವು? ಹೊರಗೆ ನಡಿಯುವಾಗ್ಯೆ ಘಾಳಿಯಿಂದ ನಮ್ಮ ವಸ್ತ್ರವು ಹಾರಿ ಹೋಗದ ಹಾಗೆ, ಬಿಮ್ಮನೆ ಹಿಡಿದು ಕೊಳ್ಳುವದಷ್ಟೆ.

ಸುಚಿ: ಹೌದು; ಆದರೆ, ನನಗೆ ಬೇಕಾದ ಉತ್ತರ ಅದಲ್ಲ. ಅದೇನೆಂದು ನಾನು ನಿನಗೆ ಹೇಳುತ್ತೇನೆ: "ನಾವು ಒಬ್ಬರನ್ನೊಬ್ಬರು ಪ್ರೀತಿ ಮಾಡ ಬೇಕು."

ದೇವ: ಅದು ನಿಜ; ಅದನ್ನು ಕುರಿತು ನಾನು ಆಲೋಚಿಸಲಿಲ್ಲ.

ಸುಚಿ: ಈಗ ಮತ್ತೊಂದು ಪ್ರಶ್ನೆ—ಮೇ ತಿಂಗಳಲ್ಲಿ ಮಳೆ ಬರುವಾಗ ನಾವೇನು ಮಾಡ ಬೇಕು?

ದೇವ: ಹೊರಗೆ ನಡಿಯುವಾಗ, ಕೊಡೆ ಹಿಡಿದು ಕೊಳ್ಳ ಬೇಕು; ಇಲ್ಲವಾದರೆ, ಮಳೆ ತಾಗದಂತೆ ಮರದ ಬುಡದಲ್ಯಾಗಲಿ, ಮನೆಯ ಮಾಡಿನ ಕೆಳಗಾಗಲಿ ನಿಲ್ಲ ಬೇಕು.

ಸುಚಿ: ನೀನು ನನಗೆ ತಕ್ಕ ಉತ್ತರ ಕೊಡಲಿಲ್ಲ. "ಒಬ್ಬರನ್ನೊಬ್ಬರು ಪ್ರೀತಿ ಮಾಡ ಬೇಕು"—ಇದೇ ಸರಿಯಾದ ಉತ್ತರವು.

ದೇವ: ಇದು ಮೊದಲಿನ ಉತ್ತರವೇ!

ಸುಚಿ: ಹೌದು, ಸರಿ; ಈಗ ನನ್ನ ಕಡೇ ಪ್ರಶ್ನೆಗೆ ಉತ್ತರ ಹೇಳು, ನೋಡುವಾ: ವಸಂತಕಾಲದಲ್ಲಿ ಹೂವುಗಳೆಲ್ಲಾ ಅರಳಿ ಪರಿಮಳಿಸುವಾಗ, ಏನು ಮಾಡ ತಕ್ಕದ್ದು?

ದೇವ: "ಒಬ್ಬರನ್ನೊಬ್ಬರು ಪ್ರೀತಿ ಮಾಡ ಬೇಕು" ಎಂಬದೆಂದು ಕಾಣುತ್ತದೆ.

ಸುಚಿ: ಅದು ಸರಿ, ದೇವದಾಸಿ; ತಿಂಗಳು ಯಾವದಾದರೂ ಆಗಲಿ, ಘಾಳಿ ಬೀಸಿದರೂ ಸಮ, ಬೀಸದಿದ್ದರೂ ಸಮ; ಮಳೆ ಬಿದ್ದರೂ ಸಮ, ಬೀಳದಿದ್ದರೂ ಸಮ; ಹೂವು ಅರಳಿದರೂ ಸಮ, ಅರಳದಿದ್ದರೂ ಸಮ. ಅದು ಹ್ಯಾಗೂ ಇರಲಿ. ವರುಷದ ಪ್ರತಿ ತಿಂಗಳಲ್ಲೂ ತಿಂಗಳಿನ ಪ್ರತಿ ದಿವಸದಲ್ಲೂ ದಿವಸದ ಪ್ರತಿ ತಾಸಿನಲ್ಲೂ "ಒಬ್ಬರನ್ನೊಬ್ಬರು ಪ್ರೀತಿ ಮಾಡಿರಿ" ಎಂಬ ನಮ್ಮ ರಕ್ಷಕನ ಆಜ್ಞೆಯನ್ನು ಕೈಕೊಳ್ಳ ತಕ್ಕದ್ದಾಗಿದೆ.

"ನಿನ್ನ ನಾಲಿಗೆಯನ್ನು ಕಾಯು."

ಒಂದು ಶಾಲೆಯಲ್ಲಿ ಒಬ್ಬ ಉಪಾಧ್ಯಾಯನು ಹುಡುಗರಿಗೆ ಪಂಚೇಂದ್ರಿಯಗಳ ವಿಷಯ ಪಾಠ ಕೊಡುವಾತ್ತಿರುಗ, ಇತರ ಇಂದ್ರಿಯಗಳನ್ನು ಕುರಿತು ವಿವರಿಸುತ್ತಾ ನಾಲಿಗೆಯ ವಿಷಯ ಚರ್ಚೆ ಬರಲು, ಉಪಾಧ್ಯಾಯನು—"ನಾಲಿಗೆಯನ್ನು ಸಹ ಉಂಟು ಮಾಡಿದ್ದು ದೇವರಲ್ಲವೋ? ಆದರೆ ಅವನು ಯಾವದನ್ನಾದರೂ ವ್ಯರ್ಥವಾಗಿ ಸೃಷ್ಟಿಸುವದಿಲ್ಲ; ಆದದರಿಂದ ಇದನ್ನು ಸೃಷ್ಟಿಸುವದಕ್ಕೆ ಒಂದು ಉದ್ದೇಶವಿರುತ್ತದೆ ಎಂಬದು ನಿಶ್ಚಯ. ಹಾಗಾದರೆ ಆ ಉದ್ದೇಶ ಯಾವದು?" ಎಂದು, ವರ್ಗದಲ್ಲಿರುವ ಒಬ್ಬ ಹುಡುಗನಿಗೆ ಕೇಳಲು, ಅವನು: "ನಾವು ಪ್ರಾರ್ಥನೆ ಮಾಡುವ ಬಗ್ಗೆ ನಮಗೆ ನಾಲಿಗೆಯನ್ನು ಕೊಟ್ಟನು."


ಇನ್ನೊಬ್ಬನು: "ಹಾಡುವ ಬಗ್ಗೆ ಅದನ್ನು ಕೊಟ್ಟನು."

ಮೂರನೆಯವನು: "ಜನರ ಹತ್ತರ ಮಾತಾಡುವ ಬಗ್ಗೆ ಅದನ್ನು ಕೊಟ್ಟನು."

ನಾಲ್ಕನೆಯವನು: "ನಮ್ಮ ಪಾಠಗಳನ್ನು ಹೇಳುವ ಬಗ್ಗೆ ಅದನ್ನು ಕೊಟ್ಟನು."

ಹೀಗೆ ಒಬ್ಬನನಂತರ ಒಬ್ಬನು ಇಂಥಾ ಉತ್ತರಗಳನ್ನು ಕೊಟ್ಟನು. ಆಗ ಉಪಾಧ್ಯಾಯನು ಇನ್ನು ವಿವರವಾಗಿ ಹೇಳಿದ್ದು: "ಹೌದು; ಆದರೆ ಯಾವದಕ್ಕೋಸ್ಕರ ಆತನು ಅದನ್ನು ಕೊಟ್ಟದ್ದಲ್ಲ ಎಂಬದನ್ನು ನಾನು ಹೇಳುತ್ತೇನೆ: ನಮಗೆ ನಾಲಿಗೆ ಕೊಟ್ಟದ್ದು ಯಾರನ್ನಾದರೂ ಗದರಿಸುವ ಬಗ್ಗೆ ಅಲ್ಲ, ಸುಳ್ಳು ಹೇಳುವ ಬಗ್ಗೆ ಅಲ್ಲ, ಅಥವಾ ಆಣೆ ಇಡಲಿಕ್ಕಾಗಲೀ ಕೆಟ್ಟ ಮಾತುಗಳು ಆಡಲಿಕ್ಕಾಗಲೀ ಒಬ್ಬನನ್ನು ನಿಂದಿಸಿ ದೂಷಿಸಲಿಕ್ಕಾಗಲೀ ಅಲ್ಲ; ನಮ್ಮ ಮಾತುಗಳಿಂದ ಒಬ್ಬರ ಮನಸ್ಸನ್ನು ನೋಯಿಸಲಿಕ್ಕಾಗಲೀ ಅಪಹಾಸ್ಯ ಮಾಡಿ ಯಾರನ್ನಾದರೂ ಅಪಮಾನಿಸಲಿಕ್ಕಾಗಲೀ ದೇವರು ನಮಗೆ ನಾಲಿಗೆ ಕೊಟ್ಟದ್ದಲ್ಲ; ಆದದರಿಂದ ನೀವು ನಿಮ್ಮ ನಾಲಿಗೆಯನ್ನು ಉಪಯೋಗಿಸುವ ಪ್ರತಿ ಸಮಯದಲ್ಲಿ, ನಾನು ಅದನ್ನು ದೇವರು ನಿರೀಕ್ಷಿಸುವ ಉದ್ದೇಶಕ್ಕೆ ಉಪಯೋಗಿಸುತ್ತೇನೋ? ಎಂದು ಮೊದಲು ವಿಚಾರಿಸಿ ಕೊಳ್ಳಿರಿ! ಕೆಟ್ಟದ್ದಲ್ಲ, ಒಳ್ಳೇದೇ ನಿಮ್ಮ ನಾಲಿಗೆಯ ಉಪಯೋಗವಾಗಿರಲಿ! ಅದು ಚಿಕ್ಕದಾಗಿದ್ದರೂ ಎಲ್ಲಾ ಇಂದ್ರಿಯಗಳಲ್ಲಿ ಅತಿ ಪ್ರಯೋಜನಕರವಾಗಿದೆ. ಇಂಥಾ ಇಂದ್ರಿಯವನ್ನು ನೀವು ವ್ಯರ್ಥ ಮಾಡದೆ, ಅಥವ ಕೆಡಿಸದೆ, ದೇವರ ಮಹಿಮೆಗೂ ನೆರೆಯವರ ಉಪಕಾರಕ್ಕೂ ನಿಮ್ಮ ಸ್ವಂತ ಪ್ರಯೋಜನಕ್ಕೂ ತಕ್ಕದಾಗಿ ಪ್ರಯೋಗಿಸಿರಿ!"

ಗುಲಾಮತ್ತನವು.



ಪಶ್ಚಿಮ ಅಫ್ರಿಕ ಖಂಡದಲ್ಲಿ ಬದುಕುವ ನೀಗರುಗಳೆಂಬ ಬರೇ ಕಪ್ಪು ಜನರ ಸುದ್ದಿ ಕೇಳಿದ್ಧೀರಲ್ಲ. ಅವರನ್ನು ದುರ್ಜನರು ಹಿಡಿದು ಅಮೇರಿಕ ಖಂಡಕ್ಕೆ ವೈದು ಮಾರಿ ಬಿ

ಡುವ ಮಹಾ ದ್ರೋಹದ ಕೆಲಸವು ಬಹಳ ವರುಷ ನಡಿಯುತ್ತಿತ್ತು. ಅವರು ತಾವೇ ಹಣದ ಆಶೆಯಿಂದ ಶತ್ರುಗಳನ್ನಾಗಲಿ ಸಮಾಧಾನದಿಂದಿರುವ ಹಳ್ಳಿಯವರನ್ನಾಗಲಿ ಹಿಡಿದು ಈ ವ್ಯಾಪಾರಸ್ಥರಿಗೆ ಒಪ್ಪಿಸುವರು. ಅಮೇರಿಕ ಸಂಸ್ಥಾನಗಳ ದಕ್ಷಿಣ ಭಾಗದವರು ನೀಗರುಗಳನ್ನು ಕ್ರಯಕ್ಕೆ ತಕ್ಕೊಂಡು, ತಮ್ಮ ಹೊಲ ತೋಟಗಳನ್ನು ಅವರ ಮುಖಾಂತರ ವ್ಯವಸಾಯ ಮಾಡಿದರು. ಅಲ್ಲಿ ಅಕ್ಕಿ ಹತ್ತಿ ಕಬ್ಬು ಹೇರಳವಾಗಿ ಬೆಳೆಯುತ್ತವೆ. ಮೇಲಿನ ಚಿತ್ರದಲ್ಲಿ ಗುಲಾಮರು ಹತ್ತಿ ಕೂಡಿಸುವದನ್ನು ತೋರಿಸಿಯದೆ. ಕೆಲಸದ ಸಮಯದಲ್ಲಿ ಮೇಸ್ತ್ರಿಗಳು ಹತ್ತರ ನಿಂತು, ಮೈಗಳ್ಳರನ್ನು ಕ್ರೂರವಾಗಿ ಹೊಡದು, ಎಲ್ಲರಿಂದ ಆದಷ್ಟು ಕೆಲಸ ಆಗುವಂತೆ ನೋಡುವರು.

ಇದೆಲ್ಲ ಈಗ ಬೇರೆ ಆಗಿದೆ. ಕೆಲವು ವರುಷಗಳ ಹಿಂದೆ ಸಂಸ್ಥಾನಗಳ ಉತ್ತರ ಭಾಗದವರು ಗುಲಾಮತ್ವವನ್ನು ನಿಲ್ಲಿಸಲಿಕ್ಕೆ ಮನಸ್ಸು ಮಾಡಿ, ಒಂದು ಮಹಾ ಯುದ್ಧವಾಯಿತು. ದಕ್ಷಿಣದವರು ಕಡೆಗೆ ಸೋತು ಹೋಗಲು, ಸಮಸ್ತ ದೇಶದಲ್ಲಿ ಗುಲಾಮತ್ವವು ನಿರ್ಮೂಲವಾಯಿತು. ಈ ಪ್ರಕಾರ ಸ್ವತಂತ್ರ ಹೊಂದಿದ ನೀಗರುಗಳಿಗೆ ಸದ್ಭಕ್ತರು ಅನೇಕ ಬೋಧಕರನ್ನೂ ಉಪಾಧ್ಯಾಯರನ್ನೂ ಕಳುಹಿಸಿ, ಶಾಲೆಗಳನ್ನು ಸ್ಥಾಪಿಸಿದರು. ಸರಕಾರದವರು ಸಹಾ ಅಂಥ ಪ್ರಯತ್ನಗಳಿಗೆ ಆದಷ್ಟು ಅನುಕೂಲ ಮಾಡಿದರು. ಈಗ ಸಾವಿರಾ



ರು ಮಂದಿ ಕ್ರೈಸ್ತ ಸಭೆಯನ್ನು ಶೇರಿ ನಾನಾ ವಿದ್ಯೆಗಳನ್ನು ಕಲಿತು ಸ್ವಂತ ಕೈಕೆಲಸದಿಂದ ಜೀವನ ಮಾಡುತ್ತಾರೆ. ಅನೇಕ ಸಭೆಗಳು ಸ್ವಕುಲದವರಾದ ಬೋಧಕರಿಂದ ದೇವರ ವಾಕ್ಯದ ಪ್ರಸಂಗವನ್ನು ಕೇಳುತ್ತಾ ಇದ್ದಾರೆ. ಹೀಗೆ ದೇವರು ಈ ಬಡ ಜನರ ದುರವಸ್ಥೆಯನ್ನು ನೋಡಿ, ಅವರನ್ನು ಶೆರೆಮನೆಯಿಂದ ಹೊರಗೆ ಕರ ತಂದು ಮನುಷ್ಯರು ಮಾಡಿದ ಕೇಡಿನಿಂದ ಅವರಿಗೆ ಒಳ್ಳೇದಾಗುವ ಹಾಗೆ ಮಾಡಿದ್ದಾನೆ.

ಎರಡನೇ ಚಿತ್ರವು ಬೇರೊಂದು ತರದ ಗುಲಾಮತ್ವವನ್ನು ಸೂಚಿಸುತ್ತದೆ; ಇದು ಮನುಷ್ಯರ ದಾಸತ್ವಕ್ಕಿಂತ ಕಠಿಣವಾದ ಪಿಶಾಚನ ದಾಸತ್ವವೇ. ಅಫ್ರಿಕದ ನೀಗರುಗಳು, ಹಾವುಗಳಲ್ಲಿ ಭೂತ ಅದೆ, ಅದು ಕೇಡು ಮಾಡದ ಹಾಗೆ ಸಮ್ಮತಿಸ ಬೇಕು ಎಂಬ ಭಯದಿಂದ ಹಾವುಗಳಿಗೆ ಗಾಯನ ಪೂಜೆ ಮಾಡುವರು. ಅವರ ಬಂಧಗಳನ್ನು ಸಹಾ ಕರ್ತನು ಹರಿದು ಬಿಟ್ಟು, ಅವರನ್ನು ಉತ್ತಮವಾದ ಸ್ವತಂತ್ರಕ್ಕೆ ಕರೆಯ ಬೇಕೆಂಬ ಅಪೇಕ್ಷೆ ನಮ್ಮಲ್ಲಿಯೂ ಇರ ತಕ್ಕದ್ದು. ನಮ್ಮ ಬಾಸೆಲ್ ಮಿಶ್ಯನ್ ಆ ಜನಾಂಗದಲ್ಲಿ ಬಹಳ ಕಷ್ಟದಿಂದ ಸುವಾರ್ತಾಕೆಲಸ ನಡಿಸಿ ಬಂದು, ಸಾವಿರ ಮಂದೀ ಮೇಲೆ ಕ್ರೈಸ್ತ ಸಭೆಗೆ ಶೇರಿಸಿಯದೆ.

ಮೇಲೆ ತೋರಿಸಿದ ಎರಡು ತರದ ಗುಲಾಮತ್ವದಲ್ಲಿ ಯಾವದು ಸುಲಭವೆಂದು ನೆನಸುತ್ತೀರಿ? ಅಮೇರಿಕದಲ್ಲಿದ್ದ ಗುಲಾಮರಿಗೆ ಭಾರಿ ಕಷ್ಟ ಬಿದ್ದರೂ, ಹೊಟ್ಟೆಯಾದರೂ ತುಂಬಿತು. ಪಿಶಾಚನ ಸೇವೆಯಲ್ಲಿ ಲಾಭವೇನು? ಆಸ್ತಿ, ಸೌಖ್ಯ, ಮನಸ್ಸಿನ ಸಮಾಧಾನ ಹೋಗುತ್ತದಲ್ಲದೆ, ಅದರ ಸಂಬಳವು ನಿತ್ಯ ಮರಣವೇ. ಅಂಥ ಕ್ರೂರವಾದ ಯಜಮಾನನಿಗೆ ನೀವು ಎಂದಿಗೂ ಸೇವೆ ಮಾಡದೆ ಇರ ಬೇಕು.

"ಚಿಕ್ಕ ಮಕ್ಕಳನ್ನು ನನ್ನ ಬಳಿಗೆ ಬರ ಗೊಡಿಸಿರಿ."

ನನ್ನ ಒಬ್ಬ ಸ್ನೇಹಿತನು ದರಿದ್ರರಿಗೆ ಸಹಾಯ ಮಾಡುವ ಮನಸ್ಸಿನಿಂದ ಒಮ್ಮೆ ಸಾಯಂಕಾಲ ಬೀದಿಯಲ್ಲಿ ಸಂಚರಿಸುತ್ತಿರಲಾಗಿ, ಒಂದು ಮಾಳಿಗೆ ಮೆಟ್ಲಿನ ಕೆಳಗೆ ಬಂದನು. ಅಲ್ಲಿ ಯಾರಾದರೂ ಬಡವರಿರ ಬಹುದೆಂದು ನೆನಸಿ, ಮೇಲೇರಿ ಬಾಗಲು ತಟ್ಟಲಾಗಿ, "ಒಳ ಬರಲಿ!" ಎಂಬ ನಿರ್ಬಲ ಸ್ವರ ಕೇಳಿಸಿತು. ಬಾಗಲು ತೆರದು, ಒಳಗೆ ಹೊಕ್ಕಿ ನೋಡಲು, ಅಲ್ಲಿ ರಾಶಿಯಾಗಿರುವ ಕಸದೊಂದು ಗುಪ್ಪೆಯ ಮೇಲೆ ನೀಲ ಛಾಯೆಯ ಮುಖದ ಒಬ್ಬ ಹುಡುಗನು ಮಲಗಿ ಸಂಕಟ ಪಡುವದನ್ನು ಕಂಡು, "ಹುಡುಗಾ, ಇಲ್ಲಿ ನೀನು ಏನು ಮಾಡುತ್ತೀ?" ಎಂದು ಕೇಳಿದಕ್ಕೆ, ಹುಡುಗನು: "ಗದ್ದಲ ಮಾಡ ಬೇಡಿರೈಯಾ! ಸುಮ್ಮನಿರಿ, ನಾನಿಲ್ಲಿ ಅಡಗಿ ಕೊಂಡಿದ್ದೇನೆ!"

"ಅಡಗಿ ಕೊಂಡಿದ್ದಿಯಾ? ಏನು ಕಾರಣ?" ಎಂದು ಕೇಳೋಣ, ದೆಬ್ಬೆಗಳು ಹೊಡದು ಬಾತು ಹೋದ ತನ್ನ ತೋಳುಗಳನ್ನೂ ಬೆನ್ನಿಯನ್ನೂ ತೋರಿಸಿದನು.—"ಇಷ್ಟು ಕಠಿಣವಾಗಿ ನಿನಗೆ ಯಾರು ಹೊಡದರು? ಏನು ಕಾರಣ?"

"ನನ್ನ ತಂದೆ ಹೊಡದನೈಯಾ! ದಯ ಮಾಡಿ ಅವನಿಗೆ ಹೇಳ ಬೇಡಿರಿ! ಅವನು ಕುಡಿದು ಬಂದು, ನಾನು ಕದಿಯ ಬೇಕೆಂದು ಹೇಳಲಾಗಿ, ಅವನ ಮಾತು ನಾನು ಕೇಳದ ಕಾರಣ ನನಗೆ ಚನ್ನಾಗಿ ಹೊಡೆದನು."

"ನೀನೆಂದಾದರೂ ಕದ್ದಿಯಾ?"—"ಹೌದು, ನಾನು ಒಮ್ಮೆ ಕಳ್ಳನಾಗಿದ್ದೆನು. ಆದರೆ, ನಾನು ಅನಾಥಶಾಲೆಗೆ ಹೋಗುತಿದ್ದೆ; ಅಲ್ಲಿ ಬೋಧಕರು ಪರಲೋಕದಲ್ಲಿರುವ ದೇವರನ್ನು ಕುರಿತು ನನಗೆ ಕಲಿಸಿದರು; 'ನೀನು ಕದಿಯ ಬಾರದು', ಕದಿಯುವದು ದೇವರಿಗೆ ವಿರೋಧವಾದ ಪಾಪವಾಗಿದೆ ಎಂದು ಕಲಿಸಿದರು. ಅಂದು ಆರಭ್ಯ ಕದಿಯುವದನ್ನು ನಾನು ಬಿಟ್ಟೆ, ಮತ್ತು ಈಗ ಅಪ್ಪನು ನನ್ನನ್ನು ಕೊಂದರೂ ನಾನು ಕದಿಯಲೊಲ್ಲೆನೆಂದು ನಿಶ್ಚಯ ಮಾಡಿದ್ದೇನೆ."

ಆಗ ನನ್ನ ಸ್ನೇಹಿತನು: "ಪ್ರಿಯ ಹುಡುಗಾ, ನಿನಗಾಗಿ ನಾನೇನು ಮಾಡಲಿ? ಎಂದು ಅರಿಯೆ; ಆದರೆ ಇಕೊ ಇದೊಂದು ಅರ್ಧ ರೂಪಾಯಿ! ನಿನಗೆ ಇನ್ನೇನಾದರೂ ಸಹಾಯ ಮಾಡುವೆ."

ಆಗ ಹುಡುಗನು ತನ್ನ ಕೈಯಲ್ಲಿ ಹಾಕಿದ ಹಣವನ್ನು ಒಂದು ಕ್ಷಣ ನೋಡಿ: "ಆದರೆ, ಐಯ್ಯಾ, ದಯ ಮಾಡಿ ನನ್ನದೊಂದು ಗೀತ ಕೇಳುವಿರಾ?" ಎಂದದಕ್ಕೆ ಸ್ನೇಹಿತನು ಹಿಂತಿರುಗಿ, ಆಹಾರವಾಗಲಿ ವಸ್ತ್ರವಾಗಲಿ ಇಲ್ಲದೆ, ಹೊಡದ ಪೆಟ್ಟುಗಳಿಂದ ವೇಧನೆ ಪಡುತ್ತಾ ಇರುವ ಈ ಹುಡುಗನು ಗೀತ ಹಾಡುವದಕ್ಕೆ ಅಪೇಕ್ಷಿಸುವದೇನು! ಎಂದು ವಿಸ್ಮಯ ಪಟ್ಟು, "ಒಳ್ಳೇದು, ನಿನ್ನ ರಾಗ ಕೇಳುವಾ" ಎನ್ನಲು, ಹುಡುಗನು:—

೧. ಕಂಡು ಬಪ್ಪ ಬಾಲರನ್ನು,—
"ಅಡ್ಡ ಕಟ್ಟದೆ,
ಬರಲೀಸಿ ಮಕ್ಕಳನ್ನು!"
ಎಂತ, ಕೂಡಲೆ
ಯೇಸು, ದಯೆಯ
ಮಾಡಿ, ಮಕ್ಕಳ
ಅಪ್ಪಿ ಕೊಂಡು, ಆಶೀರ್ವಾದ
ಕೊಟ್ಟನುತ್ತಮ ಪ್ರಸಾದ!

೨. ನಾನು ಸಹ ಮಗುವಲ್ಲ?
ಬಂದೆನೇಸುವೇ!
ಆಗ ವರ ಕೊಟ್ಟೆಯಲ್ಲ?
ಈಗ ಕೊಡಿಯೇ?
ನಿನ್ನ ಪಾದಕೆ
ಬಿದ್ದೆನೇಸುವೇ!
ಮುಕ್ತನಾದೆನೇಸುವಲ್ಲಿ,
ಮುಕ್ತನಿಹಪರದಲ್ಲಿ.

"ಇದೇ ನನ್ನ ಚಿಕ್ಕ ಗೀತವು. ಸಲಾಮ್ಮೈಯಾ!"

ಹಾಗೆಯೇ ಆ ಸ್ನೇಹಿತನು ಹೋಗಿ, ಮರು ದಿವಸ ಬೆಳಿಗ್ಯೆ ಬಂದು ಈ ಹುಡುಗನಿದ್ದ ಮಾಳಿಗೆಯನ್ನು ಹತ್ತಿ ಬಾಗಲು ತಟ್ಟಿದನು. ಉತ್ತರವೇನೂ ಬಾರದರಿಂದ, ಬಾಗಲು ತೆರದು ಒಳಗೆ ಹೋಗಿ ನೋಡಲಾಗಿ, ಮುಂಚಿನ ಸಾಯಂಕಾಲ ತಾನು ಕೊಟ್ಟ ಅರ್ಧ ರೂಪಾಯಿಯು ನೆಲದ ಮೇಲೆ ಬಿದ್ದಿತ್ತು. ಹುಡುಗನು ಮೃತವಾಗಿದ್ದನು! ಕಳದ ರಾತ್ರಿಯಲ್ಲೆ ಅವನ ಪ್ರಾಣ ಹೊರಟು ಹೋಗಿತ್ತು. "ಅಡ್ಡಿ ಮಾಡದೆ ಕೂಸುಗಳನ್ನು ನನ್ನ ಬಳಿಗೆ ಬರ ಗೊಡಿಸಿರಿ!" ಎಂದು ಹೇಳಿದ ದೇವರಿಗೆ ಸ್ತೋತ್ರವಾಗಲಿ! ಆತನು ಮುಖದಾಕ್ಷಿಣ್ಯವುಳ್ಳವನಲ್ಲ: ಕರಿಯಾಗಲಿ ಬಿಳಿಯಾಗಲಿ, ದಾಸನಾಗಲಿ ಯಜಮಾನನಾಗಲಿ, ಘೋರವಾಗಲಿ ಸಪುರವಾಗಲಿ, ಎಲ್ಲಾ ಮಕ್ಕಳನ್ನು ಆತನು ತನ್ನ ಹತ್ತರ ಬರ ಗೊಡಿಸುತ್ತಾನೆ. ದರಿದ್ರರ, ಗತಿ ಇಲ್ಲದವರ, ಕಂಗೆಟ್ಟವರ, ಅನಾಥರ ಮನೆಗಳಿಗೆ ತನ್ನ ದೂತರನ್ನು ಕಳುಹಿಸಿ, ತನ್ನ ರಕ್ತದಿಂದ ಕೊಂಡು ಕೊಂಡ ಬಾಲರನ್ನು ತನ್ನ ಆನಂದಕ್ಕೆ ವೈಯ್ಯುತ್ತಾನೆ. ಪ್ರಿಯ ಎಳೇ ವಾಚಕನೆ, ನೀನು ಸಹಾ ಆತನ ಮಾತನ್ನು ಆಲೈಸುತ್ತಿಯಾ?

Printed by Stolz & Reuther, Basel Mission Press, Mangalore.

ಬಾಲಪತ್ರ.

ಪುಸ್ತಕ ೨. 1871. ಅಂಕೆ ೬.

ಮೂರ್ಖ ಮಗನು ತನ್ನ ತಾಯಿಗೆ ವ್ಯಸನವಾಗಿದ್ದಾನೆ.

ಸಾಮತಿ. ೧೦, ೧.

ಕಠೋರ ಕಥೆಗಳನ್ನು ಹೇಳಲಿಕ್ಕೆ ನನಗೆ ಸಂತೋಷವಿಲ್ಲ. ಆದರೆ ದೇವರ ವಾಕ್ಯದಲ್ಲ್ಯಾದರೂ ಅಂಥವುಗಳು ಇದ್ದಾವೆ. ಪರಂತು ಅವನ್ನ ಬರದಿಟ್ಟ ದೇವಭಕ್ತರು ಅವುಗಳಲ್ಲಿ ಸಂತೋಷ ಪಟ್ಟು ಬರದಿಟ್ಟರೆಂದು ಭಾವಿಸಿ ಕೊಳ್ಳ ಕೆಲಸವಲ್ಲಾ. ಹುಡುಗರು ಅವಿಧೇಯರಾಗಿ, ಕೇಳಲೊಲ್ಲದ ಮೂರ್ಖರೂ ತಂಟೆಗಾರರೂ ಆಗಿರ ಬಾರದೆಂದು ಎಚ್ಚರಿಸಿ, ಬುದ್ಧಿ ಹೇಳ ಬೇಕೆಂಬುವ ಮನಸ್ಸಿನಿಂದ ಬರದಿಟ್ಟರಷ್ಟೆ. ನಾನು ಹೇಳಲಿಕ್ಕಿರುವ ಕಥೆಯನ್ನು ನನ್ನ ಪರಿಚಿತರಲ್ಲೊಬ್ಬನು ನನಗೆ ಒಂದು ಕಾಗದದಲ್ಲಿ ಬರದು ತಿಳಿಸಿದ್ದಾನೆ. ಹ್ಯಾಗಂದರೆ:

ಒಂದಾನೊಂದು ದಿವಸ ನನ್ನ ಶಾಲೆಗೆ ಬರುತ್ತಿರುವ ಹುಡುಗರಲ್ಲಿ ಅಸ್ವಸ್ಥವಾದ ಒಬ್ಬನನ್ನು ನಾನು ನೋಡ ಬೇಕೆಂದು ಹೊರಟು ಹೋಗುವಾಗ, ಬೇರೊಬ್ಬ ಹುಡುಗನು ಒಂದು ಬೆಕ್ಕುಮರಿಯನ್ನು ತನ್ನ ಕೈವಸ್ತ್ರದಿಂದ ಒಂದು ಬೇಲಿಗೆ ಕಟ್ಟಿ ಹಾಕಿ, ಕರ್ಕಶತನದ ಖುಶಾಲಿಗೆ ಈಡಿಕ್ಕಿ, ಕಲ್ಲೆಸದು ಹೊಡೆಯುತ್ತಾ, ಅದರ ಕಾಲೊಂದನ್ನು ಮುರಿದು ಹಾಕಿ ಇದ್ದದ್ದನ್ನು ಕಂಡೆನು.

ಈ ಕ್ರೂರ ಬುದ್ಧಿಭ್ರಷ್ಟ ಕೆಲಸ ಬಿಟ್ಟೇ ಬಿಡ ಬೇಕೆಂದು ನಾನು ಶಬ್ದವನ್ನೆತ್ತಿ, ಗದರಿಸಿದೆನು. ಆದರೆ ನನ್ನನ್ನು ಕೇಳದೆ ಹೋಗಿ, ಬಿಡಲೇ ಇಲ್ಲ. ಆದ ಕಾರಣ ನಾನು ಮಾರ್ಗವನ್ನು ಬಿಟ್ಟು, ವಾರೆಯಾಗಿ ಹೋಗಿ, ಅವನೆಡೆಗೆ ಓಡಿ ಬರುವಾಗ, ಅವನೂ ಓಡಿ, ತಪ್ಪಿಸಿ ಕೊಂಡ. "ನಾನು ತಪ್ಪಿಸಿ ಕೊಂಡು, ಅವರ ಕೈಗೆ ಶಿಕ್ಕಲಿಕ್ಕಿಲ್ಲ" ಎಂದು ನೆನಸಲಿಕ್ಕೆ ಹುಡುಗನಿಗೆ ಆಸ್ಪದ ಶಿಕ್ಕಿದ ಕೂಡಲೇ, ಅವನು ತಿರಿಗಿ ಕೊಂಡು, ನನಗೂ ಒಂದು ಕಲ್ಲನ್ನೆಸದು ಹೊಡೆಯಲಿಕ್ಕೆ, ನಾನು ಮುಂದೆ ಓಡದೆ, ಆ ಬಡ ಬೆಕ್ಕುಮರಿಯನ್ನು ಬಿಚ್ಚಿ ಬಿಡಿಸಿದೆ. ಕಟ್ಟಿದ ಕೈವಸ್ತ್ರವನ್ನು ಬಿಚ್ಚಿ, ತೆಗದು ನೋಡಲಾಗಿ, ಅದರ ಒಂದು ಕೊನೆಯಲ್ಲಿ ಯಾಕೋಬ್ ಮೂಲ್ಮನ್ ಎಂಬ ಹೆಸರನ್ನು ಕೆಂಪು ನೂಲಿನಿಂದ ಹೊಲಿದು ರಚಿಸಿದ್ದದನ್ನು ಕಂಡೆನು.

ಇಷ್ಟು ವಿವರ ನಡದ ಸ್ಥಳಕ್ಕೆ ಸ್ವಲ್ಪ ದೂರದಲ್ಲಿ ನನ್ನ ಶಾಲೆಯ ನಾಲ್ಕೈದು ಮಂದಿ ಹುಡುಗರು ಆಡುತ್ತಿದ್ದರು. ಇವರ ಹತ್ತಿರ ನಾನು: "ಯಾಕೋಬ್ ಮೂಲ್ಮನ್ ಎಂಬ ಹೆಸರುಳ್ಳ ಹುಡುಗನೊಬ್ಬನ ಗುರ್ತು ನಿಮಗುಂಟೇನೋ?" ಎಂದು ಕೇಳಲು, ಅವರು "ಹೌದು, ಉಂಟು; ಓ ಅಲ್ಲಿ, ಬೀದಿಯ ತುದಿಯಲ್ಲಿ, ಅವನ ಮನೆ. ಅದರ ಹತ್ತಿರ ಒಂದು ಹುಣಸೆ ಮರವದೆ," ಅಂದರು.

ಈ ಹುಡುಗರಲ್ಲಿ ನಾನು ಸ್ವಲ್ಪ ಹೆಚ್ಚಾಗಿ ಪ್ರೀತಿಸಿದ್ದ ಒಬ್ಬನನ್ನು "ಅವನ ಮನೆಯನ್ನು ತೋರಿಸಲಿಕ್ಕೆ ನನ್ನ ಸಂಗಡ ಬರುತ್ತಿಯಾ?" ಎಂದು ಕೇಳಿ ಕರಕೊಂಡು ಮುಂದೆ ಹೋದೆನು. ಹೋಗುವಾಗ ಈ ಹುಡುಗನ ಹತ್ತರ ಅವನ ವಿಷಯದಲ್ಲಿ ಹೆಚ್ಚು ವಿಚಾರಣೆ ಮಾಡಿ, ತಿಳುಕೊಳ್ಳಲಿಕ್ಕನುವಾಯಿತು; ಅದಲ್ಲದೆ ಇಲ್ಲ್ಯಲ್ಲಿ ನನ್ನನ್ನೂ ನನ್ನ ಕೈಯಲ್ಲಿದ್ದ ಬೆಕ್ಕುಮರಿಯನ್ನೂ ಕಂಡ ಬೇರೆ ಹುಡುಗರು ನನ್ನ ಹತ್ತರ ಓಡಿ ಬಂದು, "ನೀವು ಎಲ್ಲಿಗೆ ಹೋಗುತ್ತೀರಿ? ಬೆಕ್ಕುಮರಿ ನಿಮ್ಮ ಕೈಯಲ್ಲಿರುವದೇನು?" ಎಂದು ಆಶ್ಚರ್ಯ ಪಟ್ಟು ಕೇಳಲಾಗಿ, ನಾನು ಬಡ ಪ್ರಾಣಿಗಳನ್ನು ಬೇಕೆಂದು ಪೀಡಿಸುತ್ತಿರುವ ಕ್ರೂರ ಸ್ವಭಾವವುಳ್ಳ ಹುಡುಗರು ಮಹಾ ದುಷ್ಟ ಪಾಪಿಷ್ಟರಾಗಿದ್ದಾರೆಂಬದಾಗಿ ಪ್ರತ್ಯುತ್ತರ ಕೊಟ್ಟು, ಬೆಕ್ಕು ಮರಿಯನ್ನು ಕಲ್ಲೆಸದು ಪೀಡಿಸಿದ ಹುಡುಗನ ಮಾತನ್ನು ತೆಗೆದು ತಿಳಿಸಿದೆನು.

ಅಷ್ಟರೊಳಗೆ ನಾವು ಆ ಹುಣಸೆ ಮರವಿದ್ದ ಮನೆಯ ಎದುರಿಗೆ ಬಂದು, ಬಾಗಲಿನಲ್ಲಿ ನಿಂತಿರುವ ಒಬ್ಬ ಸ್ತ್ರೀಯನ್ನು ಕಂಡೆವು. ನಾನು ಕರಕೊಂಡು ಬಂದ ಹುಡುಗನು ನನಗೆ "ಯಾಕೋಬನ ತಾಯಿಯೇ ಇವಳು!" ಅಂದನು. ತತ್‌ಕ್ಷಣದಲ್ಲಿ ಮನೆಯ ಹಿಂದಗಡೆಯಿಂದ ಬೆಕ್ಕಿಗೆ ಹೊಡದ ಆ ಹುಡುಗನು ಬಂದು, ನನ್ನ ದೃಷ್ಟಿಗೆ ಬಿದ್ದನು. ಆದರೆ ನಾನು ಅವನ ಕಣ್ಣಿಗೆ ಬಿದ್ದ ಸಂಗಡಲೇ ಅವನು ಮರಳಿ ಓಡಿ ಹೋಗಿ, ಅಡಗಿ ಕೊಂಡನು. ಆಗ ನಾನು ಅವನ ತಾಯಿಯ ಬಳಿಗೆ ಹೋಗಿ, "ನಿಮ್ಮ ಮಗನನ್ನು ಕರೆಯ ಬೇಕಮ್ಮಾ!" ಎಂದು ಅವಳನ್ನು ಬೆಸಗೊಂಡಾಗ, ಆಕೆಯು "ಏನಯ್ಯಾ? ಏನಾದರೂ ತಪ್ಪು ಮಾಡಿದನೇನೊ?" ಎಂದು ಕೇಳಿದಳು. ನಾನು "ಹೌದಮ್ಮಾ; ಲಜ್ಜಾಹೀನನಾಗಿ ಬಹು ಪುಂಡಾಟಿಕೇ ಕೆಲಸ ಮಾಡಿದ್ದಾನೆ. ಇಗೋ, ಈ ಬೆಕ್ಕುಮರಿ! ಇದನ್ನು ಅವನು ಪೀಡಿಸಿ ಕೊಲ್ಲಲಿಕ್ಕಿದ್ದ. ಅವನ ಕೈವಸ್ತ್ರವನ್ನು ನೋಡಿರಿ! ಅವನೇ ಅದನ್ನು ನನ್ನ ಕೈಯಿಂದ ತೆಗದು ಕೊಳ್ಳ ಬೇಕು" ಅಂದಾಗ, ಆಕೆಯು "ಇಲ್ಲಿಗೆ ಬಾ, ಯಾಕೋಬಾ! ಬರುತ್ತೀಯಾ? ಬಾ, ಬಾ! ಈ ಧೊರೆಯು ನಿನಗೆ ಹೇಳಲಿಕ್ಕಿರುವ ಮಾತನ್ನು ಕೇಳಲಿಕ್ಕೆ ಬಾ!" ಎಂದು ಒದರಿ ಹೇಳಿದಳು.

ಹುಡುಗನು: "ನನಗೂ ಆ ಧೊರೆಗೂ ಏನು? ಬೆಕ್ಕುಮರಿ ನನ್ನದು; ಅದರ ವಿಚಾರ ಅವನಿಗ್ಯಾತಕ್ಕೆ?" ಎಂದು ಹೂಂಕರಿಸಿ, ಬಾಯಿ ಬಿಟ್ಟದ್ದಕ್ಕೆ, ಅವನ ತಾಯಿಯು: "ಅವನು ಕೆಟ್ಟ ಹುಡುಗ, ಕೇವಲ ಪಟ್ಟಿಂಗ, ನಾನೇನು ಮಾಡಲಿ, ಅಯ್ಯಾ?" ಅನ್ನಲು, ನಾನು: "ಅವನಿಗೆಷ್ಟು ವರುಷವಾಯಿತು?" ಎಂದು ಕೇಳಲಾಗಿ, ಅವಳು: "ಬರುವ ತಿಂಗಳಿನಲ್ಲಿ ಹತ್ತು ವರುಷದವನಾಗುತ್ತಾನೆ," ಅಂದಳು. ನಾನು: "ಅವನ ಅಪ್ಪ ಇನ್ನು ಇಲ್ಲವೆಂದು ಕಾಣು

ತ್ತದೆ, ಅವನು ಸತ್ತು ಹೋಗಿ ಎಷ್ಟು ವರುಷವಾಯಿತು?" ಅವಳು: "ಹುಡುಗನಿಗೆ ಒಂದು ವರುಷ ಕೆಲ ತಿಂಗಳು ಆದಂದು ತೀರಿ ಹೋದನು." ನಾನು: "ಹುಡುಗನು ಶಾಲೆಗೆ ಹೋಗುತ್ತಾನೋ?" ಅವಳು: "ಇಲ್ಲಯ್ಯಾ! ಶಾಲೆಗೆ ಹೋಗಲಿಕ್ಕೆ ಅವನಿಗೆ ಎಂದೂ ಮನಸಿದ್ದಿಲ್ಲಾ; ಮುಂಚೆ ಹತ್ತಿಪ್ಪತ್ತು ದಿವಸ ಹೋಗುತ್ತಿದ್ದ; ಆದರೆ ಉಪಾಧ್ಯಾಯನಿಗೆ ಅವನ ಮೇಲೆ ಮನಸ್ಸು ಬಾರದೆ ಹೋದದ್ದರಿಂದ, ಶಾಲೆಗೆ ಹೋಗುವದನ್ನು ಬಿಟ್ಟು ಬಿಟ್ಟ." ನಾನು: "ಅವನು ಬಾರದೆ ಹೋದ ಕಾರಣವೇನೆಂದು ಕೇಳಲಿಕ್ಕೆ ಉಪಾಧ್ಯಾಯನು ಎಂದಾದರೂ ಬರಲಿಲ್ಲವೋ?" ಆಕೆಯು: "ಅವರನ್ನು ನಾನು ನೋಡಿದ್ದೇ ಇಲ್ಲಾ; ನೋಡಲಿಕ್ಕೆ ಮನಸ್ಸೂ ಇಲ್ಲ. ಯಾಕಂದರೆ ನನ್ನ ಮಗನಿಗೆ ಸಮವಾಗಿ ನೋಡಿ ನಡಿಸಲಿಲ್ಲವೆಂದು ನನಗೆ ನಿಶ್ಚಯವಾಗಿ ತೋರುತ್ತದೆ." ನಾನು: "ಓದಲಿಕ್ಕೆ ನಿಮ್ಮ ಮಗನಿಗೆ ಬರುತ್ತದೋ? ಅವಳು: "ಬರ ಬಹುದಾಗಿತ್ತು; ಆದರೆ ಓದಲಿಕ್ಕವನಿಗೆ ಮನಸ್ಸಿಲ್ಲಾ; ಮನೆಯಲ್ಲಿರಲಿಕ್ಕಾದರೂ ಮನಸ್ಸಿಲ್ಲ!" ನಾನು: "ಆದರೆ ಅವನು ಸಂಜೆಗಾದರೂ ಮನೆಗೆ ಬರುವ ಹಾಗೆ ನೀವು ನೋಡದೆ ಇರಲಿಕ್ಕೆ ಇಲ್ಲ? ಹೌದೋ?" ಅವಳು: "ನೋಡುತ್ತೇನೆ; ಆದರೆ ಸಂಜೆಗೆ ಅವನು ಮನೆಗೆ ಬಂದರೂ, ರಾತ್ರಿಯಲ್ಲಿ ಉಂಡು, ನಾನು ಮಲಗಿ ಕೊಂಡ ಮೇಲೆ, ನನಗೆ ತಿಳಿಯದೆ, ಎದ್ದು ಹೊರಗೆ ಹೋಗುತ್ತಾನೆ. ನಾನೇನು ಮಾಡಲಿ? ನೆರೆಹೊರೆಯಲ್ಲಿ ಅವನಂಥಾ ಹುಡುಗರು ಎಷ್ಟೋ ಮಂದಿ! ಅವರ ಸಂಗತಿಗೆ ಹೋಗಲಿಕ್ಕೆ ಅವನು ಮನಸ್ಸು ಮಾಡುವಲ್ಲಿ, ನಾನು ಹ್ಯಾಗೆ ಮಾಡಿ, ಅವನನ್ನು ಮನೆಯಲ್ಲಿರಿಸಿ, ಕಾಯ ಬಹುದು?" ಎಂದು ಪ್ರತ್ಯುತ್ತರ ಕೊಟ್ಟದ್ದಕ್ಕೆ ನಾನು: "ಅಮ್ಮವ್ಮಾ! ನೀವೂ ಅವನೂ ಇನ್ನು ಹೆಚ್ಚು ದಿವಸ ಬದುಕುವದಾದರೆ, ನಿಮಗೆ ಕಣ್ಣೀರು ಧಾರೆಯಾಗಿ ಬರ ಮಾಡುವನೆಂಬ ಭಯ ನನಗೆ ಕಾಣುತ್ತದೆ. ಅವನಿಗೆ ತಕ್ಕ ಜಾಗ್ರತೆಯಿಂದ ನೋಡುವದಿಲ್ಲವೆಂದು ತೋಚುತ್ತದೆ. ನಿಮ್ಮನ್ನು ಏನೂ ಲಕ್ಷ್ಯ ಮಾಡದೆ, ಭಯವನ್ನಾದರೂ ಪಡದೆಯೂ ಇರುವದರಿಂದ, ನೀವು ಕರೆದಾಗ, ಬಾರದೆ ಹೋದ. ಆದರೆ ಅವನ ದಿವಸಗಳು ಹೆಚ್ಚಾಗುವ ಪ್ರಕಾರವೇ ಅವನ ದುಷ್ಟತನವೂ ಹೆಚ್ಚಾಗುವದೆಂದು ನಾನು ಎಚ್ಚರಿಸಿ, ಹೇಳಿದ ಮಾತು ಇನ್ನು ಮುಂದೆ, ಅವನ ನಿಮಿತ್ತ್ಯದಿಂದ ನಿಮ್ಮ ಕೂದಲು ಅಕಾಲದಲ್ಲಿ ಹಣ್ಣಾಗಿ, ನೀವು ಚಿಂತೆಯಿಂದ ದುಃಖಾಕ್ರಾಂತರಾಗಿ ಸಾಯುವಾಗಾದರೂ, ನಿಮಗೆ ನೆನಪಾಗುವದು. ಮಕ್ಕಳ ಮೇಲನ್ನು ಚಿಂತಿಸಿ, ಹಿತಾಹಿತಗಳನ್ನು ನೋಡಿ ಕೊಳ್ಳುವ ನಿಜ ಮಮತೆಯುಳ್ಳ ತಾಯಿಯಂತೆ ನೀವು ಮಾಡುವದಿಲ್ಲ: ಆದರೆ ನೋಡಿ ಕೊಳ್ಳಿರಿ!" ಎಂಥೇಳಿದೆನು.

ನನ್ನ ಮಾತು ಅವಳಿಗೆ ಅಗದಿ ಮೆಚ್ಚಲಿಲ್ಲ. "ನಿಮ್ಮ ಮಗನಿಗೆ ಒಂದು ಒಳ್ಳೇ ಶಾಲೆಯಲ್ಲಿ ಪ್ರವೇಶವಾಗುವ ಹಾಗೆ ನಾನು ಮಾಡಲೋ?" ಎಂದು ಕೇಳಿದ್ದಕ್ಕೆ ಆಕೆಯು: "ಬೇಡ, ಏನು ಪ್ರಯೋಜನ?" ಎಂದಳು. ನಾನು: "ಅವನಿಗೆ ಒಂದು ಒಳ್ಳೇ ಪುಸ್ತಕವನ್ನು ಓದಲಿಕ್ಕೆ ತಂದು ಕೊಡ ಬಹುದೋ?" ಎಂದು ಕೇಳಲು, ಅವಳು: "ಅದೂ ಬೇಡ; ಕೆಲವು ಪುಸ್ತಕಗಳು ಮನೆಯಲ್ಲಿದ್ದಾವೆ, ಇವನ್ನಾದರೂ ಓದಲಿಲ್ಲ, ಮತ್ತು ನನಗೂ ಹುಡುಗರನ್ನು ಮೇಜಿಗೆ ಕಟ್ಟಿ ಹಾಕಿ, ಪುಸ್ತಕ ಓದಿಸುವದಕ್ಕೆ ಮನಸ್ಸಿಲ್ಲ" ಅನ್ನಲಾಗಿ, ನಾನು ಆ ಕೈವಸ್ತ್ರವನ್ನು ಅ

ವಳ ಕೈಯಲ್ಲಿ ಕೊಟ್ಟು, ಬೆಕ್ಕುಮರಿಯನ್ನು ನೆಲದ ಮೇಲಿಟ್ಟು ಬಿಟ್ಟು, ಬಂದ ದಾರಿಯನ್ನು ಹಿಡಿದು, ತಿರಿಗಿ ನನ್ನ ಮನೆಗೆ ಹೋದೆನು.

ಇದಾಗಿ ಕೊಂಚ ದಿನಗಳಾದ ಮೇಲೆ ಬೇರೊಂದೂರಿನಲ್ಲಿ ನನಗೆ ಬೋಧಕೋದ್ಯೋಗವು ಶಿಕ್ಕಿತು. ಈ ಊರಿನಲ್ಲಿ ಕೆಲ ವರುಷ ಇದ್ದನಂತರ ಕ್ಷೇಮಾರ್ಥಿಯಾಗಿ ಸ್ವಲ್ಪ ದೇಶ ಸಂಚಾರ ಮಾಡಿ, ತಿರಿಗಿ ಆ ಊರಿಗೆ ಬಂದೆನು. ಆದಿತ್ಯವಾರ ಒಂದಕ್ಕೆ ಸಭಾಲಯದಲ್ಲಿ ನನಗೆ ಪ್ರಸಂಗದ ಕೆಲಸವು ಒಪ್ಪಿಸಿ ಕೊಡೋಣವಾಯಿತು; ಒಬ್ಬ ಸ್ತ್ರೀಯು ಸಾಯಲಿಕ್ಕಿದ್ದಾಳೆಂತಲೂ, ಸಭಾಪ್ರಾರ್ಥನೆಯಲ್ಲಿ ಅವಳಿಗೋಸ್ಕರವಾಗಿ ಪ್ರಾರ್ಥಿಸ ಬೇಕೆಂತಲೂ ನನಗೆ ಹೇಳೋಣಾಯಿತು. ಅವಳು ಯಾರೆಂದು ವಿಚಾರಿಸಲಾಗಿ, ಅವಳು ಸತ್ತು ಹೋದ ಮೂಲ್ಮನ್ ಎಂಬವನೊಬ್ಬನ ಹೆಂಡತಿಯಾಗಿದ್ದ ವಿಧವಾಸ್ತ್ರೀ ಎಂದು ಕೇಳಿದಾಗ, ಅವಳು ತನ್ನ ಬೆಕ್ಕಿಗೆ ಕಲ್ಲೆಸದು ಹೊಡೆದ ಆ ಹುಡುಗನ ತಾಯಿಯೆಂದು ನನಗೆ ನೆನಪಾಯಿತು. ಪ್ರಸಂಗವಾದ ಕೂಡಲೇ ಅವಸರವಾಗಿ ಅವಳನ್ನು ನೋಡಲಿಕ್ಕೆ ಹೋದೆನು. ಆದರೆ ಮುಂಚೆ ಇದ್ದ ಮನೆಯಲ್ಲಿರದೆ, ಬೇರೊಂದು ಕಡೆಯಲ್ಲಿ ಬಿಡಾರ ಮಾಡಿ ಕೊಂಡು, ಬಹಳ ಬಡವಳಾಗಿ ಅವಳನ್ನು ಕಂಡೆನು. ವಂದಿಸಿದ ಮೇಲೆ ನಾನ್ಯಾರೆಂದು ಕೇಳಿ, ಅವಳ ಮಗನ ಮತ್ತು ಬೆಕ್ಕುಮರಿಯ ಮಾತನ್ನು ಅವಳ ನೆನಪಿಗೆ ತರಿಸಿ, ಮಗನ ಕ್ಷೇಮಸಮಾಚಾರವು ಹ್ಯಾಗೆಂದು ಕೇಳಿದ್ದಕ್ಕೆ ಆಕೆಯು "ನಾನು ಹೀಗಾಗಿ ಬಿದ್ದದ್ದಕ್ಕೆ ವಿಶೇಷ ಕಾರಣ ಅವನೇ!" ಎಂತ ಹೇಳಿ ಬಹಳವಾಗಿ ಅತ್ತಳು. ಅಳುವದು ಸ್ವಲ್ಪ ಅಣಗಿ ಹೋದ ಮೇಲೆ, ಅವನ ಪೂರ್ವೋತ್ತರಗಳನ್ನು ಶಾನೆ ಮನೋವ್ಯಸನದೊಂದಿಗೆ ಹೇಳಲಾರಂಭಿಸಿದಳು; ಹ್ಯಾಗಂದರೆ:

"ನೀವು ನಮ್ಮ ಊರನ್ನು ಬಿಟ್ಟು ಹೋದ ಈಚೆಯ ನಾಲ್ಕೈದನೇ ವರುಷದಲ್ಲಿ ಪ್ರೀತಿಯ ಮತ್ತು ಭಕ್ತಿಯ ಬಲವು ಹೆಚ್ಚಿದ್ದ ಬೋಧಕನು ಬಂದನು. ಅವನ ಪ್ರಸಂಗಗಳಿಂದ ಅನೇಕರು ಗುಣ ಪಟ್ಟರು. ನನಗೂ ದೇವತಾನುಗ್ರಹವು ಪ್ರಾಪ್ತಿಸಿತು. ಆತ್ಮದ ಕುರುಡುತನವು ಪರಿಹಾರವಾಗಿ, ರಕ್ಷಕನಾದ ಕ್ರಿಸ್ತನನ್ನು ಕಂಡುಕೊಂಡೆನು. ಆದರೆ ನನ್ನ ಮಗನು-- ಅಕಟಕಟಾ! ನೀವು ಬಂದು, ಬುದ್ಧಿ ಹೇಳಿದ ದಿನದಲ್ಲಿ ಅವನನ್ನು ಹೂಣಿಡಲಿಕ್ಕೆ ಹೋಗಬೇಕಾಗಿದ್ದರೆ, ಅವನಿಗಾಗಿ ನನಗೀಗಿರುವ ದುಃಖವು ಆಗುತ್ತಿದ್ದಿಲ್ಲ." ಸುರಿದು ಬೀಳುತ್ತಿದ್ದ ಕಣ್ಣೀರುಗಳನ್ನು ಒರಸಿ, ಸ್ವಲ್ಪ ತಡೆದ ಮೇಲೆ ಮತ್ತಿಂತೆಂದಳು: "ಯಾಕೋಬನು ಹೆಚ್ಚಾಗಿ ಏನೂ ಕೇಳದ ತಂಟೆಗಾರನಾಗುತ್ತಾ ಬಂದ ಕಾರಣದಿಂದ ಅವನನ್ನು ಒಂದು ಅನಾಥ ಹುಡುಗರ ಶಾಲೆಯಲ್ಲಿರಿಸ ಬೇಕೆಂದು ನನ್ನ ನೆರೆಯವರು ನನಗೆ ಪದೇಪದೇ ಹೇಳುತ್ತಿದ್ದದರಿಂದ, ನಾನು ಕಡೆಗೆ ಒಡಂಬಟ್ಟು, ಕಳುಹಿಸಿ ಕೊಟ್ಟೆನು. ಅವನು ಹೆಚ್ಚು ಕಡಿಮೆ ಹದಿಮೂರು ತಿಂಗಳಿನ ವರೆಗೂ ಆ ಶಾಲೆಯಲ್ಲಿದ್ದನಂತರದಲ್ಲಿ ಪುತ್ರವಿಯೋಗ ವ್ಯಥೆಯ ದೆಶೆಯಿಂದ ನನಗೆ ಬುದ್ಧಿ ಇಲ್ಲದೆ ಹೋಗಿ, ಅವನನ್ನು ತಿರಿಗಿ ಮನೆಗೆ ಕರಕೊಂಡು ಬಂದೆನು. ಆ ಶಾಲೆಯಲ್ಲಿ ಅವನು ಸುಮಾರು ಚನ್ನಾಗಿ ಕಲಿತು ನಡಕೊಳ್ಳುತ್ತಾ ಬಂದದರಿಂದ, ಬಡಗಿಯವನಾದ ನನ್ನ ನೆರೆಯವರಲ್ಲೊಬ್ಬನು, ತಾನು ಅವನಿಗೆ ಮರದ ಕೆಲಸ ಕಲಿಸಿ ಕೊಡುತ್ತೇನೆಂಥೇಳಿ, ತನ್ನ ಕಾರಖಾನೆಯಲ್ಲಿ ಶೇರಿಸಿ ಕೊಂಡನು. ಮೊದಲು ನನ್ನ ಮಗ

ಸಂತೋಷವಾಗಿ ಬಡಗಿತನ ಸಾಧಕ ಮಾಡಿ, ಮೂರು ತಿಂಗಳು ಕಲಿಯುತ್ತಾ ಬಂದ ಇತ್ತಲಾಗೆ, ನೆರೆಯೂರೊಂದರಲ್ಲಿ ಕೆಲ ಪಟಾಲಮ್ ದಂಡಿನವರ ಕವಾತು ಎಂಬ ವಾರ್ಷಿಕ ಮಹಾ ಶಸ್ತ್ರಸಾಧಕ ದಿನವಾಯಿತು. ಅವನು ಹೋಗಿ, ನೋಡ ಬೇಕೆಂಬ ಮನಸ್ಸು ಮಾಡಿ, ತನ್ನ ಅಯ್ಯನ ಹತ್ತರ ಅಪ್ಪಣೆ ಕೇಳಿದನು. ಆದರೆ ಅವಸರದ ಕೆಲಸವಿದ್ದದರಿಂದ ಅಯ್ಯನು ಅಪ್ಪಣೆ ಕೊಡದೆ ಹೋದದ್ದಕ್ಕೆ ಶಿಟ್ಟಾಗಿ, ಅಯ್ಯನ ಮನೆ ಬಿಟ್ಟು, ಎಲ್ಲಿಗೋ, ಒಂದು ತಿಂಗಳಿನ ವರೆಗೂ ಕಾಣದೆ, ಜಾರಿ ಹೋದನು. ಕರ್ತನು ನನ್ನನ್ನು ಕನಿಕರಿಸಿ ಆತ್ಮಕ್ಷೇಮ ಪಡಿಸಿದ್ದು ಅದೇ ಸಮಯದಲ್ಲಿ ಆಯಿತು. ಆಗ ಮಗನಿಗಾಗಿ ಎಷ್ಟೋ ಪ್ರಾರ್ಥಿಸಲೆಸಗಿದೆನು. ಹೆಚ್ಚು ಕಡಿಮೆಯಾಗಿ ಒಂದು ತಿಂಗಳಾದ ಮೇಲೆ ಅವನು ತಿರಿಗಿ ಬಂದಾಗ, ಎಷ್ಟೋ ಪ್ರಯತ್ನ ಪಟ್ಟು, ಮಾತಾಡಿ, ಬುದ್ಧಿ ಹೇಳಿ, ತಿದ್ದಲಿಕ್ಕೆ ಹತ್ತುತ್ತಿದ್ದೆ. ಒಂದಾನೊಂದು ದಿವಸ ಶಾನೆ ನಿಟ್ಟುಸುರಿಟ್ಟು ಬಹು ಮಮತೆಯಿಂದ ಅವನ ಸಂಗಡ ಮಾತಾಡಿ ಬುದ್ಧಿ ಹೇಳುತ್ತಿರುವಲ್ಲಿ, ಅವನು ನನಗೆ ಪುಸಲಾಯಿಸಿ, ನನ್ನ ಕಣ್ಣೀರನ್ನೊರಸಿ ಬಿಟ್ಟನು. ಆದರೂ 'ಅಡಿಕೇ ಉಡಿಯಲ್ಲಿ ಹಾಕ ಬಹುದು, ಮರವಾದ ಮೇಲೆ ಕೂಡದು' ಮತ್ತು 'ಗಿಡವಾಗಿ ಬೊಗ್ಗದ್ದು, ಮರವಾದ ಮೇಲೆ ಬೊಗ್ಗೀತೇ?' ಎಂಬುವ ಗಾದೇ ನೀತಿಯಾಗಿ, ಅವನು ಮತ್ತೂ ದುಃಸಂಗಕ್ಕೆ ಶೇರಿದನು. ನೆರೆಯವರ ಸಹಾಯದಿಂದ ಒಬ್ಬ ಸಾವಕಾರನ ಹತ್ತರ ಬಿಲ್ಲೆಕಾರನಾದನು; ಒಂದಾನೊಂದು ದಿವಸ ಸಾವಕಾರನು ಕೆಲ ಹುಂಡೀ ಕಾಗದಗಳಿದ್ದ ಒಂದು ಲಖೋಟೆಯನ್ನು ಟಪ್ಪಾಲಿಗೆ ಹಾಕೆಂದು ಕೈಯಲ್ಲಿ ಕೊಟ್ಟು ಕಳುಹಿಸಿದನು. ಟಪ್ಪಾಲಿಗೆ ಹೋಗುವಾಗಲೇ ಮಾರ್ಗದಲ್ಲಿ ಅವನ ದುಃಸಂಗಡಿಗರಲ್ಲೊಬ್ಬನು ಅವನಿಗೆ ಗಂಟು ಬಿದ್ದು—'ಎಲ್ಲಿಗೆ ಹೋಗುತ್ತೀ? ನಿನ್ನ ಕೈಯಲ್ಲಿರುವದೇನು?' ಎಂದು ಕೇಳಿ, ಹುಂಡೀ ಕಾಗದವೆಂದು ತಿಳಿದು—'ಪಸಂದಾಯಿತು, ಅದನ್ನು ಟಪ್ಪಾಲಿಗೆ ಹಾಕಲಿಕ್ಕೆ ನೀನು ಹುಚ್ಚನೋ? ಕಸಗೊಂಡು, ಓಡಿ ಹೋಗಿ, ಖುಶಾಲು ಮಾಡು! ಎಂದು ದುರ್ಬೋಧಿಸಿದನು. ನನ್ನ ಮಗ ಕಿವಿ ಕೊಟ್ಟು, ಹಾಗೆಯೇ ಮಾಡಿ, ಓಡಿ ಹೋದನು. ಆದರೆ ಮರುದಿವಸದ ರಾತ್ರಿಯಲ್ಲಿ ಪೊಲೀಸಿನವರು ಅವನನ್ನು ಗೊತ್ತು ಮಾಡಿ ಕೊಂಡು, ಹಿಡಿದು, ಕಾವಲಲ್ಲಿರಿಸಿದರು. ಕೊತ್ವಾಲನು, ದಯಾಗುಣದಿಂದ, ನನ್ನನ್ನು ಅವನ ಹತ್ತರ ಮಾತಾಡಲಿಕ್ಕೆ ಬಿಟ್ಟನು. ಮಗನು ನನ್ನನ್ನು ಕಂಡ ಕೂಡಲೇ ಅಡ್ಡ ಬಿದ್ದು, ನಾನು ತನಗಾಗಿ ಮಾತಾಡಿ, ಹೊಣೆ ಕೊಟ್ಟು, ತನ್ನನ್ನು ಬಿಡಿಸ ಬೇಕೆಂದು ಬಹಳವಾಗಿ ಬೇಡಿ ಕೊಂಡು, ನಾನು ಹೀಗೆ ಮಾಡಿದರೆ, ತಾನು ನಿಶ್ಚಯವಾಗಿ ಒಳ್ಳೆಯವನಾಗುತ್ತೇನೆಂದು, ವಿವಿಧ ಆಣೆಭಾಷೆಯಿಂದ ಮಾತು ಕೊಟ್ಟನು. ಆದರೆ ನಾನು ಅವನಿಗೆ: 'ನಿನ್ನನ್ನು ನಾನು ಬಿಡಿಸಲಾರೆ; ನಿನಗೆ ಈಗ ಏನೂ ಸಹಾಯ ಮಾಡಲಾರೆ; ಆದರೆ ನಿನಗಾಗಿ ಎಡೆಬಿಡದೆ ಪ್ರಾರ್ಥಿಸಿ, ದೇವರು ನಿನ್ನ ಪಾಪಗಳನ್ನು ಮನ್ನಿಸ ಬೇಕೆಂತ ಬೇಡಿ ಕೊಳ್ಳುತ್ತಿರುವೆನು' ಅಂದು, ನನ್ನ ಮನೆಗೆ ಬಂದು, ಕೊಠಡಿಯ ಕಿಟಕಿಯ ಬದಿಯಲ್ಲಿ ಕುಳಿತು, ನನ್ನ ಮಗನು ಕಳ್ಳನಾಗಿ, ಪೊಲೀಸಿನವರ ಕೈಗೆ ಶಿಕ್ಕಿ ಶೆರೆಮನೆಗೆ ಹೋಗ ಬೇಕೆಂಬುವದು ನಿಶ್ಚಯವೋ ಸ್ವಪ್ನವೋ? ಎಂದು ಹಲುಬಿ ಕೊಳ್ಳುತ್ತಿದ್ದೆನು. ಒಂದುವರೆ ವರುಷ ಅವನಿಗೆ ಬಂದೀಖಾನೆ

ಯಾಯಿತು. ಬರುವ ವಸಂತಕಾಲಕ್ಕೆ ಬಿಡುಗಡೆಯಾಗುವನು. ಹಗಲಿರುಳು ಅವನ ನೆನಪು ನನ್ನನ್ನು ಕಾಡುತ್ತಿರುತ್ತದೆ. ಬಿಡುಗಡೆಯಾದ ಮೇಲೆಯಾದರೂ ಏನಾಗಿ ಹೋಗುವನೊ? ಎಂಬೀ ಮೊದಲಾದ ಚಿಂತೆಗಳು ನನ್ನನ್ನು ಮುಪ್ಪಾಗ ಮಾಡಿದವು. ಆದರೆ ಅವನು ಬಂದೀಖಾನೆಯಿಂದ ಬಿಡುಗಡೆಯಾಗುವದನ್ನು ನಾನು ನೋಡಲಿಕ್ಕಿಲ್ಲ! ನಾನು ಹೋಗುತ್ತೇನೆ, ಕ್ರಿಸ್ತನ ರಕ್ತವು ನನ್ನನ್ನು ಎಲ್ಲಾ ಪಾಪದಿಂದ ಶುದ್ಧ ಮಾಡಲಿ! ನನ್ನ ಮಗನನ್ನು ದೇವರು ಕರುಣಿಸಲಿ!"

ಅಷ್ಟು ಆಕೆಯು ಹೇಳಿದ ಮೇಲೆ ನಾನು ಅಂದಿಗೆ ಎಂಟು ವರುಷಗಳ ಹಿಂದೆ ಅವಳಿಗೆ ಹೇಳಿದ ಮಾತನ್ನು ನೆನಪಿಗೆ ತರಿಸಲಿಕ್ಕೆ ಮನಸ್ಸಾಗಲಿಲ್ಲ. ಮೊಣಕಾಲೂರಿ ಕೊಂಡು, ಅವಳ ಸಂಗಡ ಅವಳಿಗೋಸ್ಕರವೂ ಮಗನಿಗೋಸ್ಕರವೂ ಪ್ರಾರ್ಥಿಸಿದೆನು. ಇದಾದ ಎಂಟು ದಿವಸದ ಮೇಲೆ ತೀರಿ ಹೋದಳು.

ಒಂದುವರೆ ವರುಷ ತೀರಿದಾಗ ಯಾಕೋಬನಿಗೆ ಬಿಡುಗಡೆಯಾಯಿತು. ಆದರೆ ಬಿಡುಗಡೆಯಾಗಿ ಒಂದೇ ವಾರವು ಆಗಿ ಹೋಗುವದಕ್ಕಿಂತ ಮುಂಚೆ ಒಬ್ಬ ಧೊರೆಯ ಹಣದ ಗಂಟನ್ನು ಎತ್ತಿ ಹಾಕಿದನು. ಪೊಲೀಸಿನವರು ಅವನನ್ನು ಹಿಂದಟ್ಟಿ ಹಿಡಿಯಲಿಕ್ಕೆ ಹತ್ತುವಾಗ, ಕೈಯಲ್ಲಿದ್ದ ಡೊಣ್ಣೆಯಿಂದ ಅವರಲ್ಲೊಬ್ಬನ ತಲೆಗೆ ಹೊಡೆದು ಬಿಟ್ಟನು. ತಾಗಿದ ಪೆಟ್ಟಿನಿಂದ ಇವನು ಅದೇ ದಿನದ ರಾತ್ರಿಯಲ್ಲಿ ಸತ್ತು ಹೋದನು. ಆದ ಕಾರಣ ಅವನಿಗೆ ಜೀವಾಂತ್ಯದ ವರೆಗೂ ಬಂದೀಖಾನೆಯ ಶಿಕ್ಷೆ ನಿರ್ಣಯವಾಯಿತು.

ಕೆಲ ದಿನಗಳ ಹಿಂದೆ ಅವನನ್ನು ನೋಡಲಿಕ್ಕೆ ಬಂದೀಖಾನೆಗೆ ಹೋದೆನು. ಒಂದು ತಾಸಿನ ಪರ್ಯಂತರ ಅವನ ಸಂಗಡ ಮಾತಾಡಿ, "ನಿನ್ನ ತಾಯಿಯ ನೆನಪು ನಿನಗೆ ಎಂದಾದರೂ ಆಗುತ್ತಿರುತ್ತದೇನೋ?" ಎಂದು ಕೇಳಿದ್ದಕ್ಕೆ ಅವನು: "ದಿನ ದಿನಕ್ಕೆ ಆಗುತ್ತಿರುತ್ತದೆ. ರಾತ್ರಿಯಲ್ಯಾದರೂ ಅವಳು ಬಂದು ಕಾಣಿಸಿ ಕೊಳ್ಳುವ ಪ್ರಕಾರವಾಗುತ್ತಿರುತ್ತದೆ. ಆಗ್ಯೆ ನನಗೆ ನಿಲುಕೂದಲಾಗಿ, ಮೈಯೆಲ್ಲಾ ಬೆವರ್ತು, ಗಡಗಡನೆ ನಡುಗಿ, ಕಳವಳಗೊಳ್ಳುತ್ತೇನೆ. ನನ್ನ ಮೇಲೆ ತಾಯಿಯನ್ನು ಕೊಂದ ಪಾಪವೇ!" ಎಂಬದಾಗಿ ಬಹಳವಾಗಿ ಅತ್ತು, ಅರಿಕೆ ಮಾಡಿದನು.

ಪಾಪಮಾರ್ಗದಲ್ಲಿ ನಡ ಕೊಂಡು ತಂದೆತಾಯಿಗಳನ್ನು ದುಃಖ ಪಡಿಸುತ್ತಿರುವ ಮಕ್ಕಳ ಮೇಲೆ ಇರುವ ಅಪರಾಧವೂ ಶಾಪವೂ ಎಂಥಾದ್ದೆಂದು ಅವರಿಗೆ ತಿಳಿದಿದ್ದರೆ, ಪಾಪಮಾರ್ಗವನ್ನು ಬಿಟ್ಟು ಬಿಟ್ಟಾರೆಂಬುವದು ನಿಶ್ಚಯವೇ. ಆದರೆ ಪಾಪಮಾರ್ಗದಲ್ಲಿರುವಾಗಲೇ ಶಾಪ ಬಂದೀತು ಎಂತ ನೆನಸುವದಿಲ್ಲಾ; ಹೇಳಿದರೂ, ನಂಬುವದೇ ಇಲ್ಲಾ. "ಯೆಹೋವನ ಭಯವು ತಿಳುವಿಕೆಯ ಮೂಲವಾಗಿದೆ. ಮೂಢರು ಜ್ಞಾನವನ್ನೂ ಶಿಕ್ಷೆಯನ್ನೂ ತಿರಸ್ಕರಿಸುತ್ತಾರೆ." "ಶಿಕ್ಷೆಯನ್ನು ಕೈಕೊಳ್ಳುವದು ಜೀವದ ಹಾದಿಯಾಗಿದೆ."

"ಮೈಮರಿಯದಿರು."

ಹೆರ್ರಿ ಎಂಬ ಹುಡುಗನಿಗೆ ತನ್ನ ಕರ್ತನಿಗೆ ಸೇವಿಸುವದೊಂದು ಉಪಾಯ ತೋರಿತು. ಆ ವಿಷಯ ಅವನು ಸಬ್ಬಾತಶಾಲೆಯಲ್ಲಿ ಬಹಳ ಕಲಿತಿದ್ದನು. ಮತ್ತು ಅವ

ನು ಚಿಕ್ಕವನಾಗಿದ್ದರೂ, ಶಾಲೆಯ ಮೇಲ್ವಿಚಾರಕನು ಅವನನ್ನು ಒಬ್ಬ ಚಿಕ್ಕ ಬೋಧಕನಾಗಿ ನೇಮಿಸುವದಕ್ಕೆ ಸಂತೋಷ ಪಟ್ಟನು. ಮತ್ತು ಹೆರ್ರಿಯ ಯಜಮಾನನು ದಯೆಯಿಂದ ಈ ಕೆಲಸಕ್ಕಾಗಿ ಅವನಿಗೆ ಸಮಯ ಕೊಡುತ್ತಿದ್ದನು.

ಒಂದು ದಿವಸ ಆದಿತ್ಯವಾರ ಪ್ರಾತಃಕಾಲದಲ್ಲಿ ಹೆರ್ರಿಯು ಬೈಬಲ್ ಪುಸ್ತಕವನ್ನು ಕೈಯಲ್ಲಿ ತೆಕ್ಕೊಂಡು, ತಾನು ಧರ್ಮವನ್ನು ಕುರಿತು ಕಲಿತದನ್ನು ಇತರರಿಗೂ ಕಲಿಸುವದಕ್ಕೆ ಸಂತೋಷದಿಂದ ಹೊರಟನು. "ಅದರ ಮಾರ್ಗಗಳು ರಮ್ಯವಾದ ಮಾರ್ಗಗಳೇ; ಅದರ ದಾರಿಗಳೆಲ್ಲಾ ಸಮಾಧಾನವೇ." ಆದರೆ ಹೆರ್ರಿಯು ಶೋಧನೆಗೆ ಹೊರಗಾಗಿರಲಿಲ್ಲ. ಮೂರು ವರ್ಷದ ಇತ್ತಲಾಗೆ ಅವನ ಜತೆಯವರಾಗಿದ್ದ ದಾನಿಯೆಲ್ ಮತ್ತು ಜಾಕ್‌ವಿಲ್ಕಿನ್ಸ್ ಎಂಬ ಇಬ್ಬರು ಹುಡುಗರು, ತಾವು ಏನೂ ಕಲಿಯಲೊಲ್ಲದ ಸೋಮಾರಿ ಹುಡುಗರಾಗಿದ್ದರೂ, ಅವನು ತಮಗಿಂತ ಮೇಲೇರಿದಕ್ಕಾಗಿ ಹೊಟ್ಟೆಕಿಚ್ಚು ಪಟ್ಟು, ಅವನನ್ನು ಹಗೆ ಮಾಡಿ, ಸಬ್ಬಾತಶಾಲೆಯ ಚಿಕ್ಕ ಬೋಧಕನಾದ ಇವನ ಮೇಲೆ ಬೀಳ ಬೇಕೆಂದು, ಅವನು ಹೋಗುವ ದಾರಿಯಲ್ಲಿ ಹೊಂಚಿ ಕೊಂಡು ನಿಂತಿದ್ದರು.

ಅವನು ಎದುರು ಬರುತ್ತಲೇ ದಾನಿಯೆಲ್ ಹಾಸ್ಯದಿಂದ ಕೂಗಿದ್ದು: "ಹಾ! ಹಾ! ಇಲ್ಲಿ ಒಬ್ಬ ಭಕ್ತನು ಬರುತ್ತಾನೆ!"

ಆಗ ಜಾಕನು ಸಹಾ ಕೂಗಿ: "ಈಗ ಅವನೂ ಒಬ್ಬ ಬೋಧಕನಾಗಿದ್ದಾನಲ್ಲ! ಆದರೆ ಅವನಿಗೆ ಮುಂಚಿನ ಮೋಜೆ ತಿಕ್ಕುವ ವ್ಯಾಪ್ತಿಯೇ ಲೇಸು!" ಅಂದನು.

ಮತ್ತು ದಾನಿಯೆಲ್ ನೆಗಾಡಿ: "ಅಥವಾ ವಸ್ತ್ರ ಒಗಿಯಲಿಕ್ಕೆ ಅವನು ತನ್ನ ತಾಯಿಗೆ ಸಹಾಯ ಮಾಡಿದರೆ ಆದೀತಲ್ಲ!"

ಇಷ್ಟೆಲ್ಲಾ ಹೆರ್ರಿಯು ಕೇಳಿದಾಗ, ಕೋಪೋದ್ರೇಕವಾಗಿ, ಸಹಿಸಲಾರದಿದ್ದನು. ಸರಿಯಾದದ್ದೆಂದು ತಾನು ಅರಿತಿರುವ ಕಾರ್ಯಕ್ಕಾಗಿ ಹೋಗುವಾಗ, ಹಾಸ್ಯ ಮಾಡಲ್ಪಡಲೊಲ್ಲನು. ಹೆರ್ರಿ ಕುಚೇಷ್ಟೆಗೆ ಹೆದರುವಂಥ ಹೇಡಿಯಲ್ಲ! ಅದು ಅವನಿಗೆ ಶಿಟ್ಟೆಬ್ಬಿಸುತ್ತದೆ. ಹೆರ್ರಿಯ ಸ್ಥಿತಿಯಲ್ಯಾದ ಮೇಲು, ಯಜಮಾನನು ಅವನಲ್ಲಿಟ್ಟ ಭರವಸ, ದೇವಾಲಯದ ಪಾದ್ರಿಯು ಅವನನ್ನು ಕುರಿತು ಮಾಡಿದ ಕೊಂಡಾಟ, ಇವಲ್ಲಾ ಅವನ ಅಶಕ್ತ ಸ್ವಭಾವಕ್ಕೆ ಉರುಲಿನೋಪಾದಿಯಾಗಿದ್ದವು: ಹುಡುಗನು ಸ್ವಲ್ಪ ಮೈಮರತನು. ಯೌವನದ ಗರ್ವವು ಕರಡಿಯಪ್ಪಂದ ಅವನ ಮೇಲೆ ದುಮುಕಿತು.

"ಏನು ಬೊಗಳಿದಿ ಪೋರಾ?" ಎಂದು ಮುಷ್ಟಿ ಕಟ್ಟಿ, ದಾನಿಯೇಲನಿಗೆ ಒಂದು ಒಳ್ಳೇ ದೆಬ್ಬೆ ಕೊಟ್ಟು, ಅವನಿಗೆ ಕೆಳಗೆ ಕೆಡವಿದನು.

ಇದನ್ನು ನೋಡುತ್ತಿರುವ ಅಲ್‌ಫ್ರೆಡ್ ಎಂಬ ಒಬ್ಬ ಹುಡುಗನು ನೆಗಾಡಿ: "ಚೆಲೋದು ಮಾಡಿದಿ; ಹೆರ್ರಿಯೇ, ನೀನು ಅವನಿಗೆ ತಕ್ಕ ಶಿಕ್ಷೆ ಕೊಟ್ಟೆ."

ಹಾಗೆಯೇ ಹೆರ್ರಿಯು ಅಲ್ಲಿಂದ ಮುಂದಕ್ಕೆ ನಡೆದನು, ಮತ್ತು ದಾನಿಯೆಲನು ಮೆಲ್ಲಗೆ ಎದ್ದು ಜಜ್ಜಲ್ಪಟ್ಟ ತನ್ನ ತಲೆಯನ್ನು ಒರಿಸಿ ಕೊಳ್ಳುತ್ತಾ ನಿಂತನು.

ಅಲ್‌ಫ್ರೆಡ್: "ದಾನಿಯೆಲನೇ, ನೀನು ಇನ್ನಾದರೂ ಮರ್ಯಾದೆಯಿಂದ ನಿನ್ನ ನಾಲಿಗೆಯನ್ನು ಉಪಯೋಗಿಸುವಿ ಎಂದು ನೆನಸುತ್ತೇನೆ; ಹೆರ್ರಿಯು ನಿನಗೆ ಒಳ್ಳೇ ಬುದ್ಧಿ ಹೇಳಿದನು. ಅವನು ತನ್ನ ಮುಷ್ಟಿಯನ್ನೂ ಬುದ್ಧಿಯನ್ನೂ ಉಪಯೋಗಿಸ ಬಲ್ಲನು."

ಆದರೆ ಹೆರ್ರಿಯು, ಒಬ್ಬ ಕ್ರೈಸ್ತ ಹುಡುಗನಿಗೆ ತಕ್ಕಂತೆ, ಮಾಡಿದನೋ? ಹಾಗಾದರೆ ಯಾಕೆ ಮುಂದೆ ಹೋಗುತ್ತಿರುವಾಗ, ಅವನ ಮನಸ್ಸಾಕ್ಷಿಯು ಅವನು ಕೊಟ್ಟ ದೆಬ್ಬೆಯನ್ನು ಕುರಿತು ಅನುತಾಪ ತಂದು, ಅಸಮಾಧಾನ ಪಡಿಸಿತು? ಆ ತರುವಾಯ ಅವನು ಸಬ್ಬಾತಶಾಲೆಗೆ ಹೋಗಿ ಪಾಠ ಕೊಟ್ಟನು. ಆ ದಿನದ ಪಾಠವು ದೀನತೆ ವಿಷಯವಾಗಿತ್ತು. ಆದರಿಂದ ಹೆರ್ರಿಯು ತನ್ನ ಹುಡುಗರಿಗೆ "ನನ್ನಿಂದ ಕಲಿತು ಕೊಳ್ಳಿರಿ. ಯಾಕಂದರೆ ನಾನು ದೀನನೂ ತಗ್ಗಿದವನೂ ಆಗಿದ್ದೇನೆ" ಎಂಬ ಕರ್ತನ ವಚನವನ್ನು ವಿವರಿಸಿ ಅವರಿಗೆ ಬೋ

ಧಿಸ ಬೇಕಾಯಿತು. ಈ ಪಾಠವನ್ನು ಕೊಡುವಾಗ, ಹೆರ್ರಿಯು ಹುಡುಗರು ಗುಸುಗುಸು ಮಾತಾಡುವದನ್ನು ಕೇಳಿದನು. ಮತ್ತು ಕೆಲವು ಮಕ್ಕಳ ಮುಖದ ಮೇಲೆ ಮುಗುಳು ನಗೆಯನ್ನು ಸಹಾ ಕಂಡನು. ಅವರಲ್ಲಿ ಒಬ್ಬನು ತನ್ನ ನೆರೆ ಹುಡುಗನ ಹತ್ತರ "ನಮ್ಮ ಬೋಧಕನು ಆಗ ದಾನಿಯೆಲನಿಗೆ ಹೊಡದಾಗ, ತಾನಾದರೂ ಬಹಳ ಸಾಧುವಾಗಿರಲಿಲ್ಲ ವಲ್ಲ!" ಎಂದು ಮೆಲ್ಲಗೆ ಹೇಳಿದ ಮಾತುಗಳನ್ನು ಸಹಾ ಕೇಳಿದನು.

ಹೆರ್ರಿಯು ತಾನು ಮಾಡಿದ್ದು ತಪ್ಪಾಯಿತೆಂದು ಅರಿತನು, ಮತ್ತು ಅದಕ್ಕಾಗಿ ಎಲ್ಲಿ ಕ್ಷಮೆಯನ್ನು ಹುಡುಕ ಬೇಕೆಂದು ತಿಳಿದಿದ್ದನು. ಅವನು ದೇವಾಲಯದಲ್ಲಿ ಮಾಡಿದ ಪ್ರಾರ್ಥನೆಯಲ್ಲಿ ಕ್ಷಮೆಗೋಸ್ಕರ ಬೇಡಿದನು. ಆ ರಾತ್ರೆ ಮಲಗುವಾಗಲೂ, ತನ್ನ ಕರ್ತನ ಮುಂದೆ ತನ್ನ ಪಾಪವನ್ನು ಅರಿಕೆ ಮಾಡಿ ಪ್ರಾರ್ಥನೆ ಮಾಡಿದನು; ಆದರೂ ಅವನ ಮನಸ್ಸಾಕ್ಷಿಯು ಇನ್ನು ಸಮಾಧಾನವಾಗಿರಲಿಲ್ಲ.

ನಾವು ಒಬ್ಬನನ್ನು ಬೇಕೆಂತ ಆಗಲಿ ತಿಳಿಯದೆ ಆಗಲಿ ಕೇಡು ಮಾಡಿದರೆ, ನಾವು ಅವನ ಹತ್ತರಲೂ ನಮ್ಮ ಕರ್ತನ ಹತ್ತರಲೂ ಕ್ಷಮೆಯನ್ನು ಬೇಡ ಬೇಕಲ್ಲ? ತಾನು ಕೇಡು ಮಾಡಿದ ಆ ದಾನಿಯೆಲನ ಹತ್ತರ ಸಮಾಧಾನ ಮಾಡಿದ ಹೊರ್ತು, ಕರ್ತನು ತನಗೆ ಕ್ಷಮೆಯನ್ನು ದಯ ಪಾಲಿಸುವನೋ? ಏನೆಂದು ಹೆರ್ರಿಯು ಬಲ್ಲವನಾಗಿದ್ದನು. ಆದರೆ ಗರ್ವವು ಅವನಲ್ಲಿ ಕಠಿಣವಾಗಿತ್ತು. ತಾನು, ದಾನಿಯೆಲನ ಹತ್ತರ ಹೋಗಿ ದೀನನಾಗಿ ಅವನ ಕ್ಷಮೆಯನ್ನು ಬೇಡುವದು ಅವನಿಗೆ ಆಗದ ಕೆಲಸವಾಗಿತ್ತು.

"ಏನು! ನಾನು ಆ ದನ ಮೇಯಿಸುವ ಪೋಕ್ರಿ ಹುಡುಗನ ಹತ್ತರ ಹೋಗಿ, ಅವನು ಹೊಂದ ತಕ್ಕ ಪೆಟ್ಟು ಕೊಟ್ಟದ್ದಕ್ಕಾಗಿ ನಾನು ವ್ಯಸನ ಪಡುತ್ತೇನೆ ಎಂದು ಹೇಳುವದು ಸರಿಯೇ? ಅವನ ಕ್ಷಮೆಯನ್ನು ಬೇಡುವದಕ್ಕೆ ಅವನ ಹತ್ತರ ಬಗ್ಗಲೋ? ಇದು ನನ್ನಿಂದಾಗದು, ಹೌದು ನನ್ನಿಂದಾಗದಂಥಾ ಕಾರ್ಯ!"

ಗರ್ವದ ಸಂಗಡ ಹೆರ್ರಿಯು ಮಾಡಿದ ಈ ಹೋರಾಟವು ಅತಿ ಕಠಿಣವಾಗಿತ್ತು. ಆರು ದಿವಸದ ವರೆಗೆ ಹೆರ್ರಿಗೆ ಸಮಾಧಾನವಿಲ್ಲದೆ ಚಿಂತೆ ಮಾಡುತ್ತಿದ್ದನು. ಆದರೆ ಏಳನೇ ದಿವಸ ತನ್ನ ವೈರಿಯ ಮೇಲೆ ಜಯ ಹೊಂದಿದನು.

ಮಾರಣೆ ಆದಿತ್ಯವಾರ ಬೆಳಿಗ್ಯೆ ಅವನು ಕಲಿಸುವದಕ್ಕೆ ಶಾಲೆಗೆ ಹೋಗುವಾಗ, ದೇವಾಲಯದ ಅಂಗಳದಲ್ಲಿ ಅಂಗಾತ ಬಿದ್ದು ಭಯದಿಂದಲೂ ಅಸಹ್ಯತೆಯಿಂದಲೂ ತನ್ನನ್ನು ನೋಡುವ ದಾನಿಯೆಲನನ್ನು ಕಂಡನು. ಆಗ ಹೆರ್ರಿಯು ಬಹಳ ಪ್ರಯಾಸವುಳ್ಳ ಹೋರಾಟದಿಂದ, ಲಜ್ಜಾಭರಿತನಾಗಿ, ಆ "ದನ ಮೇಯಿಸುವ" ಹುಡುಗನೆಡೆಗೆ ಹೋಗಿ ಬಗ್ಗಿ ಕೊಂಡು, "ದಾನಿಯೆಲನೇ, ಕಳದ ಆದಿತ್ಯವಾರ ನಾನು ನಿನಗೆ ಹೊಡದದ್ದಕ್ಕಾಗಿ ಬಹಳ ಪಶ್ಚಾತ್ತಾಪ ಪಡುತ್ತೇನೆ" ಎಂದು ಬಹಳ ದೀನ ಮುಖದಿಂದ ಹೇಳಿದನು. ಇಷ್ಟು ಹೇಳುವದು ಅವನಿಗೆ ಬಹಳ ಪ್ರಯಾಸವಾಗಿ ತೋಚಿತು. ಈ ಅಸಂತೋಷ ಕಾರ್ಯವು ಹ್ಯಾಗೂ ತೀರಿತು. ಆದರೆ ತನ್ನ ಗರ್ವದ ಮೇಲೆ ಹೆರ್ರಿಯು ಹೊಂದಿದ ಜಯದ ಫಲವಾಗಿರಲಿಲ್ಲ.

ಆ ಇಬ್ಬರು ಹುಡುಗರು ಒಬ್ಬರಿಗೊಬ್ಬರು ಕೈಗಳನ್ನು ಕೊಟ್ಟು, ಆ ದಿನದಿಂದ ವಿರೋಧಗಳನ್ನು ಮರೆತು ಸ್ನೇಹಿತರಾದರು. ಹೆರ್ರಿಯು ಆ ದನ ಮೇಯಿಸುವ ಹುಡುಗನ ಮನಸ್ಸಿನ ಮೇಲೆ ಸ್ವಾತಂತ್ರ್ಯವನ್ನು ಹೊಂದಿ, ಅವನನ್ನು ಸುಮಾರ್ಗಕ್ಕೆ ತರುವ ಹಾಗೂ, ಅವನ ಮೂಲವಾಗಿ ತಾನು ದೀನನಾಗಿಯೂ ಸಮಾಧಾನಿಯಾಗಿಯೂ ಇರುವದಕ್ಕೂ ಕಲಿತನು. ಈ ಪ್ರಕಾರ ಹೆರ್ರಿಯು ತನ್ನ ಅಂತರ್ಯದ ವೈರಿಯನ್ನು ಜೈಸಲಾಗಿ, ತನ್ನ ಬಾಹ್ಯ ವೈರಿಯನ್ನು ಸಹಾ ಜೈಸುವವನಾದನು.

Printed by Stolz & Reuther, Basel Mission Press, Mangalore.

ಪತ್ರ

ರಿ ಪ್ರಕಟಿಸಲ್ಪಡುವದು.

ARY 1871. ಅಂಕೆ ೭.

೧೨, ೧—೭.

ಶರೀರಗಳನ್ನು ಬದುಕುವಂಥ, ಪರಿಶುದ್ಧವಾದಂ
ಯಾಗಿ ಅರ್ಪಿಸ ಬೇಕೆಂದು, ದೇವರ ಕನಿಕರಗಳ
ಇದು ನಿಮ್ಮ ಬುದ್ಧಿಯುಳ್ಳ ಆರಾಧನೆ. ಮತ್ತು
ಆಗಿರುವ ದೇವರ ಚಿತ್ತವು ಏನೆಂದು ನೀವು ಪರೀ
ಕೂಲವಾಗದೆ, ನಿಮ್ಮ ಮನಸ್ಸಿನ ನವೀಕರಣದಿಂ
ನನಗೆ ಕೊಡಲ್ಪಟ್ಟ ಕೃಪೆಯಿಂದ ನಿಮ್ಮಲ್ಲಿರುವ ಒ
ಗಿ ಎಣಿಸದೆ, ದೇವರು ಒಬ್ಬೊಬ್ಬನಿಗೆ ವಿಶ್ವಾಸ
, ಸ್ವಸ್ಥ ಬುದ್ಧಿಯಾಗಿ ಎಣಿಸ ಹೇಳುತ್ತೇನೆ. ಯಾ
ಲ್ಲಿ ಅನೇಕ ಅಂಗಗಳು ನಮಗೆ ಇರಲಾಗಿ, ಎಲ್ಲಾ
ೀ, ಅದೇ ಪ್ರಕಾರ ಅನೇಕರಾದ ನಾವು ಕ್ರಿಸ್ತನ
ಬ್ಬರು ಅಂಗಗಳಾಗಿದ್ಧೇವೆ. ನಮಗೆ ಕೊಡಲ್ಪಟ್ಟ
ವರಾಗಿದ್ಧೇವೆ."

ತ್ರಿಕೆ ಬರದಿರುವ ರೋಮಾಯರ ಪತ್ರಿಕೆಯ ಹಿಂ
ಸದಿಂದಲೇ ನಾವು ದೇವರ ಮುಂದೆ ನೀತಿಯ
ದನ್ನು ಸಾಕಾದಷ್ಟು ಪ್ರಮಾಣದಿಂದ ವಿವರಿಸಿ,
ಂತಾದ ಮಹಾ ಮಹಿಮೆಯುಳ್ಳ ದಿವ್ಯ ಉಪಕಾ
ನ್ನು ಸ್ಥಾಪಿಸಿದ ಮೇಲೆ, ಈ ಸಂಧಿಯ ಆರಂಭದಲ್ಲಿ
ಮಾಡುವ ಹಂಗಿನಲ್ಲಿದ್ಧೇವೆಂದು, ತೋರಿಸ ತೊ